"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

# ಕರ್ನಾಟಕ ವಿಧಾನ ಪರಿಷತ್ತು

15ನೇ ಜೂನ್ 2017
ಗುರುವಾರ

## ವಿಷಯಾನುಕ್ರಮಣಿಕೆ

1. ಪ್ರಶ್ನೋತ್ತರಗಳು.

ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು.

3074– ಬೆಂಗಳೂರಿನ ರಾಜ ಕಾಲುವೆ ಒತ್ತುವರಿ ತೆರವು ಕಾರ್ಯದ ಬಗ್ಗೆ –ಶ್ರೀ ಸುನೀಲ್ ಸುಬ್ರಮಣಿ ಎಂ.ಪಿ.

3169– ಟೆಂಡರ್ ಶ್ಯೂರ್ ಯೋಜನೆಯಡಿ ನಿರ್ಮಿಸುತ್ತಿರುವ ಪಾದಚಾರಿ ಮಾರ್ಗಗಳ ಬಗ್ಗೆ –ಶ್ರೀ ಎನ್.ಅಪ್ಪಾಜಿಗೌಡ

3122– ಬೆಂಗಳೂರು ನಗರದಲ್ಲಿ ರಸ್ತೆಗಳನ್ನು ಅಗೆಯುವ ವಿಚಾರದಲ್ಲಿ ಸಂಸ್ಥೆಗಳ ಮಧ್ಯೆ ಸಮನ್ವಯ ಕೊರತೆಯ ಬಗ್ಗೆ –ಕ್ಯಾಪ್ಟನ್ ಗಣೇಶ್ ಕಾರ್ಣಿಕ್

3114– ಮುಖ್ಯಮಂತ್ರಿಗಳ ಕೌಶಲ್ಯಾಭಿವೃದ್ಧಿ ಯೋಜನೆಯಡಿ ಅಲ್ಪಸಂಖ್ಯಾತ ಯುವಕರು ತರಬೇತಿ ಪಡೆಯುವ ಬಗ್ಗೆ –ಶ್ರೀ ಕೆ.ಅಬ್ದುಲ್ ಜಬ್ಬಾರ್

3182– ಸಿಲಿಕಾನ್ ಸಿಟಿ ಬೆಂಗಳೂರಲ್ಲಿ ಅಪರಾಧ ಪ್ರಕರಣಗಳು ಹೆಚ್ಚಾಗುತ್ತಿರುವ ಬಗ್ಗೆ –ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ

3175– ಇಂಡಿಯನ್ ಜಿಮ್ಖಾನ ಆಟದ ಮೈದಾನದ ಬಗ್ಗೆ –ಶ್ರೀ ರಮೇಶ್ ಬಾಬು

3137– ಲೋಕಾಯುಕ್ತ ಇಲಾಖೆ ದಾಳಿ ನಡೆಸಿರುವ ಅಧಿಕಾರಿಗಳ ವಿವರ ನೀಡುವ ಬಗ್ಗೆ –ಶ್ರೀ ಪುಟ್ಟಣ್ಣ

3151– ಬೀದರ್ ಜಿಲ್ಲೆಯ ನಗರಾಭಿವೃದ್ಧಿ ಇಲಾಖೆಯ ಕಾಮಗಾರಿಗಳ ಬಗ್ಗೆ –ಶ್ರೀ ವಿಜಯ್‌ಸಿಂಗ್

3128– ಸಾರ್ವಜನಿಕ ಮತ್ತು ಸಂಪರ್ಕ ಇಲಾಖೆಯಿಂದ ಸಾರ್ವಜನಿಕರಿಗೆ ಸಿಗುತ್ತಿರುವ ಮಾಹಿತಿ –ಶ್ರೀ ಆರ್.ಪ್ರಸನ್ನ ಕುಮಾರ್

3090– ಸಕಾಲ ಸೇವೆ ವಿಸ್ತರಿಸುವ ಮತ್ತು ಇ–ಆಫೀಸ್ ತಂತ್ರಾಂಶದಿಂದ ಪಾರದರ್ಶಕ ಆಡಳಿತ ಜಾರಿಗೆ ತರುವ ಬಗ್ಗೆ –ಕೋಟ ಶ್ರೀನಿವಾಸ ಪೂಜಾರಿ

3106– ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆಯ ಆಸ್ತಿಗಳ ಕುರಿತು –ಶ್ರೀ ಪ್ರದೀಪ್ ಶೆಟ್ಟರ್

3139– ಮೂಡಿಗೆರೆ ಪಟ್ಟಣಕ್ಕೆ ಒಳಚರಂಡಿ ವ್ಯವಸ್ಥೆಯನ್ನು ಕಲ್ಪಿಸುವ ಬಗ್ಗೆ –ಶ್ರೀಮತಿ ಮೋಟಮ್ಮ

2362– ರಾಜ್ಯದ ಗಡಿಗಳಲ್ಲಿ ಪೊಲೀಸ್ ಭದ್ರತೆ ಇಲ್ಲದಿರುವ ಬಗ್ಗೆ –ಶ್ರೀ ಸುನೀಲ್ ಸುಬ್ರಮಣಿ ಎಂ.ಪಿ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಆ) ಚುಕ್ಕೆ ರಹಿತ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು.**

**2. ಸಭಾಪತಿಯವರ ಅಪ್ಪಣೆಯ ಮೇರೆಗೆ ಪ್ರಸ್ತಾಪಿಸಲಾಗಿದ್ದ ವಿಷಯಗಳಿಗೆ ಸಂಬಂಧಿಸಿದಂತೆ ಸಚಿವರ ಹೇಳಿಕೆಗಳು.**

(ಅ) ಎಂಡೋಸಲ್ಫಾನ್ ಕ್ರಿಮಿನಾಶಕ ಔಷಧಿಯಿಂದ ಉಂಟಾಗಿರುವ ದುಷ್ಪರಿಣಾಮಗಳ ಬಗ್ಗೆ –

ಡಾ:ಜಿ.ಪರಮೇಶ್ವರ್(ಸಭಾ ನಾಯಕರು)

(ಆ) ಪದವಿ ಪೂರ್ವ ಶಿಕ್ಷಣ ಇಲಾಖೆಯಲ್ಲಿ ಬಿಇಡಿ ಪೂರೈಸದೇ ಇರುವ ಉಪನ್ಯಾಸಕರಿಗೆ ಬಿಇಡಿ ವ್ಯಾಸಂಗ ಮಾಡಲು ಪೂರ್ಣ ವೇತನ ಸಹಿತ ರಜೆ ನೀಡಿ ಅವರಿಗೆ ಅನುಕೂಲ ಮಾಡಿಕೊಡುವ ಬಗ್ಗೆ–

ಡಾ:ಜಿ.ಪರಮೇಶ್ವರ್(ಸಭಾ ನಾಯಕರು)

**3. ಸಭಾಪತಿಯವರ ಅನುಮತಿ ಮೇರೆಗೆ ಚರ್ಚಿಸಲ್ಪಟ್ಟ ವಿಷಯಗಳು.**

(ಅ) ಸುಳ್ಳು ಜಾತಿ ಪ್ರಮಾಣಪತ್ರ ಸಲ್ಲಿಸಿ ಗೆಜೆಟೆಡ್ ಆಫೀಸರ್ ಆಗಿ ಆಯ್ಕೆಯಾಗಿರುವ ಬಗ್ಗೆ–

ಶ್ರೀ ಡಿ.ಎಸ್.ವೀರಯ್ಯ
ಡಾಃಜಿ.ಪರಮೇಶ್ವರ್(ಸಭಾ ನಾಯಕರು)

(ಆ) ಎಸ್.ಎಸ್.ಎಲ್.ಸಿ. ಪರೀಕ್ಷೆಯ ಫಲಿತಾಂಶವನ್ನು ಉತ್ತಮಪಡಿಸುವ ಬಗ್ಗೆ–

ಶ್ರೀ ರಮೇಶ್ ಬಾಬು
ಶ್ರೀ ತನ್ವೀರ್ ಸೇಠ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು)

(ಇ) ಸರ್ಕಾರಿ ವಿದ್ಯಾರ್ಥಿನಿಲಯಗಳಲ್ಲಿ ಮತ್ತು ವಸತಿ ಶಾಲೆಗಳಲ್ಲಿ ಕೆಲಸ ಮಾಡುತ್ತಿರುವ ಹೊರಗುತ್ತಿಗೆ ನೌಕರರನ್ನು ಖಾಯಂಗೊಳಿಸುವ ಬಗ್ಗೆ–

ಶ್ರೀ ಎನ್. ಅಪ್ಪಾಜಿಗೌಡ
ಡಾ:ಜಿ.ಪರಮೇಶ್ವರ್(ಸಭಾ ನಾಯಕರು)

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(ಈ) ಆರೋಗ್ಯ ಕವಚ (108) ಆಂಬ್ಯುಲೆನ್ಸ್ ಸೇವೆ 674 ಸಿಬ್ಬಂದಿಗಳನ್ನು ಜಿ.ವಿ.ಕೆ. ಸಂಸ್ಥೆಯು ಕೆಲಸದಿಂದ ತೆಗೆದು ಹಾಕಿರುವ ಬಗ್ಗೆ–

ಶ್ರೀ ಬಸನಗೌಡ ಆರ್.ಪಾಟೀಲ್(ಯತ್ನಾಳ್)
ಡಾ:ಜಿ.ಪರಮೇಶ್ವರ್(ಸಭಾ ನಾಯಕರು)

**4. ನಿರ್ಣಯ**

"ವಿಧಾನ ಪರಿಷತ್ತಿನ ಸಭಾಪತಿಯವರಾದ ಶ್ರೀ ಡಿ.ಹೆಚ್.ಶಂಕರಮೂರ್ತಿ ಅವರನ್ನು ಸಭಾಪತಿ ಸ್ಥಾನದಿಂದ ತೆಗೆದು ಹಾಕುವುದು" ಎನ್ನುವ ಬಗ್ಗೆ–

ಶ್ರೀ ರಾಮಚಂದ್ರಗೌಡ
ಶ್ರೀ ವಿ.ಎಸ್.ಉಗ್ರಪ್ಪ
ಶ್ರೀ ಕೆ.ಬಿ.ಶಾಣಪ್ಪ
ಶ್ರೀ ಭಾನುಪ್ರಕಾಶ್
ಶ್ರೀ ಪುಟ್ಟಣ್ಣ
ಶ್ರೀ ಹೆಚ್.ಎಂ.ರೇವಣ್ಣ
ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ
ಶ್ರೀ ಡಿ.ಹೆಚ್.ಶಂಕರಮೂರ್ತಿ(ಸಭಾಪತಿಯವರು)

**(ನಿರ್ಣಯ ತಿರಸ್ಕರಿಸಲ್ಪಟ್ಟಿತು)**

**5. ಪ್ರಕಟಣೆಗಳು.**

**6. ಮಕ್ಕಳ ಹಕ್ಕುಗಳ ರಕ್ಷಣೆ ಬಗ್ಗೆ ವಿಶೇಷ ಚರ್ಚೆ**

ಶ್ರೀಮತಿ ಮೋಟಮ್ಮ
ಶ್ರೀ ರಾಮಚಂದ್ರಗೌಡ
ಶ್ರೀಮತಿ ಜಯಮ್ಮ
ಶ್ರೀ ಐವನ್ ಡಿ'ಸೋಜಾ
ಶ್ರೀ ಬಸವರಾಜ ಹೊರಟ್ಟಿ
ಕ್ಯಾಪ್ಟನ್ ಗಣೇಶ್ ಕಾರ್ಣಿಕ್(ವಿರೋಧ ಪಕ್ಷದ ಮುಖ್ಯ ಸಚೇತಕರು)
ಶ್ರೀ ಕಾಗೋಡು ತಿಮ್ಮಪ್ಪ(ಕಂದಾಯ ಸಚಿವರು)
ಶ್ರೀ ಕೆ.ಎಸ್.ಈಶ್ವರಪ್ಪ(ವಿರೋಧ ಪಕ್ಷದ ನಾಯಕರು)
ಡಾಃಜಯಮಾಲ ರಾಮಚಂದ್ರ

~~~~~~~~

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"
~~~~~~~~

(743) 11:20 15-06-2017 CS.BNS

**ಕರ್ನಾಟಕ ವಿಧಾನ ಪರಿಷತ್ತು**

*ಗುರುವಾರ, 15 ನೇ ಜೂನ್ 2017*

ಸದನವು ವಿಧಾನ ಸೌಧದಲ್ಲಿರುವ ವಿಧಾನ ಪರಿಷತ್ತಿನ ಸಭಾಂಗಣದಲ್ಲಿ

ಪೂರ್ವಾಹ್ನ 11 ಗಂಟೆ 24 ನಿಮಿಷಕ್ಕೆ ಸಮಾವೇಶಗೊಂಡಿತು

ಉಪಸಭಾಪತಿ (ಶ್ರೀ ಮರಿತಿಬ್ಬೇಗೌಡ) ಅವರು ಪೀಠದಲ್ಲಿ ಉಪಸ್ಥಿತರಿದ್ದರು.

.

“ ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

## 1. ಪ್ರಶ್ನೋತ್ತರಗಳು

### ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು.

**ಪ್ರಶ್ನೆ ಸಂಖ್ಯೆ: 3124**

**ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಗಳೇ, ನನ್ನ ಪ್ರಶ್ನೆಗೆ ಉತ್ತರ ಬಂದಿರುವುದಿಲ್ಲ.

**ಶ್ರೀ ಕೆ.ಜೆ.ಜಾರ್ಜ್(ಬೆಂಗಳೂರು ಅಭಿವೃದ್ಧಿ ಹಾಗೂ ನಗರ ಯೋಜನಾ ಸಚಿವರು):-** ಮಾನ್ಯ ಸಭಾಪತಿಗಳೇ, ಮಾನ್ಯ ಪ್ರತಾಪಚಂದ್ರಶೆಟ್ಟಿಯವರು ಕೇಳಿರುವ ಪ್ರಶ್ನೆಗೆ ಸಮಯಾವಕಾಶವನ್ನು ಕೇಳಿದ್ದೇನೆ. ಈ ಪ್ರಶ್ನೆಗಾಗಿ ಸಾಕಷ್ಟು ವಿವರಗಳನ್ನು ಸಂಗ್ರಹ ಮಾಡಬೇಕಾಗಿದೆ. ಮಾನ್ಯ ಸದಸ್ಯರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿರುವ ಕೆರೆಗಳ ಸಂಖ್ಯೆ ಎಷ್ಟು; ಅವುಗಳು ಯಾವುವು; ಅವುಗಳ ವಿಸ್ತೀರ್ಣವೆಷ್ಟು; ಅವುಗಳಲ್ಲಿ ಒತ್ತುವರಿಯಾದ ವಿಸ್ತೀರ್ಣವೆಷ್ಟು; ಈ ಒತ್ತುವರಿಯನ್ನು ತೆರವು ಮಾಡಿದ ಕೆರೆಯ ವಿಸ್ತೀರ್ಣವೆಷ್ಟು ಹಾಗೂ ಒತ್ತುವರಿ ತೆರವು ಮಾಡದಿರಲು ಕಾರಣವೇನು ಎನ್ನುವ ಪ್ರಶ್ನೆಗಳನ್ನು ಕೇಳಿದ್ದಾರೆ.

**ಉಪ ಸಭಾಪತಿಯವರು:-** ಈ ಪ್ರಶ್ನೆಗೆ ಎಷ್ಟು ದಿವಸಗಳಲ್ಲಿ ಉತ್ತರ ಒದಗಿಸುತ್ತೀರಿ?

**ಶ್ರೀ ಕೆ.ಜೆ.ಜಾರ್ಜ್:-** ಇನ್ನು 15 ದಿವಸಗಳ ಒಳಗೆ ಉತ್ತರವನ್ನು ನೀಡುತ್ತೇನೆ. ವಿಧಾನಸಭೆಯಲ್ಲಿ ಸಭಾಧ್ಯಕ್ಷರ ಅಧ್ಯಕ್ಷತೆಯಲ್ಲಿ ಕೆರೆಗಳ ಒತ್ತುವರಿಯ ಅಧ್ಯಯನಕ್ಕಾಗಿ ಒಂದು ಸಮಿತಿಯನ್ನು ನೇಮಿಸಲಾಗಿದೆ. ಅವರು ಎಲ್ಲಾ ಕೆರೆಗಳನ್ನು ವಿಸಿಟ್ ಮಾಡಿ, ಕೆರೆಗಳ ಸರ್ವೆ ಮಾಡಿ ಒಂದು ವರದಿಯನ್ನು ತಯಾರು ಮಾಡಿದ್ದಾರೆ. ಆ ವರದಿಯನ್ನು ಸದನಕ್ಕೆ ಮಂಡಿಸಿದ ಮೇಲೆ ನಮಗೆ ಆ ಎಲ್ಲಾ ಮಾಹಿತಿಗಳು ದೊರೆಯುತ್ತವೆ. ಆನಂತರದಲ್ಲಿ ನಾನು ಮಾನ್ಯ ಸದಸ್ಯರಿಗೆ ಉತ್ತರ ನೀಡುತ್ತೇನೆ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆ 3074**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಎಂ.ಪಿ. ಸುನೀಲ್ ಸುಬ್ರಮಣಿ:-** ಮಾನ್ಯ ಸಭಾಪತಿಗಳೇ, ಮಾನ್ಯ ಸಚಿವರು ನನ್ನ ಪ್ರಶ್ನೆಗೆ ಉತ್ತರವನ್ನು ಒದಗಿಸಿದ್ದಾರೆ. 1953ರಲ್ಲಿ 1225 ರಾಜಕಾಲುವೆಗಳನ್ನು ತೆರವುಗೊಳಿಸಿರುವುದಾಗಿ ಹೇಳಿದ್ದಾರೆ. ಉಳಿದ 228 ರಾಜಕಾಲುವೆಗಳನ್ನು ಯಾವಾಗ ತೆರವುಗೊಳಿಸಲಾಗುವುದು; ಜೊತೆಗೆ ನ್ಯಾಯಾಲಯದಲ್ಲಿ ಎಷ್ಟು ಪ್ರಕರಣಗಳಿವೆ; ಜೊತೆಗೆ ಆರ್.ಸಿ.ಸಿ. ಡ್ರೈನ್ ನಿರ್ಮಾಣ, ಕಚ್ಚಾ ಡ್ರೈನ್ ನಿರ್ಮಾಣ ಮತ್ತು ತಂತಿಬೇಲಿ ನಿರ್ಮಾಣಗಳು ಯಾವ ಹಂತದಲ್ಲಿವೆ ಎನ್ನುವುದನ್ನು ಮಾನ್ಯ ಸಚಿವರು ತಿಳಿಸಬೇಕು.

**ಶ್ರೀ ಕೆ.ಜೆ.ಜಾರ್ಜ್:-** ಮಾನ್ಯ ಸಭಾಪತಿಗಳೇ, ಇದರಲ್ಲಿ ಇನ್ನೂ 728 ರಾಜಕಾಲುವೆಗಳನ್ನು ತೆರವುಗೊಳಿಸಬೇಕಾಗಿದೆ. ಈಗಾಗಲೇ 1953 ಪ್ರಕರಣಗಳಲ್ಲಿ 1225 ಪ್ರಕರಣಗಳನ್ನು ತೆರವುಗೊಳಿಸಲಾಗಿದೆ. ಈಗಾಗಲೇ ಈ ಸರ್ವೆ ಕಾರ್ಯ ಕೂಡ ಮುಗಿದಿದೆ. ಇದನ್ನೆಲ್ಲ ತೆರವುಗೊಳಿಸಬೇಕಾದರೆ ಸರ್ವೆಯರ್ ಅನ್ನು ಇಟ್ಟುಕೊಂಡು ಸರ್ವೆ ಮಾಡಬೇಕಿದೆ. ಆದ್ದರಿಂದ 2-3 ತಿಂಗಳಮಟ್ಟಿಗೆ ನಮಗೆ ಆ ಸರ್ವೆಯರ್‌ಗಳನ್ನು ಕಳುಹಿಸಿಕೊಡಬೇಕೆಂದು Deputy Director of Land Records (DDLR) ಅವರನ್ನು ಕೇಳಿದ್ದೇವೆ. ಅವರೂ ಕೂಡ ಸರ್ವೆಯರ್‌ಗಳನ್ನು ಕಳುಹಿಸಿಕೊಡುವುದಕ್ಕೆ ಒಪ್ಪಿಕೊಂಡಿದ್ದಾರೆ. ಸುಮಾರು 2-3 ತಿಂಗಳುಗಳಲ್ಲಿ ಸರ್ವೆ ಮಾಡಿ ಕಾಲುವೆಗಳನ್ನು ತೆರವುಗೊಳಿಸುವ ಕೆಲಸವನ್ನು ಮಾಡಲಾಗುವುದು. ಇನ್ನು ನ್ಯಾಯಾಲಯದಲ್ಲಿ ಸುಮಾರು 4 ಪ್ರಕರಣಗಳು ಬಾಕಿಯಿವೆ. ಇದನ್ನೆಲ್ಲ ತೆರವುಗೊಳಿಸಿದ ಮೇಲೆ ನಾವು ಕಚ್ಚಾ ಡ್ರೈನ್‌ಗಳನ್ನು ನಿರ್ಮಾಣ ಮಾಡುತ್ತೇವೆ. ಅದಕ್ಕಾಗಿ ಈಗಾಗಲೇ 700 ಕೋಟಿ ರೂಪಾಯಿಗಳ ಟೆಂಡರ್ ಕರೆದಿದ್ದು, permanent drain ಮಾಡುವುದಕ್ಕೆ ಪ್ರಯತ್ನ ನಡೆಸಿದ್ದೇವೆ. ಹಂತ ಹಂತವಾಗಿ ವರ್ಷದಿಂದ ವರ್ಷ ಅದನ್ನು ಮುಗಿಸುವ ಕೆಲಸ ಮಾಡುತ್ತೇವೆ.

**ಶ್ರೀ ಎಂ.ಪಿ.ಸುನೀಲ್ ಸುಬ್ರಮಣಿ:-** ಮಾನ್ಯ ಸಭಾಪತಿಗಳೇ, ವಿಶ್ವವಾಣಿ ಪತ್ರಿಕೆಯಲ್ಲಿ ‘ಮಳೆ ಜೊತೆಗೆ ಮುಳುಗಡೆಯ ಭೀತಿ’ ಎನ್ನುವ ವಿಚಾರ ಪ್ರಕಟವಾಗಿದೆ. ಹಾಗೆಯೇ ‘174 ಬರಪೀಡಿತ ಪ್ರದೇಶಗಳು’ ಎನ್ನುವ ವಿಚಾರ ವಿಜಯವಾಣಿ ಪತ್ರಿಕೆಯಲ್ಲಿ ವರದಿಯಾಗಿದೆ. ಸಚಿವರು ಇದರ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಕೆ.ಜೆ.ಜಾರ್ಜ್:–** ಮಾನ್ಯ ಸಭಾಪತಿಗಳೇ, ತಮಗೆ ತಿಳಿದಿರುವ ಹಾಗೆ ಈ ಕೆಲಸಗಳು ಹಲವಾರು ವರ್ಷಗಳಿಂದ ಪೆಂಡಿಂಗ್ ಇವೆ. ಕಳೆದ ವರ್ಷ ಮಳೆ ಬಂದ ಮೇಲೆ ಮುಖ್ಯಮಂತ್ರಿಗಳು ಹಾಗೂ ರಾಮಲಿಂಗರೆಡ್ಡಿಯವರು ಸ್ಥಳಕ್ಕೆ ಭೇಟಿಯನ್ನು ನೀಡಿದ್ದರು. ಆ ಸಮಯದಲ್ಲಿ ನಾನು ಇರಲಿಲ್ಲ. ಆ ಸಂದರ್ಭದಲ್ಲಿ ಪ್ರಥಮ ಬಾರಿಗೆ storm water drain ಕಟ್ಟುವುದಕ್ಕೆ 700 ಕೋಟಿ ರೂಪಾಯಿಗಳನ್ನು ನಗರೋತ್ಥಾನದಿಂದ ನೀಡಿದ್ದಾರೆ. ಇದು ಒಂದು ವರ್ಷದಲ್ಲಿ ಆಗುವ ಕೆಲಸವಲ್ಲ. ಸತತವಾಗಿ ಕೆಲಸ ಮಾಡಿದರೆ ಇನ್ನು 4–5 ವರ್ಷಗಳಲ್ಲಿ ಎಲ್ಲಾ ರಾಜಕಾಲುವೆಗಳಿಗೂ ಸಹ ಸರಿಯಾದ ರೀತಿಯಲ್ಲಿ ವ್ಯವಸ್ಥೆಯನ್ನು ಮಾಡಬಹುದು. ಮಳೆ ನೀರು ನುಗ್ಗಿದ ಕಾರಣ ಒಂದು ಜಾಗದಲ್ಲಿ ನಮಗೆ ತೊಂದರೆ ಆಗಿದೆ. ಅಲ್ಲಿಯೂ ಕೂಡ ಕಚ್ಚಾ ಡ್ರೈನ್ ಮಾಡುವುದಕ್ಕೆ ನಾವು ಆದೇಶವನ್ನು ನೀಡಿದ್ದೇವೆ. ಉಳಿದಂತಹ ಕೆಲಸಗಳನ್ನು ಸಹ ಆದಷ್ಟು ಬೇಗ ಪ್ರಾರಂಭಿಸುವುದಕ್ಕೆ ಕ್ರಮ ಕೈಗೊಳ್ಳುತ್ತೇವೆ.

**ಶ್ರೀ ರಾಮಚಂದ್ರಗೌಡ:–** ಮಾನ್ಯ ಸಭಾಪತಿಗಳೇ, ...

**ಉಪ ಸಭಾಪತಿಯವರು:–** ಇಲ್ಲ, ಈಗ ಚರ್ಚೆಗೆ ಅವಕಾಶವಿಲ್ಲ, ಇನ್ನು 4 ಜನರು ಮಾತನಾಡಲು ನಿಂತಿದ್ದಾರೆ, ನಿಮಗೆ ಅವಕಾಶ ನೀಡಿದರೆ ಅವರಿಗೂ ಸಹ ಅವಕಾಶ ನೀಡಬೇಕಾಗುತ್ತದೆ.

**ಶ್ರೀ ರಾಮಚಂದ್ರಗೌಡ:–** ಮಾನ್ಯ ಸಭಾಪತಿಗಳೇ, ನಾವು ಬೆಂಗಳೂರಿನವರು, ಬೆಂಗಳೂರಿನಲ್ಲಿ ಸಾಕಷ್ಟು ಕಷ್ಟವನ್ನು ಅನುಭವಿಸುತ್ತಿದ್ದೇವೆ. ಕಾರ್ಪೊರೇಷನ್ ನಿಂದ ಅನುಮತಿ ಪಡೆದು ರಾಜಕಾಲುವೆಗಳ ಮೇಲೆ ಏನು ಕಟ್ಟಡಗಳನ್ನು ಕಟ್ಟಿದ್ದಾರೆ, ಅವುಗಳನ್ನು ಯಾವಾಗ ತೆರವುಗೊಳಿಸುತ್ತೀರಿ?

**ಉಪ ಸಭಾಪತಿಯವರು:–** ಇಲ್ಲ, ನಾನು ಅವಕಾಶ ನೀಡುವುದಿಲ್ಲ.

**ಶ್ರೀ ರಾಮಚಂದ್ರಗೌಡ:–** ಮಾನ್ಯ ಸಭಾಪತಿಯವರೆ, ನಾನಿಲ್ಲಿ ಭಾಷಣ ಮಾಡುತ್ತಿಲ್ಲ, ಪ್ರಶ್ನೆ ಕೇಳುತ್ತಿದ್ದೇನೆ.

**ಉಪಸಭಾಪತಿಯವರು:–** ನಿಮಗೆ ಅವಕಾಶ ಕೊಟ್ಟರೆ ಇನ್ನೂ 4 ಜನರಿಗೆ ಅವಕಾಶ ನೀಡಬೇಕಾಗುತ್ತದೆ.

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**Sri RAMACHANDRA GOWDA**:- No, I am very sorry. This is the first question. I am in Bengaluru for many years. I can't understand this. I want the answer.

**ಉಪಸಭಾಪತಿಯವರು:-** ಇಲ್ಲ, ಆಗುವುದಿಲ್ಲ.

**ಶ್ರೀ ಕೆ.ಜೆ.ಜಾರ್ಜ್:-** ರಾಜಕಾಲುವೆ ಮೇಲೆ ಯಾವುದೇ ಒತ್ತುವರಿ ಇದ್ದರೂ ಕೂಡ ಅವುಗಳನ್ನು ತೆರವುಗೊಳಿಸಲು ಈಗಾಗಲೇ ಆದೇಶವನ್ನು ನೀಡಲಾಗಿದೆ. ನಾವು ಅದರ ಪ್ರಕಾರ ಕ್ರಮ ಕೈಗೊಳ್ಳುತ್ತೇವೆ. ಇನ್ನು 3-4 ತಿಂಗಳುಗಳಲ್ಲಿ ಸರ್ವೆಯರ್ ಬಂದರೆ ಈ ಕೆಲಸ ಮುಗಿಸಲಾಗುವುದು.

**ಶ್ರೀ ರಾಮಚಂದ್ರಗೌಡ:-** ರಾಜಕಾಲುವೆಗಳ ಮೇಲೆ ಕಾರ್ಪೊರೇಷನ್‌ನ ಅನುಮತಿ ಪಡೆದು ಕಟ್ಟಡಗಳನ್ನು ಕಟ್ಟಿದ್ದಾರೆ. ಅದನ್ನು ಯಾವಾಗ ತೆರವುಗೊಳಿಸುತ್ತೀರಿ?

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯವರೇ, ರಾಮಚಂದ್ರಗೌಡರು ಕೋಪ ಬಿಟ್ಟು ಕೇಳಲಿ. ನೀವು ಯಾವಾಗಲೂ ಸೌಮ್ಯವಾಗಿರುತ್ತೀರಿ, why are you losing your temper? Don't lose your temper at this age.

**ಶ್ರೀ ರಾಮಚಂದ್ರಗೌಡ:-** ನಾನು ನಿಮಗೆ ತುಂಬಾ ಧನ್ಯವಾದಗಳನ್ನು ಸಲ್ಲಿಸುತ್ತೇನೆ. ನನ್ನ ಪ್ರಶ್ನೆ ಇಷ್ಟೆ ರಾಜಕಾಲುವೆ ಮೇಲೆ ಕಟ್ಟಡಗಳನ್ನು ಕಟ್ಟಿಕೊಂಡಿದ್ದಾರೆ.

**ಶ್ರೀ ಸಿದ್ದರಾಮಯ್ಯ:-** ನೀವು ಕೇಳಿರುವುದಕ್ಕೆ ತಕರಾರು ಇಲ್ಲ. You can ask any question. Government is ready to reply, but in your own interest, please don't lose your temper.

(ಮುಂದು)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

***(744) 11.30 15-06-2017:MV-BNS***

**ಶ್ರೀ ರಾಮಚಂದ್ರಗೌಡ:–** ಉತ್ತರ ಬೇಕಲ್ಲವೆ? That's all.

**ಶ್ರೀ ಕೆ.ಜೆ.ಜಾರ್ಜ್:–** ಮಾನ್ಯ ಸಭಾಪತಿಯವರೆ, ರಾಜಕಾಲುವೆಯಲ್ಲಿ ಯಾವುದೇ ಕಟ್ಟಡ ಕಟ್ಟಿದರೂ ಸಹ ಅದು ಕಾನೂನುಬಾಹಿರವಾಗುತ್ತದೆ.

**ಶ್ರೀ ರಾಮಚಂದ್ರಗೌಡ:–** ಮಾನ್ಯ ಸಭಾಪತಿಯವರೆ, ರಾಜಕಾಲುವೆಯ ಮೇಲೆ ಕಟ್ಟಡ ಕಟ್ಟಿದ್ದಾರೆ.

**ಶ್ರೀ ವಿ.ಎಸ್.ಉಗ್ರಪ್ಪ:–** ಮಾನ್ಯ ಸಭಾಪತಿಯವರೆ, ಒಂದು ನಿಮಿಷ ನನಗೆ ಅವಕಾಶ ಮಾಡಿಕೊಡಿ.

**ಉಪ ಸಭಾಪತಿಯವರು:–** ನೀವು ನೋಟಿಸ್ ಕೊಡಿ, ಬೇರೆ ರೀತಿಯಲ್ಲಿ ಅವಕಾಶ ನೀಡೋಣ, ದಯವಿಟ್ಟು ಬೇಡ.

**ಶ್ರೀ ಕೆ.ಜೆ.ಜಾರ್ಜ್:–** ಮಾನ್ಯ ಸಭಾಪತಿಯವರೆ, ಈಗಾಗಲೆ 1953 ಒತ್ತುವರಿಯಾಗಿರುವುದನ್ನು ನಾವು ಗುರುತಿಸಿದ್ದೇವೆ. ಅದರಲ್ಲಿ 1225 ರಾಜಕಾಲುವೆಗಳ ಒತ್ತುವರಿಗಳನ್ನು ತೆರವುಗೊಳಿಸಲಾಗಿದೆ. ಯಾರೇ ಆದರೂ ಸಹ ರಾಜಕಾಲುವೆ ಮೇಲೆ ಕಟ್ಟಡ ಕಟ್ಟಿದರೆ ಅದು illegal ಆಗುತ್ತದೆ, ಅದು legal ಆಗುವುದಿಲ್ಲ. ಅದಕ್ಕೆ ಯಾರು ಅನುಮತಿ ಕೊಟ್ಟಿದ್ದಾರೆ, ಅದನ್ನು ಕೊಡುವಾಗ ತಪ್ಪಾಗಿ ಕೊಟ್ಟಿರುತ್ತಾರೆ, ಅದು illegal ಆಗುತ್ತದೆ. ಅದಕ್ಕಾಗಿ ಮುಖ್ಯಮಂತ್ರಿಗಳು ಎಲ್ಲರ ಸಭೆಯನ್ನು ಕರೆದು ಯಾವುದೇ ರಾಜಕಾಲುವೆಯ ಮೇಲೆ ಯಾವುದೇ ಬಿಲ್ಡಿಂಗ್ ಇರಲಿ, ಅವುಗಳನ್ನು ತೆರವುಗೊಳಿಸುವುದಕ್ಕೆ ಈಗ ಆದೇಶ ಕೊಟ್ಟಿದ್ದಾರೆ, ನಾನೂ ಸಹ ಆದೇಶ ಕೊಟ್ಟಿದ್ದೇನೆ.

**ಉಪ ಸಭಾಪತಿಯವರು:–** ಧನ್ಯವಾದಗಳು.

**ಚುಕ್ಕೆಗುರುತಿನ ಪ್ರಶ್ನೆ ಸಂಖ್ಯೆ 3169**
**(ಉತ್ತರವನ್ನು ಲಗತ್ತಿಸಲಾಗಿದೆ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎನ್.ಅಪ್ಪಾಜಿಗೌಡ:-** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ, ಏನು ಅಧಿಕಾರಿಗಳು ಇದ್ದಾರೆ, ಈ ಎಲ್ಲವನ್ನೂ ಕೂಡ ನಾನೇ research ಮಾಡಿಕೊಳ್ಳಬೇಕಾದಂತಹ ಪರಿಸ್ಥಿತಿ ಬಂದಿದೆ. ಈಗ ನಾನು ಏನು ಪ್ರಶ್ನೆ ಕೇಳಿದ್ದೇನೆ, ಅದಕ್ಕೆ ಅವರು ಉತ್ತರಿಸುವಂತಹ ಸಂಸ್ಕೃತಿಯೇ ಇಲ್ಲ. ತಾವು ನೋಡಿ ಅವರು ಈ ರೀತಿ ಕೊಟ್ಟಿದ್ದಾರೆ. ಅದು ನನಗೆ ಈಗ ಬಂದಿದೆ, ಅವರ ಎಲ್ಲಾ ಉತ್ತರಗಳು ಈ ರೀತಿ ಇವೆ.

**ಉಪ ಸಭಾಪತಿಯವರು:-** ಮಾನ್ಯ ಸದಸ್ಯರಾದಂತಹ ಶ್ರೀ ಎನ್.ಅಪ್ಪಾಜಿಗೌಡರೆ, ತಾವು ಉಪ ಪ್ರಶ್ನೆಯನ್ನು ಕೇಳಿ.

**ಶ್ರೀ ಎನ್.ಅಪ್ಪಾಜಿಗೌಡ:-** ಮಾನ್ಯ ಸಭಾಪತಿಯವರೆ, ಬೆಂಗಳೂರು ನಗರದಲ್ಲಿ ಅಂತರರಾಷ್ಟ್ರೀಯ ಗುಣಮಟ್ಟದ Tender Sure ಯೋಜನೆಯಡಿಯಲ್ಲಿ ನಿರ್ಮಿಸಿರುವ ಪಾದಚಾರಿ ಮಾರ್ಗಗಳು ಯಾವುವು ಎಂಬುದು ಪ್ರಶ್ನೆ. ಈ ತರಹ ಒಟ್ಟು ಐದು ಪ್ರಶ್ನೆಗಳನ್ನು ಕೇಳಿದ್ದೇನೆ. ಅದರಲ್ಲಿ ಬೆಂಗಳೂರು ನಗರದಲ್ಲಿ ಅಂತರರಾಷ್ಟ್ರೀಯ ಗುಣಮಟ್ಟದಲ್ಲಿ Tender Sure ಯೋಜನೆಯಡಿಯಲ್ಲಿ ನಿರ್ವಹಿಸುತ್ತಿರುವ ಕಾಮಗಾರಿಗಳ ವಿವರಗಳನ್ನು ಅನುಬಂಧ-1ರಲ್ಲಿ ನೀಡಲಾಗಿದೆ ಎಂದಿದ್ದಾರೆ. ಅದು ಈ ರೀತಿ ಇದೆ:

*"List of central business district roads in Bengaluru city taken up under Tender Sure standards."*

**ಉಪ ಸಭಾಪತಿಯವರು:-** ಮಾನ್ಯ ಸದಸ್ಯರಾದಂತಹ ಶ್ರೀ ಎನ್.ಅಪ್ಪಾಜಿಗೌಡರೆ, ಉತ್ತರವನ್ನು ಓದಬೇಡಿ, ನಿಮಗೆ ಏನು ಬೇಕು ಅದರ ಬಗ್ಗೆ ಉಪ ಪ್ರಶ್ನೆಯನ್ನು ಕೇಳಿ.

**ಶ್ರೀ ಎನ್.ಅಪ್ಪಾಜಿಗೌಡ:-** ಮಾನ್ಯ ಸಭಾಪತಿಯವರೆ, ಈ ಕಾಮಗಾರಿಗಳು ಪ್ರಾರಂಭಗೊಂಡಿದ್ದು ಯಾವಾಗ, ಯಾವ ಯಾವ ಕಾಮಗಾರಿಗಳು ಎಂಬುದನ್ನು ಇಲ್ಲಿ ಕೊಟ್ಟಿದ್ದಾರೆ. ಆದರೆ, ಮುಖ್ಯವಾಗಿ ಈ ಕಾಮಗಾರಿಗಳನ್ನು ಪ್ರಾರಂಭ ಮಾಡುವ ಮೊದಲು, ಎಲ್ಲಾ ಇಲಾಖೆಗಳು ಸೇರಿ ಈ ಯೋಜನೆಗಳ ಬಗ್ಗೆ ತೆಗೆದುಕೊಳ್ಳಬೇಕಾದ ಎಚ್ಚರಿಕೆಗಳೇನು ಎಂಬುದಾಗಿ ಕೇಳಿದ್ದೇನೆ. ಈ ಕಾಮಗಾರಿಗಳನ್ನು BWSSB, BESCOM, B.T.P., KPTCL, ಇತ್ಯಾದಿ ಇಲಾಖೆಯವರೊಂದಿಗೆ ಸಮನ್ವಯ ಸಾಧಿಸಿ, ಅವರವರ ಇಲಾಖೆಗಳ ಅಗತ್ಯತೆಗಳನ್ನು ಸಾಧ್ಯವಾದಷ್ಟು ಅಳವಡಿಸಿಕೊಂಡು ಕಾಮಗಾರಿಗಳನ್ನು ನಿರ್ವಹಿಸಲಾಗುತ್ತದೆ ಎಂದು ಹೇಳಿದ್ದೀರಿ. ಇನ್ನೊಂದು ಪ್ರಶ್ನೆ ಈ ಯೋಜನೆಯಡಿಯಲ್ಲಿ ನಿರ್ಮಿತವಾದ ಮೊದಲ ರಸ್ತೆಯನ್ನು ವಿದ್ಯುಚ್ಛಕ್ತಿ ಕಾಮಗಾರಿಗಾಗಿ ಅಗೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ, ಹಾಗಿದ್ದಲ್ಲಿ, ಸದರಿ ಅಧಿಕಾರಿಗಳ ಮೇಲೆ ಯಾವ ಕ್ರಮ ಕೈಗೊಳ್ಳಲಾಗಿದೆ ಎಂದು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕೇಳಿದ್ದೇನೆ, ಅದಕ್ಕೆ ಅವರು ಬಂದಿದೆ ಎಂದು ಉತ್ತರ ನೀಡಿದ್ದಾರೆ. ಅಂತರರಾಷ್ಟ್ರೀಯ ಯೇಜನೆಯಡಿಯಲ್ಲಿ Tender Sure ಯೋಜನೆಯನ್ನು ಪ್ರಾರಂಭ ಮಾಡಿದ್ದಾರೆ. ಆದರೆ ಅದರ ಮೊದಲ ರಸ್ತೆಯನ್ನೇ ಅಗೆದಿದ್ದಾರೆ. ಅದರಲ್ಲಿ Tender Sure ರಸ್ತೆಯ ಸೌಕರ್ಯವೇನು? ಅಂದರೆ, ಪಾದಚಾರಿಗಳಿಗೆ ಸುಸಜ್ಜಿತವಾದ ಮಾರ್ಗ, ಸೈಕಲ್‌ಗಳಿಗೆ ಪ್ರತ್ಯೇಕ ಮಾರ್ಗ, ಭಾರಿ ವಾಹನಗಳು, ಮಧ್ಯಮ ಗಾತ್ರದ ವಾಹನಗಳು ಮತ್ತು ದ್ವಿಚಕ್ರ ವಾಹನಗಳಿಗೆ ಪ್ರತ್ಯೇಕ line ಗಳು, ಮಾರ್ಗ ಮಧ್ಯದಲ್ಲಿ ವಾಹನಗಳು ರಸ್ತೆಗೆ ನುಗ್ಗದಂತೆ ತಡೆ. ಪಾದಚಾರಿ ಮಾರ್ಗ ನೆಲ ಮಟ್ಟಕ್ಕಿಂತ ಎತ್ತರವಾಗಿದ್ದರೆ, ಸೈಕಲ್ ಮಾರ್ಗ ತುಸು ಕೆಳಗಿರುತ್ತದೆ. ಮಳೆ ನೀರು ಯಾವುದೇ ಅಡೆ-ತಡೆ ಇಲ್ಲದೆ ಮುಂದೆ ಹೋಗುವಂತೆ ವ್ಯವಸ್ಥೆಯನ್ನು ಕಲ್ಪಿಸಲಾಗಿರುತ್ತದೆ. ಇದೆಲ್ಲವನ್ನು ಮಾಡಬೇಕಾಗಿತ್ತು. ಅಂತರರಾಷ್ಟ್ರೀಯ ಮಟ್ಟದಲ್ಲಿ ಏನು ಈ Tender Sure ರಸ್ತೆಯನ್ನು ಮಾಡಿದ್ದಾರೆ, ಮೊದಲನೆಯ ವರ್ಷವೇ ಅದನ್ನು ಅಗೆದಿದ್ದಾರೆ, ಯಾವ ಒಂದು ಪುರುಷಾರ್ಥಕ್ಕೋಸ್ಕರ ಇವರು ಸಾವಿರಾರು ಕೋಟಿ ರೂಪಾಯಿಯಲ್ಲಿ ಈ ಒಂದು Tender Sure ಕಾಮಗಾರಿಯನ್ನು ಮಾಡಿ, ಮೊದಲನೇ ವರ್ಷವೇ ರಸ್ತೆಯನ್ನು ಅಗೆದರೆ ಇದರ ಔಚಿತ್ಯವಾದರೂ ಏನು ಎಂಬುದನ್ನು ಮಾನ್ಯ ಸಚಿವರು ಹೇಳಬೇಕೆಂದು ಕೇಳಿಕೊಳ್ಳುತ್ತೇನೆ.

**ಶ್ರೀ ಕೆ.ಜೆ.ಜಾರ್ಜ್:-** ಮಾನ್ಯ ಸಭಾಪತಿಯವರೆ, ನಾವು Tender Sure ರಸ್ತೆಯನ್ನು ಗುಣಮಟ್ಟದ ಪ್ರಕಾರ ಮಾಡುವುದಕ್ಕೆ ಈಗಾಗಲೇ ವ್ಯವಸ್ಥೆಗಳನ್ನು ಮಾಡಿದ್ದೇವೆ. ಈಗ ಅದರಲ್ಲಿ ಏನಾಗುತ್ತದೆಂದರೆ BWSSB ಮತ್ತು KPTCL ಇವರುಗಳ cable ಗಳು ಇರುತ್ತವೆ. ಅವರು ಏನು ಹೇಳುತ್ತಾರೆಂದರೆ, ಆ Saint Marks ರಸ್ತೆಯಲ್ಲಿ ಸುಮಾರು 230 K.V. cable ಹೋಗಿದೆ. ಆ ಕೇಬಲ್‌ಗಳನ್ನು shift ಮಾಡುವುದಕ್ಕೆ ನಾವು ವ್ಯವಸ್ಥೆ ಮಾಡಲಿಲ್ಲ. ಏಕೆಂದರೆ normally, KPTCL ರವರ cable ದುರಸ್ಥಿಗೆ ಒಳಪಡುವುದಿಲ್ಲ ಅಂದರೆ ರಿಪೇರಿ ಆಗುವುದಿಲ್ಲ. ಆದರೆ, ಇಲ್ಲಿ ಏನಾಗಿದೆ ಎಂದರೆ ಒಂದು ರಿಪೇರಿಗೆ ಬಂದಿದೆ ಅದನ್ನು ಮಾಡಬೇಕು. ಅದನ್ನು ನಾವು ಏನಾದರೂ shift ಮಾಡಬೇಕಾದರೆ ಸುಮಾರು ನೂರು ಕೋಟಿ ರೂಪಾಯಿಗಳ ಹಣ ಆ ಕೇಬಲ್‌ಗೆ ಖರ್ಚಾಗುತ್ತದೆ, ಅದಕೋಸ್ಕರ ಈ ದೊಡ್ಡ High Tension cable ಅನ್ನು shift ಮಾಡುತ್ತಿಲ್ಲ, ಅದನ್ನು ಹಾಗೆಯೇ ಇಡುತ್ತಿದ್ದೇವೆ. ಈಗಾಗಲೆ ಆ ಕೇಬಲ್ ಏನಾಗಿದೆ ಎಂದರೆ, KPTCL ನವರು ಹಣವನ್ನು ಕೊಟ್ಟಿದ್ದಾರೆ. ಅದನ್ನು ಈಗ ದುರಸ್ತಿ ಮಾಡಿದ್ದೇವೆ. ಅಲ್ಲಿ depth ಅನ್ನು ಮಾಡಿದ್ದೇವೆ. ಕೆಲವೊಂದು ಅನಿವಾರ್ಯ ಸಂದರ್ಭದಲ್ಲಿ ನಾವು ರಸ್ತೆಗಳನ್ನು ಅಗೆಯಬೇಕಾದಂತಹ ಅವಶ್ಯಕತೆ ಬರುತ್ತದೆ. ಅದಕ್ಕೋಸ್ಕರವಾಗಿ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ನಾವು Co-ordination Committee ಯನ್ನು ಮಾಡಿದ್ದೇವೆ. ಎಲ್ಲಿ ಅನಿವಾರ್ಯವಾಗಿ ಬರುತ್ತದೆ ಅಲ್ಲಿ ಮಾತ್ರ ಮಾಡಬೇಕಾಗುತ್ತದೆ. ನಾನು ಆಗಲೇ ಹೇಳಿದ್ದೇನೆ, ಸಾಧ್ಯವಾದಷ್ಟು ಮಟ್ಟಿಗೆ ಅಗೆಯದ ರೀತಿಯಲ್ಲಿ ಕ್ರಮ ತೆಗೆದುಕೊಳ್ಳುತ್ತೇವೆ. ನಮ್ಮದೇನು planned city ಅಲ್ಲ. ನಾವಾಗಲಿ BWSSB ಮತ್ತು KPTCL ಅಥವಾ Optical Fiber ನವರು ಆಗಲಿ ಎಲ್ಲಾ ವ್ಯವಸ್ಥೆಗಳನ್ನು ನಾವು ಮಾಡಬೇಕಾಗುತ್ತದೆ. ಒಂದೊಂದು ಬಾರಿ ಅನಿವಾರ್ಯವಾದರೆ ನಾವು ಮಾಡಬೇಕಾಗುತ್ತದೆ, ನಾವು ಅದನ್ನು ದುರಸ್ತಿ ಮಾಡಿ, restore ಮಾಡುವಂತಹ ಕೆಲಸವನ್ನು ಮಾಡುತ್ತೇವೆ.

**ಶ್ರೀ ಎನ್.ಅಪ್ಪಾಜಿಗೌಡ:-** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು ಉತ್ತರದಲ್ಲಿ, only KPTCL ಎಂದು ಹೇಳಿದ್ದಾರೆ. ಆದರೆ ಜೊತೆಗೆ ಇಲ್ಲಿ BWSSB ನವರು ಸಹ ರಸ್ತೆ ಅಗೆದಿದ್ದಾರೆ. ಇದನ್ನು ಒಂದು ಒಳ್ಳೆಯ ಗುಣಮಟ್ಟದ ರಸ್ತೆ ಮಾಡಬೇಕೆಂದು ಏನು ಸಾವಿರಾರು ಕೋಟಿ ರೂಪಾಯಿಗಳನ್ನು ವ್ಯಯ ಮಾಡಿದ್ದೀರಿ. ಇದನ್ನು ಮೊದಲೇ ಏಕೆ ಗಮನಕ್ಕೆ ತೆಗೆದುಕೊಳ್ಳಲಿಲ್ಲ. ಈ ವಿಚಾರದಲ್ಲಿ ಏಕೆ ಒಂದಕ್ಕೊಂದು ಇಲಾಖೆಯ ಜೊತೆ Co-ordination ಆಗಲಿಲ್ಲ?

**ಶ್ರೀ ಕೆ.ಜೆ.ಜಾರ್ಜ್:-** ಮಾನ್ಯ ಸಭಾಪತಿಯವರೆ, ಎಲ್ಲಾ ವ್ಯವಸ್ಥೆಗಳನ್ನು ಮಾಡಬೇಕಾದರೆ, ಯಾವ ರೀತಿ ಆಗುತ್ತದೆಂದು ಈಗಾಗಲೇ ನಾನು ಹೇಳಿದ್ದೇನೆ, ಹೊಸದಾಗಿ ಒಂದು ನಗರ ಪ್ರದೇಶ ಮಾಡಬೇಕಾದರೆ, ಇದೆಲ್ಲಾ ವ್ಯವಸ್ಥೆಗಳನ್ನು ಮಾಡುವುದಕ್ಕೆ ಸಾಧ್ಯ. ಈಗ ನಾವು ಸಾಧ್ಯವಾದಷ್ಟು ಅಗೆಯದಂತಹ ಕೆಲಸಗಳನ್ನು ಮಾಡಿದ್ದೇವೆ. ಅದು ಮುಖ್ಯ ಕಾರ್ಯದರ್ಶಿಯವರ ಮಟ್ಟದಲ್ಲಿ ಆಗುತ್ತದೆ ಮತ್ತು ಇನ್ನೊಂದು ಏನಾಗುತ್ತದೆಂದರೆ, ಕೆಲವೊಂದರಲ್ಲಿ ಸೋರಿಕೆಗಳು ಆಗುತ್ತವೆ. ಎಲ್ಲಾ ವ್ಯವಸ್ಥೆಗಳನ್ನು ಮಾಡಿದಾಗ, ಕೆಲವೊಂದು ಸಂದರ್ಭದಲ್ಲಿ ಆ ತರಹ ಆದಾಗ BWSSB ನವರು ಅಗೆದಿದ್ದಾರೆಂದು ಕೇಳಿದರೆ, ಈ Tender Sure ರಸ್ತೆಯನ್ನು ಅಗೆಯುತ್ತಿರುವುದು ಬರಿ ಕನ್ನಿಂಗ್‌ಹ್ಯಾಮ್ ರಸ್ತೆಯಲ್ಲಿ, ಆ Tender Sure ರಸ್ತೆಯ ಕೆಲಸವನ್ನು ನಾವು ಇನ್ನೂ ಮುಗಿಸಲಿಲ್ಲ. BWSSB ನವರು ಇನ್ನೂ ಸ್ವಲ್ಪ pipelines ಗಳನ್ನು shift ಮಾಡುವುದಕ್ಕೆ ಇದೆ. ಅವರು shift ಮಾಡಿದ ಮೇಲೆಯೆ ನಾವು ಕೊನೆಯಲ್ಲಿ ಅದರ tarring ಮಾಡಬೇಕಾಗಿರುವುದು, ಅದು ಆದಮೇಲೆ ಮಾಡುತ್ತೇವೆ. ಅದಕ್ಕೋಸ್ಕರ ಈ ರೀತಿಯಾಗಿದೆಯೇ ಹೊರತು. ಈಗ ಹೇಳುತ್ತೇನೆ ರಾಜಭವನದ ಹತ್ತಿರ ಅದು Tender Sure ರಸ್ತೆಯಲ್ಲ, ಅದರೂ ಸಹ BWSSB ನೀರು ಸೋರಿಕೆಯಾಯಿತು ಅಂದರೆ ತಕ್ಷಣ ಅದನ್ನು

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಅಗೆದು replacement ಮಾಡಬೇಕಾಗುತ್ತದೆ. Tender Sure ಒಂದು ವ್ಯವಸ್ಥೆ ಮಾಡಿದರೆ, ಬೇರೆ ರಸ್ತೆಯನ್ನು ಅಗೆಯಬೇಕಾದಂತಹ ಪ್ರಸಂಗ ಬರುತ್ತದೆ. ನಾವು ಆದಷ್ಟು ಕಡಿಮೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ. ತಮಗೆ ಗೊತ್ತಿದೆ BWSSB ನವರು ಅವರ ಹಣದ ಪ್ರಕಾರ ಅವರು pipelines ಗಳನ್ನು ಬದಲಾಯಿಸಿಕೊಳ್ಳುತ್ತಾರೆ, ಅದಕ್ಕೆ ಅವರದೆ ಆದಂತಹ ಒಂದು ರೀತಿ ನೀತಿ ಇದೆ. ನಾವು ಅವರಿಗೆ ಸಾಕಷ್ಟು ಸಮಯಾವಕಾಶ ಕೊಡುತ್ತೇವೆ. ಈಗ ಏನಾಗುತ್ತದೆಂದರೆ ಅವರು ಕೆಲಸ ಪ್ರಾರಂಭಿಸುವವರೆಗೂ, ನಾವು ಕಾಯುವುದಕ್ಕೆ ಆಗುವುದಿಲ್ಲ. Potholes ಗಳಾದರೆ ಬಂದು ಗಲಾಟೆ ಮಾಡುತ್ತಾರೆ, ರಸ್ತೆ ಸರಿ ಇಲ್ಲದೆ ಇದ್ದರೂ ಗಲಾಟೆ ಆಗುತ್ತದೆ. ಆದುದರಿಂದ ನಾವು ರಸ್ತೆಗಳ ದುರಸ್ತಿ ಮಾಡುವಂತಹ ಕೆಲಸವನ್ನು ನಿಲ್ಲಿಸುವುದಕ್ಕೆ ಆಗುವುದಿಲ್ಲ. ಅನಿವಾರ್ಯವಾಗಿ ಏನಾದರೂ ಮಾಡಿದರೆ ಅದನ್ನು restore ಮಾಡುವುದಕ್ಕೆ ನಾವು ಕ್ರಮ ತೆಗೆದುಕೊಳ್ಳುತ್ತಿದ್ದೇವೆ.

**ಉಪ ಸಭಾಪತಿಯವರು:-** ಧನ್ಯವಾದಗಳು. ಮಾನ್ಯ ಸದಸ್ಯರಾದಂತಹ ಶ್ರೀ ಎನ್.ಅಪ್ಪಾಜಿಗೌಡರೆ ತಾವು ಕುಳಿತುಕೊಳ್ಳಿ. ಮುಂದಿನ ಪ್ರಶ್ನೆ ಮಾನ್ಯ ಸದಸ್ಯರಾದಂತಹ ಶ್ರೀ ಕ್ಯಾಪ್ಟನ್ ಗಣೇಶ್ ಕಾರ್ಣಿಕ್‌ರವರದ್ದು.

**ಚುಕ್ಕೆಗುರುತಿನ ಪ್ರಶ್ನೆ ಸಂಖ್ಯೆ 3122**
**(ಉತ್ತರವನ್ನು ಒದಗಿಸಲಾಗಿದೆ)**

**ಶ್ರೀ ಕ್ಯಾಪ್ಟನ್ ಗಣೇಶ್ ಕಾರ್ಣಿಕ್:-** ಮಾನ್ಯ ಸಭಾಪತಿಯವರೆ, ಇದು ಹಿಂದಿನ ಪ್ರಶ್ನೆಯ ಮುಂದುವರೆದ ಭಾಗ, ನಾನೂ ಅದೇ ಪ್ರಶ್ನೆಯನ್ನು ಕೇಳುತ್ತಿದ್ದೇನೆ. ಅಂದರೆ ತಾವು ನಿರಂತರವಾಗಿ ರಸ್ತೆಗಳನ್ನು ಅಗೆಯುತ್ತಿರುತ್ತೇವೆಂದು ಪ್ರಾಮಾಣಿಕವಾಗಿ ಒಪ್ಪಿಕೊಂಡಿದ್ದೀರಿ. ಅಂದರೆ ಅದು ಆಗುತ್ತಲೇ ಇರುತ್ತದೆ, ತಾವು ಅದಕ್ಕೆ ಕಾರಣಗಳನ್ನು ಕೊಟ್ಟಿದ್ದೀರಿ ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ನನ್ನ ಪ್ರಶ್ನೆ simple ಇರುವಂಥದ್ದು, ಸಮನ್ವಯ ಸಮಿತಿಯನ್ನು ತಾವು ಮಾಡಿಕೊಂಡಿದ್ದೇವೆಂದು ಹೇಳಿದ್ದೀರಿ, ಅದನ್ನು ಯಾವಾಗ ಮಾಡಿಕೊಂಡಿದ್ದೀರಿ, ಅದು ತಿಂಗಳಿಗೆ ಎರಡು ಬಾರಿ ಸಭೆ ಸೇರುತ್ತಿದೆ, ಅದನ್ನು ತಾವು ಹೇಳಿದ್ದೀರಿ. ಬರೀ ಈ ರೀತಿ patch up ಮಾಡುವುದು Co-ordination ಮಾಡುವಂತಹ ಕೆಲಸವನ್ನು ಮಾತ್ರ ಮಾಡುತ್ತಿದ್ದೀರಾ ಅಥವಾ ಇದಕ್ಕೆ ಶಾಶ್ವತ ಪರಿಹಾರ ಏನು? ನೀವು ಹೇಳಿದ ಹಾಗೆ ಬೇರೆ ಬೇರೆ ಇಲಾಖೆಗಳು, ಬೇರೆ ಬೇರೆ ಸಮಯದಲ್ಲಿ ಅಗತ್ಯ ಕಾರ್ಯಕ್ರಮಗಳಿಗೆ ರಸ್ತೆಯನ್ನು ಅಗೆಯುವಂತಹ ಕೆಲಸ ಮಾಡಬೇಕಾಗುತ್ತದೆಂದು ಹೇಳುತ್ತೀರಾ?

(ಮುಂದು)

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

*(745) 15.06.201 11.40 LL-KS(GR)*

ಕ್ಯಾಪ್ಟನ್ ಗಣೇಶ್ ಕಾರ್ಣಿಕ್(ಮುಂದುವರೆದುದು)

ಇಂತಹ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ಕಂಡುಹಿಡಿಯದಿದ್ದರೆ ಹೇಗೆ? ಸಮನ್ವಯ ಸಮಿತಿ co-ordinate ಮಾಡುವ ಕೆಲಸ ಮಾಡುತ್ತದೆಯೇ ಹೊರತು ಶಾಶ್ವತವಾಗಿ ನಾಗರಿಕರಿಗೆ ಸೌಲಭ್ಯಗಳನ್ನು ಒದಗಿಸುವುದಕ್ಕೆ ಆಗುವುದಿಲ್ಲ. ಫುಟ್‌ಪಾತ್ ರಿಪೇರಿ ಮಾಡುವುದಕ್ಕೆಂದು ಅಗೆಯುತ್ತಾರೆ. ಒಂದೊಂದು ಫುಟ್‌ಪಾತ್ 3–4 ಸಲ ರಿಪೇರಿ ಆಗುತ್ತದೆ. ಚರಂಡಿ ಅಗೆಯುತ್ತಾರೆ. ಕೇಬಲ್‌ರವರು ಬಂದು ಅವರೂ ಸಹ ಅಗೆಯುತ್ತಾರೆ. ಹೂಳು ತೆಗೆಯಬೇಕೆಂದು ಮತ್ತೆ ರಸ್ತೆ ಅಗೆಯುತ್ತಾರೆ. ಇದ್ಯಾವ ಸಮಸ್ಯೆಗಳು ಶಾಶ್ವತವಾಗಿ ಪರಿಹಾರವಾಗುತ್ತಿಲ್ಲ. ಇದು ಒಂದು ಭಾಗ.

ಇನ್ನು ಎರಡನೆಯದಾಗಿ, ಬೆಂಗಳೂರು ಇವತ್ತಿನ ದಿವಸ ಬೆಳೆಯುತ್ತಿದೆ. ಮಾನ್ಯ ಸಚಿವರು ಇದು ಹಳೆಯ ನಗರ ಆ ರೀತಿ ಮಾಡಲಿಕ್ಕೆ ಆಗುವುದಿಲ್ಲವೆಂದು ಆಗಲೇ ಹೇಳಿದರು. ಆದರೆ, ಯಾವ ಹೊಸ ಬಡಾವಣೆಯಲ್ಲಿ ಈ ರೀತಿಯ ಪೂರ್ಣ ವ್ಯವಸ್ಥೆಯನ್ನು ಅಳವಡಿಸಿಕೊಂಡಿದ್ದಾರೆ? ಇಲ್ಲಿ ಮಾಡಿರುವ ತಪ್ಪಿನಿಂದ ಪಾಠ ಕಲಿಯಬೇಕಲ್ಲವೇ? ಆದರೆ, ಈಗ ನಿರ್ಮಿತವಾಗಿರುವ ಹೊಸ ಬಡಾವಣೆಗೆ ಹೋದರೆ ಅದು ಈಗಿರುವ ನಗರಗಳಿಗಿಂತಲೂ ಕೆಟ್ಟ ವ್ಯವಸ್ಥೆಯಲ್ಲಿದೆ. ನಗರ ಹೇಗೆ ಮೇಲೆ ಬೆಳೆಯುತ್ತಿದೆಯೋ, ಅದೇ ರೀತಿ ಒಂದು ಒಳ್ಳೆಯ ಯೋಜನಾಬದ್ಧವಾಗಿ underground ಗೆ ಯಾವ ಸೌಲಭ್ಯಗಳನ್ನು ಕೊಡಬೇಕೆಂಬ ಬಗ್ಗೆ ಯೋಚನೆ ಮಾಡಬೇಕು. ಬೆಂಗಳೂರು ಮಹಾನಗರ ಅಭಿವೃದ್ಧಿ ಪ್ರಾಧಿಕಾರ ಅಥವಾ ತಮ್ಮ ಇಲಾಖೆಯಾಗಲಿ, ಹಳೆಯದನ್ನು ರಿಪೇರಿ ಮಾಡುವುದನ್ನು ಬಿಡಿ, ಹೊಸ ಬಡಾವಣೆ ಬೆಳೆಯಬೇಕಾದರೂ ಕೂಡ ಅವರ ಬಳಿ ಯೋಜನೆಯಿಲ್ಲ. ಹಾಗಾಗಿ ಬೆಂಗಳೂರು ನಾಗರಿಕರಿಗೆ ನಿರಂತರವಾಗಿ ಈ ರಸ್ತೆ ಬವಣೆ, ವಾಹನ ಹೋಗಲಿಕ್ಕೆ ಜಾಗವಿಲ್ಲ, ಫುಟ್‌ಪಾತ್‌ನಲ್ಲಿ ಜಾಗವಿಲ್ಲ ಮತ್ತು ಅದರ ಮಧ್ಯೆ ರಸ್ತೆ ಅಗೆದು ಬಿಟ್ಟರೆ ಅವರ ಗತಿಯೇನಾಗಬೇಕು? ಕತ್ತಲಾಗಿ ಬೆಳಗಾಗುವುದರೊಳಗೆ ರಸ್ತೆಗೆ hump ಹಾಕಿಬಿಡುತ್ತಾರೆ. ಒಂದು ವಾರ ಬಿಟ್ಟು ನಂತರ ಆ hump ಅನ್ನು ತೆಗೆದುಹಾಕುತ್ತಾರೆ. ಫುಟ್‌ಪಾತ್‌ನಲ್ಲಿ ಕಲ್ಲನ್ನು ಕಿತ್ತು ಹಾಕಿ bricks ಹಾಕುವುದಕ್ಕೆ ಹೋಗುತ್ತಾರೆ, ಆದರೆ, ಆ ಫುಟ್‌ಪಾತ್‌ನ ಕಲ್ಲು ಸಹ ಅಲ್ಲೇ ಬಿದ್ದಿರುತ್ತದೆ. ಜನರಿಗೆ ಸುಲಭವಾಗಬೇಕೆಂದು underground passage ಮಾಡಿದ್ದಾರೆ. ಆದರೆ, ಅದಕ್ಕೆ ಬೀಗ ಹಾಕಿದ್ದಾರೆ. ಅದನ್ನು ಯಾರೂ ಉಪಯೋಗ ಮಾಡುತ್ತಿಲ್ಲ. ಈ ರೀತಿಯ ಯೋಜನೆಗಳನ್ನು plan ಮಾಡುವುದು ಯಾರು ಮತ್ತು ಏತಕ್ಕೆ ಅನುಷ್ಠಾನಗೊಳಿಸುತ್ತಾರೆ? ಅವರ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ವಿರುದ್ಧ ಏನು ಕ್ರಮ ತೆಗೆದುಕೊಳ್ಳುತ್ತಾರೆ? ನಗರ ವಾಸಿಗಳಿಗೆ ಅನುಕೂಲವಾಗಲಿಕ್ಕೆ ಮತ್ತು ರಸ್ತೆ ಸಂಚಾರ ಯೋಗ್ಯವಾಗಲಿಕ್ಕೆ ಸರ್ಕಾರದ ಬಳಿ ಶಾಶ್ವತ ಪರಿಹಾರ ಇಲ್ಲವೇ? ಇದನ್ನು ಮಾನ್ಯ ಸಚಿವರ ಬಳಿ ಕೇಳುವುದಕ್ಕೆ ಬಯಸುತ್ತೇನೆ.

**ಶ್ರೀ ಕೆ.ಜೆ.ಜಾರ್ಜ್:-** ಮಾನ್ಯ ಸಭಾಪತಿಯವರೆ, ಈಗಾಗಲೇ ನಾನು ಮಾನ್ಯ ಸದಸ್ಯರಾದ ಶ್ರೀ ಎನ್.ಅಪ್ಪಾಜಿಗೌಡರ ಪ್ರಶ್ನೆಗೆ ಉತ್ತರ ಕೊಟ್ಟಿದ್ದೇನೆ. ಅನಿವಾರ್ಯವಾಗಿ ಕೆಲವೊಂದು ಸಂದರ್ಭದಲ್ಲಿ ರಸ್ತೆ ಅಗೆಯಬೇಕಾಗುತ್ತದೆ. Chief Secretary leadershipನಲ್ಲಿ Co-ordination Committee ಮಾಡಿದ್ದೇವೆ, ಜೊತೆಗೆ BBMP ಆಯುಕ್ತರಿಂದಲೂ ಸಹ ಮಾಡಿದ್ದೇವೆ. ಈ Co-ordination Committee online ನಲ್ಲಿ ಸಿಗುತ್ತದೆ ಅದರಲ್ಲಿ ಯಾರು ಬೇಕಾದರೂ application ಹಾಕಬಹುದು. ಅದರ ಪ್ರಕಾರ ಕೊಡಬೇಕಾಗುತ್ತದೆ. ಈಗ ಏನು ತೊಂದರೆಯಾಗಿದೆ? ಉದಾಹರಣೆಗೆ, ಕೆಂಪೇಗೌಡ ಬಡಾವಣೆ ನಾವು ಹೊಸದಾಗಿ ನಮ್ಮ ಕಾಲದಲ್ಲಿ ಈಗ ಮಾಡುತ್ತಿದ್ದೇವೆ. ಮಾನ್ಯ ಸದಸ್ಯರು ಹೇಳಿದ ಹಾಗೆ ಎಲ್ಲಾ ಯೋಜನೆಗಳನ್ನು ಸೇರಿಸಿ ಒಂದೇ ವ್ಯವಸ್ಥೆಯೊಳಗೆ ತರುವುದಕ್ಕೆ ಈಗಾಗಲೇ ನಾವು ಅಲ್ಲಿ ಒಂದು ಹೊಸ ವಿನ್ಯಾಸ ಮಾಡಿ ಕೆಲಸ ಮಾಡುತ್ತಿದ್ದೇವೆ. ಈಗ ಕೆಲವೊಂದು ಸಂದರ್ಭದಲ್ಲಿ ಮಾನ್ಯ ಸದಸ್ಯರು ಹೇಳಿದಂತೆ ಅದನ್ನು ಅನಿವಾರ್ಯವಾಗಿ ಮಾಡಲೇಬೇಕಾಗುತ್ತದೆ. ನಾವು ಬಿಬಿಎಂಪಿ ಆಯುಕ್ತರಿಗೆ ಏನು ಹೇಳಿದ್ದೇವೆಯೆಂದರೆ, "ಈಗ ಬೇರೆ ಬೇರೆ ಕಡೆಯಿಂದ ಅಂದರೆ Bangalore Water Supply and Sewerage Board ನವರು ಅದನ್ನು restore ಮಾಡುವುದು ಅಥವಾ ಕೆ.ಪಿ.ಟಿ.ಸಿ.ಎಲ್. ನವರು ಅದನ್ನು ಮಾಡುವ ಬದಲಾಗಿ ನೀವೇ ಒಂದು Contractors ನ list ಮಾಡಿ, ನಾಳೆ ದಿವಸ ಸಮಸ್ಯೆ ಬಂದಾಗ ಅದನ್ನು ನಿರ್ವಹಿಸುವುದಕ್ಕಾಗಿ technical knowledge ಇರುವಂಥ, ತಾಂತ್ರಿಕ ಯಂತ್ರೋಪಕರಣಗಳು ಹೊಂದಿರುವಂತಹವರ ಒಂದು ಪಟ್ಟಿ ಮಾಡಿ ಅವರ ಕಡೆಯಿಂದ restore ಮಾಡಿಸುವಂತಹ ಕೆಲಸ ಮಾಡಿಸಿ" ಎಂದು ಹೇಳಿದ್ದೇವೆ. ಆ restore ಮಾಡಿಸುವುದಕ್ಕೆ ಏನಾಗುತ್ತದೆಯೆಂದರೆ, ಒಂದು ಬಾರಿ pipeline ಹಾಕಿದ ಮೇಲೆ ಅದು set ಆಗಬೇಕಾಗುತ್ತದೆ. Pipeline ಹಾಕಿದ ಕೂಡಲೇ ಅದರ ಮೇಲೆ concrete ಅಥವಾ tar ಹಾಕುವುದಕ್ಕೆ ಆಗುವುದಿಲ್ಲ. ಅದು set ಆಗಬೇಕಾಗುತ್ತದೆ. ಅದಕ್ಕೆ ಸ್ವಲ್ಪ ಸಮಯ ತೆಗೆದುಕೊಳ್ಳುತ್ತದೆ. ಇಲ್ಲವಾದರೆ ದುರಸ್ಥಿ ಮಾಡಿದ ಕೂಡಲೇ ಮತ್ತೆ ಕೆಳಗಡೆ ಹೋಗುತ್ತದೆ. ಈ ದೃಷ್ಟಿಯಿಂದ ಈಗ ಸಮನ್ವಯ ಸಮಿತಿ ಮಾಡಿದ ಮೇಲೆ ಸಾಕಷ್ಟು co-ordinate ಮಾಡುತ್ತಿದೆ. ಕೆಲವೊಂದನ್ನು ನಾವು ಅನಿವಾರ್ಯವಾಗಿ ಮಾಡಬೇಕಾಗುತ್ತದೆ. ಒಂದು ವೇಳೆ ಅದನ್ನು ಮಾಡದಿದ್ದರೂ ತೊಂದರೆಯಿಲ್ಲ, ಅದು

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡಿದ ಮೇಲೆ restore ಮಾಡುವಂತಹ ಕೆಲಸವನ್ನು ವೈಜ್ಞಾನಿಕವಾಗಿ ಮಾಡಬೇಕೆಂದು ಈಗಾಗಲೇ ನಾನು ಆದೇಶ ಕೊಟ್ಟಿದ್ದೇನೆ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:-** ಮಾನ್ಯ ಸಭಾಪತಿಯವರೆ, ಈ ಬೇರೆ ಬೇರೆ ರೀತಿಯ ಕೇಬಲ್‌ಗಳನ್ನು ತೆಗೆದುಕೊಂಡು ಹೋಗುವುದಕ್ಕಾಗಿ ಮಾನ್ಯ ಸಚಿವರು underground duct ಹಾಕುವುದರ ಬಗ್ಗೆ ಮಾನ್ಯ ಅಪ್ಪಾಜಿಗೌಡರಿಗೆ ಉತ್ತರ ಕೊಟ್ಟು ಅದನ್ನು ಉಲ್ಲೇಖ ಮಾಡಿದ್ದಾರೆ. It can become a source of income to the BBMP. At least ಇನ್ನು ಮುಂದಿನ ದಿನಗಳಲ್ಲಿ ಅನೇಕ ರೀತಿಯ ಕೇಬಲ್‌ಗಳನ್ನು ತೆಗೆದುಕೊಂಡು ಹೋಗುವುದಕ್ಕೆ ಈ ರೀತಿಯ duct ಗಳನ್ನು ನಿರ್ಮಾಣ ಮಾಡಿದರೆ, ಮತ್ತೆ ಮತ್ತೆ ರಸ್ತೆ ಅಗೆಯುವಂತಹ ಕೆಲಸವಿರುವುದಿಲ್ಲ. ಇದು ಒಂದು ವಿಚಾರವಾದರೆ ಎರಡನೆಯದಾಗಿ source of income ಆಗುತ್ತದೆ. ಆ ದೃಷ್ಟಿಯಲ್ಲಿ ಇನ್ನು ಮುಂದಿನ ದಿನಗಳಲ್ಲಿ ಹೊಸ ಬಡಾವಣೆಗಳಲ್ಲಿ ಕನಿಷ್ಠ ಒಂದು separate duct ಮಾಡುವ ಬಗ್ಗೆ ಆಲೋಚನೆ ಮಾಡಬಹುದೇ?

**ಶ್ರೀ ಕೆ.ಜೆ.ಜಾರ್ಜ್:-** ಮಾನ್ಯ ಸಭಾಪತಿಯವರೆ, ಕ್ಯಾಪ್ಟನ್ ಗಣೇಶ್ ಕಾರ್ಣಿಕ್‌ರವರು ಹೇಳಿದ ಹಾಗೆ ಈಗಾಗಲೇ ನಾವು ಈ ಬಗ್ಗೆ ಕ್ರಮ ತೆಗೆದುಕೊಂಡಿದ್ದೇವೆ. ಎಲ್ಲಿ ಹೊಸ ಫುಟ್‌ಪಾತ್ ಮಾಡುತ್ತೇವೆ? ಎಲ್ಲಿ ಹೊಸ ರಸ್ತೆ ಮಾಡುತ್ತೇವೆ? ಅಲ್ಲಿ ಎಲ್ಲಾ ಕಡೆ duct ಗಳನ್ನು provide ಮಾಡಿದ್ದೇವೆ. ಉದಾಹರಣೆಗೆ, Church Street ಆಗಬಹುದು ಎಂ.ಜಿ. ರೋಡ್ ಆಗಬಹುದು ಅಲ್ಲಿ ಈ ಕ್ರಮ ತೆಗೆದುಕೊಳ್ಳುತ್ತಿದ್ದಾರೆ. ಟೆಂಡರ್‌ಶ್ಯೂರ್ ರಸ್ತೆಯಲ್ಲಿ ಆ ವ್ಯವಸ್ಥೆ ಇದ್ದೇ ಇದೆ. ಆದರೆ, ಏನಾಗುತ್ತದೆಯೆಂದರೆ, ನಾವು duct ಮಾಡಿದರೂ ಸಹ ಈ optic fibre cable ಹಾಕುವವರಿಗೆ ಪ್ರತಿನಿತ್ಯ ಅಗೆಯಲೇಬೇಕು. ಇದರಿಂದಾಗಿ ನಮಗೆ ತೊಂದರೆಯಾಗುತ್ತದೆ. ಅದಕ್ಕಾಗಿ, cable operators ಅವರಿಗೆ ಪ್ರತ್ಯೇಕವಾದ ಸಭೆ ಕರೆದಿದ್ದೇನೆ. ಈ ಕೆಲಸಗಳನ್ನು ನಾವು ಮಾಡುತ್ತಿದ್ದೇವೆ. ಈಗ ಮಾಡುವಂತಹ ಹೊಸ ರಸ್ತೆಗಳಿಗೆ duct ಕೊಡುವಂತಹ ಮತ್ತು ಯು.ಜಿ.ಡಿ. ಮಾಡುವಂತಹ ಮತ್ತು ನೀರಿನ ಪೈಪ್‌ಗೆ ಸ್ಥಳ ಕೊಡುವಂತಹ ಒಂದು ಸೌಲಭ್ಯಗಳನ್ನು ನಾವು ಮಾಡುತ್ತಿದ್ದೇವೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆ: 3114**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಕೆ.ಅಬ್ದುಲ್ ಜಬ್ಬಾರ್:-** ಮಾನ್ಯ ಸಭಾಪತಿಯವರೆ, ಮಾನ್ಯ ಮುಖ್ಯಮಂತ್ರಿಗಳು ಕೌಶಲ್ಯಾಭಿವೃದ್ಧಿ ಯೋಜನೆಯನ್ನು ತಂದಿದ್ದಾರೆ ಅದಕ್ಕೆ ನಾನು ನಮ್ಮ weaker sections ಪರವಾಗಿ welcome ಮಾಡುತ್ತೇನೆ. ಅದರ ಜೊತೆಗೆ ಈ ಕೌಶಲ್ಯಾಭಿವೃದ್ಧಿಯನ್ನು ತಂದಿರುವ ಉದ್ದೇಶವೇನೆಂದರೆ, ನಗರ ಪ್ರದೇಶದಲ್ಲಿ ಮೋಟಾರ್ ಮೆಕಾನಿಕ್‌ಗಳು, ಪ್ಲಂಬರ್ಸ್‌ಗಳು, ಟೈಲರಿಂಗ್ ಮಾಡುವವರು, ಕಂಪ್ಯೂಟರ್ ಟ್ರೈನಿಂಗ್ ಮಾಡುವವರು, ಮೋಟಾರ್ ರಿವೈಂಡಿಂಗ್ ಮತ್ತು ನಗರದಲ್ಲಿ ಮಾಡುವಂತಹ ಅನೇಕ ಕೆಲಸಗಳಿಗೆ ತಾವು ಕೌಶಲ್ಯ ತರಬೇತಿ ಕೊಟ್ಟ ನಂತರ ಅವರಿಗೆ ಕೆಲಸ ಸಿಗದೇ ಇದ್ದ ಪಕ್ಷದಲ್ಲಿ ಅವರಿಗೆ ಕನಿಷ್ಠ ಪಕ್ಷ ಬ್ಯಾಂಕ್‌ಗಳಿಂದಾಗಲಿ ಅಥವಾ ಕೆ.ಎಸ್.ಎಫ್.ಸಿ. ಗಳಿಂದಾಗಲಿ ಸಾಲ ಕೊಡಿಸಿ ಉದ್ಯೋಗ ಕೊಡಿಸುವುದಕ್ಕೆ ಅವಕಾಶ ಮಾಡಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯವರೆ, ಕಳೆದ ವರ್ಷದಿಂದ ಈ ಕೌಶಲ್ಯಾಭಿವೃದ್ಧಿ ಇಲಾಖೆಯಿಂದ ಹೊಸದಾಗಿ ಒಂದು ಯೋಜನೆ ಮಾಡಿದ್ದೇವೆ. ಈ ಮೊದಲು ಬೇರೆ ಬೇರೆ ಇಲಾಖೆಗಳಲ್ಲಿ ಕೌಶಲ್ಯಾಭಿವೃದ್ಧಿ ತರಬೇತಿ ಕೊಡುತ್ತಿದ್ದೆವು. ಅದು ಪರಿಣಾಮಕಾರಿಯಾಗಿ ಎಷ್ಟು ಜನಕ್ಕೆ ಕೊಡುತ್ತಾರೆ? ಹೇಗೆ ಕೊಡುತ್ತಾರೆ? ಈ ಬಗ್ಗೆ ಏನೇನು disciplines ಇರುತ್ತವೆ? ಇವೆಲ್ಲಾ ಆಗುತ್ತಿರಲಿಲ್ಲ. ಅದಕ್ಕೆ ಈ ಎಲ್ಲವನ್ನು ಸೇರಿಸಿ ಒಂದು ಇಲಾಖೆಯ ಕೆಳಗಡೆ ಬರಬೇಕೆಂದು, ಈ ಬಗ್ಗೆ ಬಜೆಟ್‌ನಲ್ಲಿ ನಾನು ಘೋಷಣೆ ಮಾಡಿದ್ದೆ, ಅದರಂತೆ, ಕಳೆದ ವರ್ಷವೇ ಅದು ಕೆಲಸ ಪ್ರಾರಂಭ ಮಾಡಿದೆ. ಈ ವರ್ಷ ಕೂಡ ಸುಮಾರು ಐದು ಲಕ್ಷ ಯುವಕ-ಯುವತಿಯರಿಗೆ ಕೌಶಲ್ಯ ತರಬೇತಿ ಕೊಡಬೇಕೆಂದು ತೀರ್ಮಾನ ಮಾಡಿದ್ದೇವೆ. ಇದರಲ್ಲಿ ಸುಮಾರು 529 Job Roles ಗಳಿರುತ್ತವೆ. ಇದು National Skill Development Corporation (NSDC) ಯವರು ಯಾವ ಯಾವ ಉದ್ಯೋಗದಲ್ಲಿ ತರಬೇತಿ ಕೊಡಬೇಕೆಂದು ಪಟ್ಟಿ ಮಾಡಿದ್ದಾರೆ. ಅದರಂತೆ, ಒಬ್ಬ ವ್ಯಕ್ತಿ ಐದು ಉದ್ಯೋಗವನ್ನು online ಅಥವಾ website ಮೂಲಕ ಆಯ್ಕೆ ಮಾಡಿಕೊಳ್ಳಬಹುದು. ಈ ರೀತಿ ಉದ್ಯೋಗ ಆಯ್ಕೆ ಮಾಡಿಕೊಂಡ ನಂತರ ಮತ್ತೆ ಅವರಿಂದ clarify ಮಾಡಿಕೊಂಡು, ಅವರಿಗೆ ಉಪಯೋಗವಾಗತಕ್ಕಂತಹ ಮತ್ತು ಆಸಕ್ತಿ ಇರತಕ್ಕಂತಹದ್ದರಲ್ಲಿ ಒಂದು ಉದ್ಯೋಗಕ್ಕೆ ತರಬೇತಿ ಕೊಡುತ್ತೇವೆ.

ಈ ಕೌಶಲ್ಯ ತರಬೇತಿಗಾಗಿ ಅಲ್ಪಸಂಖ್ಯಾತರು ಒಟ್ಟು 73,501 ಜನ ಅರ್ಜಿ ಹಾಕಿದ್ದಾರೆ. ಒಟ್ಟು 5 ಲಕ್ಷದೊಳಗೆ ಶೇಕಡ 15 ರಷ್ಟನ್ನು ಅಲ್ಪಸಂಖ್ಯಾತರಿಗೆ ಕೊಟ್ಟಿದ್ದೇವೆ. ಐದು ಲಕ್ಷದಲ್ಲಿ ಶೇಕಡ 15 ರಷ್ಟೆಂದರೆ, 75 ಸಾವಿರ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಆಗುತ್ತದೆ. 75 ಸಾವಿರ ಜನ ಅಲ್ಪಸಂಖ್ಯಾತರಿಗೆ ತರಬೇತಿ ಕೊಡುತ್ತೇವೆ. ಅವರಿಗೆ ಯಾವ ಉದ್ಯೋಗದಲ್ಲಿ ಆಸಕ್ತಿಯಿರುತ್ತದೆ ಅದರ ಬಗ್ಗೆ ತರಬೇತಿ ಕೊಡುತ್ತೇವೆ. ಅದಕ್ಕೆ ಮೊದಲು ಕೆಳಹಂತದಲ್ಲಿರುವ ಉದ್ಯೋಗಗಳು ಮತ್ತು ಕೆಳಹಂತದ ವಿದ್ಯಾಭ್ಯಾಸ ಇರತಕ್ಕಂತಹವರು, ಯಾರಿಗೆ ತರಬೇತಿ ಬೇಕು ಅನ್ನತಕ್ಕಂತಹವರು ಎಸ್.ಎಸ್.ಎಲ್.ಸಿ. ಮಾಡಿರಬಹುದು, ಪ್ರೈಮರಿ ಸ್ಕೂಲ್ ಪಾಸ್ ಆಗಿರಬಹುದು ಅಥವಾ ಏನೂ ಓದದೆಯೇ ಇರಬಹುದು. ಅಂತಹವರಿಗೂ ಕೂಡ ನಾವು ತರಬೇತಿ ಕೊಡುತ್ತೇವೆ. ಶಾಲೆಗೆ ಹೋಗದೇ ಇರತಕ್ಕಂತಹವರು ಈಗ ಕೆಲವರು saloon ಗಳನ್ನು ಇಟ್ಟುಕೊಳ್ಳಬಹುದು. ಆ ರೀತಿ ಸಲೂನ್ ಇಟ್ಟುಕೊಳ್ಳುವವರಿಗೆ ತರಬೇತಿ ಕೊಟ್ಟು, ಅದರಲ್ಲಿ ಸ್ವಲ್ಪ ತಾಂತ್ರಿಕತೆ ಹೆಚ್ಚು ಮಾಡಿ ಅವರಿಗೂ ಕೂಡ ಅನುಕೂಲ ಮಾಡಬಹುದು. ಈ ರೀತಿ ಸುಮಾರು 529 Job Roles ಗಳಲ್ಲಿ ಯಾರಿಗೆ ಯಾವ ತರಬೇತಿಯಲ್ಲಿ ಆಸಕ್ತಿಯಿದೆಯೋ ಅದನ್ನು ಮಾಡಿಕೊಳ್ಳಬಹುದು.

ಮೂರು ತಿಂಗಳಿನಿಂದ ಆರು ತಿಂಗಳವರೆಗೆ ತರಬೇತಿ ಕೊಡುತ್ತೇವೆ. ಮೂರು ತಿಂಗಳಿಗೆ 35 ಸಾವಿರ ರೂಪಾಯಿ ಖರ್ಚು ಮಾಡುತ್ತೇವೆ, ಐದು ತಿಂಗಳಿಗೆ 55 ಸಾವಿರ ಖರ್ಚಾಗುತ್ತದೆ. ಎಲ್ಲಾ ಉದ್ಯೋಗಕ್ಕೂ ಒಂದೇ ರೀತಿ ಇರುವುದಿಲ್ಲ. ಉದಾಹರಣೆಗೆ, Driving License ಗೆ ಮೂರು ತಿಂಗಳು ಸಮಯ ಬೇಕಾಗಿಲ್ಲ, ಒಂದು ತಿಂಗಳು ಸಾಕು. ಇವತ್ತಿನ ದಿವಸ ಮಾರುಕಟ್ಟೆಯಲ್ಲಿ ಯಾವ ರೀತಿಯ ಉದ್ಯೋಗ ಬೇಕಾಗಿದೆ? ಯಾವುದಕ್ಕೆ demand ಇದೆ? ಮತ್ತು ಯಾವ ರೀತಿಯ skillಗೆ ಬೇಡಿಕೆಯಿದೆ? ಆ ರೀತಿಯ ಪ್ರತಿಭೆಗೆ ನಾವು ತರಬೇತಿ ಕೊಡುತ್ತೇವೆ ಮತ್ತು ಇವರಿಗೆ ತರಬೇತಿ ಆದ ನಂತರ ಪ್ರತಿ ಜಿಲ್ಲೆಯಲ್ಲಿಯೂ ಕೂಡ ಒಂದು ಉದ್ಯೋಗ ಮೇಳಗಳನ್ನು ಮಾಡುತ್ತೇವೆ. ಆ ಉದ್ಯೋಗ ಮೇಳದಲ್ಲಿ captains of industries ಯವರನ್ನು ಕರೆದು ಅವರ ಜೊತೆಯಲ್ಲಿ ಮಾತನಾಡಿ, ಅವರಿಗೆ ಯಾವ ಉದ್ಯೋಗ ಬೇಕೋ ಅದನ್ನು ಆಯ್ಕೆ ಮಾಡಿಕೊಳ್ಳಬಹುದು ಮತ್ತು ಯಾರಿಗೆ ಕೆಲಸ ಸಿಗುವುದಿಲ್ಲ, ಅವರಿಗೆ ಬ್ಯಾಂಕ್ ಮೂಲಕ ಸಾಲ ಕೊಡಿಸಿ, Karnataka Minorities Development Corporation Limited ನಿಂದ, Karnataka Backward Classes Development Corporation Limited ನಿಂದ ಅಥವಾ Karnataka Scheduled Castes/Scheduled Tribes Development Corporation ನಿಂದ ಸಾಲ ಕೊಡಿಸುವಂತಹ ಕೆಲಸವನ್ನು ಸಹ ಮಾಡುತ್ತೇವೆ. ಇದರ ಒಟ್ಟಾರೆ ಉದ್ದೇಶ ಹೆಚ್ಚು ಹೆಚ್ಚು ಯುವಕ-ಯುವತಿಯವರಿಗೆ ಕೆಲಸ ಕೊಡಿಸಬೇಕು ಮತ್ತು skilled knowledge ಕೊಡಬೇಕೆನ್ನುವುದು ಇದರ ಉದ್ದೇಶವಾಗಿದೆ ಮತ್ತು ಕೌಶಲ್ಯಾಭಿವೃದ್ಧಿ ಇಲಾಖೆ ಈ ಕೆಲಸವನ್ನು ಮಾಡುತ್ತದೆ.

(ಮುಂದು)

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(746) 15.06.2017 11.50 ಎಲ್‌ಎಂ-ಕೆಎಸ್(ಜಿಆರ್)**

**ಪ್ರಶ್ನೆ ಸಂಖ್ಯೆ:3182**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ:-** ಮಾನ್ಯ ಸಭಾಪತಿಗಳೆ, ಸಿಲಿಕಾನ್ ಸಿಟಿ ಬೆಂಗಳೂರು ಮಹಾನಗರದಲ್ಲಿ ಅಪರಾಧ ಪ್ರಕರಣಗಳ ಸಂಖ್ಯೆ ದಿನೇ-ದಿನೇ ಹೆಚ್ಚಾಗುತ್ತಿದ್ದು, ಹಾಡುಹಗಲೇ ಕೊಲೆಗಳಂತಹ ಗಂಭೀರ ಅಪರಾಧಗಳು ಜರುಗುತ್ತಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ ಎನ್ನುವ ಪ್ರಶ್ನೆಗೆ 'ಸರ್ಕಾರದ ಗಮನಕ್ಕೆ ಬಂದಿದ್ದು, ಅಪರಾಧಗಳ ಪ್ರಕರಣಗಳು ನಿಯಂತ್ರಣದಲ್ಲಿರುತ್ತವೆ' ಎನ್ನುವ ಉತ್ತರವನ್ನು ಕೊಟ್ಟಿದ್ದಾರೆ. ಮುಂದುವರೆದು ಪೂರಕ ಟಿಪ್ಪಣಿಯಲ್ಲಿ ಸರ್ಕಾರ ಕೊಟ್ಟಿರುವ ಮಾಹಿತಿಯನ್ನು ಸದನದ ಗಮನಕ್ಕೆ ತರಲು ಬಯಸುತ್ತೇನೆ. ಬೆಂಗಳೂರು ನಗರದಲ್ಲಿ ಕಳೆದ ಮೂರು ವರ್ಷಗಳಲ್ಲಿ 2014, 2015, 2016 ಮತ್ತು 2017 ಮೇ ವರೆಗೆ 58,673 ಅಪರಾಧ ಪ್ರಕರಣಗಳು ವರದಿಯಾಗಿದ್ದು, ಅವುಗಳಲ್ಲಿ 20,056 ಪ್ರಕರಣಗಳು ಪತ್ತೆಯಾಗಿರುತ್ತವೆ. ಅಂದರೆ ಶೇಕಡವಾರು ಗಮನಿಸಿದಾಗ ಒಟ್ಟು 58,673 ಪ್ರಕರಣಗಳಲ್ಲಿ 20,056 ಪ್ರಕರಣಗಳು ಪತ್ತೆಯಾಗಿವೆ. ಸಿಲಿಕಾನ್ ಸಿಟಿ ಯಲ್ಲಿ ಹೆಚ್ಚಿದ ಅಪರಾಧಗಳು ಎನ್ನುವ ಬಗ್ಗೆ ಪ್ರಜಾವಾಣಿ ಪತ್ರಿಕೆಯಲ್ಲಿ ವಿಶೇಷ ವರದಿ ಕಳೆದ ವರ್ಷ ಬಂದಿತ್ತು. ಪ್ರಕರಣಗಳು ದಾಖಲೆಯಾಗಿರುವ ಮತ್ತು ಪ್ರಕರಣಗಳ ಪತ್ತೆಯಾಗಿರುವ ಸಂಖ್ಯೆಯನ್ನು ಗಮನಿಸಿದಾಗ, ಸರ್ಕಾರ achievement ಮಾಡಲು ಸಾಧ್ಯವಾಗಿರುವುದಿಲ್ಲ ಎನ್ನುವುದು ತಿಳಿಯುತ್ತದೆ. ಪತ್ತೆಯಾಗದೆ ಇರುವ ಪ್ರಕರಣಗಳ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆಯೇ? ಹಾಗೆ ಪತ್ತೆಯಾಗದೆ ಇರುವ ಪ್ರಕರಣಗಳ ಬಗ್ಗೆ ಸರ್ಕಾರ ಏನು ಕ್ರಮವನ್ನು ಜರುಗಿಸುತ್ತದೆ ಎನ್ನುವುದು ನನ್ನ ಪ್ರಶ್ನೆ. 2014-15, 2015-16, 2016-17ನೇ ಸಾಲಿನಲ್ಲಿ ನಗರದಲ್ಲಿ ದಾಖಲಾದ ಅಪರಾಧ ಪ್ರಕರಣಗಳ ಸಂಖ್ಯೆ ಎಷ್ಟು, ಒಟ್ಟು ಕೊಲೆಯಾದ ಮುಖಂಡರುಗಳ ಸಂಖ್ಯೆ ಎಷ್ಟು, ರಾಜಕೀಯ ದ್ವೇಷ ಹಾಗೂ ಕೋಮುವಾದದ ಹಿನ್ನೆಲೆ ಕೊಲೆ ಪ್ರಯತ್ನಗಳೆಷ್ಟು, ಎಷ್ಟು ಕೋಮುವಾದಿ ಕೊಲೆ ಪ್ರಕರಣಗಳಲ್ಲಿ ಶಿಕ್ಷೆಯಾಗಿದೆ ಎನ್ನುವುದಕ್ಕೆ ಅನುಬಂಧದಲ್ಲಿ ವಿವರವನ್ನು ಕೊಡಲಾಗಿದೆ ಎಂದು ಹೇಳಿದ್ದಾರೆ. ಚಿಕ್ಕತಿಮ್ಮೆಗೌಡ, ತಿರಪೂರ ಶ್ರೀನಿವಾಸ್ ಮತ್ತು ಆರ್.ರುದ್ರೇಶ್ ಎನ್ನುವ ಮೂರು ಜನ ಬಿಜೆಪಿ ಕಾರ್ಯಕರ್ತರು ಮತ್ತು ರಾಜಕೀಯ ಮುಖಂಡರು ಇವರು. ಇವರ ಕೊಲೆಯಾಗಿದೆ. ಈ ಪ್ರಕರಣದಲ್ಲಿ ಸಾಧಿಸಿರುವ ಪ್ರಗತಿ ಏನು? ಇವತ್ತು ಇಂತಹ ರಾಜಕೀಯ ಪ್ರೇರಿತ ಪ್ರಕರಣಗಳು ಹೆಚ್ಚಾಗುತ್ತಿರುವ ಹಿನ್ನೆಲೆಯಲ್ಲಿ ಸರ್ಕಾರ ಈ ರೀತಿಯ ಪ್ರಕರಣಗಳನ್ನು ತಡೆಯಲು ಯಾವ ರೀತಿಯ ಕ್ರಮವನ್ನು ತೆಗೆದುಕೊಳ್ಳಲಾಗುತ್ತದೆ ಎನ್ನುವುದನ್ನು ಹೇಳಬೇಕೆಂದು ವಿನಂತಿಸಿಕೊಳ್ಳುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಡಾ: ಜಿ.ಪರಮೇಶ್ವರ್:–** ಮಾನ್ಯ ಸಭಾಪತಿಗಳೆ, ರಾಜ್ಯದಲ್ಲಿ ಅಪರಾಧಗಳ ಸಂಖ್ಯೆ ಕಳೆದ ನಾಲ್ಕು ವರ್ಷಗಳಿಂದ ಬಹಳಷ್ಟು ನಿಯಂತ್ರಣದಲ್ಲಿದೆ ಅನೇಕ category ಗಳು ಅಂದರೆ ಮರ್ಡರ್, ಡಕಾಯಿತಿ, ದರೋಡೆ ಇಂತಹ ಪ್ರಕರಣಗಳು ಬಹಳಷ್ಟು ಕಡೆಗಳಲ್ಲಿ ಕಡಿಮೆಯಾಗಿವೆ. ತಾವು ಪ್ರಮುಖವಾಗಿ ಮೂರು ಕೊಲೆಗಳು ರಾಜಕೀಯ ಪ್ರೇರಿತ ಕೊಲೆಗಳೆಂದು ಪ್ರಸ್ತಾಪ ಮಾಡಿದ್ದೀರಿ. ಮರ್ಡರ್‌ಗಳ ಬಗ್ಗೆ ವಿವರವನ್ನು ಅನುಬಂಧದಲ್ಲಿ ಕೊಟ್ಟಿದ್ದೇನೆ. 2014 ರಲ್ಲಿ 217 ಕೊಲೆ ಕೇಸ್‌ಗಳು ವರದಿಯಾಗಿವೆ, ಅದರಲ್ಲಿ 206 ಕೇಸ್‌ಗಳು ಪತ್ತೆಯಾಗಿವೆ. 2015ರಲ್ಲಿ 176 ಕೇಸ್‌ಗಳು ವರದಿಯಾಗಿವೆ, ಅದರಲ್ಲಿ 172 ಕೇಸ್‌ಗಳನ್ನು ಪತ್ತೆ ಮಾಡಿದ್ದಾರೆ. 2014ರಲ್ಲಿ 217 ಕೇಸ್‌ಗಳು ವರದಿಯಾಗಿವೆ, ಆದರೆ 2015ರಲ್ಲಿ 126 ಕೇಸ್‌ಗಳು ವರದಿಯಾಗಿವೆ ಅಂದರೆ 2014ರ ನಂತರ ಪ್ರಕರಣಗಳ ಸಂಖ್ಯೆ ಕಡಿಮೆಯಾಗಿದೆ. 2016ರಲ್ಲಿ 214 ಪ್ರಕರಣಗಳು ವರದಿಯಾಗಿವೆ, ಅದರಲ್ಲಿ 198 ಪ್ರಕರಣಗಳನ್ನು ಪತ್ತೆ ಮಾಡಲಾಗಿದೆ. 2017(31–05–2017)ರವರೆಗೆ 100 ಪ್ರಕರಣಗಳು ವರದಿಯಾಗಿದ್ದು, 97 ಪ್ರಕರಣಗಳು ಪತ್ತೆಯಾಗಿವೆ. ಪೊಲೀಸ್‌ನವರು ಬಹಳ ಉತ್ತಮವಾದ ಕೆಲಸ ಮಾಡಿದ್ದಾರೆ ಎನ್ನುವುದನ್ನು ಈ ಅಂಕಿ–ಅಂಶಗಳನ್ನು ನೋಡಿದರೆ ತಾವು ಒಪ್ಪಿಕೊಳ್ಳುತ್ತೀರಿ ಎಂದು ಅಂದುಕೊಳ್ಳುತ್ತೇನೆ. ಅಪರಾಧಗಳು ಬೇರೆ–ಬೇರೆ ರೀತಿ ಇವೆ. ಅವುಗಳನ್ನು ಅನುಬಂಧದಲ್ಲಿ ತಾವು ಓದಬಹುದು. Motor Vehicle theft 5059 ಕೇಸ್‌ಗಳು ವರದಿಯಾಗಿವೆ, Ordinary theft 3557 ವರದಿಯಾಗಿವೆ. ತಾವು ಅಪರಾಧಗಳ ಸಂಖ್ಯೆ ಹೆಚ್ಚಾಗಿದೆ ಎಂದು ಹೇಳಿದ್ದೀರಿ. ಆದರೆ ಇವೆಲ್ಲವು petty cases. Murder cases, theft cases ಇಂತಹ ದೊಡ್ಡ ಪ್ರಕರಣಗಳು ಜಾಸ್ತಿಯಾಗಿವೆ ಎಂದು ಹೇಳಿದ್ದರೆ ಅದು ಪೊಲೀಸ್‌ನವರ ವೈಫಲ್ಯ ಎಂದು ಒಪ್ಪಿಕೊಳ್ಳುತ್ತಿದ್ದೆ. ಇಂತಹ ಕೇಸ್‌ಗಳಲ್ಲಿ ಬಹಳ ಉತ್ತಮವಾದ ಕೆಲಸವನ್ನು ಪೊಲೀಸರು ಮಾಡಿದ್ದಾರೆ. ಅನೇಕ ಕ್ರಮಗಳನ್ನು ನಾವು ತೆಗೆದುಕೊಳ್ಳುತ್ತಿದ್ದೇವೆ. ಕೊಲೆಯಾಗಿದೆ ಎಂದಾಗ ಆದರೆ ಆಗಲಿ ಬಿಡಿ ಎಂದು ಪೊಲೀಸರು ಸುಮ್ಮನೆ ಬಿಡುವುದಿಲ್ಲ. ಕಾನೂನು ಸುವ್ಯವಸ್ಥೆಯನ್ನು ಕಾಪಾಡಬೇಕಾದರೆ ಗಂಭೀರ ಸ್ವರೂಪದ ಅಪರಾಧಗಳು ಆದಾಗ ತಕ್ಷಣ ಅವರ ಮೇಲೆ ಗೂಂಡಾ ಕಾಯಿದೆ ಅಡಿಯಲ್ಲಿ ಕೇಸ್‌ನ್ನು register ಮಾಡಲಾಗುತ್ತದೆ. Rowdy sheeter open ಮಾಡುತ್ತೇವೆ. ಮತ್ತೆ ಆ ರೀತಿಯ ಕೆಲಸವನ್ನು ಮಾಡಬಾರದ ರೀತಿಯಲ್ಲಿ ಕ್ರಮವನ್ನು ತೆಗೆದುಕೊಳ್ಳುತ್ತೇವೆ. ಇತ್ತೀಚೆಗೆ ಬೆಂಗಳೂರಿನಲ್ಲಿ ಮಹಿಳೆಯರ ಮೇಲೆ ನಡೆಯುತ್ತಿರುವ ದೌರ್ಜನ್ಯಗಳ ಬಗ್ಗೆ ವರದಿಯಾಗಿದೆ. ಇದನ್ನು ತಡೆಗಟ್ಟಲು ಮಹಿಳೆಯರಿಗಾಗಿಯೇ ಪಿಂಕ್ ಹೊಯ್ಸಳ ವಾಹನವನ್ನು ಒದಗಿಸಲಾಗಿದೆ. ಈ ಪಿಂಕ್ ಹೊಯ್ಸಳ ಗಸ್ತು ವಾಹನವು ಮಹಿಳೆಯರ ರಕ್ಷಣೆಗಾಗಿಯೇ ಇರುತ್ತದೆ. ಜೊತೆಗೆ ಮಹಿಳೆಯರಿಗೆ Mobile app ಕೊಡಲಾಗಿದೆ. ಅವರಿಗೆ ಏನಾದರೂ ತೊಂದರೆಯಾದರೆ ತಕ್ಷಣ ಆ mobile ನಲ್ಲಿ button press ಮಾಡಿದರೆ ಅದು ನೇರವಾಗಿ control room ಗೆ ಹೋಗುತ್ತದೆ. ತಕ್ಷಣ ಅಲ್ಲಿ ಅವರು activate ಮಾಡಿ Pink

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

Hoysala ಅಥವಾ Ordinary Hoysala ದವರು ಹತ್ತು-ಹದಿನೈದು ನಿಮಿಷದಲ್ಲಿ ಸ್ಥಳಕ್ಕೆ ಹೋಗುತ್ತಾರೆ. ಈಗ ನಮ್ಮ ಕಂಟ್ರೋಲ್ ರೂಂ 100 ಎಂದು ಮಾಡಿದ್ದೇವೆ. ಇಡೀ ದೇಶದಲ್ಲಿ ಪ್ರಪ್ರಥಮವಾಗಿ ಬೆಂಗಳೂರಿನಲ್ಲಿ ಈ ರೀತಿಯ ವ್ಯವಸ್ಥೆಯನ್ನು ಮಾಡಿದ್ದೇವೆ. ಮೊನ್ನೆ ತಾನೆ ಮಾನ್ಯ ಮುಖ್ಯಮಂತ್ರಿಗಳು ಅದನ್ನು ಉದ್ಘಾಟನೆ ಮಾಡಿದರು. 50 ಕೋಟಿ ರೂ.ಗಳನ್ನು ಖರ್ಚು ಮಾಡಿದ್ದೇವೆ. ತಾವು ಕೂಡಾ 100 ಕ್ಕೆ ಕರೆ ಮಾಡಿ ಪರೀಕ್ಷಿಸಬಹುದಾಗಿದೆ. ದಿನಕ್ಕೆ 3000 ಕರೆಗಳು ಬರುತ್ತಿವೆ. ಒಂದೊಂದು ಕರೆಗೆ 4-5 ಸೆಕೆಂಡ್‌ನಲ್ಲಿ ನಮ್ಮ ಪೊಲೀಸ್‌ನವರು ಪ್ರತಿಕ್ರಿಯಿಸುತ್ತಿದ್ದಾರೆ. ಆ ಪ್ರಕರಣ ಎಲ್ಲಿಯೇ ನಡೆದಿರಬಹುದು, ಈಗ ಅದಕ್ಕೆ GPS ಅಳವಡಿಸಿದ್ದಾರೆ ಎಲ್ಲಿಂದ ಕರೆ ಬಂತು ಎಂದು ಗೊತ್ತಾಗುತ್ತದೆ. ಆ ವಿಳಾಸಕ್ಕೆ ತಕ್ಷಣ ಹತ್ತಿರದಲ್ಲಿರುವ ಹೊಯ್ಸಳದವರು 15 ನಿಮಿಷದಲ್ಲಿ ಹೋಗಿ ನೋಡುತ್ತಾರೆ. ಇದು ಮೊದಲನೆಯ ಪ್ರಯತ್ನ ಬಹಳ ಪ್ರಶಂಸೆಗೆ ಒಳಗಾಗಿದೆ. ಅಪರಾಧಗಳ ಸಂಖ್ಯೆಯನ್ನು ಕಡಿಮೆ ಮಾಡಬೇಕು, ಕೊಲೆಗಳನ್ನು ಕಡಿಮೆ ಮಾಡಬೇಕು, ಅತ್ಯಾಚಾರಗಳು ಕಡಿಮೆಯಾಗಬೇಕೆಂದು ಪ್ರಯತ್ನಗಳನ್ನು ಮಾಡುತ್ತಿದ್ದೇವೆ. ನಿಯಂತ್ರಣದಲ್ಲಿ ಇದೆ ಎಂದು ಏಕೆ ಹೇಳಿದೆ ಎಂದರೆ ಇಂತಹ ಪ್ರಕರಣಗಳು ಹೆಚ್ಚಾಗುವುದಕ್ಕೆ ನಾವು ಬಿಟ್ಟಿರುವುದಿಲ್ಲ. ಇಡೀ ಏಷ್ಯಾ ಖಂಡದಲ್ಲಿಯೇ ಬೆಂಗಳೂರು ಬಹಳ ದೊಡ್ಡ ನಗರವಾಗಿ ಬೆಳೆಯುತ್ತಿರುವುದು ಎಲ್ಲರಿಗೂ ಗೊತ್ತಿರುವ ವಿಚಾರ. ಸ್ವಾಭಾವಿಕವಾಗಿ ಅಪರಾಧಗಳು ನಡೆಯುತ್ತವೆ. ಇಲ್ಲಿ ಎಲ್ಲಾ ರೀತಿಯ ಜನರು ಇದ್ದಾರೆ. ನಮ್ಮಲ್ಲಿ 25 ಲಕ್ಷ floating population ಇದೆ. ಹೀಗಾಗಿ ಅಪರಾಧಗಳನ್ನು ನಿಯಂತ್ರಣ ಮಾಡಿರುವುದೇ ಬಹಳ ದೊಡ್ಡ ಸಾಧನೆ ಎಂದು ನನಗನ್ನಿಸುತ್ತದೆ. ಅಪರಾಧಗಳನ್ನು ತಡೆಯಲು ನಾವು ಎಲ್ಲ ರೀತಿಯ ಕ್ರಮಗಳನ್ನು ತೆಗೆದುಕೊಳ್ಳುತ್ತಿದ್ದೇವೆ. ಮಾನ್ಯ ಸದಸ್ಯರು ಮೂರು ಕೊಲೆಗಳ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಒಬ್ಬರು ಚಿಕ್ಕತಿಮ್ಮೆಗೌಡ ಎಂದು ಬಿಜೆಪಿ ಕಾರ್ಯಕರ್ತರ ಕೊಲೆಯಾಗಿದೆ. It just happens. He is a BJP worker, ಅವರು ಬಿಜೆಪಿ ಕಾರ್ಯಕರ್ತರು ಎಂದೇ ಕೊಲೆ ಮಾಡಿರುವುದಿಲ್ಲ. ಅವರದು ಏನೊ ಬೇರೆ ರೀತಿಯಲ್ಲಿ ಇರಬಹುದು. ಆದರೆ ಬಿಜೆಪಿ ಕಾರ್ಯಕರ್ತರಾಗಿದ್ದಾರೆ ಅಷ್ಟೆ ಬಿಟ್ಟರೆ ಬಿಜೆಪಿ ಯವರು ಎಂದೇ ಕೊಲೆ ಮಾಡಿದ್ದಾರೆ ಎಂದು ಹೇಳಿಕೊಳ್ಳುವುದು ಕಷ್ಟ. ಅದರಲ್ಲಿ 11 ಜನ accused ಗಳನ್ನು arrest ಮಾಡಲಾಗಿದೆ. ಅವರು ವಿಚಾರಣೆ ಹಂತದಲ್ಲಿದ್ದಾರೆ. ದಿನಾಂಕ:19-06-2017ಕ್ಕೆ ಅದು ವಿಚಾರಣೆಗೆ ಬರುತ್ತದೆ. ಅವರೆಲ್ಲರೂ ಈಗ ಜೈಲಿನಲ್ಲಿದ್ದಾರೆ. ಎರಡನೆಯದು, ತಿರಪೂರ ಶ್ರೀನಿವಾಸ್ ಕೇಸ್, ಇವರು ಬಿಜೆಪಿ ಕಾರ್ಯಕರ್ತರು. ಕೋಕಾ ಕಾಯಿದೆ ಅಡಿಯಲ್ಲಿ ಈ ಕೇಸ್‌ನ್ನು ತೆಗೆದುಕೊಂಡಿದ್ದಾರೆ. ಎಲ್ಲರಿಗೂ ಗೊತ್ತಿರುವ ಹಾಗೆ ಬಹಳ ಪ್ರಾಮುಖ್ಯವಾಗಿರುವ ಕಾಯಿದೆ ಇದು. ಈ ಕಾಯಿದೆ ಅಡಿಯಲ್ಲಿ ಕೇಸ್‌ನ್ನು register ಮಾಡಲಾಗಿದೆ. Karnataka Control of Organised Crime Act, 2000 ಎಂದು ಹೊಸದಾಗಿ ಬಂದಿರುವುದು. ಆ ಕಾಯಿದೆ ಅಡಿಯಲ್ಲಿ ಈ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕೇಸ್‌ನ್ನು ತೆಗೆದುಕೊಳ್ಳಲಾಗಿದೆ. ಇದು ಕೂಡಾ ವಿಚಾರಣೆಯ ಹಂತದಲ್ಲಿದೆ. Arrest ಆದವರು ಈಗ ಜೈಲನಲ್ಲಿದ್ದಾರೆ. ಇನ್ನೊಂದು ರುದ್ರೇಶ್ ಕೊಲೆ ಕೇಸು. ಇದರ ಬಗ್ಗೆ ಮಾಧ್ಯಮದಲ್ಲಿ ದೊಡ್ಡ ಪ್ರಮಾಣದಲ್ಲಿ ಪ್ರಚಾರವಾಯಿತು. ಈ ಕೇಸ್‌ನಲ್ಲಿ 4-5 ಜನರನ್ನು ಈಗಾಗಲೇ arrest ಮಾಡಲಾಗಿದೆ. ಅವರು ಈಗ ಜೈಲಿನಲ್ಲಿದ್ದಾರೆ.

(ಮುಂದು)

## *(747) 15.06.2017 / YL-GR /12.00*

**ಡಾ:ಜಿ.ಪರಮೇಶ್ವರ್ (ಮುಂದು)**

National Investigation Agency (NIA) ರವರು ಈ ಮೊಕದ್ದಮೆಯನ್ನು ತೆಗೆದುಕೊಂಡಿದ್ದಾರೆ. ರಾಷ್ಟ್ರೀಯ ತನಿಖಾ ದಳದವರು ಈ ಮೊಕದ್ದಮೆ ಬಗ್ಗೆ ತನಿಖೆಯನ್ನು ಮಾಡುತ್ತಿದ್ದಾರೆ. ಹಾಗಾಗಿ ಬೆಂಗಳೂರನ್ನು we want to make it a safe city. ನಾವು ಬಹಳ ದೊಡ್ಡ ಪ್ರಮಾಣದಲ್ಲಿ ಪ್ರಯತ್ನ ಮಾಡುತ್ತಿದ್ದೇವೆ. ಬಹಳಷ್ಟು ಪೊಲೀಸ್ ಸಿಬ್ಬಂದಿಗಳನ್ನು ನೇಮಕಾತಿ ಮಾಡುವುದಾಗಿರಬಹುದು. ವಾಹನದ ಸೌಲಭ್ಯ ಹಾಗೂ ಶಸ್ತ್ರಾಸ್ತ್ರವನ್ನು ಒದಗಿಸುವುದಾಗಿರಬಹುದು. ಈ ರೀತಿಯ ಎಲ್ಲಾ ಸೌಕರ್ಯವನ್ನು ಕೂಡ ಅಂತರಾಷ್ಟ್ರೀಯ ಮಟ್ಟಕ್ಕೆ ಮಾಡುವಂತಹ ಕೆಲಸವನ್ನು ಮಾಡಿದ್ದೇವೆ.

**ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ:-** ಮಾನ್ಯ ಸಭಾಪತಿಯವರೆ, ಈಗ ಇರತಕ್ಕಂಥ ಒಟ್ಟು ಪೊಲೀಸ್ ಠಾಣೆಗಳು ಮತ್ತು as against the approved staff strength, ಸಿಬ್ಬಂದಿಗಳ ಕೊರತೆ ಇದರಲ್ಲಿದೆಯೇ ಅಥವಾ do you have the entire staff with you? ಅದರ ಬಗ್ಗೆ ಬೆಳಕು ಚೆಲ್ಲಬೇಕು.

**ಡಾ: ಜಿ.ಪರಮೇಶ್ವರ್:-** ಮಾನ್ಯ ಸಭಾಪತಿಯವರೆ, 2013ನೇ ಸಾಲಿನ ಹಿಂದಿನ 5 ವರ್ಷಗಳನ್ನು ಗಮನಿಸಿದಾಗ, ರಾಜ್ಯದಲ್ಲಿ ಯಾವುದೇ ರೀತಿಯ ನೇಮಕಾತಿಯೇ ಆಗಿಲ್ಲ. ಕಾನ್ಸ್‌ಟೇಬಲ್ಸ್‌ಗಳ ನೇಮಕಾತಿಯಾಗಲಿ, ಉಪ ನಿರೀಕ್ಷಕರ ನೇಮಕಾತಿಯಾಗಲಿ ಯಾವುದೂ ಆಗಿಲ್ಲ. 2013ನೇ ಸಾಲಿನಿಂದ 2017ನೇ ಸಾಲಿನವರೆಗೆ ಇಪ್ಪತ್ಮೂರು ಸಾವಿರ ಕಾನ್ಸ್‌ಟೇಬಲ್ಸ್‌ಗಳನ್ನು ಹಾಗೂ ಒಂದು ಸಾವಿರ ಉಪ ನಿರೀಕ್ಷಕರನ್ನು ನೇಮಕ ಮಾಡಲಾಗಿದೆ. ಇದಕ್ಕೆ ಸಂಬಂಧಪಟ್ಟಂತೆ ಇನ್ನೂ ಕಾರ್ಯ ವಿಧಾನವೂ ಮುಂದುವರೆಯುತ್ತಿದೆ. 2018-19ನೇ ಸಾಲಿನವರೆಗೂ ಸಹ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಆರ್ಥಿಕ ಇಲಾಖೆಯವರು ಪ್ರತಿ ವರ್ಷ 5000 ಜನ ನಿವೃತ್ತಿಯಾಗುತ್ತಿರತಕ್ಕಂಥವರನ್ನು ಆದಷ್ಟು ಬೇಗ ನೇಮಕ ಮಾಡಿಕೊಳ್ಳಲು ಅನುಮೋದನೆಯನ್ನು ಕೊಟ್ಟಿದ್ದಾರೆ. ಮೊದಲು ಈ ರೀತಿಯ ವ್ಯವಸ್ಥೆ ಇರಲಿಲ್ಲ. ಆದ್ದರಿಂದ ಸಿಬ್ಬಂದಿಗಳ ಕೊರತೆಯೂ ಯಾವುದೇ ಕಾರಣಕ್ಕೂ ಬೆಂಗಳೂರು ನಗರದಲ್ಲಿಯಾಗಲಿ, ರಾಜ್ಯದಲ್ಲಿಯಾಗಲಿ ಆಗದೇ ಇರುವಂತಹ ರೀತಿಯಲ್ಲಿ ನಾವು ಕೆಲಸವನ್ನು ಮಾಡುತ್ತಿದ್ದೇವೆ.

**ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 3175**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ರಮೇಶ್ ಬಾಬು:-** ಮಾನ್ಯ ಸಭಾಪತಿಯವರೆ, ಬೆಂಗಳೂರಿನ ಕಾಕ್ಸ್‌ಟೌನ್ (ಹಾಲಿ ಸರ್ವಜ್ಞನಗರ) ನಲ್ಲಿರುವ ಇಂಡಿಯನ್ ಜಿಮ್‌ಖಾನ ಆಟದ ಮೈದಾನದ ಬಗ್ಗೆ ಪ್ರಶ್ನೆಯನ್ನು ಕೇಳಿದ್ದು, ಅದಕ್ಕೆ ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದು, ಅದರಲ್ಲಿ ಇಂಡಿಯನ್ ಜಿಮ್‌ಖಾನಾ ಸಂಸ್ಥೆಗೆ ನೋಟೀಸ್ ಜಾರಿ ಮಾಡಿ 4 ಎಕರೆ 21 ಗುಂಟೆ ಜಮೀನಿನ ಪೈಕಿ 1 ಎಕರೆ 08 ಗುಂಟೆ ಜಮೀನನ್ನು ಬಳಸಿಕೊಂಡು, ಉಳಿದ 3 ಎಕರೆ 13 ಗುಂಟೆ ಜಮೀನನ್ನು ಪಾಲಿಕೆಗೆ ವಾಪಸ್ಸು ನೀಡುವಂತೆ ಆದೇಶವಾಗಿತ್ತು. ಮುಂದುವರೆದು, ಇದಕ್ಕೆ ಸಂಬಂಧಿಸಿದಂತೆ ಸರ್ವೋಚ್ಛ ನ್ಯಾಯಾಲಯದ ಮೊರೆಯೂ ಸಹ ಹೋಗಿದ್ದು, ಸರ್ವೋಚ್ಛ ನ್ಯಾಯಾಲಯದಲ್ಲಿಯೂ ಸಹ ಒಂದು ಆದೇಶವನ್ನು ನೀಡಿದ್ದಾರೆ. 2008ರ ನಂತರ ಸದರಿ ಜಮೀನನ್ನು ಅಲ್ಲಿರತಕ್ಕಂಥ ನಿವಾಸಿಗಳಿಗೆ ಆಟದ ಮೈದಾನವಾಗಿ ಬಳಸಿಕೊಳ್ಳಲು ಅವಕಾಶವನ್ನು ಕೊಡಬೇಕೆಂದು ಆದೇಶವಾಗಿದೆ. ತದನಂತರ ಬಿಬಿಎಂಪಿ ಆಯುಕ್ತರು ಮಾಡಿರತಕ್ಕಂಥ ಆದೇಶದ ಮೇಲೆ ಉಪ ಲೋಕಾಯುಕ್ತರವರು ಮತ್ತೆ ನ್ಯಾಯಾಲಯದ ಮೊರೆ ಹೋಗಿದ್ದಾರೆ. ಇದರ ಮೇಲೆ ತಡೆಯಾಜ್ಞೆ ಇದೆ ಎನ್ನುವಂತಹ ಮಾತನ್ನು ಹೇಳುತ್ತಿದ್ದಾರೆ. ಬಹಳ ಪ್ರಮುಖವಾಗಿ ಬೆಂಗಳೂರಿನಲ್ಲಿರತಕ್ಕಂಥ ಆಟದ ಮೈದಾನವನ್ನು ಯಾರ್‍ಯಾರೋ ಬಂದು ಬೇರೆ ಬೇರೆಯವರ ಹೆಸರಿನಲ್ಲಿ ಅಕ್ರಮ ಮಾಡಿರುವುದು ಅಥವಾ ಸ್ವಾಧೀನ ಮಾಡಿರುವುದನ್ನು ನೋಡುತ್ತಿದ್ದೇವೆ. ಈ ವಿಚಾರಕ್ಕೆ ಸಂಬಂಧಪಟ್ಟಂತೆ ಈ ಸದನದಲ್ಲಿ ಹಿಂದೆಯೂ ಸಹ ಬಹಳಷ್ಟು ಚರ್ಚೆಗಳಾಗಿದೆ. ಈ ಪ್ರಶ್ನೆಯೂ ಇವತ್ತು ಸರ್ವೋಚ್ಛ ನ್ಯಾಯಾಲಯದ ಆದೇಶಕ್ಕೆ ಒಳಪಟ್ಟು ಮತ್ತೆ ನವೀಕರಣಗೊಳಿಸುವ ಬದಲು ಈಗಾಗಲೇ 1 ಎಕರೆ 08 ಗುಂಟೆ ಜಮೀನನ್ನು ಇಂಡಿಯನ್ ಜಿಮ್‌ಖಾನ್ ಕ್ಲಬ್‌ಗೆ ಕೊಡಲಾಗಿದೆ. ಉಳಿದಂತೆ 3 ಎಕರೆ 13 ಗುಂಟೆ ಜಮೀನನ್ನು ಸರ್ಕಾರದಿಂದ ವಶಕ್ಕೆ ತೆಗೆದುಕೊಂಡು ಅದನ್ನು ಆಟದ ಮೈದಾನವಾಗಿ, ಏಕೆಂದರೆ ಅಲ್ಲಿರತಕ್ಕಂಥ ಸುತ್ತಮುತ್ತಲಿನ ಜನರಿಗೆ ಯಾರಿಗೂ ಕೂಡ ಆಟದ ಮೈದಾನವಿಲ್ಲ. ದಯಮಾಡಿ ಆಟದ ಮೈದಾನವಾಗಿ ತೆಗೆದುಕೊಳ್ಳಬೇಕು ಹಾಗೂ ಜಿಮ್‌ಖಾನ ಆಟದ ಮೈದಾನದ ಬಗ್ಗೆ ಅನೇಕ ಆರೋಪಗಳಿವೆ. ಬಹಳಷ್ಟು ಅಧಿಕಾರಿ ವರ್ಗದವರು ಈ ಆಟದ ಮೈದಾನದಲ್ಲಿ ಸೇರಿಕೊಂಡು ದುರ್ಬಳಕೆ ಮಾಡಿಕೊಳ್ಳುತ್ತಿದ್ದಾರೆನ್ನುವ ಆರೋಪವು ಇದೆ. ಸಂಘ ಸಂಸ್ಥೆಗಳ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕಾಯ್ದೆಯಡಿ ನೋಂದಾವಣಿಯಾಗಿರತಕ್ಕಂಥ ಅವಕಾಶವೂ ಇದೆ. ದಯವಿಟ್ಟು ಇದರ ಬಗ್ಗೆ ತನಿಖೆಯಾಗಬೇಕು. ಇಂಡಿಯನ್ ಜಿಮ್‌ಖಾನ್ ಆಟದ ಮೈದಾನದಲ್ಲಿ ಸಾರ್ವಜನಿಕರಿಗೆ ಇರತಕ್ಕಂಥ 3 ಎಕರೆ 13 ಗುಂಟೆ ಜಮೀನು ಸುಮಾರು 100 ಕೋಟಿ ರೂಪಾಯಿಗಳಿಗೆ ಬೆಲೆ ಬಾಳುವಂತಹ ಜಮೀನಾಗಿದೆ. ದಯವಿಟ್ಟು ಸಾರ್ವಜನಿಕರ ಆಟದ ಮೈದಾನಕ್ಕಾಗಿ ಸರ್ಕಾರ ವಾಪಸ್ಸು ತೆಗೆದುಕೊಳ್ಳಬೇಕೆಂದು ನಾನು ಸರ್ಕಾರದಿಂದ ಉತ್ತರವನ್ನು ಕೇಳಬಯಸುತ್ತೇನೆ.

**ಶ್ರೀ ಕೆ.ಜೆ.ಜಾರ್ಜ್:–** ಮಾನ್ಯ ಸಭಾಪತಿಯವರೆ, ಈ ವಿಚಾರದ ಬಗ್ಗೆ ಸಾಕಷ್ಟು ಚರ್ಚೆಯಾಗಿದೆ. ಇದರ ಬಗ್ಗೆ ಸಚಿವ ಸಂಪುಟ ಸಭೆಯಲ್ಲಿ ಒಂದು ತೀರ್ಮಾನವನ್ನು ತೆಗೆದುಕೊಳ್ಳಲಾಗಿದೆ. ಒಟ್ಟು 4 ಎಕರೆ 21 ಗುಂಟೆ ಜಮೀನನ್ನು ಇಂಡಿಯನ್ ಜಿಮ್‌ಖಾನ್ ಸಂಸ್ಥೆಗೆ 2008 ರಿಂದ ಅನ್ವಯವಾಗುವಂತೆ 35 ವರ್ಷಗಳ ಅವಧಿಗೆ ಕೊಡಬೇಕೆಂದು ತೀರ್ಮಾನವಾಗಿದೆ. ದಿನಾಂಕ 09–10–2015 ರಂದು ಇಂಡಿಯನ್ ಜಿಮ್‌ಖಾನಾ ಸಂಸ್ಥೆಗೆ ನೋಟೀಸ್ ಜಾರಿ ಮಾಡಿ, 4 ಎಕರೆ 21 ಗುಂಟೆ ಜಮೀನಿನ ಪೈಕಿ 1 ಎಕರೆ 08 ಗುಂಟೆ ಜಮೀನನ್ನು ಮಾತ್ರ ಕೊಡಬೇಕೆಂದು ಸಚಿವ ಸಂಪುಟ ಸಭೆಯಲ್ಲಿ ತೀರ್ಮಾನವಾಗಿದೆ. ಅದರ ಸಮೇತವಾಗಿ ರೂ.1,46,36,160/– ಕೋಟಿಗಳಿಗೆ ನಿಗದಿಪಡಿಸಿ ವಾರ್ಷಿಕ ಬಾಡಿಗೆಯನ್ನು ಕೊಡಬೇಕೆಂದು ತೀರ್ಮಾನವಾಗಿದೆ. ಈ ಆದೇಶವನ್ನು ಪ್ರಶ್ನಿಸಿ ಇಂಡಿಯನ್ ಜಿಮ್‌ಖಾನಾ ಸಂಸ್ಥೆಯು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ದಾವೆ ಹೂಡಿರುತ್ತಾರೆ. ಮಾನ್ಯ ಉಚ್ಚ ನ್ಯಾಯಾಲಯದ ಆದೇಶದಂತೆ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ ಇವರು ವಿಚಾರಣೆಯನ್ನು ನಡೆಸುತ್ತಾರೆ. 2010 ರಿಂದ 2015 ರವರೆಗೂ ನಮ್ಮ ಸಚಿವ ಸಂಪುಟ ಸಭೆಯ ಪ್ರಕಾರ ಕಾನೂನುಬದ್ಧವಾಗಿ ಜಿಮ್‌ಖಾನಾ ಆಟದ ಮೈದಾನವನ್ನು ಕ್ಲಬ್‌ನವರಿಗೆ ಕೊಟ್ಟಿದ್ದಾರೆ. ಕ್ಲಬ್‌ನವರು ಸುಮಾರು ಹದಿಮೂರು, ಹದಿನಾಲ್ಕು ಕೋಟಿ ರೂಪಾಯಿಗಳನ್ನು ಭರಿಸಿ, ಕ್ರೀಡಾ ಸಂಕೀರ್ಣವನ್ನು ನಿರ್ಮಾಣ ಮಾಡಿದ್ದಾರೆ. ಅಪರ ಮುಖ್ಯ ಕಾರ್ಯದರ್ಶಿಯವರು ಹೇಳಿದಂತೆ ನ್ಯಾಯಯುತವಾಗಿದೆ. ಅದನ್ನು ಬಿಟ್ಟು ಯಾರು ಅನಧಿಕೃತವಾಗಿ ಕಟ್ಟಡಗಳನ್ನು ಕಟ್ಟಿರುತ್ತಾರೆ ಅಂತಹ ಕಟ್ಟಡಗಳೆಲ್ಲವನ್ನು ಕೆಡವಿ ಆ ಜಾಗವನ್ನೆಲ್ಲಾ ಸರ್ಕಾರದ ವಶಕ್ಕೆ ಪಡೆದುಕೊಳ್ಳಬೇಕೆಂದು ಈಗಾಗಲೇ ಆದೇಶವನ್ನು ಮಾಡಲಾಗಿದೆ. ಮೊನ್ನೆ ಉಚ್ಚ ನ್ಯಾಯಾಲಯದವರು 12 ವಾರಗಳ ಕಾಲ ತಡೆಯಾಜ್ಞೆಯನ್ನು ನೀಡಿರುತ್ತಾರೆ. ನಾನು ತಮಗೆ ಹೇಳುವುದೇನೆಂದರೆ, ಮಾನ್ಯ ಉಚ್ಚ ನ್ಯಾಯಾಲಯದ ಆದೇಶ ಏನು ಬರುತ್ತದೆಂದು ನೋಡಬೇಕು. ಏಕೆಂದರೆ, ಈ ವಿಚಾರವೂ ಮಾನ್ಯ ಉಚ್ಚ ನ್ಯಾಯಾಲಯದ ಮುಂದೆ ಇರುವುದರಿಂದ ನಾವು ಯಾವುದೇ ತೀರ್ಮಾನವನ್ನು ತೆಗೆದುಕೊಳ್ಳುವುದಕ್ಕಾಗುವುದಿಲ್ಲ. 12 ವಾರಗಳವರೆಗೂ ಸಮಯವನ್ನು ನೀಡಲಾಗಿದೆ. ಅದಾದ ನಂತರ ಸರ್ಕಾರ ಸರಿಯಾದಂತಹ ತೀರ್ಮಾನವನ್ನು ತೆಗೆದುಕೊಳ್ಳುತ್ತದೆ.

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**ಶ್ರೀ ರಮೇಶ್ ಬಾಬು:-** ಮಾನ್ಯ ಸಭಾಪತಿಯವರೆ, ಈ ಕ್ಲಬ್ 1935 ರಲ್ಲಿ ರಚನೆಗೊಂಡಿದೆ. ಇಲ್ಲಿಂದ 10 ವರ್ಷ, 20 ವರ್ಷ, 35 ವರ್ಷಗಳ ಕಾಲ ಗುತ್ತಿಗೆಯನ್ನು ನೀಡುತ್ತಾ ಬಂದಿದ್ದಾರೆ. ಅದಾದ ನಂತರ 1 ಎಕರೆ 08 ಗುಂಟೆ ಜಮೀನನ್ನು ಇಂಡಿಯನ್ ಜಿಮ್‌ಖಾನ ಕ್ಲಬ್‌ಗೆ ಕೊಡುವುದಕ್ಕೆ ಯಾವುದೇ ಆಕ್ಷೇಪಣೆಗಳಿಲ್ಲ. ಹೆಚ್ಚುವರಿಯಾಗಿರತಕ್ಕಂಥ ತೆರೆದ ಜಾಗ (open place) ವನ್ನು ಕಾಂಪೌಂಡ್ ಹಾಕಿಕೊಂಡು ಇಟ್ಟುಕೊಂಡಿದ್ದಾರೆ. ಬಹುತೇಕ ಅದು ನಿಮ್ಮ ಕ್ಷೇತ್ರದಲ್ಲಿಯೇ ಬರಬಹುದೇನೋ ನನಗೆ ಗೊತ್ತಿಲ್ಲ. ನನ್ನ ಪ್ರಶ್ನೆ ಇರತಕ್ಕಂಥದ್ದು, ಅಕ್ಕ ಪಕ್ಕದಲ್ಲಿ ಜನರು ವಾಸಿಸುತ್ತಿದ್ದಾರೆ. ಮಾನ್ಯ ಸಚಿವರಿಗೂ ಗೊತ್ತಿರುವ ಹಾಗೆ ಇವತ್ತಿನ ದಿವಸ ಬೆಂಗಳೂರಿನಲ್ಲಿ ಎಲ್ಲಿಯೂ ಸಹ ಆಟದ ಮೈದಾನವೇ ಇಲ್ಲದಂತಾಗಿದೆ. ಅಂತಹ ಸಂದರ್ಭದಲ್ಲಿ ಕೆಳ ವರ್ಗದವರು, ಮಧ್ಯಮ ವರ್ಗದವರಿಗೆ ಒಂದು ಅವಕಾಶ ಬೇಕೆಂದರೆ ಅದಕ್ಕೂ ಸಹ ಅವಕಾಶ ಸಿಗುತ್ತಿಲ್ಲ. 2008ಕ್ಕೆ ಅವರ ಅವಧಿ ಮುಗಿಯುತ್ತದೆಂದು ಸರ್ವೋಚ್ಚ ನ್ಯಾಯಾಲಯದಲ್ಲಿ ಬಹಳ ಸ್ಪಷ್ಟವಾಗಿ ಹೇಳಿದೆ. ನಂತರ ಬೆಂಗಳೂರು ಮಹಾನಗರ ಪಾಲಿಕೆಯವರು 1 ಎಕರೆ 8 ಗುಂಟೆ ಜಮೀನನ್ನು ಬಿಟ್ಟು ಉಳಿದಂತಹ ಜಾಗವನ್ನು ಸರ್ಕಾರದ ವಶಕ್ಕೆ ತೆಗೆದುಕೊಳ್ಳಬಹುದೆಂದು ಈಗಾಗಲೇ ಸರ್ವೋಚ್ಚ ನ್ಯಾಯಾಲಯವು ಬಹಳ ಸ್ಪಷ್ಟವಾಗಿ ಆದೇಶ ಮಾಡಿದೆ. ಆನಂತರ ಸಚಿವ ಸಂಪುಟ ಸಭೆಯ ಮುಂದೆ ಬಂದಿದೆ ಎಂದು ಮಾನ್ಯ ಸಚಿವರು ಹೇಳುತ್ತಿದ್ದಾರೆ. ಸಾರ್ವಜನಿಕರ ಹಿತದೃಷ್ಟಿಯಿಂದ 100 ಕೋಟಿ ರೂಪಾಯಿಗಳ ಮೌಲ್ಯದ ಜಾಗವನ್ನು ಯಾವುದೋ ಕ್ಲಬ್‌ಗೆ ಒಂದೂವರೆ ಕೋಟಿ ರೂಪಾಯಿ ಬಾಡಿಗೆಗೆ ಕೊಡುತ್ತೇವೆಂದರೆ, ಆ ಕ್ಲಬ್‌ನಲ್ಲಿ ಮಾಡುತ್ತಿರತಕ್ಕಂಥ activities ಜನೋಪಯೋಗಿ ಉಪಯೋಗಕ್ಕಾಗಿ ಇಲ್ಲ. Recreation Club ಬೇಕು. ಸದಸ್ಯರುಗಳಿಗಾಗಿ ಮಾಡಿಕೊಂಡಿದ್ದಾರೆ. ಮಾಡಿಕೊಳ್ಳಲಿ, ಅದು ಬೇರೆ ವಿಚಾರ. ಆದರೆ, ಅದಕ್ಕಿಂತಲೂ ಸಾರ್ವಜನಿಕರ ಮಹತ್ವವಾದ ವಿಚಾರ, ಸಾರ್ವಜನಿಕರ ಉಪಯೋಗಕ್ಕೆ ಬರತಕ್ಕಂಥ ಜಾಗವನ್ನು 100 ಕೋಟಿ ರೂಪಾಯಿ ಮೌಲ್ಯ ಇರತಕ್ಕಂಥ ಜಾಗವನ್ನು ಯಾವುದೇ ಒಂದು ತಾಂತ್ರಿಕ ಕಾರಣವನ್ನು ಕೊಟ್ಟು ಬಿಟ್ಟುಕೊಟ್ಟರೆ ಬಹುತೇಕ ಸರ್ಕಾರದ ಆಸ್ತಿಯನ್ನು ನಾವು ಕಳೆದುಕೊಳ್ಳುತ್ತೇವೆ. ಒಂದು ವೇಳೆ ನ್ಯಾಯಾಲಯದಲ್ಲಿ ಇದ್ದರೆ ತಾವು ಸ್ಪಷ್ಟವಾಗಿ ಸೂಚನೆಯನ್ನು ಕೊಡಬೇಕು. ಸರ್ವೋಚ್ಚ ನ್ಯಾಯಾಲಯದಲ್ಲಿ ಆದೇಶ ಇರುವುದರಿಂದ ಅಧಿಕಾರಿಗಳು ಅದನ್ನು ವಿಲೇವಾರಿ ಮಾಡಬೇಕು. ಅದನ್ನು ಬಿಟ್ಟು ಉಚ್ಚ ನ್ಯಾಯಾಲಯದ ಗಮನಕ್ಕೆ ಈ ವಿಚಾರವನ್ನು ತರಲಾಗಿದೆಯೋ ಇಲ್ಲವೋ ಎಂಬುದು ನನಗೆ ಗೊತ್ತಿಲ್ಲ. ದಯಮಾಡಿ ಈ ಅಂಶಗಳನ್ನೂ ಕೋರ್ಟಿನ ಗಮನಕ್ಕೆ ತಂದು ಸರ್ಕಾರದ ವಶಕ್ಕೆ ಪಡೆದುಕೊಂಡು ಆ ಜಾಗವನ್ನು ಸಾರ್ವಜನಿಕರ ಉಪಯೋಗಕ್ಕಾಗಿ ಕೊಡಬೇಕೆಂದು ಮನವಿ ಮಾಡುತ್ತೇನೆ.

**ಶ್ರೀ ಕೆ.ಜೆ.ಜಾರ್ಜ್:-** ಮಾನ್ಯ ಸಭಾಪತಿಯವರೆ, ಈಗಾಗಲೇ ನಾನು ಉತ್ತರವನ್ನು ಒದಗಿಸಿದ್ದೇನೆ. ಉಚ್ಚ ನ್ಯಾಯಾಲಯದಲ್ಲಿ 12 ವಾರಗಳ ಕಾಲ ತಡೆಯಾಜ್ಞೆಯನ್ನು ನೀಡಿದ್ದಾರೆ. ನಾನು ಹೇಳುವುದೇನೆಂದರೆ, ಏನು

ಅಧಿಕೃತವಾಗಿ 2010 ರಿಂದ 2015 ರವರೆಗೂ ಕ್ಲಬ್‌ನವರ ಕೈಯಲ್ಲಿತ್ತು. ಬೆಂಗಳೂರು ಮಹಾನಗರ ಪಾಲಿಕೆಯವರು plan sanction ಕೊಟ್ಟಿದ್ದಾರೆ. ಅದನ್ನು ಬಿಟ್ಟು ಬಾಕಿ ಇರುವ ಸ್ಥಳವನ್ನು ನಾವು ಸಾರ್ವಜನಿಕರ ಉಪಯೋಗಕ್ಕಾಗಿ ತೆಗೆದುಕೊಳ್ಳಬೇಕೆಂದು ಈಗಾಗಲೇ ಅಪರ ಮುಖ್ಯ ಕಾರ್ಯದರ್ಶಿಯವರು ಆದೇಶವನ್ನು ಕೊಟ್ಟಿದ್ದಾರೆ. ಅದರ ಪ್ರಕಾರ ಉಚ್ಚ ನ್ಯಾಯಾಲಯದಲ್ಲಿ ಹೊರಡಿಸಿರತಕ್ಕಂಥ ತಡೆಯಾಜ್ಞೆಯನ್ನು ತೆರವುಗೊಳಿಸಿದ ಮೇಲೆ ಕ್ರಮವನ್ನು ತೆಗೆದುಕೊಳ್ಳುತ್ತೇನೆ. ಅದಾದ ನಂತರ ಅಪರ ಮುಖ್ಯ ಕಾರ್ಯದರ್ಶಿಯವರು ಹೊರಡಿಸಿರುವ ಆದೇಶದ ಪ್ರಕಾರ ಕ್ರಮ ತೆಗೆದುಕೊಳ್ಳುತ್ತೇವೆ.

**ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 3137**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಪುಟ್ಟಣ್ಣ:–** ಮಾನ್ಯ ಸಭಾಪತಿಯವರೆ, ಮಾನ್ಯ ಮುಖ್ಯಮಂತ್ರಿಯವರು ಉತ್ತರವನ್ನು ಒದಗಿಸಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ಕೋರ್ಟ್‌ಗೆ ಕೊಡುವ ಮಾಹಿತಿಯ ಪ್ರಕಾರ ಕೊಟ್ಟಿದ್ದಾರೆ. ನಮಗೆ ಇದು ಅರ್ಥವೇ ಆಗುತ್ತಿಲ್ಲ. ಕೋರ್ಟ್‌ಗೆ ಒದಗಿಸುವ ರೀತಿಯಲ್ಲಿ ಉತ್ತರವನ್ನು ಕೊಟ್ಟಿದ್ದಾರೆ. ಬೇಕಾದರೆ ನೀವು ತೆಗೆದು ನೋಡಿ. ಯಾರಿಗೆ ಏನು ಏನೆಂಬುದೇ ಗೊತ್ತಾಗುವುದಿಲ್ಲ. ಕೋಟಿ ಕೋಟಿ ವ್ಯವಹಾರ ಮಾಡಿರತಕ್ಕಂಥವರ ಹೆಸರೆ ಇದರಲ್ಲಿರುವುದು. 2 ಡಿಜಿಟ್, 3 ಡಿಜಿಟ್ ಎಲ್ಲಾ ಇದೆ. ಆಡರ್, ಎಲ್ಲಿದೆ. ಏನಾಗಿದೆ ಎಂಬುದರ ವಿವರ ಇದರಲ್ಲಿ ಇಲ್ಲವಾಗಿದೆ. ನಾನು ಕೇಳಿರುವ ಪ್ರಶ್ನೆ 2010ನೇ ಸಾಲಿನಿಂದ ಇದುವರೆವಿಗೆ ಲೋಕಾಯುಕ್ತ ಸಂಸ್ಥೆಯವರು ರಾಜ್ಯದ ಎಷ್ಟು ಸರ್ಕಾರಿ ನೌಕರರ ಮೇಲೆ ದಾಳಿ ನಡೆಸಿದ್ದಾರೆಂದು ಕೇಳಿರುವುದಕ್ಕೆ 361 ದಾಳಿ ಪ್ರಕರಣಗಳನ್ನು ದಾಖಲಿಸಲಾಗಿರುತ್ತದೆಂದು ಹೇಳಿದ್ದಾರೆ ಹಾಗೂ ಲೋಕಾಯುಕ್ತ ದಾಳಿ ಸಂದರ್ಭದಲ್ಲಿ ಕಂಡು ಹಿಡಿದಿರುವ ಅಕ್ರಮ ಸಂಪತ್ತನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಕೇಳಿರುವುದಕ್ಕೆ ಅನುಬಂಧ–1 ರಲ್ಲಿ ಒದಗಿಸಲಾಗಿದೆ ಎಂದು ಕೊಟ್ಟಿದ್ದಾರೆ.

(ಮುಂದು)

**(748) 15.06.2017 12.10 ಬಿಎಸ್‌ಡಿ–ಜಿಆರ್**

**ಶ್ರೀ ಪುಟ್ಟಣ್ಣ (ಮುಂದು)**

ಅದನ್ನೂ ಕೂಡ ಸರಿಯಾಗಿ ಕೊಟ್ಟಿಲ್ಲ. ಇದಾದ ನಂತರ ಅಕ್ರಮ ನಡೆಸಿರುವುದು ಸಾಬೀತಾಗಿರುವ ಎಷ್ಟು ಅಧಿಕಾರಿಗಳ ಮೇಲೆ ಇದುವರೆವಿಗೆ ಕ್ರಮ ಕೈಗೊಳ್ಳಲಾಗಿದೆ ಎಂಬ ಪ್ರಶ್ನೆಗೆ ಎಲ್ಲದ್ದಕ್ಕೂ ನ್ಯಾಯಾಲಯದಲ್ಲಿ 'B' Report, and 'C' Report ಹಾಕಲಾಗಿದೆ ಎಂದು ಉತ್ತರ ಕೊಟ್ಟಿದ್ದಾರೆ. ನಾನು particular ಆಗಿ ಇದುವರೆಗೆ ಲೋಕಾಯುಕ್ತದಲ್ಲಿ ತನಿಖೆ ಮಾಡಿದ ನಂತರ ಇಂತಹ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಿ ಎಂದು ಸರ್ಕಾರಕ್ಕೆ ಪತ್ರ ಬರೆದಿರುತ್ತಾರೆ. ಅಂತಹವರು ಯಾರ್‍ಯಾರು ಮತ್ತು ಎಷ್ಟು ಜನ ಹಾಗೂ ಅವರ ವಿರುದ್ಧ ಸರ್ಕಾರ ಏನು ಕ್ರಮ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕೈಗೊಂಡಿದೆ? ಅವರು ಕೋರ್ಟ್‌ಗೆ ಹೋಗಿ ಕೋರ್ಟಿನಲ್ಲಿರುವುದು that is different. ಈ ದೇಶದಲ್ಲಿ ಕೊಲೆ ಮಾಡಿದವರೂ ಕೋರ್ಟಿಗೆ ಹೋಗುವುದು. ನಾನು ಕೋರ್ಟ್‌ಗೆ ಹೋಗಿರುವುದನ್ನು ಕೇಳುವುದಿಲ್ಲ. ಇದರಲ್ಲಿ ಭ್ರಷ್ಟ ಅಧಿಕಾರಿಗಳ ಮೇಲೆ ಸರ್ಕಾರ ಏನು ಕ್ರಮ ಕೈಗೊಂಡಿದೆ ಎಂದು very particular ಆಗಿ ಕೇಳುತ್ತಿದ್ದೇನೆ.

ಇನ್ನು ತಾಂತ್ರಿಕ ಶಿಕ್ಷಣ ಇಲಾಖೆಯ ನಿರ್ದೇಶಕರು ಮಾಡಿರುವ ಅಕ್ರಮಗಳು ಸಾಬೀತಾಗಿದ್ದರೂ ಇದುವರೆವಿಗೆ ಅವರ ವಿರುದ್ಧ ಕ್ರಮ ಕೈಗೊಳ್ಳದಿರಲು ಕಾರಣಗಳೇನು? (ವಿವರ ನೀಡುವುದು) ಎಂಬ ಪ್ರಶ್ನೆಗೆ ಮಾನ್ಯ ಕರ್ನಾಟಕ ಲೋಕಾಯುಕ್ತ ಸಂಸ್ಥೆಯು ತಾಂತ್ರಿಕ ಶಿಕ್ಷಣ ನಿರ್ದೇಶಕರ ವಿರುದ್ಧ ಯಾವುದೇ ದಾಳಿ ನಡೆಸಿರುವುದಿಲ್ಲ. ಆದರೆ ತಾಂತ್ರಿಕ ಶಿಕ್ಷಣ ನಿರ್ದೇಶನಾಲಯದಲ್ಲಿ ನಡೆದಿದೆ ಎನ್ನಲಾದ ಅವ್ಯವಹಾರಗಳ ಪ್ರಕರಣವನ್ನು ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 838 ಎಸ್‌ಎಎಸ್ 2013, ದಿನಾಂಕ 19/06/2015ರನ್ವಯ ಕರ್ನಾಟಕ ಲೋಕಾಯುಕ್ತ ಅಧಿನಿಯಮ, 1984ರ ಕಲಂ 7(2)ಎ ರಡಿ ಲೋಕಾಯುಕ್ತಕ್ಕೆ ವಹಿಸಲಾಗಿದೆ. ಪ್ರಸ್ತುತ ಈ ಪ್ರಕರಣವು ಹೆಚ್ಚಿನ ತನಿಖೆಗಾಗಿ ಲೋಕಾಯುಕ್ತ ತಾಂತ್ರಿಕ ವಿಭಾಗದಲ್ಲಿ ಬಾಕಿ ಇರುತ್ತದೆ ಎಂದು ಉತ್ತರ ಕೊಟ್ಟಿದ್ದಾರೆ.

**ಶ್ರೀ ಸಿದ್ದರಾಮಯ್ಯ:–** ಮಾನ್ಯ ಸಭಾಪತಿಯವರೇ, ಅವರಿಗೆ ಏನು ಬೇಕು ಎಂದು ನಿರ್ದಿಷ್ಟವಾಗಿ ಹೇಳಿದರೆ ನಾನು ಉತ್ತರವನ್ನು ಹೇಳುತ್ತೇನೆ. What he want? Specially what he wants?

**ಶ್ರೀ ಪುಟ್ಟಣ್ಣ:–** ನನಗೆ ತಪ್ಪು ಉತ್ತರವನ್ನು ಕೊಟ್ಟಿರುವುದರಿಂದ ಹೇಳುತ್ತಿದ್ದೇನೆ. ಇದಕ್ಕೆ ಸಂಬಂಧಪಟ್ಟ ಮಾಹಿತಿ ನನ್ನ ಬಳಿ ಇದೆ.

**ಶ್ರೀ ಸಿದ್ದರಾಮಯ್ಯ:–** ಅವರ ಹತ್ತಿರ ದಾಖಲೆ ಇದ್ದರೆ ಕಳುಹಿಸಿಕೊಡಲಿ.

**ಶ್ರೀ ಪುಟ್ಟಣ್ಣ:–** ಈ ವಿಚಾರ ಇನ್ನೂ ಲೋಕಾಯುಕ್ತದಲ್ಲಿ ಇದೆ ಎಂದು ಹೇಳಿದ್ದಾರೆ.

**ಶ್ರೀ ಸಿದ್ದರಾಮಯ್ಯ:–** ಮಾನ್ಯ ಸಭಾಪತಿಯವರೇ, Director of Technical Education ಅವರ ಸಮಸ್ಯೆಯಾಗಿದೆಯಲ್ಲವೇ?

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಪುಟ್ಟಣ್ಣ:-** ಸಮಸ್ಯೆ ಎಂದಲ್ಲ.

**ಶ್ರೀ ಸಿದ್ದರಾಮಯ್ಯ:-** ಒಂದು ದೂರು ದಾಖಲಾಗಿದೆ. ಮಾನ್ಯ ಸದಸ್ಯರು ಕುಳಿತುಕೊಳ್ಳಬೇಕು. ನಾನು ಉತ್ತರ ಹೇಳುತ್ತೇನೆ. ಮಾನ್ಯ ಉಪಸಭಾಪತಿಯವರಿಗೂ ಈ ವಿಚಾರ ಗೊತ್ತಿದೆ. ಲೋಕಾಯುಕ್ತ ಎಷ್ಟು ರೈಡ್ ಮಾಡಿದೆ ಮತ್ತು ಎಷ್ಟು ಆಸ್ತಿ ಮುಟ್ಟುಗೋಲು ಹಾಕಿಕೊಳ್ಳಲಾಗಿದೆ ಎಂದು ಕೇಳಿದ್ದು, ಈ ಮಾಹಿತಿಗಳನ್ನು ಕೊಟ್ಟಿದ್ದೇವೆ. ಎಷ್ಟು ಜನರಿಗೆ ಶಿಕ್ಷೆ ಆಗಿದೆ ಎಂದು ಕೇಳಿದ್ದಾರೆ. ಅಕ್ರಮ ನಡೆಸಿರುವುದು ಸಾಬೀತಾಗಿದ್ದರೆ ಶಿಕ್ಷೆ ಕೊಟ್ಟೆ ಕೊಡುತ್ತೇವೆ. ಇಲ್ಲಿಯವರೆಗೆ 361 ಪ್ರಕರಣಗಳಲ್ಲಿ 4 cases acquit ಆಗಿದ್ದು, ಉಳಿದವುಗಳಲ್ಲಿ ಕೆಲವಕ್ಕೆ Charge Sheet ಹಾಕಿದ್ದಾರೆ, ಕೆಲವಕ್ಕೆ Charge Sheet ಹಾಕಬೇಕಾಗಿದೆ. Charge Sheet ಹಾಕಬೇಕಾದ ಖಿಡುಚಿಟ ನಲ್ಲಿ ಇವೆ. ಆ Trial ಆಗಿ conviction ಮಾಡಿದರೆ ..... Acquit ಆಗಿರುವುದಕ್ಕೆ ಏನು ಮಾಡುವುದಕ್ಕೆ ಬರುವುದಿಲ್ಲ ಎಂದು ಗೊತ್ತು. 4 ಕೇಸ್‌ಗಳು acquit ಆಗಿರುವುದರಿಂದ ಕ್ರಮ ತೆಗೆದುಕೊಳ್ಳುವುದಕ್ಕೆ ಆಗುತ್ತದೆಯೇ? Conviction ಆದರೆ ಕ್ರಮ ತೆಗೆದುಕೊಳ್ಳಬೇಕು. ಆದರೆ conviction ಆಗಿಲ್ಲವಲ್ಲ! They are all pending before the Court. ಅವು Trial ನಲ್ಲಿದ್ದು, ಇನ್ನು evidence, argument ಎಲ್ಲವೂ ಇರುತ್ತವೆ. ಅವರಿಗೂ ಕೋರ್ಟ್‌ಗೆ ಹೋದಾಗ ಹೇಗೆ ಎಂದು ಗೊತ್ತಿರುತ್ತದೆ.

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಯವರೇ, ...

**ಶ್ರೀ ಸಿದ್ದರಾಮಯ್ಯ:-** ನಂತರ ಕೇಳಲಿ, ಏಕೆ ಇಷ್ಟು ಆತುರವಾಗಿದ್ದಾರೆ? Conviction ಆಗಬೇಕು. ಕೋರ್ಟ್‌ನಲ್ಲಿ Charge Sheet ಹಾಕಿದ ಮೇಲೆ ನಮ್ಮ Prosecutor ಬೇಗ ತೆಗೆದುಕೊಳ್ಳಿ, Witness Cross-examination, evidence ಗೆ ತೆಗೆದುಕೊಳ್ಳಿ ಎಂದು ಒತ್ತಾಯ ಮಾಡಬಹುದು. ಆದರೆ ಕೋರ್ಟ್‌ನಲ್ಲಿ ನಾವು ಹೇಳಿದ ರೀತಿ ನಡೆಯುವುದಿಲ್ಲ. ಅದಕ್ಕೆ ಸಮಯ ಬೇಕಾಗುತ್ತದೆ. Adjournment ಕೇಳುತ್ತಾರೆ. ಏನೇನೋ ಆಗಿ ಡಿಲೇ ಆಗುತ್ತದೆ. ಕೊಲೆ ಕೇಸ್‌ಗಳೇ ಐದು ಹತ್ತು ವರ್ಷಗಳನ್ನು ತೆಗೆದುಕೊಳ್ಳುತ್ತದೆ. ನಾನು ಲಾಯರ್ ಆಗಿ ಕೆಲಸ ಮಾಡಿದ್ದೇನೆ. ಒಂದೊಂದು civil case 40-50 ವರ್ಷಗಳಾದರೂ ಆದರೂ ಇತ್ಯರ್ಥ ಆಗದಂತಹವು ಇವೆ. ಕೆಲವು ಲಾಯರ್‌ಗಳು ಅದಕ್ಕಾಗಿಯೇ ಇದ್ದು, ಡಿಲೇ ಮಾಡುವುದರಲ್ಲಿ expert ಆಗಿರುತ್ತಾರೆ. ನಮ್ಮ ಮೈಸೂರಿನಲ್ಲಿ ಒಂದಿಬ್ಬರು ಲಾಯರ್‌ಗಳಿದ್ದು, ಯಾವುದಾದರೂ ಅಪೀಲು ಹಾಕಬೇಕೆಂದರೆ, ಅಪೀಲಿನಲ್ಲಿ ಹಾಕುವುದಕ್ಕೆ ಆಗುವುದಿಲ್ಲ, ಇದರಲ್ಲಿ ಏನೂ ಕೇಸ್ ಇಲ್ಲ ಎಂದರೆ ಹೇಗಾದರೂ ಮಾಡಿ ಹಾಕಿ ಎಂದು ಅರ್ಜಿದಾರರು

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹೇಳುವವರಿದ್ದರು. ಆಗ 'ನೋಡಪ್ಪ, ಅಲ್ಲಿಬ್ಬರು ಲಾಯರ್‌ಗಳು ಇದ್ದಾರೆ, ಅವರು ಮಾಡುತ್ತಾರೆ, ಹೋಗಿ' ಎಂದು ಕಳುಹಿಸಿಬಿಡುತ್ತಿದ್ದೆವು. ಈ ರೀತಿ ಡಿಲೇ ಆಗುತ್ತವೆ. ಅವು 'B' Report, ಅಥವಾ 'C' Report ಗಳಲ್ಲ, Charge Sheet means Charge Sheet. Charge Sheet ಅನ್ನು evidence ಇದ್ದರೆ ಮಾತ್ರ ಹಾಕಲಾಗುತ್ತದೆ. ಎವಿಡೆನ್ಸ್ ಇಲ್ಲದಿದ್ದರೆ 'B' Report ಹಾಕುತ್ತಾರೆ. Evidence ಇದ್ದು Charge Sheet ಹಾಕಿದ್ದು, ಕೆಲವು ಕೇಸ್‌ಗಳು trial ನಲ್ಲಿ ಇವೆ ಹಾಗೂ ಕೆಲವು process ನಲ್ಲಿವೆ. ಕೆಲವು investigation ನಲ್ಲಿದ್ದು, ಎಲ್ಲವೂ ಆಗುತ್ತಿವೆ. ಅದರಿಂದ ಯಾರ ಮೇಲೂ ಕ್ರಮ ತೆಗೆದುಕೊಳ್ಳುವ ಅವಕಾಶವೇ ಬಂದಿಲ್ಲ.

ಇನ್ನು Director of Technical Education ಮೇಲೆ ದೂರು ಕೊಟ್ಟಿದ್ದು, ಅದನ್ನೂ ಲೋಕಾಯುಕ್ತಕ್ಕೆ ಕಳುಹಿಸಲಾಗಿದೆ. ಅದರಲ್ಲಿ 'Redesignation of Assistant Professors as Associate Professors in DTE and giving them revised pay scale from the date of their original appointment ಎಂದು complaint ಕೊಟ್ಟಿದ್ದಾರೆ. ಇದು ಹೋಗಿದ್ದು, ತನಿಖೆ ಮಾಡಿ ವರದಿ ಕೊಡಬೇಕಾಗುತ್ತದೆ. ಇನ್ನೊಂದು charge ಏನು ಮಾಡಿದ್ದಾರೆಂದರೆ 'Purchase of equipments by the DTE during 2009-10, 2010-11 and 2011-12 for Solar Lights, Street Lights, ARM Lab Equipments, Electrical Air Purifiers, Speed Controller of Motors and e-biometrics without calling for tenders' ಎಂದು ಹೇಳಿಬಿಟ್ಟಿದ್ದಾರೆ. ಇವೆಲ್ಲವೂ ಸಾಬೀತಾಗಬೇಕಲ್ಲವೇ? ಮೂರನೆಯದಾಗಿ 'Recruitment against teaching posts in VTU in volition of the Government Order' ಇವೆಲ್ಲವನ್ನು ಕೊಟ್ಟಿದ್ದು, ಲೋಕಾಯುಕ್ತಕ್ಕೆ ಹೋಗಿದ್ದು, ಅವರು ಕೊಟ್ಟ report ಮೇಲೆ we will take action.

**ಶ್ರೀ ಪುಟ್ಟಣ್ಣ:–** ನಾನು simple ಆಗಿ ಕೇಳುವುದೇನೆಂದರೆ, ಕೋರ್ಟ್‌ನಲ್ಲಿ ಏನಾದರೂ decision ಬರಲಿ. ಲೋಕಾಯುಕ್ತದ ತನಿಖೆಯಲ್ಲಿ ಸಾಬೀತಾಗಿ ಸರ್ಕಾರಕ್ಕೆ ಇಂತಹವರುಗಳ ವಿರುದ್ಧ ಕ್ರಮ ಕೈಗೊಳ್ಳಿ ಎಂದು ಪತ್ರ ಬರೆದಿರುವುದರ ಮೇಲೆ ಸರ್ಕಾರ ಏನು ಕ್ರಮ ಕೈಗೊಂಡಿದೆ? ಎಷ್ಟು ಅಧಿಕಾರಿಗಳ ಮೇಲೆ ಕ್ರಮ ಕೈಗೊಂಡಿದೆ.

**ಶ್ರೀ ಸಿದ್ದರಾಮಯ್ಯ:–** ಲೋಕಾಯುಕ್ತ ಶಿಫಾರಸ್ಸು ಮಾಡಿರುವವರ ಮೇಲೆ ಕ್ರಮ ತೆಗೆದುಕೊಂಡಿದ್ದೇವೆ. ಕ್ರಮವನ್ನು ಇಲಾಖಾ ಮುಖ್ಯಸ್ಥರು ತೆಗೆದುಕೊಳ್ಳಬೇಕಾಗಿದ್ದು, ಒಂದೂ ಆ ರೀತಿ ತೆಗೆದುಕೊಂಡಿಲ್ಲದಿದ್ದರೆ ಮಾಹಿತಿ

ಕೊಡಿ. ಕ್ರಮ ತೆಗೆದುಕೊಂಡಿರದ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳುತ್ತೇನೆ. ಆಗಬಹುದಲ್ಲವೇ? ಮಾಹಿತಿ ಕಳುಹಿಸಿಕೊಡಿ. ಮಾನ್ಯ ಸದಸ್ಯರು ಉಪ ಸಭಾಪತಿಯವರಾಗಿ ಕೆಲಸ ಮಾಡಿದ್ದೀರಿ, ಇದೇನಿದು?

**ಶ್ರೀ ಪುಟ್ಟಣ್ಣ:–** ಇದರಲ್ಲಿ ಇನ್ನೂ ಕೂಡ ಲೋಕಾಯುಕ್ತದಲ್ಲಿ ತನಿಖೆ ನಡೆಯುತ್ತಿದೆ ಎಂದು ತಿಳಿಸಿದ್ದಾರೆ. ಆದರೆ ತಾಂತ್ರಿಕ ವಿಭಾಗದಿಂದ ತನಿಖೆ ಆಗಿ already report submit ಆಗಿದೆ.

**ಶ್ರೀ ಸಿದ್ದರಾಮಯ್ಯ:–** ಮಾನ್ಯ ಸಭಾಪತಿಯವರೇ, DTE ಮೇಲೆ ಹೇಳುತ್ತಿದ್ದಾರೆಯೇ?

**ಶ್ರೀ ಪುಟ್ಟಣ್ಣ:–** ಹೌದು ಸಾರ್.

**ಶ್ರೀ ಸಿದ್ದರಾಮಯ್ಯ:–** ಮಾನ್ಯ ಸಭಾಪತಿಯವರೇ, let him give that. ಕೊಡಿ. Please send it.

**ಶ್ರೀ ಪುಟ್ಟಣ್ಣ:–** ಅವರು ಬಂದು 9 ವರ್ಷಗಳಾಗಿದೆ, he is not eligible. ಅವರು eligible ಇಲ್ಲ.

**ಶ್ರೀ ಸಿದ್ದರಾಮಯ್ಯ:–** ಮಾನ್ಯ ಸಭಾಪತಿಯವರೇ, appointment ಅನ್ನು ನಾವು ಮಾಡಿದ್ದೇ? ಯಾರು ಮಾಡಿದ್ದು ಎಂದು ಹೇಳಲಿ. 'Ineligible' ಆದವರನ್ನು appoint ಮಾಡಿದ್ದು ಯಾರು?

**ಶ್ರೀ ಪುಟ್ಟಣ್ಣ:–** 9 ವರ್ಷಗಳಿಂದ ಇದ್ದಾರೆ.

**ಶ್ರೀ ಸಿದ್ದರಾಮಯ್ಯ:–** ನಮ್ಮ ಮೇಲೆ ಹಾಕಿದರೆ.....

**ಶ್ರೀ ಪುಟ್ಟಣ್ಣ:–** ಈಗ ಕ್ರಮ ಕೈಗೊಳ್ಳಲಿ.

**ಶ್ರೀ ಸಿದ್ದರಾಮಯ್ಯ:–** ಮಾನ್ಯ ಸಭಾಪತಿಯವರೇ, appoint ಮಾಡಿದ್ದು ಯಾರು ಎಂಬುದನ್ನು ಹೇಳಲಿ.

**ಶ್ರೀ ಪುಟ್ಟಣ್ಣ:–** 9 ವರ್ಷಗಳಲ್ಲಿ ಎಂದರೆ ನನಗೆ ಗೊತ್ತಿಲ್ಲ ಸಾರ್.

**ಶ್ರೀ ಸಿದ್ದರಾಮಯ್ಯ:–** ಇದೆಲ್ಲಾ ಬೇಡ.

" ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ರಾಮಚಂದ್ರಗೌಡ (ಪದವೀಧರ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ನನಗೆ ಒಂದು clarification ಬೇಕಾಗಿದೆ, ಅವರ ಉತ್ತರದಲ್ಲಿ ತಾಂತ್ರಿಕ ಶಿಕ್ಷಣ ನಿರ್ದೇಶನಾಲಯದಲ್ಲಿ ನಡೆದಿದೆ ಎನ್ನಲಾದ ಅವ್ಯವಹಾರಗಳ ಪ್ರಕರಣವನ್ನು ಸರ್ಕಾರಿ ಆದೇಶ ಸಂಖ್ಯೆ:ಸಿಆಸುಇ 838 ಎಸ್‌ಎಎಸ್ 2013ರಂತೆ ಸಾಬೀತಾದ ಮೇಲೆ ಕೋರ್ಟ್‌ಗೆ

ಹಾಕುವುದನ್ನು ಬಿಟ್ಟು ಲೋಕಾಯುಕ್ತಕ್ಕೆ ಏಕೆ ಕಳುಹಿಸುತ್ತಾರೆ ಎಂಬುದು ನನ್ನ ಪ್ರಶ್ನೆಯಾಗಿದೆ. ಪ್ರಕರಣ ಸಾಬೀತಾದ ಮೇಲೆ ಕೋರ್ಟ್‌ಗೆ ಏಕೆ ಹಾಕುತ್ತಾರೆ.

**ಶ್ರೀ ಸಿದ್ದರಾಮಯ್ಯ:–** ಸಾಬೀತಾದ ಮೇಲೆ ನೇರವಾಗಿ ಕೋರ್ಟ್‌ಗೆ ಹಾಕುವುದಕ್ಕೆ ಆಗುವುದಿಲ್ಲ. ಮಾನ್ಯ ಸದಸ್ಯರು ಕುಳಿತುಕೊಳ್ಳಬೇಕು. ಅವರಿಗೆ ಅನುಭವ ಇದೆ, ಆದರೆ ಮಾನ್ಯ ಸಭಾಪತಿಯವರೇ, Law ಓದಿಲ್ಲ. ಅನುಭವ ಬೇರೆ, Law ಓದಿರುವುದು ಬೇರೆ. ಅವರು ಕೋರ್ಟ್‌ಗೆ ಹೋಗಿ argument ಮಾಡುವುದಕ್ಕೆ ಆಗುತ್ತದೆಯೇ? ಆಗುವುದಿಲ್ಲ.

**ಶ್ರೀ ರಾಮಚಂದ್ರಗೌಡ:–** ಸಾಬೀತಾದ ಮೇಲೆ ಸರ್ಕಾರವೇ ಕ್ರಮ ತೆಗೆದುಕೊಳ್ಳಬಹುದು, ಲೋಕಾಯುಕ್ತಕ್ಕೆ ಏಕೆ ಕೊಟ್ಟಿದ್ದಾರೆ?

**ಶ್ರೀ ಸಿದ್ದರಾಮಯ್ಯ:–** ಈಗ ಮಾನ್ಯ ಪುಟ್ಟಣ್ಣನವರು ಮಾಹಿತಿ ಕಳುಹಿಸಿದ್ದು, ಅದರಲ್ಲಿ ಸಾಬೀತಾಗಿದೆಯೆ ಎಂದು ನೋಡುತ್ತೇನೆ. ಇದರಲ್ಲಿ ಸಾಬೀತಾಗಿ ಕ್ರಮ ತೆಗೆದುಕೊಂಡಿಲ್ಲದಿದ್ದರೆ, ಯಾರು ಕ್ರಮ ತೆಗೆದುಕೊಂಡಿಲ್ಲ ಮತ್ತು ಏಕೆ ತೆಗೆದುಕೊಂಡಿಲ್ಲ ಎಂದು ಅವರ ಮೇಲೆ ವಿಚಾರಣೆ ಮಾಡಿ ಕ್ರಮ ತೆಗೆದುಕೊಳ್ಳುತ್ತೇನೆ. ಅವ್ಯವಹಾರ ಮಾಡಿರುವವರ ಹಾಗೂ ಇವರ ವಿರುದ್ಧ ಕ್ರಮ ತೆಗೆದುಕೊಳ್ಳದೇ ಇರುವವರ ವಿರುದ್ಧವೂ ಕ್ರಮ ತೆಗೆದುಕೊಳ್ಳುತ್ತೇನೆ. ಆಗಬಹುದಲ್ಲವೇ? Hon'ble Member got his answer. ಅವರಿಗೆ ಉತ್ತರ ಸಿಕ್ಕಿತ್ತಲ್ಲವೇ? ಅವರು ಯಾವ ಉದ್ದೇಶಕ್ಕೆ ಕೇಳಿದ್ದಾರೋ, ಅವರ ಪ್ರಶ್ನೆ ಬಹಳ ಇವೆ. ಈ DTE 'ineligible' ಇದ್ದಾನೆ, ಇವರಿಗೆ direct ಆಗಿ ಕೊಟ್ಟುಬಿಟ್ಟಿದ್ದಾರೆ ಎಂದು ಬಹಳ ಜನ ಹೇಳುತ್ತಿದ್ದು, ಅದರ ಬಗ್ಗೆ ನೋಡೋಣ. ಈ ಮಾಹಿತಿ ಕೊಟ್ಟಿದ್ದಾರೆ, ಅದನ್ನು ನಾನು ನೋಡುತ್ತೇನೆ.

(ಮುಂದು)

**(749) 15-06-2017 SK-MD 12.20**

**ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 3151**
**(ಉತ್ತರವನ್ನು ಒದಗಿಸಲಾಗಿದೆ)**

**ಶ್ರೀ ವಿಜಯ್ ಸಿಂಗ್:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ಬೀದರ್ ನಗರದ ಒಳಚರಂಡಿಯ ಕೆಲಸ ಆರು ವರ್ಷಗಳ ಹಿಂದೆ ಪ್ರಾರಂಭ ಮಾಡಿದ್ದು, ಈಗಾಗಲೇ ಕೆಲಸ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮುಗಿದಿದೆ. ಅಲ್ಲಿ ಕೆಲಸವು ಸಹ ಕಳಪೆ ಕಾಮಗಾರಿಯಿಂದ ಕೂಡಿದೆ. ಅಲ್ಲಿ ಒಂದೆರಡು ಬಾರಿ ಮಳೆ ಬಂದರೆ ಎಲ್ಲಾ ರಸ್ತೆಗಳು ಹದಗೆಟ್ಟು ಹೋಗುತ್ತದೆ. ರಸ್ತೆಗಳನ್ನು ರಿಪೇರಿ ಮಾಡಿಸಬೇಕೆಂದು ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ. ಬೀದರ್ ನಗರಾಭಿವೃದ್ಧಿ ಪ್ರಾಧಿಕಾರದ ಕಮಿಷನರ್ ಇಲ್ಲ. ಆದರೆ ನಮ್ಮ ಬಸವ ಕಲ್ಯಾಣ ಅಸಿಸ್ಟೆಂಟ್ ಕಮಿಷನರ್‌ನ್ನು ಇಲ್ಲಿಗೆ incharge ಮಾಡಿದ್ದಾರೆ. ಆ ಒಂದು ಹುದ್ದೆಯನ್ನು ಭರ್ತಿ ಮಾಡಬೇಕೆಂದು ನಾನು ತಮ್ಮ ಮೂಲಕ ಮನವಿ ಮಾಡುತ್ತೇನೆ.

**ಶ್ರೀ ಈಶ್ವರ್ ಬಿ.ಖಂಡ್ರೆ:-** ಮಾನ್ಯ ಸಭಾಪತಿಯವರೇ, ಬೀದರ್‌ನಲ್ಲಿ *KUIDFC* (Karnataka Urban Infrastructure Development & Finance Corporation Limited) ವತಿಯಿಂದ ಒಳಚರಂಡಿ ಯೋಜನೆ ಕಾಮಗಾರಿ ನಡೆಯುತ್ತಿದೆ. ಎರಡು ಪ್ಯಾಕೇಜ್‌ಗಳ ಕಾಮಗಾರಿ ಪ್ರಾರಂಭ ಮಾಡಿದ್ದೇವೆ. ಈ ಯೋಜನೆ ಪ್ರಾರಂಭ ಮಾಡುವುದಕ್ಕೆ ಸ್ವಲ್ಪ ವಿಳಂಬವಾಗಿದೆ. ಹೀಗಾಗಿ ಪ್ಯಾಕೇಜ್ ನಂ.1 ರಲ್ಲಿ ಪ್ರತಿಶತ 90 ಭಾಗ ಮುಗಿದಿದೆ. ಪ್ಯಾಕೇಜ್ ನಂ.2 ರಲ್ಲಿ ಪ್ರತಿಶತ 91 ಭಾಗ ಮುಗಿದಿದೆ. ಯಾವ ಯಾವ ಕಾಮಗಾರಿಗಳು ನಡೆಯುತ್ತಿದೆಯೋ ಅವೆಲ್ಲಾ ಕಾಮಗಾರಿಗಳಿಗೆ ತಾಂತ್ರಿಕವಾಗಿ ಗುಣಮಟ್ಟದ ಪರೀಕ್ಷೆ ಮಾಡುವಂತಹ ಎಲ್ಲಾ ವಿಧಾನಗಳನ್ನು ಒಳಗೊಂಡಿದೆ. ಆದ್ದರಿಂದ ಇದರಲ್ಲಿ ಗುಣಮಟ್ಟದ ಬಗ್ಗೆ ಯಾವುದೇ compromise ಆಗುವುದಿಲ್ಲ. ಎಲ್ಲಿಯಾದರೂ ಕಳಪೆ ಗುಣಮಟ್ಟದ ಕಾಮಗಾರಿಗಳು ಕಂಡು ಬಂದರೆ ತಕ್ಷಣ ಕ್ರಮ ಜರುಗಿಸುವುದಕ್ಕೆ ಹೇಳುತ್ತೇನೆ. ಈ ಒಂದು ಕಾಮಗಾರಿ ಜುಲೈ ತಿಂಗಳ 30 ರೊಳಗಾಗಿ ಮುಗಿಸುವಂತಹ ವ್ಯವಸ್ಥೆಯನ್ನು ಮಾಡುತ್ತೇನೆ.

**ಶ್ರೀ ರಘುನಾಥ್ ರಾವ್ ಮಲ್ಕಾಪೂರೆ:-** ಮಾನ್ಯ ಸಭಾಪತಿಯವರೇ, ಮಳೆ ಬಂದು ಎಲ್ಲಾ ರಸ್ತೆಗಳು ಕುಸಿದು ಹೋಗಿದೆ. ಒಂದು ವಾಹನವು ಸಹ ಅಲ್ಲಿ ಹೋಗುವುದಕ್ಕೆ ಆಗುವುದಿಲ್ಲ ಮತ್ತು ನಡೆಯುವುದಕ್ಕೆ ಮತ್ತು ಸೈಕಲ್ ಸಹ ಓಡಿಸುವುದಕ್ಕೆ ಆಗುವುದಿಲ್ಲ. ದಯವಿಟ್ಟು, ಮಾನ್ಯ ಸಚಿವರು ಇದನ್ನು ಗಂಭೀರವಾಗಿ ತೆಗೆದುಕೊಳ್ಳಬೇಕು. ಪತ್ರಿಕೆಯಲ್ಲಿ ಬಂದಿರುವ ವಿಷಯದ ತುಣುಕನ್ನು ನಾನು ತಂದಿಲ್ಲ. ರಸ್ತೆಗಳು ಪೂರ್ತಿ ಕೆಸರಾಗಿರುವುದರಿಂದ ಅಲ್ಲಿ ಓಡಾಡುವುದಕ್ಕೆ ಸಾಧ್ಯವಿಲ್ಲ.

**ಶ್ರೀ ಈಶ್ವರ್ ಬಿ.ಖಂಡ್ರೆ:-** ಮಾನ್ಯ ಸಭಾಪತಿಯವರೇ, ಇದು ನಾಲ್ಕು ವರ್ಷಗಳ ಕೆಳಗಡೆ ಪ್ರಾರಂಭವಾದಂತಹ ಕಾಮಗಾರಿ. ಈ ಒಳಚರಂಡಿ ಕಾಮಗಾರಿಗಳು ಸಣ್ಣ ಸಣ್ಣ ಇಕ್ಕಟ್ಟಿನ ಬಡಾವಣೆಗಳಲ್ಲಿ ನಡೆಯುತ್ತಿದೆ. ಅದನ್ನು ತಕ್ಷಣವೇ restore ಮಾಡುವಂತಹ ವ್ಯವಸ್ಥೆ ಕೆಲವೊಂದು ಸಲ ಅನೇಕ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕಾರಣಗಳಿಂದಾಗಿ ವಿಳಂಬವಾಗುತ್ತದೆ. ಈಗಾಗಲೇ ಅದನ್ನು ಸರಿಪಡಿಸುವಂತಹ ವ್ಯವಸ್ಥೆಯನ್ನು ಮಾಡುವುದಕ್ಕೆ ಆದೇಶವನ್ನು ಕೊಟ್ಟಿದ್ದೇವೆ. ನಮ್ಮ ಅಧಿಕಾರಿಗಳು ಕೆಲಸ ಮಾಡುತ್ತಿದ್ದಾರೆ. ಅದಷ್ಟು ಶೀಘ್ರದಲ್ಲಿ ಆ ಒಂದು ರಸ್ತೆಯನ್ನು restoration ಮಾಡುವಂತಹ ವ್ಯವಸ್ಥೆಯನ್ನು ಮಾಡುತ್ತೇವೆ ಮತ್ತು ಎಲ್ಲಾ ಸಾರ್ವಜನಿಕರು ರಸ್ತೆಗಳಲ್ಲಿ ಸುಗಮವಾಗಿ ಹೋಗುವುದಕ್ಕೆ ವ್ಯವಸ್ಥೆ ಮಾಡುತ್ತೇನೆಂದು ಹೇಳುವುದಕ್ಕೆ ಬಯಸುತ್ತೇನೆ.

**ಶ್ರೀ ಈಶ್ವರ್ ಬಿ.ಖಂಡ್ರೆ:–** ಮಾನ್ಯ ಸಭಾಪತಿಯವರೇ, ನಮ್ಮ ಬೀದರ್ ಜಿಲ್ಲೆಯಲ್ಲಿ ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ ಖಾಯಂ ಆಗಿ ಒಬ್ಬ ಕಮಿಷನರ್ ಇಲ್ಲ. ಆಡಳಿತ ವ್ಯವಸ್ಥೆ ಸರಿಯಾಗುತ್ತಿಲ್ಲ. ಅದನ್ನು ಸರಿಪಡಿಸುವಂತಹ ವ್ಯವಸ್ಥೆ ಮತ್ತು ಅಲ್ಲಿ ಖಾಯಂ ಆಗಿ ಕಮಿಷನರ್‌ನ್ನು ನೇಮಿಸುವ ವ್ಯವಸ್ಥೆ ಮಾಡುತ್ತೇನೆ.

**ಶ್ರೀ ರಘುನಾಥ್ ರಾವ್ ಮಲ್ಕಾಪೂರೆ:–** ಮಾನ್ಯ ಸಭಾಪತಿಯವರೇ, ಮುನಿಸಿಪಾಲಿಟಿಯಲ್ಲಿ ಎಇಇ ಇಲ್ಲ.

**ಉಪಸಭಾಪತಿಯವರು:–** ಧನ್ಯವಾದಗಳು, ಮಾನ್ಯ ರಾಮಚಂದ್ರಗೌಡರೇ ತಮ್ಮ ಪ್ರಶ್ನೆಗೆ ಸಮಯವನ್ನು ಕೇಳಿದ್ದಾರೆ ಎಂದು ನಾನು ಈಗಾಗಲೇ ತಿಳಿಸಿದ್ದೇನೆ.

**ಶ್ರೀ ರಾಮಚಂದ್ರಗೌಡ:–** ಮಾನ್ಯ ಸಭಾಪತಿಯವರೇ, ಅದರಲ್ಲಿ ಸಮಯ ಕೇಳುವುದಕ್ಕೆ ಏನಿದೆ?

**ಶ್ರೀ ಕೆ.ಜೆ. ಜಾರ್ಜ್(ಬೆಂಗಳೂರು ಅಭಿವೃದ್ಧಿ ಮತ್ತು ನಗರ ಯೋಜನಾ ಸಚಿವರು):–** ಮಾನ್ಯ ಸಭಾಪತಿಯವರೇ, ಇದು 1976 ಕಾಯ್ದೆ. 1999ರಲ್ಲಿ repeal ಆಯಿತು. 2004 ರಲ್ಲಿ ಕೋರ್ಟ್ ಆದೇಶ ಬಂದಿದೆ. ನಾನು ಇದರ ಸಂಪೂರ್ಣ ವಿವರವನ್ನು ಪಡೆದುಕೊಂಡು ಉತ್ತರ ಕೊಡಬೇಕಾಗುತ್ತದೆ. ಆದ್ದರಿಂದ ನನಗೆ ಹದಿನೈದು ದಿವಸಗಳ ಕಾಲಾವಕಾಶ ಕೊಡಬೇಕಾಗುತ್ತದೆ.

**ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 3128**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಆರ್.ಪ್ರಸನ್ನ ಕುಮಾರ್:–** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಯವರು ಉತ್ತರವನ್ನು ಒದಗಿಸಿದ್ದಾರೆ. ಇವತ್ತು ಜನರಿಗೆ ಸರ್ಕಾರದಿಂದ ಸಾಕಷ್ಟು ಯೋಜನೆಗಳನ್ನು ಕೊಟ್ಟಿದ್ದಾರೆ. ಆದರೆ ಅದರ ಬಗ್ಗೆ ಜನರಿಗೆ ಅರಿವು ಮೂಡಿಸಬೇಕೆಂದರೆ ಹೆಚ್ಚು ಜನರಿಗೆ ಮಾಹಿತಿ ಕೊಡುವಂತಹ ಕೆಲಸವಾಗಬೇಕಾಗಿದೆ. ಸುಮಾರು

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

6,000 ಗ್ರಾಮ ಪಂಚಾಯಿತಿಗಳಿದ್ದಾವೆ. ಆ ಗ್ರಾಮ ಪಂಚಾಯಿತಿಗಳಲ್ಲಿ ನೂರಕ್ಕೂ ಹೆಚ್ಚು ಯೋಜನೆಗಳನ್ನು ಕೊಟ್ಟಿದ್ದಾರೆ. ಅಲ್ಲಿಯ ಸ್ಥಳದಲ್ಲಿಯೇ ಇವತ್ತು ಆರ್‌ಟಿಸಿ ಮತ್ತು ಬೇರೆ ಬೇರೆ ಪ್ರಮಾಣಪತ್ರಗಳನ್ನು ತೆಗೆದುಕೊಳ್ಳುವಂತಹ ಕೆಲಸವನ್ನು ಮಾಡಿದ್ದಾರೆ. ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಜನರಿಗೆ ಆರೋಗ್ಯದ ಬಗ್ಗೆ ಅರಿವು ಮೂಡಿಸುವಂತಹ ಕಾರ್ಯಕ್ರಮಗಳನ್ನು ಕೊಟ್ಟಿದ್ದಾರೆ. ಆ ತರಹದ ಕಾರ್ಯಕ್ರಮಗಳಾಗಿರುವುದರಿಂದ ಎಲ್ಲಾ ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಮತ್ತು ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಹಾಗೂ ಹೋಬಳಿ ಮಟ್ಟದಲ್ಲಿ ಸಾಕಷ್ಟು ಪ್ರಚಾರ ಮಾಡುವುದಕ್ಕೆ ಇನ್ನೂ ಹೆಚ್ಚಿನ ಪ್ರಚಾರದ ಫಲಕಗಳನ್ನು ಹಾಕಬೇಕೆಂದು ಹೇಳಿ ನಾನು ತಮ್ಮ ಮೂಲಕ ಮಾನ್ಯ ಮುಖ್ಯಮಂತ್ರಿಯವರಲ್ಲಿ ಕೇಳುತ್ತಿದ್ದೇನೆ. ನಮ್ಮ ಮುಖ್ಯಮಂತ್ರಿಗಳ ಭಾವಚಿತ್ರ ಹೇಗಿರುತ್ತದೆಂದು ಹೇಳಿದರೆ ಯಾವುದೇ ಡಾಕ್ಟರ್ ಹತ್ತಿರ ರೋಗಿ ಹೋದರೆ, ಡಾಕ್ಟರ್ ಮುಖ ನೋಡಿದರೆ ಸಾಕು. ರೋಗಿಗೆ ಅರ್ಧ ಕಾಯಿಲೆ ವಾಸಿಯಾಗುತ್ತದೆ ಹಾಗೆಯೇ ನಮ್ಮ ಮುಖ್ಯ ಮಂತ್ರಿಗಳು ಭಾವಚಿತ್ರವನ್ನು ಕಛೇರಿ ಮತ್ತು ಆಸ್ಪತ್ರೆಗಳ ಮುಂದೆ ಜನರು ನೋಡಿದಂತಹ ಸಂದರ್ಭದಲ್ಲಿ ಅವರ ಸಮಸ್ಯೆ ಪರಿಹಾರವಾಗುವ ರೀತಿಯಲ್ಲಿ ಇವತ್ತು ಜನರಿದ್ದಾರೆ. ಇವತ್ತು 2,000 ಚಿಲ್ಲರೆ ಮಾತ್ರ ಫಲಕಗಳನ್ನು ಹಾಕಿದ್ದಾರೆ. ಸುಮಾರು 6,000 ಚಿಲ್ಲರೆ ಗ್ರಾಮ ಪಂಚಾಯಿತಿಗಳು ಮತ್ತು ಪ್ರಾಥಮಿಕ ಆರೋಗ್ಯ ಕೇಂದ್ರಗಳು ಮತ್ತು ಹೋಬಳಿ ಮಟ್ಟದ ಎಲ್ಲಾ ಕಡೆಗಳಲ್ಲಿ ಹಾಗೂ ಕಛೇರಿಯಲ್ಲಿ ಮುಖ್ಯಮಂತ್ರಿಗಳ ಭಾವಚಿತ್ರಗಳ ಫಲಕಗಳನ್ನು ಹಾಕಬೇಕೆಂದು ಹೇಳಿ ತಮ್ಮ ಮೂಲಕ ಮಾನ್ಯ ಮುಖ್ಯಮಂತ್ರಿಗಳಿಗೆ ಒತ್ತಾಯ ಮಾಡುತ್ತಿದ್ದೇನೆ.

**ಶ್ರೀ ಸಿದ್ದರಾಮಯ್ಯ:–** ಮಾನ್ಯ ಸಭಾಪತಿಯವರೇ, ಶ್ರೀ ಪ್ರಸನ್ನಕುಮಾರ್‌ರವರು ಒಳ್ಳೆಯ ಉದ್ದೇಶವನ್ನಿಟ್ಟುಕೊಂಡು, ನಾವು ಮಾಡಿರುವ ಕಾರ್ಯಕರ್ಮಗಳು ಹೆಚ್ಚು ಜನರಿಗೆ ತಲುಪಬೇಕು ಮತ್ತು ಅದು ಗೊತ್ತಾಗಬೇಕೆಂದು ಹೇಳಿ, ಈ ಪ್ರಶ್ನೆಯನ್ನು ಕೇಳಿದ್ದಾರೆ. ಬರೀ ಸುಮಾರು 2004 ಮಾತ್ರ ನಾಮ ಫಲಕಗಳು ಕಾಣಿಸುತ್ತಿವೆ ಇದನ್ನು ಇನ್ನೂ ಹೆಚ್ಚು ಮಾಡಬೇಕೆಂದು ಹೇಳಿದ್ದಾರೆ. ಪ್ರತಿ ಮಂಡಲ ಪಂಚಾಯಿತಿ ಮಟ್ಟದಲ್ಲೂ ಕೂಡ ಹಾಕಬೇಕು. ನಮ್ಮ ಸರ್ಕಾರ ಬಂದ ಮೇಲೆ ಮಂಡಲ ಪಂಚಾಯಿತಿಯಿಂದ ಸುಮಾರು ನೂರು ಸೇವೆಗಳನ್ನು ಕೊಟ್ಟಿದ್ದೇವೆ. ನಾವು ಏನು ಮಾಡುತ್ತಿದ್ದೇವೆಂಬುದು ಜನರಿಗೆ ಗೊತ್ತಾಗಬೇಕು. ಜನರು ಅಲೆಯಬೇಕಾಗಿಲ್ಲ. ಇಷ್ಟು ದಿನಗಳಲ್ಲಿ ಹಿಂಬರಹವನ್ನು ಕೊಟ್ಟರೆ, ಅಷ್ಟು ದಿನಗಳಲ್ಲಿ ಸೇವೆ ಸಿಗುತ್ತದೆಂಬುದು ಜನರಿಗೆ ಗೊತ್ತಾಗಬೇಕಂಬ ಸದುದ್ದೇಶದಿಂದ ಇವರು ಈ ಪ್ರಶ್ನೆಯನ್ನು ಕೇಳಿದ್ದಾರೆ. ಪ್ರಚಾರವನ್ನು ಹೆಚ್ಚು ಮಾಡುವುದಕ್ಕೆ ಕೂಡಲೇ ಕ್ರಮ ತೆಗೆದುಕೊಳ್ಳುತ್ತೇವೆ. ನಾವು ಕೆಲಸ ಮಾಡಿದ್ದರೂ ಕೂಡ ಪ್ರಚಾರವನ್ನು ಸರಿಯಾಗಿ ತೆಗೆದುಕೊಂಡಿಲ್ಲವೆಂಬುದು ನ್ಯೂನತೆಯಾಗಿದೆ ಎಂದು ಬಂದಿರುವುದು ನಮ್ಮ ಮೇಲೆ ಆರೋಪವಿದೆ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ರುದ್ರಪ್ಪ ಆರ್. ಲಮಾಣಿ (ಮುಜರಾಯಿ ಸಚಿವರು):-** ಹೌದು ಹೌದು

**ಶ್ರೀ ಸಿದ್ಧರಾಮಯ್ಯ:-** ಅಲ್ವಾ. ಇವರ ಆರೋಪಗಳಿಗೆ ಕೂಡಲೇ ಸ್ಪಂದಿಸುತ್ತೇವೆ. ಇದು ಆಗಬಹುದು ಅಲ್ಲವೇ.

**ಉಪಸಭಾಪತಿಯವರು:-** ಧನ್ಯವಾದಗಳು.

**ಶ್ರೀ ಅಮರನಾಥ ಪಾಟೀಲ್:-** ಮಾನ್ಯ ಮುಖ್ಯ ಮಂತ್ರಿಯವರೇ ಈ ವರ್ಷ ಇವುಗಳ ಪ್ರಚಾರಕ್ಕೆ ಎಷ್ಟು ಖರ್ಚು ಮಾಡಿದ್ದೀರಾ? ಅಂದಾಜು ಎಷ್ಟು ಖರ್ಚಾಗಿರಬಹುದು?

**ಶ್ರೀ ಸಿದ್ಧರಾಮಯ್ಯ:-** ಅದಕ್ಕೆ ಎಷ್ಟು ಖರ್ಚು ಮಾಡಿದ್ದೇವೆಂದು ಅಂದಾಜು ಕೊಡೋಣ. ಕೇಂದ್ರ ಸರ್ಕಾರದವರು ಎಷ್ಟು ಖರ್ಚು ಮಾಡಿದ್ದಾರೆಂಬುದನ್ನು ನೀವು ಕೇಳಿಕೊಳ್ಳಿ. ನಾವು ಹೇಳವುದರಷ್ಟರಲ್ಲಿಯೇ ನೀವು ಕೇಳಿಕೊಂಡು ಬನ್ನಿ.

**ಶ್ರೀ ಎಂ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಸ್ವಚ್ಛ ಭಾರತ ಯೋಜನೆಯ ಪ್ರಚಾರಕ್ಕೆ ಎಷ್ಟು ಆಗುತ್ತದೆ ಎಂಬುದನ್ನು ಹೇಳಬೇಕು.

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಪ್ರಧಾನಿಯವರಾದ ನರೇಂದ್ರ ಮೋದಿಯವರು ಎಷ್ಟು ಖರ್ಚು ಮಾಡಿದ್ದಾರೆಂಬುದನ್ನು ಮಾಹಿತಿ ತೆಗೆದುಕೊಂಡು ಬನ್ನಿ. ನಾನೂ ಹೇಳುತ್ತೇನೆ. ಪೆಟ್ರೋಲ್ ಬಂಕ್‌ಗಳ ಮುಂದೆ 'ಉಜ್ವಲ' ಯೋಜನೆ ಬಗ್ಗೆ ಫಲಕಗಳನ್ನು ಹಾಕಿಕೊಂಡಿದ್ದಾರೆ. ಅವುಗಳಿಗೆ ಎಷ್ಟು ಖರ್ಚು ಮಾಡಿದ್ದಾರೆಂಬ ಮಾಹಿತಿಯನ್ನು ತೆಗೆದುಕೊಂಡು ಬನ್ನಿ.

**ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 3090**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಯವರು ಉತ್ತರವನ್ನು ಕೊಟ್ಟಿದ್ದಾರೆ. ನಾನು ಕೇಳಿರುವ ಪ್ರಶ್ನೆ ಏನೆಂದರೆ ಸರ್ಕಾರಿ ಕಛೇರಿಗಳಲ್ಲಿ ಪತ್ರ ವ್ಯವಹಾರಗಳನ್ನು ಕಡತಗಳ ವಿಲೇವಾರಿ ಅತೀ ವಿಳಂಬವಾಗಿರುವುದರೊಂದಿಗೆ ಸರ್ಕಾರದ ವ್ಯವಸ್ಥೆ ಮತ್ತು ಆಡಳಿತ ಯಂತ್ರ ಜಡ್ಡು ಗಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಮತ್ತು ಸೇವೆಗಳನ್ನು ಕೊಡುವುದಕ್ಕೆ ಸಕಾಲವನ್ನು ಯಾವ ರೀತಿ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡಿದ್ದೀರೆಂದು ಕೇಳಿದ್ದೇನೆ. ಮಾನ್ಯ ಮುಖ್ಯಮಂತ್ರಿಯವರು ಉತ್ತರವನ್ನು ಕೊಟ್ಟಿದ್ದಾರೆ. ನಾವು ಪ್ರತಿ ತಿಂಗಳು ಸಭೆ ನಡೆಸಿ ಕಡತದ ವಿಲೇವಾರಿಯನ್ನು ಮುಖ್ಯ ಕಾರ್ಯದರ್ಶಿಯವರ ನೇತೃತ್ವದಲ್ಲಿ ಮಾಡುತ್ತಿದ್ದೇವೆ. ಆದರೆ ಸಕಾಲ ಇಲಾಖೆಯ ಆಡಳಿತಾಧಿಕಾರಿ ....

**ಶ್ರೀ ಸಿದ್ದರಾಮಯ್ಯ (ಮುಖ್ಯ ಮಂತ್ರಿಗಳು):–** ನಿಮ್ಮ ಸ್ಥಾನದಿಂದ ಕೇಳಿ. ಅಲ್ಲಿಂದ ಪ್ರಶ್ನೆ ಕೇಳಬೇಡಿ. ಇಲ್ಲಿ ಬನ್ನಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಬಹಳ ಆಸೆ ಪಡಬೇಡಿ. ನಾನು ಪುನ: ಅದೇ ಸ್ಥಾನಕ್ಕೆ ಹೋಗುತ್ತೇನೆ. ಇಲ್ಲ ಇಲ್ಲ ಕೇಳಿ ಸಾರ್. ಇವತ್ತು ನನ್ನನ್ನು ಬೇರೆ ಬೇರೆ ಕಾರಣಕ್ಕಾಗಿ ಈ ಸ್ಥಾನಕ್ಕೆ ನಿಯುಕ್ತಿ ಮಾಡಿದ್ದಾರೆ. ಅದು ಅಧಿಕೃತ. ನಿಮಗೆ ಅನುಮಾನಗಳು ಬೇಡ. ಏನು ಬೇಕಾದರೂ ಆಗಿರಲಿ. ಮಾನ್ಯ ಸಭಾಪತಿಯವರೇ, ಈಗ ಸಕಾಲ ಇಲಾಖೆಯ ಆಡಳಿತ ಅಧಿಕಾರಿಯವರು ಸರ್ಕಾರದ ಮುಖ್ಯ ಅಧಿಕಾರಿಗಳಿಗೆ ಒಂದು ವರದಿಯನ್ನು ಕೊಟ್ಟು ಸಕಾಲ ಸೇವೆ ಬಹಳಷ್ಟು ಕುಂಠಿತವಾಗಿದೆ. ಸಕಾಲ ಸೇವೆಯಲ್ಲಿ ಸರಿಯಾದ ಸಮಯಕ್ಕೆ ಕಾಲಮಿತಿಯೊಳಗೆ ಸೇವೆ ಸಿಕ್ಕಿಲ್ಲ ಎನ್ನುವ ಕಾರಣಕ್ಕೋಸ್ಕರ ಮೇಲ್ಮನವಿ ಮಾಡಿದಂತಹ 42,000 ಅರ್ಜಿಗಳು ಹಾಗಿಯೇ ಕುಳಿತುಕೊಂಡಿದೆಯೆಂದು ಹೇಳಿದ್ದಾರೆ. ಹಾಗಾಗಿ ಸಕಾಲ ಸೇವೆ ವಿಚಾರದಲ್ಲಿ ಸರ್ಕಾರ ಮತ್ತಷ್ಟು ತೀವ್ರವಾದಂತಹ ಕೆಲಸಗಳನ್ನು ಮಾಡಬೇಕೆಂಬುದು ನನ್ನ ಆಗ್ರಹವಾಗಿದೆ.

(ಮುಂದು)

***(750) 15.06.2017 12.30 HV-MD***

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಮುಂದುವರೆದದ್ದು)**

ಸನ್ಮಾನ್ಯ ಸಭಾಪತಿಯವರೇ, ಸರ್ಕಾರ ಕೊಟ್ಟಿರುವ ಉತ್ತರದಲ್ಲಿ ಆ ಅಂಶಗಳನ್ನು ಉಲ್ಲೇಖ ಮಾಡಿಲ್ಲ. ಶ್ರೀ ಕೆ.ಮಥಾಯಿ, ಆಡಳಿತಾಧಿಕಾರಿ, ಸಕಾಲ ಇವರು ಸರ್ಕಾರದ ಮುಖ್ಯ ಕಾರ್ಯದರ್ಶಿಗಳಿಗೆ ಸುಮಾರು 100 ಪುಟಗಳ ವರದಿಯನ್ನು ಕೊಟ್ಟು, ‘ಸಕಾಲ ಸೇವೆ ಸಮರ್ಪಕವಾಗಿ ಆಗಿಲ್ಲ’ ಎನ್ನುವ ಮಾಹಿತಿಯನ್ನು ಕೊಟ್ಟಿದ್ದಾರೆ. ಆದ್ದರಿಂದ ಸರ್ಕಾರ ಕೊಟ್ಟಿರುವ ಉತ್ತರದಂತೆ ಸಕಾಲ ಯೋಜನೆ ಸಮರ್ಪಕವಾಗಿ ನಡೆಯುತ್ತಿಲ್ಲ. ಇದನ್ನು ಸರಿಪಡಿಸುವುದಕ್ಕೆ ಸರ್ಕಾರ ಯಾವ ಕ್ರಮ ತೆಗೆದುಕೊಂಡಿದೆ ಎನ್ನುವುದು ನನ್ನ ಪ್ರಶ್ನೆಯಾಗಿದೆ. ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಇ–ತಂತ್ರಾಂಶವನ್ನು ಯಾವ ರೀತಿಯಲ್ಲಿ ಅಳವಡಿಸಲಾಗುತ್ತದೆ ಎನ್ನುವುದರ ಬಗ್ಗೆ

“ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಮತ್ತೊಂದು ಪ್ರಶ್ನೆಯನ್ನು ಕೇಳಿದ್ದೇನೆ. ಅದಕ್ಕೆ 'ಇ-ಆಫೀಸ್ ತಂತ್ರಾಂಶವನ್ನು ಅನುಷ್ಠಾನಗೊಳಿಸುವ ಇಲಾಖೆಗಳಿಗೆ ರಾಜ್ಯ ದತ್ತ ಕೇಂದ್ರದ ಸೌಲಭ್ಯಗಳನ್ನು ಒದಗಿಸುವುದಲ್ಲದೆ ಅದಕ್ಕೆ ಪೂರಕ ಇ-ಮೇಲ್ ಐಡಿಗಳನ್ನು ಸೃಜಿಸಿ ನೀಡಲಾಗುತ್ತಿದೆ' ಎಂದು ಉತ್ತರವನ್ನು ನೀಡಲಾಗಿದೆ. ಸರ್ಕಾರ ಎಷ್ಟೇ ಹೇಳಿದರೂ ಸಹಾ ಗ್ರಾಮ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ, ಜಿಲ್ಲಾ ಕಛೇರಿ ಮತ್ತು ತಾಲ್ಲೂಕು ಕಛೇರಿಗಳಲ್ಲಿ ಇ-ತಂತ್ರಾಂಶದ ಬಳಕೆ ಆಗುತ್ತಿಲ್ಲ. ಹಾವೇರಿ ಜಿಲ್ಲೆಯಲ್ಲಿ ತಾಲ್ಲೂಕು ಕಛೇರಿಗೆ ಬೆಂಕಿ ಬಿದ್ದಂತಹ ಸಂದರ್ಭದಲ್ಲಿ ಸುಮಾರು 2000 ಕಡತಗಳು ನಾಶವಾಗಿವೆ ಎಂದು ಹೇಳುತ್ತಿದ್ದಾರೆ. ಆ ದಾಖಲೆಗಳು ಇ-ತಂತ್ರಾಂಶಕ್ಕೆ ಅಳವಡಿಕೆ ಆಗಿದ್ದರೆ, ಆ ದಾಖಲೆಗಳು ಕಂಪ್ಯೂಟರ್‌ನಲ್ಲಿ ಸಾಫ್ಟ್‌ವೇರ್ ರೂಪದಲ್ಲಿ ಇರುತ್ತಿತ್ತು. ಇವತ್ತಲ್ಲ ನಾಳೆ ನಾವು ಇ-ಆಡಳಿತಕ್ಕೆ ಹೊಂದಿಕೊಳ್ಳಬೇಕಾಗಿರುವ ಹಿನ್ನಲೆಯಲ್ಲಿ ಇ-ಆಡಳಿತವನ್ನು ಅಳವಡಿಸಿಕೊಳ್ಳುವುದಕ್ಕೆ ಇಷ್ಟೊಂದು ನಿಧಾನಗತಿ ಏಕೆ, ಇದನ್ನು ಸರಿಪಡಿಸುವುದಕ್ಕೆ ಸರ್ಕಾರ ಯಾವ ಕ್ರಮವನ್ನು ತೆಗೆದುಕೊಳ್ಳುತ್ತದೆ ಎನ್ನುವುದು ನನ್ನ ಪ್ರಶ್ನೆಯಾಗಿದೆ.

ಸನ್ಮಾನ್ಯ ಸಭಾಪತಿಯವರೇ, 2016-17ನೇ ಸಾಲಿನ ಆಯವ್ಯಯದಲ್ಲಿ ಇ-ಆಡಳಿತವನ್ನು ಸಬಲೀಕರಣಗೊಳಿಸುವುದಕ್ಕೆ 150 ಕೋಟಿ ರೂಪಾಯಿಗಳನ್ನು ಮೀಸಲಿಟ್ಟಿದ್ದೇವೆ ಎನ್ನುವ ಮಾತನ್ನು ಹೇಳಿದ್ದಾರೆ. ಆದರೆ, ಇನ್ನೂ ಕೂಡ ಆ ನಿಟ್ಟಿನಲ್ಲಿ ಯಾವುದೇ ವ್ಯವಸ್ಥೆಯಾಗಿಲ್ಲ. ಎಲ್ಲಾ ಜಿಲ್ಲಾ ಪಂಚಾಯಿತಿಗಳಲ್ಲಿ ಇ-ಆಡಳಿತವನ್ನು ತರುತ್ತೇವೆಂದು ಹೇಳಿದ್ದಾರೆ. ಆದರೆ, ಪ್ರಸ್ತುತ ಸ್ಥಿತಿಯಲ್ಲಿ ಯಾವುದೇ ಜಿಲ್ಲಾ ಪಂಚಾಯಿತಿಗಳಲ್ಲಿ ಇ-ಆಡಳಿತವನ್ನು ಸಮರ್ಪಕವಾಗಿ ಜಾರಿಗೆ ತಂದಿಲ್ಲ. ಇದೇ ಸದನದಲ್ಲಿ ಕಳೆದ ಎರಡು ವರ್ಷಗಳ ಹಿಂದೆ ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡುತ್ತಾ, 'ಸಕಾಲವನ್ನು ನಿರ್ದೇಶನಾಲಯ ಮತ್ತು ಸಚಿವಾಲಯದ ಕಡೆಗೆ ಕೊಂಡೊಯ್ಯುತ್ತೇವೆ' ಎನ್ನುವ ಮಾತನ್ನು ಹೇಳಿದ್ದರು. ಆಗಿನ ಅಧಿಕಾರಿಗಳು ಅದಕ್ಕೆ ಬೇಕಾದಂತಹ ಯೋಜನೆಗಳನ್ನು ರೂಪಿಸಿದ್ದರೂ ಸಹ ಈ ಯೋಜನೆ ಅನುಷ್ಠಾನಗೊಂಡಿಲ್ಲ. ಒಟ್ಟಾರೆ ಹೇಳುವುದಾದರೆ, ಸಕಾಲ ಯೋಜನೆಯನ್ನು ಸಮರ್ಪಕವಾಗಿ ಬಳಸುವುದಕ್ಕೆ ಇ-ಆಡಳಿತವನ್ನು ಅನುಷ್ಠಾನಗೊಳಿಸುವುದಕ್ಕೆ ಸರ್ಕಾರ ಯಾವ ಕ್ರಮವನ್ನು ಕೈಗೊಂಡಿದೆ ಎನ್ನುವುದನ್ನು ತಿಳಿಸಬೇಕೆನ್ನುವುದು ನನ್ನ ಒತ್ತಾಯವಾಗಿದೆ.

**ಶ್ರೀ ಸಿದ್ದರಾಮಯ್ಯ:-** ಸನ್ಮಾನ್ಯ ಸಭಾಪತಿಯವರೇ, ಇ-ಆಡಳಿತ ಎನ್ನುವ ಒಂದು ಇಲಾಖೆಯಿದೆ. ಅದರಲ್ಲಿ 'ಸಕಾಲ' ಮತ್ತು 'ಇ-ಆಫೀಸ್' ಎನ್ನುವುದು ಒಂದು ಕಾರ್ಯಕ್ರಮವಾಗಿದೆ. ಕಡತಗಳು ಬೇಗ ವಿಲೇವಾರಿಯಾಗಬೇಕು ಮತ್ತು ಕೆಲಸಗಳು ಪಾರದರ್ಶಕವಾಗಿ ಮತ್ತು ಭ್ರಷ್ಟಾಚಾರ ಮುಕ್ತವಾಗಬೇಕು ಎನ್ನುವುದು ಇದರ ಉದ್ದೇಶವಾಗಿದೆ. ಏಕೆಂದರೆ ಭ್ರಷ್ಟಾಚಾರ ಎನ್ನುವುದು ಕೇವಲ ಹಣವನ್ನು ಲಂಚದ ರೂಪದಲ್ಲಿ ತೆಗೆದುಕೊಳ್ಳುವುದು ಮಾತ್ರವಲ್ಲ ವಿಳಂಬ ನೀತಿ ಅನುಸರಿಸುವುದು ಸಹ ಭ್ರಷ್ಟಾಚಾರವಾಗುತ್ತದೆ. ಒಂದೊಂದು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕಡತಗಳನ್ನು ಎರಡು ಮೂರು ವರ್ಷಗಳಷ್ಟು ವಿಳಂಬವಾಗಿ ವಿಲೇವಾರಿ ಮಾಡುವುದು ಸಹ ಒಂದು ರೀತಿಯಲ್ಲಿ ಭ್ರಷ್ಟಾಚಾರವಾಗಿದೆ. ಕಡತಗಳ ವಿಲೇವಾರಿಯಲ್ಲಿ ವಿಳಂಬವಾಗಬಾರದು ಎನ್ನುವ ಉದ್ದೇಶದಿಂದ ಸರ್ಕಾರ 'ಸಕಾಲ' ಯೋಜನೆಯನ್ನು ಜಾರಿಗೆ ತಂದಿದೆ. ಸುಮಾರು 63 ಇಲಾಖೆಗಳಲ್ಲಿ 765 ಸೇವೆಗಳನ್ನು 'ಸಕಾಲ' ಯೋಜನೆಯಡಿ ತರಲಾಗಿದೆ. 'ಸಕಾಲ' ಯೋಜನೆ ಬಹಳ ಪರಿಣಾಮಕಾರಿಯಾಗಿ ಆಗುತ್ತಿದೆ ಎಂದು ನಾನು ಹೇಳುತ್ತಿಲ್ಲ. ಮಾನ್ಯ ಸದಸ್ಯರು 'ಸರ್ಕಾರಿ ಕಛೇರಿಗಳಲ್ಲಿ ಪತ್ರ ವ್ಯವಹಾರಗಳು, ಕಡತ ವಿಲೇವಾರಿ ಅತೀ ವಿಳಂಬವಾಗಿರುವುದರೊಂದಿಗೆ ಸರ್ಕಾರಿ ವ್ಯವಸ್ಥೆ ಮತ್ತು ಆಡಳಿತ ಯಂತ್ರ ಜಡ್ಡುಗಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ' ಎನ್ನುವ ಪ್ರಶ್ನೆಯನ್ನು ಕೇಳಿದ್ದಾರೆ. ಆಡಳಿತ ಯಂತ್ರ ಜಡ್ಡುಗಟ್ಟಿಲ್ಲವೆಂದು ಅವರಿಗೆ ಹೇಳಬಯಸುತ್ತಿದ್ದೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಸನ್ಮಾನ್ಯ ಸಭಾಪತಿಯವರೇ, ನಾನು ಕೇಳಿರುವುದು ಆಡಳಿತ ಜಡ್ಡುಗಟ್ಟಿದೆ ಎಂದು. ಅದಕ್ಕೆ ಮಾನ್ಯ ಮುಖ್ಯಮಂತ್ರಿಗಳು ಉತ್ತರವನ್ನು ಸರಿಯಾಗಿ ನೀಡಿಲ್ಲ. ಈಗ ಅದಕ್ಕೆ ಉತ್ತರವನ್ನು ಕೊಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ.

**ಶ್ರೀ ಸಿದ್ದರಾಮಯ್ಯ:-** ಸನ್ಮಾನ್ಯ ಸಭಾಪತಿಯವರೇ, ಆಡಳಿತ ಜಡ್ಡುಗಟ್ಟಿಲ್ಲ, ಜಡ್ಡುಗಟ್ಟುವುದಕ್ಕೂ ಸಾಧ್ಯವಿಲ್ಲ. ಕಡತಗಳ ವಿಲೇವಾರಿಯಲ್ಲಿ ವಿಳಂಬವಾಗಬಾರದು ಎನ್ನುವ ದೃಷ್ಟಿಯಿಂದ 'ಸಕಾಲ' ಮತ್ತು 'ಇ-ಆಫೀಸ್' ಯೋಜನೆಗಳನ್ನು ಜಾರಿಗೆ ತರಲಾಗಿದೆ. ಇವುಗಳನ್ನು ಇನ್ನೂ ಹೆಚ್ಚು ಪರಿಣಾಮಕಾರಿಯನ್ನಾಗಿ ಮಾಡಬೇಕೆನ್ನುವುದು ನಮ್ಮ ಉದ್ದೇಶವಾಗಿದೆ. ಕಾಗದ ಪತ್ರಗಳನ್ನು ಬಳಕೆ ಮಾಡಿಕೊಳ್ಳದೇ ಕಡತಗಳನ್ನು ವಿಲೇವಾರಿ ಮಾಡುವುದಕ್ಕೆ 'ಇ-ಆಫೀಸ್' ಯೋಜನೆಯನ್ನು ಜಾರಿಗೆ ತರಲಾಗಿದೆ. ಈ ಯೋಜನೆಯನ್ನು 10 ಇಲಾಖೆಗಳಲ್ಲಿ ಜಾರಿಗೆ ತರಲಾಗಿದೆ. ಹಂತಹಂತವಾಗಿ ಉಳಿದ ಇಲಾಖೆಗಳಿಗೂ ಅನ್ವಯಿಸಲಾಗುತ್ತದೆ. ಮಾನ್ಯ ಸದಸ್ಯರು ಎರಡು ವರ್ಷಗಳ ಹಿಂದೆ 'ಸಕಾಲವನ್ನು ನಿರ್ದೇಶನಾಲಯ ಮತ್ತು ಸಚಿವಾಲಯದ ಕಡೆಗೆ ಕೊಂಡ್ಯೊಯುತ್ತೇವೆ ಎನ್ನುವ ಮಾತನ್ನು ಹೇಳಿದ್ದರು. ಆದರೆ, ಇನ್ನೂ ಯಾವುದೇ ಕ್ರಮ ಜರುಗಿಸಿರುವುದಿಲ್ಲ' ಎಂದು ಹೇಳುತ್ತಿದ್ದಾರೆ. ನಾನು ಎಲ್ಲ ಕಛೇರಿಗಳಲ್ಲಿ ಒಟ್ಟಿಗೆ ಈ ವ್ಯವಸ್ಥೆಯನ್ನು ಜಾರಿಗೆ ತರುತ್ತೇನೆಂದು ಹೇಳಿಲ್ಲ. ಈ ಯೋಜನೆಯನ್ನು ಹಂತಹಂತವಾಗಿ ಸಚಿವಾಲಯ ಮತ್ತು ನಿರ್ದೇಶನಾಲಯಗಳಿಗೂ ಅನ್ವಯಿಸುತ್ತೇನೆಂದು ಹೇಳಿದ್ದೇನೆ.

ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರ ಕಾಳಜಿಯನ್ನು ಅರ್ಥ ಮಾಡಿಕೊಂಡು ಹಂತಹಂತವಾಗಿ ಇದನ್ನು ಪರಿಣಾಮಕಾರಿಯಾಗಿ ಜಾರಿಗೆ ತರುವುದಕ್ಕೆ ಪ್ರಯತ್ನ ಮಾಡುತ್ತೇವೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಸನ್ಮಾನ್ಯ ಸಭಾಪತಿಯವರೇ, ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಇ–ಆಡಳಿತವನ್ನು ಜಾರಿಗೆ ತರಲು ಸರ್ಕಾರ ನಿರ್ದೇಶನವನ್ನು ನೀಡಲಾಗುತ್ತದೆಯೇ ಎನ್ನುವುದು ನನ್ನ ಪ್ರಶ್ನೆಯಾಗಿದೆ.

**ಶ್ರೀ ಸಿದ್ದರಾಮಯ್ಯ:–** ಸನ್ಮಾನ್ಯ ಸಭಾಪತಿಯವರೇ, ಈ ಯೋಜನೆಯನ್ನು ಪಂಚಾಯಿತಿ ಮಟ್ಟಕ್ಕೂ ತೆಗೆದುಕೊಂಡು ಹೋಗಬೇಕೆನ್ನುವುದು ನಮ್ಮ ಉದ್ದೇಶವಾಗಿದೆ. ಅದಕ್ಕಾಗಿ ಪಂಚಾಯಿತಿ ಮಟ್ಟದಲ್ಲಿ ಸುಮಾರು 100 ಸೇವೆಗಳನ್ನು ಈ ಯೋಜನೆಯ ವ್ಯಾಪ್ತಿಗೆ ತರಲಾಗಿದೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಗಳು ಉಲ್ಲೇಖ ಮಾಡುತ್ತಿರುವಂತಹ 100 ಸೇವೆಗಳನ್ನು ಇ–ಆಡಳಿತದ ಅಡಿಯಲ್ಲಿ ತಂದಿರುವುದಲ್ಲ. ಬಾಪೂಜಿ ಸೇವಾ ಕೇಂದ್ರಗಳ ಮೂಲಕ ಪಂಚಾಯಿತಿಗೆ ಕೊಡುವಂತಹ ವ್ಯವಸ್ಥೆಯಾಗಿದೆ.

**ಶ್ರೀ ಸಿದ್ದರಾಮಯ್ಯ:–** ಸನ್ಮಾನ್ಯ ಸಭಾಪತಿಯವರೇ, ಸೇವೆಗಳು ಆದಷ್ಟು ಶೀಘ್ರವಾಗಿ ಜನಗಳಿಗೆ ಮುಟ್ಟುವಂತಾಗಬೇಕು, ಕಡತಗಳ ವಿಲೇವಾರಿ ಪಾರದರ್ಶಕವಾಗಿ ಮತ್ತು ಭ್ರಷ್ಟಾಚಾರ ಮುಕ್ತವಾಗಿರಬೇಕೆನ್ನುವುದೇ ನಮ್ಮೆಲ್ಲರ ಉದ್ದೇಶವಾಗಿದೆ. ಇದನ್ನು ಮಾಡುವಂತಹ ಪ್ರಯತ್ನ ಮಾಡುತ್ತಿದ್ದೇವೆ.

**ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ:3106**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಪ್ರದೀಪ ಶೆಟ್ಟರ್:–** ಸನ್ಮಾನ್ಯ ಸಭಾಪತಿಯವರೇ, ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಪಾಲಿಕೆ ಒಡೆತನದ ಒಟ್ಟು 2,718 ಜಾಗಗಳನ್ನು ಬಾಡಿಗೆ ನೀಡಿದ್ದು, ಈ ಕಟ್ಟಡಗಳಿಂದ ಯಾವುದೇ ಭೂಬಾಡಿಗೆಯನ್ನು ವಸೂಲಿ ಮಾಡಲಾಗುತ್ತಿಲ್ಲ. ಸರ್ಕಾರವೇ ಬಾಡಿಗೆಯನ್ನು ವಸೂಲಿ ಮಾಡಬಾರದೆಂದು ಆದೇಶ ಮಾಡಿದ್ದು, ಸರ್ಕಾರಿ ಜಾಗಗಳಿಗೆ ಭೂಬಾಡಿಗೆಯನ್ನು ವಸೂಲಿ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ ಹಾಗೂ ಪಾಲಿಕೆಯ ವ್ಯಾಪ್ತಿಯಲ್ಲಿ ಉದ್ಯಾನವನಕ್ಕೆಂದು ಮೀಸಲಾಗಿಟ್ಟಿದ್ದ ಅನೇಕ ಆಸ್ತಿಗಳನ್ನು ಅತಿಕ್ರಮಿಸಲಾಗಿದೆ. ಈ ಕುರಿತು ಅನೇಕ ಬಾರಿ ಪತ್ರಿಕೆಗಳಲ್ಲಿ ವರದಿ ಪ್ರಕಟವಾಗಿದ್ದರೂ ಸಹ ಸರ್ಕಾರ ಇಲ್ಲಿಯವರೆಗೆ ಯಾವುದೇ ಕ್ರಮವನ್ನು ಜರುಗಿಸಿರುವುದಿಲ್ಲ. ಉದಾಹರಣೆಗೆ ಹೇಳಬೇಕಾದರೆ, ಹುಬ್ಬಳ್ಳಿಯ ನವನಗರದಲ್ಲಿರುವ ಪಂಚಾಕ್ಷರ ಉದ್ಯಾನವನ, ಶಿರೂರೂ ಪಾರ್ಕ್ ಹತ್ತಿರ ಇರುವಂತಹ ಉದ್ಯಾನವನ ಮತ್ತು ರಾಜಧಾನಿ ಕಾಲೋನಿಯಲ್ಲಿರುವ ಗ್ರೀನ್

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಗಾರ್ಡನ್‌ಗಳನ್ನು ಅತಿಕ್ರಮಿಸಿಕೊಂಡು ಸಣ್ಣ ಸಣ್ಣ ಗುಡಿಸಲುಗಳನ್ನು ಕಟ್ಟಿಕೊಂಡಿದ್ದಾರೆ. ದೊಡ್ಡ ದೊಡ್ಡ ಶ್ರೀಮಂತರು ಮತ್ತು ಹೌಸಿಂಗ್ ಸೊಸೈಟಿಗಳು ಈ ಜಾಗವನ್ನು ಅತಿಕ್ರಮಿಸಿಕೊಂಡಿವೆ. ಸರ್ಕಾರ ಈ ಗುಡಿಸಲುಗಳನ್ನು ತೆರವುಗೊಳಿಸುವುದರ ಜೊತೆಗೆ ಈ ಅತಿಕ್ರಮಣಕಾರರನ್ನು ಸಹ ತೆರವುಗೊಳಿಸುತ್ತದೆಯೇ ಎನ್ನುವುದು ನನ್ನ ಪ್ರಶ್ನೆಯಾಗಿದೆ.

ಸನ್ಮಾನ್ಯ ಸಭಾಪತಿಯವರೇ, ರಾಜ್ಯದ 8 ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಬರುವಂತಹ ಉದ್ಯಾನವನಗಳಲ್ಲಿ ಅನಧಿಕೃತವಾಗಿ ನಿರ್ಮಾಣವಾಗಿರುವ ಕಟ್ಟಡ ಹಾಗೂ ಒತ್ತುವರಿಯನ್ನು 30 ದಿನಗಳೊಳಗಾಗಿ ತೆರವುಗೊಳಿಸಬೇಕೆಂದು ವಿಧಾನ ಸಭೆಯ 'ಸ್ಥಳೀಯ ಸಂಸ್ಥೆ ಹಾಗೂ ಪಂಚಾಯತ್‌ರಾಜ್ ಸಂಸ್ಥೆಗಳ ಸಮಿತಿ' ಶಿಫಾರಸ್ಸು ಮಾಡಿದೆ. 'ರಾಜ್ಯದಲ್ಲಿರುವ ಮಹಾನಗರಪಾಲಿಕೆ ಹಾಗೂ ಇತರ ನಗರ ಮತ್ತು ಸ್ಥಳೀಯ ಸಂಸ್ಥೆಗಳಲ್ಲಿರುವ ಉದ್ಯಾನವನಗಳ ಪೂರ್ಣ ಪಟ್ಟಿಯನ್ನು ಲೆಕ್ಕ ಪರಿಶೋಧಕರಿಗೆ ನೀಡಿಲ್ಲ. ಅದೇ ರೀತಿಯಲ್ಲಿ ಅನಧಿಕೃತ ಕಟ್ಟಡಗಳನ್ನು ತೆರವುಗೊಳಿಸುವುದಕ್ಕೆ ಯಾವುದೇ ಕ್ರಮವನ್ನೂ ಕೈಗೊಳ್ಳಲಾಗಿಲ್ಲ' ಎಂದು ಸಿ.ಎ.ಜಿ. ವರದಿಯಲ್ಲಿ ಹೇಳಲಾಗಿದೆ. ಆದರೆ, ಸಿ.ಎ.ಜಿ. ವರದಿ ಬಂದ ನಂತರವೂ ಪಾಲಿಕೆಯ ಅಧಿಕಾರಿಗಳು ಕ್ರಮ ಕೈಗೊಂಡಿಲ್ಲ. ಈ ಬಗ್ಗೆ ತಕ್ಷಣ ಕ್ರಮ ಕೈಗೊಳ್ಳಬೇಕೆಂದು ಶ್ರೀ ಮನೋಹರ್ ತಹಸೀಲ್ದಾರ್‌ರವರ ನೇತೃತ್ವದ ವಿಧಾನಸಭೆಯ ಸಮಿತಿಯು ಶಿಫಾರಸ್ಸು ಮಾಡಿದೆ. ನಾನು ಕೇಳಿರುವ ಪ್ರಶ್ನೆಗೆ ಮಾನ್ಯ ಸಚಿವರು, 'ಕೆಲವು ಕಡೆಗಳಲ್ಲಿ ಅತಿಕ್ರಮಣವಾಗಿದೆ, ಕೆಲವು ಕಡೆಗಳಲ್ಲಿ ಅತಿಕ್ರಮಣವಾಗಿಲ್ಲ' ಎನ್ನುವ ಉತ್ತರವನ್ನು ನೀಡಿದ್ದಾರೆ. 'ಭೂಬಾಡಿಗೆ ನೀಡಲಾಗಿರುವ 319 ಜಾಗಗಳ ಸರ್ವೆ ಕಾರ್ಯವನ್ನು ಪೂರ್ಣಗೊಳಿಸಲಾಗಿದೆ. ಈ ಪೈಕಿ ಯಾವುದೇ ಜಾಗಗಳು ಅತಿಕ್ರಮಣವಾಗಿರುವುದು ಕಂಡು ಬಂದಿರುವುದಿಲ್ಲ' ಎಂದು ಉತ್ತರದಲ್ಲಿ ತಿಳಿಸಿದ್ದಾರೆ. ಆದರೆ, ಅಲ್ಲಿ ಸಾಕಷ್ಟು ಪ್ರಮಾಣದಲ್ಲಿ ಅತಿಕ್ರಮಣ ನಡೆಯುತ್ತಿದೆ. ಮಾನ್ಯ ಮನೋಹರ್ ತಹಸೀಲ್ದಾರ್‌ರವರ ನೇತೃತ್ವದ ಸಮಿತಿ 'ಇಷ್ಟು ಪ್ರಮಾಣದಲ್ಲಿ ಅತಿಕ್ರಮಣವಾಗಿದೆ, ಅವರ ಮೇಲೆ ಕ್ರಮ ತೆಗೆದುಕೊಳ್ಳಿ' ಎಂದು ಸರ್ಕಾರಕ್ಕೆ ವರದಿಯನ್ನು ನೀಡಿದೆ.

**ಶ್ರೀ ಆರ್.ರೋಷನ್ ಬೇಗ್:-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿರುವ ವಿಚಾರಕ್ಕೆ 'ಮಹಾನಗರ ಪಾಲಿಕೆಯ ಬಳಿ ಎಷ್ಟು ಆಸ್ತಿಗಳು ಇದೆ, ಎಷ್ಟು ಜಾಗವನ್ನು ಬಾಡಿಗೆಗೆ ಕೊಟ್ಟಿದ್ದೇವೆ, ಎಷ್ಟು ಜಾಗವನ್ನು ಲೀಸ್‌ಗೆ ಕೊಟ್ಟಿದ್ದೇವೆ, ಖುಲ್ಲಾ ಜಾಗ ಎಷ್ಟಿದೆ ಯಾವ ಆಸ್ತಿಗಳು ಯಾವಯಾವ ವಲಯದಲ್ಲಿ ಬರುತ್ತವೆ' ಎನ್ನುವುದಕ್ಕೆ ಸಂಬಂಧಪಟ್ಟಂತೆ ಲಿಖಿತ ರೂಪದಲ್ಲಿ ಉತ್ತರವನ್ನು ನೀಡಲಾಗಿದೆ. ಎಲ್ಲೆಲ್ಲಿ ಅತಿಕ್ರಮಣ ನಡೆದಿದೆ ಎನ್ನುವುದನ್ನು ಸಹ ನಾವು ಉತ್ತರದಲ್ಲಿ ನೀಡಿದ್ದೇವೆ. ಈಗ ನಾವು ಸರ್ವೆ ಕಾರ್ಯವನ್ನು ಪ್ರಾರಂಭ ಮಾಡಿದ್ದೇವೆ. 1025 ಖುಲ್ಲಾ ಜಾಗದಲ್ಲಿ ಸರ್ವೆ ಕಾರ್ಯ ಪ್ರಗತಿಯಲ್ಲಿರುತ್ತದೆ. ಸಿ.ಎ.ಜಿ. ವರದಿ ಮತ್ತು ಮಾನ್ಯ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಮನೋಹರ್ ತಹಸೀಲ್ದಾರ್‌ರವರ ಅಧ್ಯಕ್ಷತೆಯ ಸಮಿತಿಯು ನೀಡಿರುವ ವರದಿಯ ಆಧಾರದ ಮೇಲೆ ಕ್ರಮ ತೆಗೆದುಕೊಳ್ಳಲಾಗುತ್ತಿದೆ. ನಮ್ಮ ಇಲಾಖೆಯಲ್ಲಿ ಮೋಜಣಿದಾರರು ಇಲ್ಲ. ಮೋಜಣಿದಾರರನ್ನು ಕೊಡಿ ಎಂದು ಕಂದಾಯ ಇಲಾಖೆಯವರಲ್ಲಿ ಮನವಿ ಮಾಡಿಕೊಂಡಿದ್ದೇವೆ.

(ಮುಂದು)

***(751) 15.06.17, 12.40, TCH/AK***

**ಶ್ರೀ ಆರ್.ರೋಷನ್‌ಬೇಗ್(ಮುಂದು)**

ನಾವು ಆದಷ್ಟು ಬೇಗ ಯಾವ ಯಾವ ಜಾಗಗಳು ಒತ್ತುವರಿಯಾಗಿದೆ ಅದನ್ನು ಸರ್ವೇ ಮಾಡಿಸಲಾಗುವುದೆಂದು ಮಾನ್ಯ ಸದಸ್ಯರಿಗೆ ಆಶ್ವಾಸನೆಯನ್ನು ಕೊಡುತ್ತೇವೆ. ಉದ್ಯಾನವನ ಮತ್ತು ಖಾಲಿ ಜಾಗಗಳು ಎಷ್ಟು ಒತ್ತುವರಿಯಾಗಿದೆ ಅದನ್ನು ಕೂಡ ನಾವು ರಕ್ಷಣೆ ಮಾಡುತ್ತೇವೆ. ಸಾಕಷ್ಟು ಆಸ್ತಿಗಳು ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಬರುವ, ಬ್ರಿಟೀಷ್‌ರ ಕಾಲದಲ್ಲಿ ಸುಮಾರು 100 ಆಸ್ತಿಗಳನ್ನು 999 ವರ್ಷಗಳಿಗೆ lease ಗೆ ಕೊಡಲಾಗಿದೆ ಎಂದು ಪಟ್ಟಿ ಕೊಟ್ಟಿದ್ದಾರೆ. ಸುಮಾರು 700 ಆಸ್ತಿಗಳನ್ನು private individuals ಗೆ ಮಹಾನಗರ ಪಾಲಿಕೆಯವರು ಸರ್ಕಾರ ಅನುಮತಿ ಪಡೆದು ಮಾರಾಟ ಮಾಡಿದ್ದಾರೆ. ಈಗ ನಾವು ಎಲ್ಲಾ ಆಸ್ತಿಗಳನ್ನು ಸರ್ವೇ ಮಾಡಿ, ತಕ್ಷಣವೇ ಕ್ರಮ ತೆಗೆದುಕೊಳ್ಳುತ್ತೇವೆಂದು ನಾನು ಆಶ್ವಾಸನೆಯನ್ನು ಕೊಡುತ್ತೇನೆ.

**ಶ್ರೀ ಪದೀಪ್ ಶೆಟ್ಟರ್:–** ಮಾನ್ಯ ಸಭಾಪತಿಯವರೆ, ಒಂದು ಕೊನೆಯ ಪ್ರಶ್ನೆ ಏನೆಂದರೆ, ಈ 21ನೇ ತಾರೀಖಿಗೆ ತಾವು ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆಯ ಅಭಿವೃದ್ಧಿ ಬಗ್ಗೆ ಒಂದು ಸಭೆಯನ್ನು ಕರೆದಿದ್ದಾರೆ. ಇದು ಮಾನ್ಯ ಸಚಿವರ ಗಮನಕ್ಕೂ ಬಂದಿರಬಹುದು. ಅಲ್ಲಿ ಎಲ್ಲಾ ಅಧಿಕಾರಿಗಳು ಇರುತ್ತಾರೆ. ಆ ಸಭೆಯಲ್ಲಿ ಅತಿಕ್ರಮಣವಾಗಿರುವ ಜಾಗಗಳ ಬಗ್ಗೆ ಚರ್ಚೆ ಮಾಡಿ ಬಗೆಹರಿಸಬಹುದು.

**ಶ್ರೀ ಆರ್.ರೋಷನ್‌ಬೇಗ್:–** ಮಾನ್ಯ ಸಭಾಪತಿಯವರೆ, 21ನೇ ತಾರೀಖಿನ ಸಭೆಗೆ ತಾವೂ ಬನ್ನಿ. ನಾವೆಲ್ಲಾ ಕುಳಿತು ಚರ್ಚೆ ಮಾಡೋಣ.

**ಚುಕ್ಕೆ ಪ್ರಶ್ನೆ ಸಂಖ್ಯೆ: 3139**
**(ಉತ್ತರವನ್ನು ಲಗತ್ತಿಸಿದೆ)**

“ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**ಶ್ರೀಮತಿ ಮೋಟಮ್ಮ:-** ಮಾನ್ಯ ಸಭಾಪತಿಯವರೆ, ನಾನು ಪ್ರಶ್ನೆ ಕೇಳಿರುವುದು, ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯವರು ಮೂಡಿಗೆರೆ ಪಟ್ಟಣ ಪಂಚಾಯಿತಿಗೆ ಈ ಒಂದು ಯೋಜನೆಯನ್ನು ತಯಾರು ಮಾಡಿ, ಅದನ್ನು ಅನುಮೋದನೆ ಮಾಡಿದ್ದಾರೆಯೇ ಎಂದು ಕೇಳಿದ್ದೇನೆ. ಅದಕ್ಕೆ ಭೂಮಿ ಲಭ್ಯವಾಗಿಲ್ಲ. ಆದುದರಿಂದ ಅದನ್ನು ಕೈಗೆತ್ತಿಕೊಂಡಿಲ್ಲ ಎನ್ನುವಂತಹ ಮಾತನ್ನು ಹೇಳಿದ್ದಾರೆ. ಭೂಮಿ ಲಭ್ಯವಾಗಬೇಕಾದರೆ ನೀವು ಒತ್ತಡ ಹೇರಿದರೆ, ಆ ಪಟ್ಟಣ ಪಂಚಾಯಿತಿಯವರು ಅದಕ್ಕೆ ಬೇಕಾದಂತಹ ಭೂಮಿಯನ್ನು ಒದಗಿಸಿಕೊಡುವುದಕ್ಕೆ ಮುಂದಾಗುತ್ತಾರೆ. ಆದರೆ, ನೀವು ಒಳಚರಂಡಿ ವ್ಯವಸ್ಥೆಯನ್ನು ಮಾಡುತ್ತೀರಾ ಅಥವಾ ಇಲ್ಲವೇ ಎನ್ನುವುದನ್ನು ಅವರಿಗೆ ದೃಢೀಕರಿಸಬೇಕಾಗುತ್ತದೆ. ಎರಡನೆಯದಾಗಿ, ಈ ಪಟ್ಟಣಕ್ಕೆ ಕೊಳಚೆ ಸಂಸ್ಕರಣ ಘಟಕ ಮತ್ತು ವೆಟ್ ವೆಲ್ಸ್, ಸೆಪ್ಟಿಕ್ ಟ್ಯಾಂಕ್ ಇದಕ್ಕೂ ಕೂಡ ಭೂಮಿಯನ್ನು ಒದಗಿಸಿರುವುದಿಲ್ಲ, ಅದಕ್ಕೆ ಅಗತ್ಯವಾದ ಭೂಮಿಯನ್ನು ಒದಗಿಸಿದರೆ ನಾವು ವ್ಯವಸ್ಥೆ ಮಾಡುತ್ತೇವೆಂದು ಹೇಳಿದ್ದೀರಿ. ಆದುದರಿಂದ ದಯಮಾಡಿ ಮೂಡಿಗೆರೆ ಪಟ್ಟಣ ಪಂಚಾಯಿತಿಗೆ ಅವುಗಳ ಅಗತ್ಯ ಇದೆ. ನೀವು ಒಂದಷ್ಟು ಅವರಿಗೆ ಒತ್ತಡವನ್ನು ಹಾಕಿದರೆ, ಪಟ್ಟಣ ಪಂಚಾಯಿತಿಯವರು ಭೂಮಿಯನ್ನು ಒದಗಿಸಲು ಸಾಧ್ಯವಾಗುತ್ತದೆ. ಅದನ್ನು ಮಾನ್ಯ ಸಚಿವರು ಮಾಡಿಸಿಕೊಡಬೇಕೆಂದು ನಾನು ತಮ್ಮ ಮೂಲಕ ಒತ್ತಾಯಿಸುತ್ತೇನೆ.

**ಶ್ರೀ ಆರ್.ರೋಷನ್ ಬೇಗ್:-** ಮಾನ್ಯ ಸಭಾಪತಿಯವರೆ, ನಾವು ಅಲ್ಲಿ ಸರ್ಕಾರದ ವತಿಯಿಂದ UGD (Underground Drainage) ಕೆಲಸವನ್ನು ಪ್ರಾರಂಭ ಮಾಡಬೇಕೆಂದು ಈಗಾಗಲೇ ಒಂದು D.P.R. (Detailed Project Report) ಸಿದ್ದಗೊಳಿಸಿದ್ದೇವೆ. ಆ ಪ್ರಕಾರ ಸುಮಾರು 35 ಕೋಟಿ ರೂಪಾಯಿಗಳ ವೆಚ್ಚದಲ್ಲಿ ನಾವು ಖರ್ಚು ಮಾಡುವುದಕ್ಕೆ, ಬೋರ್ಡ್‌ನವರು ಡಿ.ಪಿ.ಆರ್. ಸಿದ್ದಗೊಳಿಸಿದ್ದಾರೆ. ಅದರಲ್ಲಿ ಸುಮಾರು 2300 ಮ್ಯಾನ್‌ಹೋಲ್ಸ್, sewerage lines, 100 MLD STP ಅದನ್ನೆಲ್ಲಾ ಸಿದ್ಧಗೊಳಿಸುವಂಥದ್ದನ್ನು ನಾವು ಮಾಡಿಕೊಂಡಿದ್ದೇವೆ. ನಾನು ಮಾನ್ಯ ಶ್ರೀಮತಿ ಮೋಟಮ್ಮನವರಿಗೆ ಆಶ್ವಾಸನೆ ಕೊಡುತ್ತೇನೆ. ಅವರು ಸ್ವಲ್ಪ ಪ್ರಭಾವ ಬಳಸಿ ಜಾಗವನ್ನು ಕೊಡಿಸಿದರೆ, ನಾವು ಕೆಲಸವನ್ನು ತಕ್ಷಣವೇ ಪ್ರಾರಂಭ ಮಾಡುತ್ತೇವೆ. ಈಗಾಗಲೇ ಡಿ.ಪಿ.ಆರ್. ಸಿದ್ದಗೊಂಡಿದೆ. UGD ನಾವು ಮಾಡುತ್ತೇವೆ.

**ಚುಕ್ಕೆ ಪ್ರಶ್ನೆ ಸಂಖ್ಯೆ: 2362**
**(ಉತ್ತರವನ್ನು ಲಗತ್ತಿಸಿದೆ)**

**ಶ್ರೀ ಸುನೀಲ್ ಸುಬ್ರಮಣಿ ಎಂ.ಪಿ:-** ಮಾನ್ಯ ಸಭಾಪತಿಯವರೆ, ಮಾನ್ಯ ಗೃಹ ಸಚಿವರು ಲಿಖಿತ ಉತ್ತರವನ್ನು ಒದಗಿಸಿದ್ದಾರೆ. ಆದರೆ, ಅದು 2006ನೇ ಇಸವಿಯಲ್ಲಿ ನಡೆದಂತಹ ಘಟನೆಗೆ ಸಂಬಂಧಪಟ್ಟಿರುತ್ತದೆ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನಾನು ಕುಟ್ಟ ಗ್ರಾಮಪಂಚಾಯಿತಿಗೆ ಭೇಟಿ ಕೊಟ್ಟಂತಹ ಸಂದರ್ಭದಲ್ಲಿ, ಅಲ್ಲಿನ ಸಾರ್ವಜನಿಕರ ದೂರಿನ ಮೇಲೆ, ಆ ಕುಟ್ಟ ಗ್ರಾಮದ ಗಡಿ ಭಾಗ, ಸಿ.ಸಿ ಟಿವಿಯನ್ನು ಅಳವಡಿಸಲಾಗಿದೆ ಎಂದು ಮಾನ್ಯ ಸಚಿವರು ಉತ್ತರದಲ್ಲಿ ಕೊಟ್ಟಿದ್ದಾರೆ. ಪೊಲೀಸ್ ಠಾಣೆ ಪಕ್ಕದಲ್ಲಿ ಮೂರು ಸಿ.ಸಿ.ಟಿವಿಯನ್ನು ಅಳವಡಿಸಲಾಗಿದೆ. ಅಲ್ಲಿಂದ ಎರಡು ಕಿಲೋ ಮೀಟರ್ ದೂರದಲ್ಲಿ Tolpatti ಇದೆ. ಕೊಡಗಿನ ಗಡಿ ಭಾಗ. ಅದು ನಮ್ಮ ಮಾನ್ಯ ಜಾರ್ಜ್ ಸಾಹೇಬರಿಗೆ ಗೊತ್ತಿರುತ್ತದೆ. ಅಲ್ಲಿ ಯಾವುದೇ ಸಿ.ಸಿ.ಟಿವಿಗಳು ಇರುವುದಿಲ್ಲ. ಅವರೆಲ್ಲಾ ಕೇರಳದಿಂದ ಬರತಕ್ಕಂಥವರು, ಏಕೆಂದರೆ ಅಲ್ಲಿ ಸೀಮಿತ ಸಂಖ್ಯೆಯ ಲಿಕ್ಕರ್ ಶಾಪ್ ಇರುವುದರಿಂದ ಕುಟ್ಟ ಗ್ರಾಮಕ್ಕೆ ಕುಡಿಯುವುದಕ್ಕೆ ಬರುತ್ತಾರೆ. ಇದರಿಂದ ಕರ್ನಾಟಕಕ್ಕೆ ರೆವೆನ್ಯೂ ಆಗುತ್ತದೆ, ಸಂತೋಷ. ಆದರೆ, ಅವರು ಬರತಕ್ಕಂಥ ಸಂದರ್ಭದಲ್ಲಿ ಜೀಪುಗಳು ಅತಿವೇಗವಾಗಿ ಬರುತ್ತವೆ. ಹಾಗಾಗಿ, ಅಲ್ಲಿಯ ಪೊಲೀಸ್ ಠಾಣೆಗೆ ಮಾನ್ಯ ಸಚಿವರು ಒಂದು ಸೂಚನೆಯನ್ನು ಕೊಡಬೇಕು. ಅಲ್ಲಿ ಅತಿವೇಗವಾಗಿ ಬರತಕ್ಕಂಥವರ ವಿರುದ್ಧ ಒಂದು ಪ್ರಕರಣ ದಾಖಲಿಸುವಂತೆ ಮಾಡಿದರೆ ಬಹಳ ಒಳ್ಳೆಯದಾಗುತ್ತದೆ. ಇಲ್ಲವೆಂದರೆ ಕಾನೂನು ರೀತಿಯಲ್ಲಿ ಅಲ್ಲಿ ತೊಂದರೆಯಾಗುತ್ತದೆ. ಅದಕ್ಕೆ ಕ್ರಮ ತೆಗೆದುಕೊಳ್ಳಬೇಕು. ಅದರ ಜೊತೆಗೆ ರಾತ್ರೋರಾತ್ರಿ ಅಲ್ಲಿಗೆ ಬರತಕ್ಕಂತಹವರು ರಾತ್ರಿ ವೇಳೆಯಲ್ಲಿ ಚೀಲಗಳಲ್ಲಿ ಕೆಲವು ತ್ಯಾಜ್ಯಗಳನ್ನು ತಂದು ಹಾಕುತ್ತಿದ್ದಾರೆ. ಅದಕ್ಕೆ ಪೊಲೀಸ್ ಠಾಣೆಗೆ ಕಟ್ಟುನಿಟ್ಟಿನ ಸೂಚನೆ ಕೊಡಬೇಕೆಂದು ಮಾನ್ಯ ಸಚಿವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಆ ಸಂದರ್ಭದಲ್ಲಿ ನಾನು ಅಲ್ಲಿನ ಉಪ ನಿರೀಕ್ಷಕರನ್ನು ಕರೆಸಿ ಕೇಳಲಾಗಿ, ಅದಕ್ಕೆ ಅವರು ರಾತ್ರಿ ವೇಳೆಯಲ್ಲಿ ತ್ಯಾಜ್ಯವನ್ನು ತಂದು ಹಾಕುತ್ತಾರೆಂದು ಹೇಳುತ್ತಾರೆ. ಪೊಲೀಸ್‌ನವರು ಅಲ್ಲಿ ಗಸ್ತಿನಲ್ಲಿ ಇರುವುದಿಲ್ಲ. ತಮ್ಮ ಉತ್ತರದಲ್ಲಿ ಪೊಲೀಸ್‌ನವರು ಗಸ್ತಿನಲ್ಲಿ ಇರುತ್ತಾರೆಂದು ಹೇಳಲಾಗಿದೆ. ಆ ಸಂದರ್ಭದಲ್ಲಿ ಪೊಲೀಸ್‌ನವರು ಇರುವುದಿಲ್ಲವೆಂದು ಅಲ್ಲಿನ ಸಾರ್ವಜನಿಕರು ದೂರನ್ನು ಕೊಟ್ಟಿದ್ದಾರೆ. ಅದರ ಬಗ್ಗೆ ನಾನು ಮಾನ್ಯ ಸಚಿವರಿಗೆ ಪ್ರಶ್ನೆ ಕೇಳಿದ್ದೇನೆ. ಅದಕ್ಕೆ ಮಾನ್ಯ ಸಚಿವರು ಕಟ್ಟುನಿಟ್ಟಿನ ಸೂಚನೆಯನ್ನು ಕೊಡಬೇಕೆಂದು ತಮ್ಮ ಮೂಲಕ ಮನವಿ ಮಾಡಿಕೊಳ್ಳುತ್ತೇನೆ.

**ಡಾ॥ ಜಿ.ಪರಮೇಶ್ವರ್:-** ಮಾನ್ಯ ಸಭಾಪತಿಯವರೆ, ಕೊಡಗಿನ ಗಡಿ ಭಾಗದಲ್ಲಿ ಕುಟ್ಟ ಗ್ರಾಮ ಇದೆ. ಅಲ್ಲಿ ಕುಟ್ಟ ಪೊಲೀಸ್ ಠಾಣೆ ಕೂಡ ಇದೆ. ಒಂದು ಭಾರಿ ನಾನು ಅಲ್ಲಿಗೆ ಖುದ್ದಾಗಿ surprise visit ನೀಡಿದ್ದೆನು. ಪೊಲೀಸ್ ಠಾಣೆ ಆ ಮುಖ್ಯರಸ್ತೆಯಲ್ಲಿಯೇ ಇದೆ. ಪೊಲೀಸ್ ಠಾಣೆಯ ಒಳಗಡೆ ಮತ್ತು ಠಾಣೆಯ ಹೊರಗಡೆ ಕೂಡ ಆ ರಸ್ತೆಗೆ ಯಾವ ವಾಹನಗಳು ಹೋಗುತ್ತವೆ ಮತ್ತು ಬರುತ್ತವೆಂದು ನೋಡಿ regulate ಮಾಡಲು ಅಲ್ಲೆಲ್ಲಾ ಸಿ.ಸಿ.ಕ್ಯಾಮೆರಾಗಳನ್ನು ಹಾಕಿದ್ದಾರೆ. ಮಾನ್ಯ ಸದಸ್ಯರು ಹೇಳುವುದೇನೆಂದರೆ, ಆ ಠಾಣೆಯ ಹಿಂದೆ ಮತ್ತು ಮುಂದೆ ಎರಡು ಕಿ.ಮೀ ಮುಂದಕ್ಕೆ ಕ್ಯಾಮೆರಾಗಳನ್ನು ಹಾಕಬೇಕೆಂದು ಹೇಳುತ್ತಿದ್ದಾರೆ. ಅದೆಲ್ಲಾ ಮಾಡಲು ಬಹಳ ಕಷ್ಟವಾಗುತ್ತದೆ. ಎಲ್ಲಿ ಜನನಿಬಿಡ ಪ್ರದೇಶವಿದೆ ಅಲ್ಲಿ ಕ್ಯಾಮೆರಾಗಳನ್ನು ಹಾಕುವುದು ಬಹಳ ಕಷ್ಟ. ಅದರಲ್ಲೂ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಗ್ರಾಮೀಣ ಪ್ರದೇಶದಲ್ಲಿ ಬಹಳ ಕಷ್ಟ. ದಿನಾಂಕ: 04.07.2006ರಲ್ಲಿ ಒಂದು ಸಲ ಕೇರಳದಿಂದ ಈ ತ್ಯಾಜ್ಯ ವಸ್ತುಗಳನ್ನು, ಅದರಲ್ಲೂ ವೈದ್ಯಕೀಯ ತ್ಯಾಜ್ಯವಸ್ತುಗಳನ್ನು ತೆಗೆದುಕೊಂಡು ಬಂದು ಅಲ್ಲಿ ಸುರಿದಿದ್ದಾರೆ. ಆ ಸಂದರ್ಭದಲ್ಲಿ 11 ಜನರನ್ನು ಬಂಧಿಸಿ, ಅವರಿಗೆಲ್ಲರಿಗೂ ಸುಮಾರು 1000 ರೂಪಾಯಿಗಳು ದಂಡ ಹಾಕಲಾಗಿದ್ದು, ಆ ಪ್ರಕರಣ ಕೂಡ ಮುಗಿದಿರುತ್ತದೆ. 2006 ನಂತರ ಇಲ್ಲಿಯವರೆಗೂ ಅಂತಹ ಘಟನೆಗಳು ಯಾವುದೂ ವರದಿಯಾಗಿರುವುದಿಲ್ಲ. ಅದೊಂದೇ ಬಾರಿ ವರದಿಯಾಗಿದ್ದು, ಅವರ ಮೇಲೆ ಪ್ರಕರಣ ದಾಖಲಿಸಿ, ಅವರ ಮೇಲೆ ಕ್ರಮ ತೆಗೆದುಕೊಂಡಿದ್ದಾರೆ. ಅದಾದ ನಂತರ, ಮಾನ್ಯ ಸದಸ್ಯರು ಹೇಳಿದ ಹಾಗೆ, 2015-16ನೇ ಸಾಲಿನಲ್ಲಿ ಸಹ ಅಂತಹ ಘಟನೆ ಆಗಿ, ಸಾಂಕ್ರಾಮಿಕ ರೋಗಗಳು ಬಂದು ಹರಡಿವೆ ಎಂದು ಹೇಳಿದ್ದಾರೆ. 2015ರಲ್ಲಿ ಹಾಗೂ 2016 ರಿಂದ ಇಲ್ಲಿಯವರೆಗೂ ಸಾಂಕ್ರಾಮಿಕ ರೋಗಗಳು (contaminated diseases) ಯಾವುದೂ ಕೂಡ ಇಲ್ಲಿಯವರೆಗೂ ವರದಿಯಾಗಿಲ್ಲ. ವೈದ್ಯಕೀಯ ತ್ಯಾಜ್ಯ ವಸ್ತುಗಳನ್ನು ತೆಗೆದುಕೊಂಡು ಅವರ ಮನೆಯ ಹತ್ತಿರ ಹಾಕುತ್ತಾರೆಂದರೆ, ಪಂಚಾಯಿತಿಯವರು ಕೂಡ ಅದನ್ನು ನಿಯಂತ್ರಿಸಬೇಕಲ್ಲವೇ? ಆ ಕೆಲಸವನ್ನು ಪಂಚಾಯಿತಿಯವರು ಕೂಡ ಮಾಡಬೇಕಾಗುತ್ತದೆ. ನಾವು ಆ ಪಂಚಾಯಿತಿಯವರಿಗೆ ಸೂಚನೆಯನ್ನು ಕೊಡುತ್ತೇವೆ. ಆದರೆ, ಪೊಲೀಸರಿಗೆ ಇಂತಹ ಪ್ರಕರಣಗಳ ಬಗ್ಗೆ ದೂರುಗಳು ಬಂದಾಗ, ಖಂಡಿತವಾಗಿ ಅವರು ಕ್ರಮ ತೆಗೆದುಕೊಳ್ಳುವುದಕ್ಕೆ ನಾನು ಸೂಚನೆ ಕೊಡುತ್ತೇನೆ. ಅಂತಹದ್ದು ಇಲ್ಲಿಯವರೆಗೆ ಯಾವುದೂ ಕೂಡ ವರದಿಯಾಗಿಲ್ಲ.

**ಶ್ರೀ ಸುನೀಲ್ ಸುಬ್ರಮಣಿ ಎಂ.ಪಿ.:-** ಮಾನ್ಯ ಸಭಾಪತಿಯವರೆ, ಪಂಚಾಯಿತಿಯಲ್ಲಿ ಖಾಯಂ ಆದ ಪಿ.ಡಿ.ಓ. ಇರುವುದಿಲ್ಲ. ಅಲ್ಲಿ ಇರತಕ್ಕಂಥವರು ತಾತ್ಕಾಲಿಕ ಪಿ.ಡಿ.ಓ. ಅವರಿಗೆ ಆ ಬಗ್ಗೆ ಪೊಲೀಸ್ ಠಾಣೆಯಲ್ಲಿ ದೂರನ್ನು ಕೊಡುವುದಕ್ಕೆ ಧೈರ್ಯ ಇರುವುದಿಲ್ಲ. ಏಕೆಂದರೆ, ಅಲ್ಲಿ ಸಾರ್ವಜನಿಕರಿಂದ ದೂರು ಬಂದಿದ್ದರಿಂದ, ನಾನು ಅಲ್ಲಿಗೆ ಹೋಗಿದ್ದೆನು. ನಮಗೆ ಬೇಕಾಗಿರುವುದಿಷ್ಟೆ, ಜೀಪಿನಿಂದ ಸಣ್ಣಪುಟ್ಟ ತ್ಯಾಜ್ಯಗಳನ್ನು ತಂದು ಅಲ್ಲಿಗೆ ಹಾಕಬಾರದು. ಅದಕ್ಕೆ ಕಟ್ಟುನಿಟ್ಟಿನ ಸೂಚನೆಯನ್ನು ಕೊಡಬೇಕೆಂದು ಮಾನ್ಯ ಸಚಿವರಿಗೆ ತಮ್ಮ ಮೂಲಕ ಕೇಳುತ್ತಿದ್ದೇನೆ.

**ಡಾ॥ ಜಿ.ಪರಮೇಶ್ವರ:-** ಮಾನ್ಯ ಸಭಾಪತಿಯವರೆ, 2006 ನಂತರ ಇಲ್ಲಿಯವರೆಗೆ ಆ ತರಹದ ಘಟನೆಗಳು ಆಗಿರುವುದಿಲ್ಲ. ಒಂದು ವೇಳೆ ಅಂತಹ ಘಟನೆಗಳೇನಾದರೂ ನಡೆದು, ಸಾರ್ವಜನಿಕರಿಂದ ದೂರು ಬಂದಲ್ಲಿ ನಾವು ಆ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇವೆ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಸುನೀಲ್ ಸುಬ್ರಮಣಿ ಎಂ.ಪಿ:–** ಮಾನ್ಯ ಸಭಾಪತಿಯವರೆ, ನಾನು ಅಲ್ಲಿ ಖುದ್ದಾಗಿ ನೋಡಿಕೊಂಡು ಬಂದಿದ್ದೇನೆ. ಆ ಸಂದರ್ಭದಲ್ಲಿ ಉಪ ನಿರೀಕ್ಷಕರು ಸಹ ಅಲ್ಲಿಗೆ ಬಂದಿದ್ದರು. ಅವರು ಏನು ಹೇಳುತ್ತಾರೆಂದರೆ, "ಅವರೆಲ್ಲಾ ರಾತ್ರೋರಾತ್ರಿ ಅಲ್ಲಿಗೆ ತ್ಯಾಜ್ಯಗಳನ್ನು ತಂದು ಸುರಿದು ಹೋಗುತ್ತಾರೆ." ಅದು ನಮಗೆ ಗೊತ್ತಾಗುವುದಿಲ್ಲ ಎನ್ನುತ್ತಾರೆ.

**ಡಾ|| ಜಿ.ಪರಮೇಶ್ವರ್:–** ಮಾನ್ಯ ಸಭಾಪತಿಯರೆ, ಈಗ ಅಲ್ಲಿ ಪೊಲೀಸ್ ಠಾಣೆ ಇದೆ. ಅಲ್ಲಿ 13 ಜನ ಪೊಲೀಸ್ ಕಾನ್‌ಸ್ಟೇಬಲ್‌ಗಳು, 4 ಜನ ಎ.ಎಸ್.ಐ.ಗಳು, 8 ಜನ ಹೆಡ್ ಕಾನ್‌ಸ್ಟೇಬಲ್‌ಗಳು ಮತ್ತು ವೃತ್ತ ನಿರೀಕ್ಷಕರು ಇದ್ದಾರೆ. ಅದು ಕೇರಳ ಬಾರ್ಡರ್ ಆಗಿರುವುದರಿಂದ ನಮಗೂ ಕೂಡ ಬಹಳ ಮುಖ್ಯವಾದ ಪ್ರದೇಶವಾಗಿರುತ್ತದೆ. ಅದನ್ನು ನಾವು ನಿರ್ಲಕ್ಷ್ಯ ಮಾಡುವಂತಹ ಪ್ರಶ್ನೆಯೇ ಬರುವುದಿಲ್ಲ.

**ಶ್ರೀ ಸುನೀಲ್ ಸುಬ್ರಮಣಿ ಎಂ.ಪಿ:–** ಮಾನ್ಯ ಸಭಾಪತಿಯವರೆ, ನೋಡಿ, ಪತ್ರಿಕೆಗಳಲ್ಲಿ "ಕುಟ್ಟ ಕೇರಳದ ವೈದ್ಯಕೀಯ ತ್ಯಾಜ್ಯ–ಆಕ್ರೋಶ" ಎಂದು ವರದಿಯಾಗಿದೆ. ಏಕೆಂದರೆ, ನಾನು ಅಲ್ಲಿಗೆ ಹೋದಾಗ ಸ್ವತಃ ನೋಡಿದ್ದೇನೆ. ಏಕೆಂದರೆ ಅಲ್ಲಿ ಪೊಲೀಸ್ ಅಧಿಕಾರಿಗಳು ಸಹ ಇದ್ದರು. "ಅಲ್ಲಿಗೆ ರಾತ್ರೋರಾತ್ರಿ ತ್ಯಾಜ್ಯಗಳನ್ನು ತಂದು ಹಾಕುತ್ತಾರೆ, ನಾವು ಏನು ಮಾಡುವುದಕ್ಕಾಗುವುದಿಲ್ಲ" ಎನ್ನುವಂಥ ಮಾತನ್ನು ಅವರು ಹೇಳುತ್ತಾರೆ. ಆದ್ದರಿಂದ ಮಾನ್ಯ ಸಚಿವರು ಈ ಬಗ್ಗೆ ಕಟ್ಟುನಿಟ್ಟಿನ ಸೂಚನೆ ಕೊಡಬೇಕು.

**ಡಾ|| ಜಿ.ಪರಮೇಶ್ವರ್:–** ಮಾನ್ಯ ಸಭಾಪತಿಯವರೆ, ಈ ಸಾಂಕ್ರಾಮಿಕ ರೋಗಗಳನ್ನು ನಿಯಂತ್ರಣ ಮಾಡುವುದೆಲ್ಲಾ ಆರೋಗ್ಯ ಇಲಾಖೆ ವ್ಯಾಪ್ತಿಗೆ ಬರುತ್ತದೆ. ಆದರೂ ಸಹ ಪೊಲೀಸ್ ಠಾಣೆಗೆ ಒಂದು ದೂರನ್ನು ಕೊಟ್ಟಾಗ, ಅವರು ಸ್ವಾಭಾವಿಕವಾಗಿ ದೂರನ್ನು ದಾಖಲಿಸುತ್ತಾರೆ. ಅದರ ಬಗ್ಗೆ ವಿಚಾರಣೆ ಮಾಡುತ್ತಾರೆ. ಆ ದೃಷ್ಟಿಯಿಂದ ನಾನು ಹೇಳುತ್ತಿದ್ದೇನೆ. ಅಂತಹದ್ದು ಏನೇ ದೂರುಗಳು ಇದ್ದರೂ ಸಹ ಖಂಡಿತವಾಗಿ ನಾವು ಕ್ರಮ ತೆಗೆದುಕೊಳ್ಳುತ್ತೇವೆ.

**ಉಪ ಸಭಾಪತಿಯವರು:–** ಧನ್ಯವಾದಗಳು. ಈಗ ತಡೆಹಿಡಿಯಲಾದ ಪ್ರಶ್ನೆಗಳಿಗೆ ಉತ್ತರ ಮುಕ್ತಾಯಗೊಂಡಿದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು**

**ಡಾ॥ ಜಿ.ಪರಮೇಶ್ವರ್, (ಸಭಾ ನಾಯಕರು):-** ಮಾನ್ಯ ಸಭಾಪತಿಯವರೆ, ದಿನಾಂಕ: 15ನೇ ಜೂನ್ 2017 ಸಮೂಹ-IVರ ಲಿಖಿತ ಮೂಲಕ ಉತ್ತರಿಸುವ ಒಟ್ಟು 119 ಪ್ರಶ್ನೆಗಳ ಪೈಕಿ, 37 ಪ್ರಶ್ನೆಗಳಿಗೆ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

**(ಉತ್ತರಗಳನ್ನು ಲಗತ್ತಿಸಲಾಗಿದೆ)**

ಸಭಾಪತಿಯವರು:- ಮಂಡಿಸಲಾಯಿತು.

**(ಮುಂದು)**

***(752) 15.6.2017 12.50 ಪಿಕೆ:ವಿಕೆ***

**2. ಸಭಾಪತಿಯವರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾಗಿದ್ದ ವಿಷಯಗಳಿಗೆ ಸಂಬಂಧಿಸಿದಂತೆ ಸಚಿವರ ಹೇಳಿಕೆಗಳು**

**ಅ) ಎಂಡೋಸಲ್ಫಾನ್ ಕ್ರಿಮಿನಾಶಕ ಔಷಧಿಯಿಂದ ಉಂಟಾಗಿರುವ ದುಷ್ಪರಿಣಾಮವನ್ನು ತಪ್ಪಿಸುವ ಬಗ್ಗೆ.**

- - - -

**ಡಾ: ಜಿ.ಪರಮೇಶ್ವರ(ಸಭಾನಾಯಕರು):-** ಮಾನ್ಯ ಸಭಾಪತಿಗಳೆ, ದಿನಾಂಕ 09.06.2017ರಂದು ಮಾನ್ಯ ಕೋಟ ಶ್ರೀನಿವಾಸ ಪೂಜಾರಿಯವರು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿದ ವಿಷಯಕ್ಕೆ ಸಂಬಂಧಪಟ್ಟಂತೆ ಸದನದಲ್ಲಿ ಉತ್ತರಗಳನ್ನು ಮಂಡಿಸುತ್ತಿದ್ದೇನೆ.

(ಲಿಖಿತ ಉತ್ತರವನ್ನು ಲಗತ್ತಿಸಲಾಗಿದೆ)

**ಆ) ಪದವಿಪೂರ್ವ ಶಿಕ್ಷಣ ಇಲಾಖೆಯಲ್ಲಿ ಬಿಇಡಿ ಪೂರೈಸದೇ ಇರುವ ಉಪನ್ಯಾಸಕರಿಗೆ ಬಿಇಡಿ ವ್ಯಾಸಂಗ ಮಾಡಲು ಪೂರ್ಣ ವೇತನ ಸಹಿತ ರಜೆ ನೀಡಿ ಅವರಿಗೆ ಅನುಕೂಲ ಮಾಡಿಕೊಡುವ ಬಗ್ಗೆ.**

- - - -

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಡಾ|| ಜಿ.ಪರಮೇಶ್ವರ(ಸಭಾನಾಯಕರು):-** ಮಾನ್ಯ ಸಭಾಪತಿಗಳೆ, ದಿನಾಂಕ 14.06.2017ರಂದು ಮಾನ್ಯ ಕೆ.ಟಿ.ಶ್ರೀಕಂಠೇಗೌಡರವರು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿದ ವಿಷಯಕ್ಕೆ ಸಂಬಂಧಪಟ್ಟಂತೆ ಸದನದಲ್ಲಿ ಉತ್ತರವನ್ನು ಮಂಡಿಸುತ್ತಿದ್ದೇನೆ.

(ಲಿಖಿತ ಹೇಳಿಕೆಯನ್ನು ಲಗತ್ತಿಸಲಾಗಿದೆ)

**3. ಸಭಾಪತಿಯವರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು**

ಅ) ಸುಳ್ಳು ಜಾತಿ ಪ್ರಮಾಣ ಪತ್ರ ಸಲ್ಲಿಸಿ ಗೆಜೆಟೆಡ್ ಆಫೀಸರ್ ಆಗಿ ಆಯ್ಕೆಯಾಗಿರುವ ಬಗ್ಗೆ.

- - - -

**ಶ್ರೀ ಡಿ.ಎಸ್.ವೀರಯ್ಯ(ವಿಧಾನಸಭೆಯಿಂದ ಆಯ್ಕೆಯಾದವರು):-** ಮಾನ್ಯ ಸಭಾಪತಿಗಳೆ, ಪ್ರಸ್ತುತ ವೈದ್ಯಕೀಯ ಸಚಿವರ ಆಪ್ತಕಾರ್ಯದರ್ಶಿಯಾಗಿ ಸೇವೆ ಸಲ್ಲಿಸುತ್ತಿರುವ ಕೆ.ಎ.ಎಸ್. ಅಧಿಕಾರಿಯು ಸುಳ್ಳು ಜಾತಿ ಪ್ರಮಾಣ ಪತ್ರ ಸಲ್ಲಿಸಿ ಕರ್ನಾಟಕ ಲೋಕಸೇವಾ ಆಯೋಗ ನಡೆಸಿದ 1999ರ ಗೆಜೆಟೆಡ್ ಪ್ರೊಬೆಷನರ್ ಹುದ್ದೆಗೆ ಆಯ್ಕೆಯಾಗಿದ್ದಾರೆ. ವಾಸ್ತವವಾಗಿ ಸಂಗಪ್ಪನವರ ಶಾಲಾ ದಾಖಲಾತಿ ಹಾಗೂ ಅವರ ತಂದೆಗೆ ಸಂಬಂಧಿಸಿದ ಜಾತಿ ಕಾಲಂನಲ್ಲಿ ಹಿಂದೂ ಲಿಂಗಾಯಿತ ಎಂದು ನಮೂದಾಗಿದೆ. ಅವರು ಗಾಣಿಗ ಹಿಂದುಳಿದ ವರ್ಗ 2ಎ ಎಂದು ಪ್ರಮಾಣ ಪತ್ರ ಸಲ್ಲಿಸಿ ಹಿಂದುಳಿದ ವರ್ಗಗಳ ಮೀಸಲಾತಿಯಿಂದ ಆಯ್ಕೆಯಾಗಿರುತ್ತಾರೆ. ದಿನಾಂಕ 23.1.2006ರಂದು ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿರುವ ಮೇಲ್ಮನವಿ ಪ್ರಾಧಿಕಾರವು ಇವರಿಗೆ ನೀಡಿದ ಹಿಂದುಳಿದ ವರ್ಗಗಳ ಪ್ರಮಾಣ ಪತ್ರವನ್ನು ರದ್ದುಪಡಿಸಿದ್ದು, ಮಾನ್ಯ ಉಚ್ಚನ್ಯಾಯಾಲಯವು ರಿಟ್ ಪೆಟಿಷನ್ ನಂ. 1449/2006ರಂತೆ ದಿನಾಂಕ 13.6.2017ರಂದು ಮೇಲ್ಮನವಿ ಪ್ರಾಧಿಕಾರದ ಆದೇಶವನ್ನು ಎತ್ತಿ ಹಿಡಿದಿದ್ದು, ಸದರಿಯವರ ಅರ್ಜಿಯನ್ನು ವಜಾಗೊಳಿಸಿರುತ್ತದೆ. ಈ ಹಿನ್ನೆಲೆಯಲ್ಲಿ ಮಾನ್ಯ ವೈದ್ಯಕೀಯ ಸಚಿವರ ಆಪ್ತ ಕಾರ್ಯದರ್ಶಿ ಆಗಿರುವ ಕೆ.ಎ.ಎಸ್(ಹಿರಿಯ ಶ್ರೇಣಿ), ಇವರನ್ನು ಕೂಡಲೇ ಸೇವೆಯಿಂದ ಬಿಡುಗಡೆಗೊಳಿಸಬೇಕು ಮತ್ತು ಇಂತಹ ಎಷ್ಟು ಪ್ರಕರಣಗಳಿವೆಯೋ, ಯಾರು ಮೂಲಭೂತ ಹಕ್ಕುಗಳನ್ನು ಕಸಿದುಕೊಂಡು, ಎಲ್ಲಾ ಸೌಲಭ್ಯಗಳನ್ನು ಗಳಿಸಿಕೊಂಡು ಪರಿಶಿಷ್ಟ ಜಾತಿಯ ಹೆಸರಲ್ಲಿ ಮುಂದುವರೆಯುತ್ತಿದ್ದಾರೋ ಅಂಥವರನ್ನು ಕೂಡಲೇ ವಜಾಗೊಳಿಸಬೇಕೆಂದು ಕೋರುತ್ತೇನೆ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಡಾ:ಜಿ.ಪರಮೇಶ್ವರ್(ಸಭಾನಾಯಕರು):–** ಮಾನ್ಯ ಸಭಾಪತಿಗಳೆ, ಈ ವಿಚಾರಕ್ಕೆ ಸಂಬಂಧಿಸಿದಂತೆ ಮಾನ್ಯ ಮುಖ್ಯಮಂತ್ರಿಗಳಿಂದ ನಂತರ ಉತ್ತರ ಕೊಡಿಸಲಾಗುತ್ತದೆ.

**ಆ) ಎಸ್.ಎಸ್.ಎಲ್.ಸಿ. ಪರೀಕ್ಷೆಯ ಫಲಿತಾಂಶವನ್ನು ಉತ್ತಮ ಪಡಿಸುವ ಬಗ್ಗೆ.**

– – –

**ಶ್ರೀ ರಮೇಶ್‌ಬಾಬು(ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಗಳೆ, ಕರ್ನಾಟಕ ರಾಜ್ಯದಲ್ಲಿ ಇತ್ತೀಚಿಗೆ ನಡೆದ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ರಾಜ್ಯದ ಒಟ್ಟಾರೆ ಶೇಕಡಾವಾರು ಫಲಿತಾಂಶ ಕುಂಠಿತವಾಗಿರುತ್ತದೆ. ರಾಜ್ಯದಲ್ಲಿ ಪ್ರೌಢ ಶಿಕ್ಷಣ ಮಂಡಳಿಯು ಕೈಗೊಂಡ ಕೆಲವು ನಿಯಮಗಳಿಂದಾಗಿ ಮತ್ತು ಪ್ರೌಢ ಶಿಕ್ಷಣ ಮಂಡಳಿಯ ನಿರ್ದೇಶಕರ ವಿಫಲತೆಯಿಂದಾಗಿ ಒಟ್ಟಾರೆ ಫಲಿತಾಂಶದಲ್ಲಿ ಇಳಿಕೆಯಾಗಿರುತ್ತದೆ. ಒಂದನೇ ತರಗತಿಯಿಂದ ಒಂಭತ್ತನೆ ತರಗತಿಯವರೆಗೆ ವಿದ್ಯಾರ್ಥಿಗಳನ್ನು ತೇರ್ಗಡೆ ಮಾಡುವ ನಿಯಮ ಮತ್ತು ಪರೀಕ್ಷಾ ಸಮಯದಲ್ಲಿ ಮೈಕ್ರೋ ವೀಕ್ಷಕರ ನೇಮಕಾತಿ, ಪ್ರಶ್ನೆ ಪತ್ರಿಕೆ ತಯಾರಿಕೆಯ ಮಾನದಂಡಗಳಲ್ಲಿ ವೈಫಲ್ಯತೆ ಮುಂತಾದ ಕಾರಣಗಳಿಂದ ಎಸ್.ಎಸ್.ಎಲ್.ಸಿ. ಪರೀಕ್ಷೆಯ ಫಲಿತಾಂಶ ಇಳಿಕೆಯಾಗಲು ಕಾರಣವಾಗಿರುತ್ತದೆ. ಫಲಿತಾಂಶ ಇಳಿಕೆಗೆ ನೈಜ ಕಾರಣಗಳನ್ನು ಪತ್ತೆ ಹಚ್ಚಿ ಬರುವ ದಿನಗಳಲ್ಲಿ ಫಲಿತಾಂಶದ ಹೆಚ್ಚಳಕ್ಕೆ ಶೈಕ್ಷಣಿಕವಾಗಿ ಮತ್ತು ಮಾನಸಿಕವಾಗಿ ಮಕ್ಕಳನ್ನು ತಯಾರು ಮಾಡಬೇಕಾಗಿರುತ್ತದೆ. ಆದರೆ ಪ್ರೌಢ ಶಿಕ್ಷಣ ಮಂಡಳಿಯು ತನ್ನ ಜವಾಬ್ದಾರಿಯಿಂದ ತಪ್ಪಿಸಿಕೊಳ್ಳುವ ಕಾರಣಕ್ಕಾಗಿ ಶಿಕ್ಷಣ ಇಲಾಖೆಯ ಜಿಲ್ಲಾ ಉಪನಿರ್ದೇಶಕರ ಮೂಲಕ ಮತ್ತು ಕ್ಷೇತ್ರ ಶಿಕ್ಷಣಾಧಿಕಾರಿಗಳ ಮೂಲಕ ಪ್ರೌಢ ಶಾಲಾ ಶಿಕ್ಷಕರ ಸಂಬಳವನ್ನು ತಡೆಹಿಡಿಯುವ ಮತ್ತು ಶಾಲೆಗಳ ಅನುದಾನಗಳಿಗೆ ತಡೆ ಹಿಡಿಯುವ ಕ್ರಮಕ್ಕೆ ಮುಂದಾಗಿರುತ್ತದೆ. ಇಂತಹ ಯಾವುದೇ ಕ್ರಮವು ಕಾನೂನು ಬಾಹಿರವಾಗಿದ್ದು, ಶಿಕ್ಷಕರಿಗೆ ಮಾನಸಿಕ ಕಿರುಕುಳ ನೀಡುವ ಪ್ರಯತ್ನವಾಗಿರುತ್ತದೆ.

ಕರ್ನಾಟಕ ರಾಜ್ಯ ಸರ್ಕಾರವು ಶೈಕ್ಷಣಿಕ ಕಾರ್ಯಾಗಾರಗಳ ಮುಖಾಂತರ ವಿದ್ಯಾರ್ಥಿಗಳನ್ನು ಅಣಿಗೊಳಿಸಿ ಎಸ್.ಎಸ್.ಎಲ್.ಸಿ. ಫಲಿತಾಂಶವನ್ನು ಬರುವ ಶೈಕ್ಷಣಿಕ ವರ್ಷದಲ್ಲಿ ಹೆಚ್ಚಿಸಲು ಕ್ರಮ ಕೈಗೊಳ್ಳಬೇಕಾಗಿದೆ. ಎಲ್ಲಾ ಉಪನಿರ್ದೇಶಕರು, ಪ್ರೌಢ ಶಾಲಾ ಶಿಕ್ಷಕರ ಮತ್ತು ಮುಖ್ಯೋಪಾಧ್ಯಾಯರ ವಿಷಯವಾರು ಕಾರ್ಯಾಗಾರಗಳನ್ನು ಆಯೋಜಿಸಿ ಹೆಚ್ಚಿನ ಫಲಿತಾಂಶಕ್ಕೆ ಕ್ರಮ ಕೈಗೊಳ್ಳಬೇಕು. ಇದನ್ನು ಹೊರತುಪಡಿಸಿ ಶಿಕ್ಷಕರ ಸಂಬಳವನ್ನು ಮತ್ತು ಇತರೇ ಬಡ್ತಿಗಳನ್ನು ತಡೆಯುವ ಯಾವುದೇ ಪ್ರಯತ್ನವನ್ನು ಸರ್ಕಾರ ಮಾಡಬಾರದು. ಈ ಕುರಿತು ರಾಜ್ಯ ಸರ್ಕಾರವು ತನ್ನ ನಿಲುವನ್ನು ಸ್ಪಷ್ಟಪಡಿಸಬೇಕೆಂದು ಕೇಳಿಕೊಳ್ಳುತ್ತೇನೆ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ತನ್ವೀರ್‌ಸೇಠ್(ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):-** ಮಾನ್ಯ ಸಭಾಪತಿಗಳೆ, ಈ ಕುರಿತು ಪರಿಶೀಲಿಸಿ ಉತ್ತರ ಒದಗಿಸಿಕೊಡುತ್ತೇನೆ.

**ಇ) ಸರ್ಕಾರಿ ವಿದ್ಯಾರ್ಥಿ ನಿಲಯಗಳಲ್ಲಿ ಮತ್ತು ವಸತಿ ಶಾಲೆಗಳಲ್ಲಿ ಕೆಲಸ ಮಾಡುತ್ತಿರುವ ಹೊರಗುತ್ತಿಗೆ ನೌಕರರನ್ನು ಖಾಯಂಗೊಳಿಸುವ ಬಗ್ಗೆ.**

- - - -

**ಶ್ರೀ ಎನ್.ಅಪ್ಪಾಜಿಗೌಡ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-**ಮಾನ್ಯ ಸಭಾಪತಿಗಳೆ, ರಾಜ್ಯ ಸರ್ಕಾರಿ ವಿದ್ಯಾರ್ಥಿ ನಿಲಯಗಳಲ್ಲಿ ಮತ್ತು ವಸತಿ ಶಾಲೆಗಳಲ್ಲಿ ಅಡುಗೆಯವರು, ಅಡುಗೆ ಸಹಾಯಕರು, ಕಾವಲುಗಾರರು, ಸ್ವಚ್ಛತಾ ಸಿಬ್ಬಂದಿ, ಜವಾನರು ಮೊದಲಾದ ಡಿ ಗ್ರೂಪ್ ಹುದ್ದೆಗಳಿಗೆ ನೇರ ನೇಮಕಾತಿ ಮೂಲಕ ನೇಮಕ ಮಾಡಲು ಸರ್ಕಾರ ಮುಂದಾಗಿದೆ.

ಸರ್ಕಾರದ ಈ ಕ್ರಮದಿಂದಾಗಿ ಈಗಾಗಲೇ ಆ ಹುದ್ದೆಗಳಲ್ಲಿ ಹತ್ತಾರು ವರ್ಷಗಳಿಂದ ಅತ್ಯಂತ ಕಡಿಮೆ ವೇತನ ಪಡೆದು ಹೊರಗುತ್ತಿಗೆ ಮೇಲೆ ಕೆಲಸ ನಿರ್ವಹಿಸುತ್ತಿರುವ ಬಡ ನೌಕರರು ಕೆಲಸ ಕಳೆದುಕೊಂಡು ಬೀದಿಪಾಲಾಗಿರುತ್ತಾರೆ. ಈ "ಡಿ" ಗ್ರೂಪ್ ಹುದ್ದೆಗಳಿಗೆ ನೇರ ನೇಮಕಾತಿ ಮಾಡುವಾಗ 10ನೇ ತರಗತಿ ಪಾಸಾಗಿರಬೇಕೆಂಬ ಷರತ್ತನ್ನು ವಿಧಿಸಲಾಗಿದ್ದು, ಹಾಲಿ ಹೊರಗುತ್ತಿಗೆ ನೌಕರರಿಗೆ ಅರ್ಜಿಯನ್ನು ಸಹ ಸಲ್ಲಿಸಲು ಅರ್ಹತೆ ಇಲ್ಲದೇ ವಂಚಿತರಾಗಿರುತ್ತಾರೆ. ಸರ್ಕಾರದ ಈ ನೇರ ನೇಮಕಾತಿ ಪ್ರಸ್ತಾವನೆಯನ್ನು ಕಳೆದ ಬೆಳಗಾವಿಯಲ್ಲಿ ನಡೆದ ವಿಧಾನ ಮಂಡಲದ ಅಧಿವೇಶನದಲ್ಲಿ ಆಡಳಿತ ಪಕ್ಷದ ಶಾಸಕರನ್ನೂ ಒಳಗೊಂಡಂತೆ ಎಲ್ಲಾ ಶಾಸಕರು ಪಕ್ಷ ಭೇದ ಮರೆತು ವಿರೋಧಿಸಿದಾಗ ನೇರ ನೇಮಕಾತಿಯನ್ನು ಕೈಬಿಡಲು ಒಪ್ಪಿದ್ದರು. ಆದರೆ ಸರ್ಕಾರ ಮತ್ತೆ ನೇರ ನೇಮಕಾತಿಯನ್ನು ಮಾಡಲು ಮುಂದಾಗಿದೆ.

ಸರ್ಕಾರದ ಈ ಕ್ರಮವನ್ನು ವಿರೋಧಿಸಿ ದಿನಾಂಕ 13.6.2017 ರಂದು ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನವನದಲ್ಲಿ ಹೊರಗುತ್ತಿಗೆ 'ಡಿ' ಗ್ರೂಪ್ ನೌಕರರು ಅನಿರ್ದಿಷ್ಟ ಸಾಮೂಹಿಕ ಧರಣಿಯನ್ನು ಆರಂಭಿಸಿದ್ದಾರೆ. ಆದ್ದಾಗ್ಯೂ ಸರ್ಕಾರದ ನೇಮಕಾತಿ ನಿಯಮಾವಳಿಗಳಲ್ಲಿ ಅಗತ್ಯ ತಿದ್ದುಪಡಿಗಳನ್ನು ಮಾಡಿ ಹೊರಗುತ್ತಿಗೆ ನೌಕರರ ಸೇವೆಯನ್ನು ಖಾಯಂಗೊಳಿಸಬೇಕೆಂದು ಮತ್ತು ಅಲ್ಲಿಯವರೆಗೆ ಹೊರಗುತ್ತಿಗೆಯ ನೌಕರರಿಗೆ ಸಮಾನ ಕೆಲಸಕ್ಕೆ ಸಮಾನ ವೇತನ, ಪಿ.ಎಫ್., ಇ.ಎಸ್.ಐ., ರಜಾ ಸೌಲಭ್ಯ ಮೊದಲಾದ ಸೌಲಭ್ಯಗಳನ್ನು ಕಡ್ಡಾಯವಾಗಿ ಜಾರಿ ಮಾಡಬೇಕೆಂದು ಈ ಮೂಲಕ ಮಾನ್ಯ ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಮಂತ್ರಿಗಳನ್ನು ಆಗ್ರಹಿಸುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಡಾ: ಜಿ.ಪರಮೇಶ್ವರ್(ಸಭಾನಾಯಕರು):-** ಮಾನ್ಯ ಸಭಾಪತಿಗಳೆ, ಈ ವಿಷಯಕ್ಕೆ ಸಂಬಂಧಿಸಿದಂತೆ ಮಾನ್ಯ ಸಮಾಜ ಕಲ್ಯಾಣ ಸಚಿವರಿಂದ ಉತ್ತರವನ್ನು ಕೊಡಿಸಲಾಗುತ್ತದೆ.

**ಈ) ಆರೋಗ್ಯ ಕವಚ (108) ಆಂಬ್ಯುಲೆನ್ಸ್ ಸೇವೆಯ 674 ಸಿಬ್ಬಂದಿಗಳನ್ನು ಜಿ.ವಿ.ಕೆ. ಸಂಸ್ಥೆಯು ಕೆಲಸದಿಂದ ತೆಗೆದುಹಾಕಿರುವ ಬಗ್ಗೆ.**

- - - - -

**ಶ್ರೀ ಬಸನಗೌಡ ಆರ್.ಪಾಟೀಲ್(ಯತ್ನಾಳ್)(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಗಳೆ, ಆರೋಗ್ಯ ಕವಚ (108) ಆಂಬ್ಯುಲೆನ್ಸ್ ಸಿಬ್ಬಂದಿಗಳು ದಿನಾಂಕ 25.1.2016ರಂದು ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ 3 ತಿಂಗಳಿಂದ ನಿರಂತವಾಗಿ ಮುಷ್ಕರದಲ್ಲಿ ಭಾಗವಹಿಸಿದ್ದ 674 ಸಿಬ್ಬಂದಿಗಳನ್ನು ಜಿ.ವಿ.ಕೆ. ಸಂಸ್ಥೆಯು ವಜಾ ಮಾಡಿದ್ದು, ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಿದ ಮಾನ್ಯ ಆರೋಗ್ಯ ಸಚಿವರಾದ ಶ್ರೀ ಆರ್.ರಮೇಶ್‌ಕುಮಾರ್‌ರವರು ದಿನಾಂಕ 16.1.2016ರಂದು ವಿಧಾನಸೌಧದಲ್ಲಿ ತಮ್ಮ ಅಧ್ಯಕ್ಷತೆಯಲ್ಲಿ ಸಂಬಂಧಪಟ್ಟ ಆರೋಗ್ಯ ಇಲಾಖೆಯ ಅಧಿಕಾರಿಗಳು ಹಾಗೂ ಆರೋಗ್ಯ ಕವಚ ನೌಕರರ ಸಂಘದ ಪದಾಧಿಕಾರಿಗಳ ಸಮ್ಮುಖದಲ್ಲಿ ಸಭೆ ಮಾಡಿ ವೇತನ ತಾರತಮ್ಯವನ್ನು ಸರಿ ಮಾಡಿ ವಜಾಗೊಂಡ 674 ನೌಕರರಿಗೆ ಪುನಃ ಉದ್ಯೋಗ ಕಲ್ಪಿಸಿಕೊಡುವುದಾಗಿ ಭರವಸೆ ನೀಡಿದ್ದರು. ಇದಾದ ನಂತರ ಆರೋಗ್ಯ ಇಲಾಖೆಯ ಆಯುಕ್ತರಾದ ಶ್ರೀ ಸುಭೋದ್‌ಯಾದವ್‌ರವರ ಅಧ್ಯಕ್ಷತೆಯಲ್ಲಿ ದಿನಾಂಕ 23.2.2017 ಹಾಗೂ 25.5.2017ರಂದು ಎರಡು ಬಾರಿ ಜಿ.ವಿ.ಕೆ ಸಂಸ್ಥೆಯವರ ಜೊತೆ ಸಭೆ ಮಾಡಿ 28 ಜಿಲ್ಲೆಯ ಡಿ.ಹೆಚ್.ಓ. ಅಧಿಕಾರಿಗಳು, 674 ನೌಕರರ ವರದಿಯನ್ನು ತರಿಸಿಕೊಂಡಿದ್ದು, ಸದರಿ ವರದಿಯಲ್ಲಿ 674 ನೌಕರರ ಮೇಲೆ ಯಾವುದೇ ಗಂಭೀರ ಆರೋಪಗಳಿರುವುದಿಲ್ಲ, ಅವರನ್ನು ಕೆಲಸಕ್ಕೆ ತೆಗೆದುಕೊಳ್ಳುವುದು ಸೂಕ್ತವೆಂದು ಹೇಳಿರುತ್ತಾರೆ. ಅವರ ವರದಿ ಅನುಸಾರವಾಗಿ ಸದರಿ ನೌಕರರನ್ನು ದಿನಾಂಕ 10.5.2017ರ ಒಳಗಾಗಿ ಕರ್ತವ್ಯಕ್ಕೆ ಹಾಜರುಪಡಿಸಿಕೊಳ್ಳಬೇಕೆಂದು ಆದೇಶ ನೀಡಿರುತ್ತಾರೆ. ಸದರಿ ಆದೇಶಕ್ಕೆ ಜಿ.ವಿ.ಕೆ ಸಂಸ್ಥೆಯವರು ಯಾವುದೇ ರೀತಿಯಲ್ಲಿ ಸ್ಪಂದಿಸದೆ ಇದ್ದಲ್ಲಿ ದಿನಾಂಕ 16.5.2017ರಂದು ಮತ್ತೆ ಜಿ.ವಿ.ಕೆ ಸಂಸ್ಥೆಗೆ 674 ನೌಕರರನ್ನು ಕೆಲಸಕ್ಕೆ ಹಾಜರುಪಡಿಸಿಕೊಳ್ಳದೇ ಇದ್ದಲ್ಲಿ ಸರ್ಕಾರವು ಯಾವುದೇ ರೀತಿಯ ಹಣವನ್ನು ಬಿಡುಗಡೆ ಮಾಡುವುದಿಲ್ಲವೆಂದು ಆದೇಶ ಹೊರಡಿಸಿದರೂ ಕೂಡ ಸರ್ಕಾರದ ಆದೇಶಕ್ಕೂ ಯಾವುದೇ ಗೌರವ ನೀಡದೇ 674 ನೌಕರರನ್ನು ಇದುವರೆಗೂ ಕೆಲಸಕ್ಕೆ ತೆಗೆದುಕೊಂಡಿರುವುದಿಲ್ಲ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಆದರೆ ಸದರಿ 674 ನೌಕರರು ಕೂಡ ಆರ್ಥಿಕವಾಗಿ ಬಡ ಕುಟುಂಬದವರಾಗಿದ್ದು, ತಮ್ಮ ಜೀವನ ನಿರ್ವಹಣೆಗೆ ಸದರಿ ಉದ್ಯೋಗವನ್ನೇ ನಂಬಿಕೊಂಡಿರುವುದರಿಂದ ಈಗ ಅವರ ಜೀವನ ಸ್ಥಿತಿ ತುಂಬಾ ಚಿಂತಾಜನಕವಾಗಿರುತ್ತದೆ.

ಆದ್ದರಿಂದ ಆರೋಗ್ಯ ಕವಚ (108) ಆಂಬ್ಯುಲೆನ್ಸ್ ಸೇವೆಯಲ್ಲಿರುವ 674 ಸಿಬ್ಬಂದಿಗಳನ್ನು ಶೀಘ್ರವಾಗಿ ಕೆಲಸಕ್ಕೆ ಹಾಜರುಪಡಿಸಿಕೊಳ್ಳುವಂತೆ ಜಿ.ವಿ.ಕೆ. ಸಂಸ್ಥೆಗೆ ಮತ್ತೊಂದು ಕಟ್ಟುನಿಟ್ಟಿನ ಆದೇಶ ನೀಡಬೇಕೆಂದು **ಸರ್ಕಾರವನ್ನು ಒತ್ತಾಯಿಸುತ್ತೇನೆ.**

**ಡಾ: ಜಿ.ಪರಮೇಶ್ವರ(ಸಭಾನಾಯಕರು):-** ಮಾನ್ಯ ಸಭಾಪತಿಗಳೆ, ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರಿಂದ ಇದಕ್ಕೆ ಉತ್ತರ ಕೊಡಿಸುತ್ತೇನೆ.

**ಉಪ ಸಭಾಪತಿಯವರು:-** ಈಗ ಶೂನ್ಯವೇಳೆ ಮುಕ್ತಾಯವಾಗಿದೆ. ಕಾರ್ಯಕಲಾಪಗಳ ಪಟ್ಟಿಯಲ್ಲಿ ನಮೂದಾಗಿರುವಂತೆ ***ನಿರ್ಣಯ*** ದ ವಿಚಾರವನ್ನು ತೆಗೆದುಕೊಳ್ಳಲಾಗುವುದು.

“ ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

## 4. ನಿರ್ಣಯ

**“ವಿಧಾನ ಪರಿಷತ್ತಿನ ಸಭಾಪತಿಯವರಾದ ಶ್ರೀ ಡಿ.ಹೆಚ್.ಶಂಕರಮೂರ್ತಿ ಅವರನ್ನು ಸಭಾಪತಿ ಸ್ಥಾನದಿಂದ ತೆಗೆದು ಹಾಕುವುದು”**

– – – – –

**ಉಪ ಸಭಾಪತಿಯವರು:–** ದಿನಾಂಕ 30.5.2017ರಂದು ವಿಧಾನ ಪರಿಷತ್ತಿನ ಮಾನ್ಯ ಸದಸ್ಯರುಗಳಾದ ಶ್ರೀಯುತರುಗಳಾದ ವಿ.ಎಸ್.ಉಗ್ರಪ್ಪ, ಶರಣಪ್ಪ ಮಟ್ಟೂರ, ಕೆ.ಸಿ.ಕೊಂಡಯ್ಯ, ಕೆ. ಅಬ್ದುಲ್ ಜಬ್ಬಾರ್, ಎಂ.ಎ.ಗೋಪಾಲಸ್ವಾಮಿ, ಆರ್.ಪ್ರಸನ್ನಕುಮಾರ ಹಾಗೂ ಹೆಚ್.ಎಂ.ರೇವಣ್ಣ ಅವರುಗಳು ಮಾನ್ಯ ಸಭಾಪತಿಯವರನ್ನು ಪದಚ್ಯುತಿಗೊಳಿಸುವ ಬಗ್ಗೆ ನೀಡಿದ್ದ ನಿರ್ಣಯದ ಸೂಚನೆಗೆ ದಿನಾಂಕ 13.6.2017ರಂದು ಸದನವು ಅನುಮತಿ ನೀಡಿರುವುದರಿಂದ, “ವಿಧಾನ ಪರಿಷತ್ತಿನ ಮಾನ್ಯ ಸಭಾಪತಿಯವರಾದ ಶ್ರೀ ಡಿ.ಹೆಚ್.ಶಂಕರಮೂರ್ತಿ ಅವರನ್ನು ಸಭಾಪತಿ ಸ್ಥಾನದಿಂದ ತೆಗೆದು ಹಾಕುವುದು” ಎಂಬ ನಿರ್ಣಯವನ್ನು ಮತಕ್ಕೆ ಹಾಕುವ ಕುರಿತು ಪ್ರಸ್ತಾವ ಮಂಡಿಸಬೇಕು.

(ಮುಂದು)

***(753)15-6-2017 MM-RN 1.00***

**ಉಪ ಸಭಾಪತಿಯವರು:–** ಪ್ರಸ್ತಾವವನ್ನು ಯಾರು ಮಂಡಿಸುತ್ತೀರಿ?

**ಶ್ರೀ ವಿ.ಎಸ್. ಉಗ್ರಪ್ಪ (ನಾಮನಿರ್ದೇಶಿತರು):–** ಮಾನ್ಯ ಉಪ ಸಭಾಪತಿಯವರೆ,

**ಉಪ ಸಭಾಪತಿಯವರು:–** ಮಾನ್ಯ ಉಗ್ರಪ್ಪರವರೆ, ತಾವು ಪ್ರಸ್ತಾವವನ್ನು ಮಂಡಿಸುತ್ತಿದ್ದೀರಾ?

**ಶ್ರೀ ಕೆ.ಬಿ. ಶಾಣಪ್ಪ (ನಾಮನಿರ್ದೇಶಿತರು):–** ಮಾನ್ಯ ಉಪ ಸಭಾಪತಿಯವರೆ, ಪ್ರಸ್ತಾವವನ್ನು ಮಂಡಿಸುವಾಗ there must be charges. ಭಾಷಣವನ್ನು ಏಕೆ ಮಾಡಬೇಕು?

**ಉಪ ಸಭಾಪತಿಯವರು:–** ಈಗ ಪ್ರಸ್ತಾವವನ್ನು ಮಂಡಿಸುವುದಕ್ಕೆ ಮಾತ್ರ ಅವಕಾಶವಿದೆ.

**ಶ್ರೀ ವಿ.ಎಸ್. ಉಗ್ರಪ್ಪ:–** ಮಾನ್ಯ ಉಪ ಸಭಾಪತಿಯವರೆ, ಸಂವಿಧಾನದ ವಿಧಿ 183ರ ಜೊತೆಗೆ ಓದಲಾದ ನಿಯಮ 168 ಪ್ರಕಾರ ಅನುಮತಿಯನ್ನು ನಿಯಮ 166 ಕೆಳಗೆ ‘Leave’ನ್ನು ಈ ಸದನ ನೀಡಿದೆ. ಈಗ ಯಾವ

“ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಕಾರಣಗಳಿಗೋಸ್ಕರವೆಂದು ರೆಸಲ್ಯೂಷನ್ ಅನ್ನು ಮಂಡನೆ ಮಾಡುವುದಕ್ಕೆ ಅವಕಾಶವಿದೆ. ನಾನು ಎಲ್ಲಾ ಕಾನೂನನ್ನು ಈ ಸಂದರ್ಭದಲ್ಲಿ ವಿಸ್ತಾರವಾಗಿ ಹೇಳುವುದಕ್ಕೆ ಹೋಗುವುದಿಲ್ಲ.

**ಉಪ ಸಭಾಪತಿಯವರು:–** ಮಾನ್ಯ ಉಗ್ರಪ್ಪರವರೆ, ...

**ಶ್ರೀ ರಾಮಚಂದ್ರಗೌಡ (ಪದವೀಧರರ ಕ್ಷೇತ್ರ):–** ಮಾನ್ಯ ಉಪ ಸಭಾಪತಿಯವರೆ, ಮಾನ್ಯ ಉಗ್ರಪ್ಪನವರಿಗೆ 15 ನಿಮಿಷಗಳ ಕಾಲ ಮಾತನಾಡಲು ಅವಕಾಶವಿದೆ. ಯಾವಾಗ ಎಂದರೆ, ಅವರು ಯಾರ ಮೇಲೆ ಚಾರ್ಜಸ್ ಮಾಡುವರೋ, ಅವರ ಮೇಲಿರುವ ಆರೋಪಗಳೇನು ಎನ್ನುವುದನ್ನು ತಿಳಿಸಲು ಅವರಿಗೆ ಅವಕಾಶ ಕೊಡಬೇಕು. ಇಂತಿಂತಹ ಚಾರ್ಜಸ್ ಮೇಲೆ ನಾನು ಅವಿಶ್ವಾಸ ನಿರ್ಣಯವನ್ನು ಕೊಟ್ಟಿದ್ದೇನೆ, ತಾವು ಇದಕ್ಕೆ ತಯಾರಾಗಿ ಬರಬೇಕೆಂದು ಹೇಳಬೇಕು. ಅವರು ಯಾವುದೇ ಚಾರ್ಜಸ್ ಅನ್ನು ಕೊಡದೇ, ತಾವು ಇಂತಹ ತಪ್ಪನ್ನು ಮಾಡಿದ್ದೀರೆಂದು ಹೇಳದೇ ಏಕಾಏಕಿ ಪ್ರಸ್ತಾಪ ಮಾಡುವುದು ಸರಿಯಲ್ಲ. ಈ ನಿರ್ಣಯದ ಬಗ್ಗೆ ಬಹಳ ಘನತೆಯಿಂದ ಮಾತನಾಡುವುದಕ್ಕೆ ಪೀಠ ಅವಕಾಶ ಕೊಟ್ಟಿದೆ. ಮತ ಹಾಕುವುದಕ್ಕೆ ಅವಕಾಶ ನೀಡಲಾಗಿದೆ. ಚರ್ಚೆ ಮಾಡಬೇಕಾದರೆ ಅವರ ಮೇಲೆ ಏನೇನು ಚಾರ್ಜಸ್ ಇದೆ ಎನ್ನುವುದನ್ನು ಮುಂಚಿತವಾಗಿ ಅವರಿಗೆ ಕೊಟ್ಟರೆ ಅವರು ಅದಕ್ಕೆ ತಯಾರಾಗಿ ಬಂದು ಮಾತನಾಡುತ್ತಾರೆ. ಆ ರೀತಿ ಚಾರ್ಜಸ್‌ನಲ್ಲಿ ಏನಿದೆ ಎಂದು ಹೇಳದೇ ಇರುವಾಗ ಅವರು ಏನು ಮಾತನಾಡುವುದಕ್ಕೆ ಆಗುತ್ತದೆ? ಮತ ಹಾಕಬಹುದೇ ವಿನಃ ಚರ್ಚೆ ಮಾಡುವುದಕ್ಕೆ ಅವಕಾಶವಿಲ್ಲ ಎಂಬುದು ನನ್ನ ಭಾವನೆಯಾಗಿದೆ. ತಾವು ಯಾವ ತೀರ್ಮಾನ ತೆಗೆದುಕೊಳ್ಳುತ್ತೀರೋ ಅದನ್ನು ಮಾಡಿ.

**ಶ್ರೀ ವಿ.ಎಸ್.ಉಗ್ರಪ್ಪ:–** ಮಾನ್ಯ ಉಪ ಸಭಾಪತಿಯವರೆ, ದಯವಿಟ್ಟು ಒಂದು ನಿಮಿಷ ನನಗೆ ಮಾತನಾಡಲು ಅವಕಾಶ ಮಾಡಿಕೊಡಬೇಕೆಂದು ವಿನಂತಿಸುತ್ತೇನೆ.

**ಉಪ ಸಭಾಪತಿಯವರು:–** ಮಾನ್ಯ ಉಗ್ರಪ್ಪರವರೆ, ತಮಗೆ ಮಾತನಾಡಲು ಅವಕಾಶ ಕೊಡುತ್ತೇನೆ. ನಾನು ಓದಿರುವ ನಿರ್ಣಯವನ್ನು ತಾವು ಯಾರು ಈ ನೋಟೀಸ್‌ಗೆ ಸಹಿ ಮಾಡಿದ್ದೀರಿ ಅವರಲ್ಲಿ ಯಾರಾದರೂ ಒಬ್ಬರು ಈ ನಿರ್ಣಯವನ್ನು ಮಂಡಿಸಿ. ಅನಂತರ ನಿಯಮಾವಳಿ ಪ್ರಕಾರ ತಮಗೆ ಮಾತನಾಡಲು 15 ನಿಮಿಷಗಳ ಕಾಲಾವಕಾಶವನ್ನು ಕೊಡಬೇಕೆಂದು ಇದೆ. ಆದರೆ 15 ನಿಮಿಷ ಕಾಲಾವಕಾಶವನ್ನು ಕೊಡುವುದಕ್ಕಾಗುವುದಿಲ್ಲ. ತಾವು ಕೊಟ್ಟಿರುವ ನೋಟೀಸ್‌ನ ಸಮರ್ಥನೆ ಸಂಬಂಧವಾಗಿ ಅಥವಾ ಮಾಡಿರುವ ಆರೋಪಗಳ ಸಂಬಂಧವಾಗಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾತನಾಡುವುದಕ್ಕೆ ಐದು ನಿಮಿಷಗಳ ಕಾಲಾವಕಾಶವನ್ನು ನಿಮ್ಮೆಲ್ಲರ ಪರವಾಗಿ ಒಬ್ಬರಿಗೆ ಅವಕಾಶವನ್ನು ಕೊಡುತ್ತೇನೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ (ಶಿಕ್ಷಕರ ಕ್ಷೇತ್ರ):–** ಮಾನ್ಯ ಉಪ ಸಭಾಪತಿಯವರೆ, ಮಾನ್ಯ ಉಗ್ರಪ್ಪರವರು ಏನು ಮಾತನಾಡುವರೋ ಗೊತ್ತಿಲ್ಲ. ಅವರು ಮಾತನಾಡಿದಾಗ ಪ್ರಶ್ನೆ ಉದ್ಭವವಾಗುತ್ತದೆ ಇದು ಮೊದಲನೆಯದು. ಎರಡನೆಯದಾಗಿ ಚಾರ್ಜಸ್ ಕೊಟ್ಟಿದ್ದೇವೆ ಎಂದು ಹೇಳುತ್ತೀರಿ. ಈ ವಿಚಾರವನ್ನು ಈಗಾಗಲೇ Chair accept ಮಾಡಿದೆ. ಆಗ ಅದು ಮುಗಿದು ಹೋಯಿತು. ಆಗ ಅವರು ಏನು ಮಾತನಾಡುತ್ತಾರೆ ಏನು ಬಿಡುತ್ತಾರೆ ಎನ್ನುವುದನ್ನು ನಾವೇಕೆ ಊಹೆ ಮಾಡಬೇಕು? ಅವರು ಏನು ಮಾತನಾಡುವರೋ ಮಾತನಾಡಲಿ ನಂತರ ಅದನ್ನು ಮೂವ್ ಮಾಡಿ.

**ಶ್ರೀ ಕೆ.ಬಿ. ಶಾಣಪ್ಪ:–** ಮಾನ್ಯ ಉಪ ಸಭಾಪತಿಯವರೆ, ಮಾನ್ಯ ಉಗ್ರಪ್ಪರವರು ನಿರ್ಣಯವನ್ನು ಕೊಟ್ಟಿರಬಹುದು, ಆದರೆ ಪ್ರಶ್ನೆ ಅದಲ್ಲ. ನಿರ್ಣಯವನ್ನು ಕೊಟ್ಟರೂ ಕೂಡ ಮೆಜಾರಿಟಿ ಇಲ್ಲ ಎಂಬ ಒಂದೇ ಒಂದು ವಿಚಾರವನ್ನು ತೆಗೆದುಕೊಂಡು ನೀವು ಕೊಟ್ಟಿದ್ದೀರಿ. They have not mention specific charges.

**ಶ್ರೀ ವಿ.ಎಸ್. ಉಗ್ರಪ್ಪ:–** ಮಾನ್ಯ ಉಪ ಸಭಾಪತಿಯವರೆ, ದಯಮಾಡಿ ಅನುಚ್ಛೇದ 183;

**ಶ್ರೀ ಕೆ.ಬಿ. ಶಾಣಪ್ಪ:–** ಮಾನ್ಯ ಉಗ್ರಪ್ಪರವರೆ, ಮಾನ್ಯ ಉಪ ಸಭಾಪತಿಯವರು ದೊಡ್ಡ ಮನಸ್ಸು ಮಾಡಿ ಚಾರ್ಜಸ್ ಏನು ಎಂದು ಕೇಳಿಲ್ಲ. ಪ್ರಜಾತಂತ್ರ ವ್ಯವಸ್ಥೆಯಲ್ಲಿ ಒಂದು majority ತಿಳಿದುಕೊಂಡು ಚಾರ್ಜಸ್ ಕೊಡದೇ ಇದ್ದರೂ ಕೂಡ 'I am allowing you to move the motion' ಎಂದು ಒಪ್ಪಿದ್ದಾರೆ. ಒಂದು ವೇಳೆ ಅದನ್ನು ಕೊಟ್ಟಿದ್ದರೆ ನೀವು ಮಾತನಾಡುತ್ತಿದ್ದಿರಿ, ಹಾಗಾಗಿ You have not submitted any allegation on Him. You have not submitted the charges in writing. Nothing is there in the document. ಅದಕ್ಕಾಗಿ ನೀವು ದಯಮಾಡಿ motion move ಮಾಡಿ ಎಂಬುದಷ್ಟೇ ನನ್ನ ವಾದ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ವಿ.ಎಸ್. ಉಗ್ರಪ್ಪ:–** ಮಾನ್ಯ ಉಪ ಸಭಾಪತಿಯವರೆ, ಸದನವು ಯಾವಾಗಲೂ ಸಂವಿಧಾನ ಮತ್ತು ನಿಯಮಾವಳಿಗಳ ರೀತ್ಯ ನಡೆಯಬೇಕಾಗುತ್ತದೆ. ದಯಮಾಡಿ ಸಂವಿಧಾನದ ಅನುಚ್ಛೇದ 183 ಪ್ರಕಾರ 14 ದಿನಗಳಾದ ಮೇಲೆ resolution or charges ಅನ್ನು ನಾವು ಬರವಣಿಗೆಯಲ್ಲಿ ಅಥವಾ ಭಾಷಣ ಮಾಡುವಂತಹ ಸಂದರ್ಭದಲ್ಲಿ ಪ್ರಸ್ತಾಪ ಮಾಡುವುದಕ್ಕೆ ಸಂವಿಧಾನದಲ್ಲಿ ಅವಕಾಶ ಇದೆ. ನಾನು ಹೆಚ್ಚು ಸಮಯವನ್ನು ತೆಗೆದುಕೊಳ್ಳುವುದಿಲ್ಲ. ದಯಮಾಡಿ Sub-clause (c) of Article.183 of Constitution ಅನ್ನು ಓದಿದರೆ;

> *(c) may be removed from his office by a resolution of the council passed by a majority of all the then members of the Council: Provided that no resolution for the purpose of clause (c) shall be moved unless at least fourteen days notice has been given of the intention to move the resolution.*

So that is why we are shown our intention to move a resolution. Now we have a right to move a resolution. Please allow us to move the resolution. ಮುಂದೆ ಇದು ಬಹಳ ಪ್ರಮುಖವಾದುದಾಗಿದೆ. That is the legal position and that is the Constitutional mandate. ನಾನು ಇದನ್ನು ಸೃಷ್ಟಿ ಮಾಡುತ್ತಿಲ್ಲ. ಯಾರಿಗೋ ಸಂವಿಧಾನ ಅರ್ಥವಾಗದಿದ್ದರೆ ಏನೂ ಮಾಡುವುದಕ್ಕಾಗುವುದಿಲ್ಲ.

**ಶ್ರೀ ಕೆ.ಎಸ್. ಈಶ್ವರಪ್ಪ (ವಿರೋಧ ಪಕ್ಷದ ನಾಯಕರು):–** ಮಾನ್ಯ ಉಪ ಸಭಾಪತಿಯವರೆ, ತಾವು ಮಾನ್ಯ ಉಗ್ರಪ್ಪರವರಿಗೆ ಮಾತನಾಡಲು ಅವಕಾಶ ಕೊಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಅವರಿಗೆ ಮಾತನಾಡಲು ಅವಕಾಶ ಕೊಡಿ.

**ಶ್ರೀ ಕೆ.ಬಿ.ಶಾಣಪ್ಪ:–** ಅವರು ಏನೇನೋ allegations ತೆಗೆದುಕೊಂಡು ಬಂದರೆ. They must have certain things for which we have to answer. What are the allegations they are going to bring before this House? ಅದಕ್ಕೆ ನಾವು ಮೊದಲೇ ಸಿದ್ಧರಿರಬೇಕಾಗುತ್ತದೆ. This is not the way.

" ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಉಪ ಸಭಾಪತಿಯವರು:-** ಮಾನ್ಯ ಶಾಣಪ್ಪರವರೆ, ದಯಮಾಡಿ ಕುಳಿತುಕೊಳ್ಳಿ.

**ಶ್ರೀ ಭಾನುಪ್ರಕಾಶ(ವಿಧಾನಸಭಾ ಕ್ಷೇತ್ರ):-** ಮಾನ್ಯ ಉಪ ಸಭಾಪತಿಯವರೆ, ಮೊನ್ನೆ ದಿವಸ ಸಭಾಪತಿಯವರ ಪೀಠದಿಂದ ಒಂದು ತೀರ್ಮಾನವನ್ನು ಕೊಡಲಾಗಿದೆ. ಆ ತೀರ್ಮಾನದಂತೆ ರೆಸಲ್ಯೂಷನ್ ಅನ್ನು ಮೂವ್ ಮಾಡಿದ್ದಾರೆ. 14 ದಿವಸಗಳಾದ ಮೇಲೆ ರೆಸಲ್ಯೂಷನ್ ಮೂವ್ ಮಾಡುವುದಕ್ಕೆ ಅವಕಾಶ ಇದೆ. ಆರೋಪಗಳಿಲ್ಲದಿದ್ದರೂ ಆ ಜಾಗದ ಘನತೆಯನ್ನು ಉಳಿಸುವುದಕ್ಕೋಸ್ಕರ ನಾನು ಮತ ಹಾಕುವುದಕ್ಕೆ ಅವಕಾಶ ಕೊಡುತ್ತೇನೆ ಎಂಬ ಒಂದು ತೀರ್ಮಾನವನ್ನು ಕೊಟ್ಟಿದ್ದಾರೆ. ಈಗ ಆ ತೀರ್ಮಾನ ಇದೆಯೋ ಇಲ್ಲವೋ ಆ ತೀರ್ಮಾನದಂತೆ ಇವತ್ತಿನ ದಿವಸ ವೋಟಿಂಗ್ ಮಾಡಬೇಕೆ ಹೊರತು ಚರ್ಚೆ ಮಾಡುವುದಕ್ಕೆ ಅವಕಾಶ ಇಲ್ಲ ಎಂಬುದನ್ನು ತಾವು ಪರಿಶೀಲಿಸಬೇಕೆಂದು ನಾನು ವಿನಂತಿ ಮಾಡುತ್ತೇನೆ. ಏಕೆಂದರೆ, ಈಗಾಗಲೇ ಪೀಠದಿಂದ ಒಂದು ತೀರ್ಮಾನ ಆಗಿದೆ.

**ಶ್ರೀ ವಿ.ಎಸ್.ಉಗ್ರಪ್ಪ:-** ಮಾನ್ಯ ಉಪ ಸಭಾಪತಿಯವರೆ, ತಾವು ನನಗೆ ಮಾತನಾಡಲು ಅವಕಾಶವನ್ನು ಕೊಟ್ಟಿದ್ದೀರಿ. ಅದಕ್ಕಾಗಿ ಧನ್ಯವಾದಗಳನ್ನು ಹೇಳುತ್ತೇನೆ.

**ಉಪ ಸಭಾಪತಿಯವರು:-** ಮಾನ್ಯ ಉಗ್ರಪ್ಪರವರೆ, ಶ್ರೀ ರೇವಣ್ಣರವರೆ, ತಮಗೆ ಮಾತನಾಡಲು ಈಗ ಐದು ನಿಮಿಷಗಳ ಕಾಲಾವಕಾಶವನ್ನು ಕೊಡಲಾಗಿದೆ.

**ಶ್ರೀ ವಿ.ಎಸ್.ಉಗ್ರಪ್ಪ:-** ಮಾನ್ಯ ಉಪ ಸಭಾಪತಿಯವರೆ, ನಾವು ಏಕೆ ಈ ರೆಸಲ್ಯೂಷನ್ ಅನ್ನು;

**ಶ್ರೀ ರಾಮಚಂದ್ರಗೌಡ:-** ಮಾನ್ಯ ಉಪ ಸಭಾಪತಿಯವರೆ, ಈಗ ಆರೋಪ ಮಾಡುವ ಹಾಗಿಲ್ಲ. ಆರೋಪ ಮಾಡುವ ಹಾಗಿದ್ದರೆ ಅದಕ್ಕೆ ನೋಟಿಸ್ ಕೊಡಬೇಕು. ಈಗ Honourable Member has no business to charge. He must give notice for that. He can speak anything other than charges against the Chairman.

**ಶ್ರೀ ಪುಟ್ಟಣ್ಣ (ಶಿಕ್ಷಕರ ಕ್ಷೇತ್ರ):-** ಮಾನ್ಯ ಉಪ ಸಭಾಪತಿಯವರೆ, ನನ್ನ ಸಲಹೆಯೇನೆಂದರೆ, ದಯವಿಟ್ಟು ಈ ವಿಷಯ ಬೇರೆ ದಿಕ್ಕಿಗೆ ಹೋಗುವ ಅವಶ್ಯಕತೆ ಇಲ್ಲ. ಮಾನ್ಯ ಉಗ್ರಪ್ಪರವರೆ, ಒಂದು ನಿಮಿಷ ಕೇಳಿ. ತಾವು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹೇಳಿದ್ದನ್ನು ನಾವು ಕೇಳಲಿಲ್ಲವೇ? ನಾನು ಹೇಳುವುದೇನೆಂದರೆ, ನಿರ್ಣಯವನ್ನು ನೀವು ಓದಿದ್ದೀರಿ. ಓದಿದ ನಂತರ ಐದು ನಿಮಿಷ ಅವರು ಮಾತನಾಡಲಿ. ಇದು ಎಲ್ಲರಿಗೂ ಗೊತ್ತಿದೆ. ನಿರ್ಣಯವನ್ನು ಓದಿ ನಂತರ ಐದು ನಿಮಿಷಗಳ ಕಾಲ ಮಾತನಾಡಿ ಬೇಡ ಎನ್ನುವುದಿಲ್ಲ. ತಾವು ನಿರ್ಣಯವನ್ನು ಓದದೇ ಭಾಷಣ ಮಾಡುವುದಕ್ಕೆ ನಿಂತರೆ ಹೇಗೆ? ಮೊದಲು ನಿರ್ಣಯವನ್ನು ಓದಬೇಕು.

**ಶ್ರೀ ವಿ.ಎಸ್.ಉಗ್ರಪ್ಪ:-** ಮಾನ್ಯ ಉಪ ಸಭಾಪತಿಯವರೆ, ದಯಮಾಡಿ ಅನುಚ್ಛೇದ 183 ಅನ್ನು ಮತ್ತೆ ಓದಬೇಕೆಂದು ಹೇಳಿದರೆ ಓದುತ್ತೇನೆ.

**ಉಪ ಸಭಾಪತಿಯವರು:-** ಮಾನ್ಯ ಉಗ್ರಪ್ಪರವರೆ, ನೀವು ನಿರ್ಣಯವನ್ನು ಓದಿ ನಂತರ ಐದು ನಿಮಿಷ ಮಾತನಾಡುವುದಕ್ಕೆ ಅವಕಾಶ ಕೊಡುತ್ತೇವೆ ಎಂದು ಹೇಳಿದ್ದೇವೆ ಅಲ್ಲವೇ?

**ಶ್ರೀ ಕೆ.ಬಿ.ಶಾಣಪ್ಪ:-** ಮಾನ್ಯ ಉಪ ಸಭಾಪತಿಯವರೆ, ಮಾನ್ಯ ಸಭಾಪತಿಯವರಾದ ಶ್ರೀ ಡಿ.ಹೆಚ್. ಶಂಕರಮೂರ್ತಿರವರನ್ನು ಇಳಿಸಬೇಕೆಂಬುದೇ ಅವರ ಉದ್ದೇಶವಾಗಿದೆ. ಆ ವಿಷಯಕ್ಕೆ ಮಾತ್ರ ಬನ್ನಿ. ಇದೆಲ್ಲಾ ಏಕೆ ಎ, ಬಿ, ಸಿ, ಡಿ? He can come to that direct point without wasting the time of Honourable House.

**ಶ್ರೀ ರಾಮಚಂದ್ರಗೌಡ:-** ಮಾನ್ಯ ಉಪ ಸಭಾಪತಿಯವರೆ, at this juncture they have not right to make allegations.

**ಶ್ರೀ ವಿ.ಎಸ್.ಉಗ್ರಪ್ಪ:-** ಮಾನ್ಯ ರಾಮಚಂದ್ರಗೌಡರೆ, ನಿಮಗೆ ಸಂವಿಧಾನದ ಆಶಯಗಳೇನಿವೆ ಎನ್ನುವುದರ ಬಗ್ಗೆ ಅರ್ಥವಾಗದಿದ್ದರೆ ...

(ಗೊಂದಲ)

**ಶ್ರೀ ವಿ.ಸೋಮಣ್ಣ (ವಿಧಾನಸಭಾ ಕ್ಷೇತ್ರ):-** ಮಾನ್ಯ ಉಪ ಸಭಾಪತಿಯವರೆ, ತಾವು ಮಾನ್ಯ ಉಗ್ರಪ್ಪರವರಿಗೆ ಮಾತನಾಡಲು ಅವಕಾಶ ಕೊಟ್ಟಿದ್ದೀರಿ. ಅವರು ಮಾತನಾಡಲಿ ಆದರೆ ಈ ವಿಷಯವನ್ನು ಎಲ್ಲಿಗೋ ತೆಗೆದುಕೊಂಡು ಹೋಗುವುದು ಬೇಡ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಉಪ ಸಭಾಪತಿಯವರು:-** ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ.

**ಶ್ರೀ ವಿ. ಸೋಮಣ್ಣ:-** ಮಾನ್ಯ ಉಪ ಸಭಾಪತಿಯವರೆ, ಅವರು ನಿರ್ಣಯವನ್ನು ಮಂಡಿಸಲಿ. ಐದು ನಿಮಿಷ ಕಾಲಾವಕಾಶವನ್ನು ಕೊಟ್ಟಿದ್ದೀರಿ ಅದರಂತೆ ಅವರು ಮಾತನಾಡಲಿ.

(ಮುಂದು)

***754/15-6-2017/1.10/ಡಿಎಸ್-ಆರ್ಎನ್***

**ಶ್ರೀ ವಿ.ಎಸ್.ಉಗ್ರಪ್ಪ(ನಾಮನಿರ್ದೇಶಿತರು):-** ಮಾನ್ಯ ಉಪಸಭಾಪತಿಯವರೆ, ದಿನಾಂಕ:30-05-2017 ರಂದು ನಾನು ಮತ್ತು ಶ್ರೀಯುತರುಗಳಾದ ಶರಣಪ್ಪ ಮಟ್ಟೂರ, ಕೆ.ಸಿ.ಕೊಂಡಯ್ಯ, ಕೆ.ಅಬ್ದುಲ್ ಜಬ್ಬಾರ್, ಎಂ.ಎ.ಗೋಪಾಲಸ್ವಾಮಿ, ಆರ್.ಪ್ರಸನ್ನಕುಮಾರ್ ಹಾಗೂ ಹೆಚ್.ಎಂ.ರೇವಣ್ಣ ಅವರುಗಳೆಲ್ಲಾ ಸೇರಿ, ಮಾನ್ಯ ಸಭಾಪತಿಯವರನ್ನು ಪದಚ್ಯುತಿಗೊಳಿಸುವ ಬಗ್ಗೆ ನಿರ್ಣಯ ಮಂಡಿಸಲು ನಾವೇನು ನೋಟಿಸನ್ನು ಕೊಟ್ಟಿದ್ದೇವೆ, ಆ ನಿರ್ಣಯದ ರೀತ್ಯಾ ವಿಷಯವನ್ನು ಪ್ರಸ್ತಾಪಿಸಲು ಈ ಸದನ ನಮಗೆ ಅನುಮತಿಯನ್ನು ನೀಡಿದೆ.

[XXX]

**ಉಪ ಸಭಾಪತಿಯವರು:-** ಮಾನ್ಯ ಉಗ್ರಪ್ಪನವರೆ, ತಾವು ಕೊಟ್ಟಿರುವಂತಹ ಮೊದಲನೇ ನೋಟಿಸ್‌ನಲ್ಲಿ ಅವರ ಮೇಲೆ ಯಾವುದೇ ಒಂದು ಗುರುತರವಾದಂತಹ ಅರೋಪಗಳನ್ನು ಮಾಡದೆ.....

**ಶ್ರೀ ವಿ.ಎಸ್.ಉಗ್ರಪ್ಪ:-** ಮಾನ್ಯ ಉಪಸಭಾಪತಿಯವರೆ, correct. ನೋಟಿಸ್‌ನಲ್ಲಿ....

**ಉಪ ಸಭಾಪತಿಯವರು:-** ಮಾನ್ಯ ಉಗ್ರಪ್ಪನವರೆ, please listen…

**ಶ್ರೀ ವಿ.ಎಸ್.ಉಗ್ರಪ್ಪ:-** ಮಾನ್ಯ ಉಪಸಭಾಪತಿಯವರೆ, please tell me.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

---

[XXX] ಸಭಾಪತಿಯವರ ಆಜ್ಞಾನುಸಾರ ಕಡತದಿಂದ ತೆಗೆದುಹಾಕಲಾಗಿದೆ.

**ಉಪ ಸಭಾಪತಿಯವರು:–** ತಾವು ಕೊಟ್ಟಿರುವಂತಹ ನೋಟಿಸ್‌ನಲ್ಲಿ ಯಾವುದೇ ಗುರುತರವಾದಂತಹ ಒಂದೇ ಒಂದು ಆರೋಪವನ್ನು ಕೂಡ ಮಾಡದೆ ಅವರ ಪದಚ್ಯುತಿಗೆ ತಾವು ಸಹಿ ಮಾಡಿ ನೋಟಿಸ್‌ನ್ನು ಕೊಟ್ಟಿದ್ದೀರಿ. ಇದು ಸ್ಪಷ್ಟ. ಆದರೆ, ಈ ದಿನ ತಮಗೆ ನಿಯಮ 168 ಅಡಿಯಲ್ಲಿ ಮಾತನಾಡುವುದಕ್ಕೆ ಅವಕಾಶ ಇದೆ. 15 ನಿಮಿಷ ಮಾತನಾಡುವುದಕ್ಕೆ ಕಾಲಾವಕಾಶ ಕೊಡಬಹುದು ಎಂದು ಆ ನಿಯಮದಲ್ಲಿ ಇರುವುದರಿಂದ ನಾನು ತಮಗೆ ಅವಕಾಶ ಮಾಡಿಕೊಟ್ಟಿದ್ದೇನೆ. ಆದರೆ ಈ ಸಂದರ್ಭದಲ್ಲಿ ಯಾವುದೇ ದಾಖಲೆಗಳು, ಪುರಾವೆಗಳು ಇಲ್ಲದೆ ಇಂಥ ಘನತೆವೆತ್ತ ಸಭಾಪತಿ ಹುದ್ದೆಯಲ್ಲಿರತಕ್ಕಂಥವರನ್ನು ಪದಚ್ಯುತಿಗೊಳಿಸುವಾಗ, ಇಂತಹ ಮಾತುಗಳನ್ನಾಡುವುದನ್ನು ನಾನು ಕಡತದಿಂದ ತೆಗೆಯುತ್ತೇನೆ. ಇದಕ್ಕೆ ನಾನು ಅವಕಾಶ ಕೊಡುವುದಿಲ್ಲ.

**ಶ್ರೀ ವಿ.ಎಸ್.ಉಗ್ರಪ್ಪ:–** ಮಾನ್ಯ ಉಪಸಭಾಪತಿಯವರೆ, ತಾವು ಒಂದು ಕೆಲಸ ಮಾಡಿ ನಾನು ಈ ಸದನದಲ್ಲಿ ಏನೆಲ್ಲಾ ಹೇಳುವುದಕ್ಕೆ ಬಯಸುತ್ತೇನೆಂದರೆ, ಮೊದಲನೆಯದಾಗಿ,.....

**ಉಪ ಸಭಾಪತಿಯವರು:–** ಮಾನ್ಯ ಉಗ್ರಪ್ಪನವರೆ, ಆ ರೀತಿ ಆರೋಪಗಳನ್ನು ಮಾಡುವುದಕ್ಕೆ ಈ ಸದನದಲ್ಲಿ ಅವಕಾಶ ಇರುವುದಿಲ್ಲ.

**ಶ್ರೀ ವಿ.ಎಸ್.ಉಗ್ರಪ್ಪ:–** ಮಾನ್ಯ ಉಪಸಭಾಪತಿಯವರೆ, ತಾವು ನನಗೆ ಅವಕಾಶ ಕೊಟ್ಟಿದ್ದೀರಿ.

**ಉಪಸಭಾಪತಿಯವರು:–** ತಾವು ಹಿರಿಯ ಸದಸ್ಯರು, ಕಾನೂನು ಪಂಡಿತರು. ಇಂಥ ಹುದ್ದೆ ಮೇಲೆ ಅವಿಶ್ವಾಸ ನಿರ್ಣಯವನ್ನು ಮಂಡಿಸುವಂತಹ ಸಂದರ್ಭದಲ್ಲಿ ತಾವು ನೋಟಿಸ್‌ನಲ್ಲಿ ಯಾವುದೇ ಆರೋಪವನ್ನು ತಿಳಿಸದೆ, ಇವತ್ತು ತಮಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಂತಹ ಸಂದರ್ಭದಲ್ಲಿ ಯಾವುದೇ ಆಧಾರ ರಹಿತವಾದಂತಹ; ದಾಖಲೆಗಳು ಇಲ್ಲದಿರುವಂತಹ ವಿಚಾರಗಳನ್ನು ಈ ರೀತಿ ಪ್ರಶ್ನೆ ಮಾಡತಕ್ಕಂಥದ್ದು ಸದನಕ್ಕೆ ಶೋಭೆ ತರತಕ್ಕಂಥ ವಿಚಾರವಲ್ಲ. ಅದು ಯಾವುದೂ ಕೂಡ ಕಡತಕ್ಕೆ ಹೋಗುವುದಿಲ್ಲ.

**ಶ್ರೀ ಹೆಚ್.ಎಂ.ರೇವಣ್ಣ:–** ಮಾನ್ಯ ಉಪಸಭಾಪತಿಯವರೆ, ತಾವು ಈಗ ಹೇಳಿದ ಮಾತು ಒಂದು ರೀತಿಯಲ್ಲಿ ಚರ್ಚೆಯಾಗಬೇಕು, ಅದು ಬೇರೆ ವಿಚಾರ. ಆದರೆ ಸೆಕ್ಷನ್ 192 ಏನು ಹೇಳುತ್ತದೆಂದರೆ, ಅವರ ವಿರುದ್ಧ ಅವಿಶ್ವಾಸ ನಿರ್ಣಯದ ಮಂಡನೆ ಮಾಡತಕ್ಕಂಥ ಸಂದರ್ಭದಲ್ಲಿ ಅವರು ಆ ಸ್ಥಾನದಲ್ಲಿ ಇರಬಾರದು ಎಂದು ಹೇಳುತ್ತದೆ. ಆದರೆ ಅವರು ಅಲ್ಲಿ ಕುಳಿತುಕೊಂಡು "ಕೌಲ್ ಅಂಡ್ ಶಕ್ದರ್" ಬಗ್ಗೆ quote

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಮಾಡಿದಂತಹ ಸಂದರ್ಭದಲ್ಲಿ ಅದಕ್ಕೆ ಅವರೇ ಅವಕಾಶ ಮಾಡಿಕೊಂಡರಲ್ಲವೆ? ಅದು ನಿಯಮಗಳಲ್ಲಿ ಇದೆಯೇ, ಏಕೆ ಮಾಡಿಕೊಂಡರು? ಅವರ ಪ್ರಕಾರ ಈ ರೀತಿ ಮಾಡುವ ಹಾಗಿಲ್ಲ ಎಂದು ಅಲ್ಲಿಂದ ಸಮರ್ಥನೆ ಮಾಡಿಕೊಳ್ಳಬಹುದು. ಹಾಗಿರುವಾಗ ನಮಗಿರುವ ಅವಕಾಶದಲ್ಲಿ ನಾವು ನೋಟಿಸ್ ಕೊಟ್ಟಿದ್ದೇವೆ.

**ಶ್ರೀ ಕೆ.ಬಿ.ಶಾಣಪ್ಪ:-** ಮಾನ್ಯ ಉಪಸಭಾಪತಿಯವರೆ, ...

**ಉಪ ಸಭಾಪತಿಯವರು:-** ಮಾನ್ಯ ಶಾಣಪ್ಪನವರೆ, ತಾವು ದಯವಿಟ್ಟು ಕುಳಿತುಕೊಳ್ಳಿ.

**ಶ್ರೀ ವಿ.ಎಸ್.ಉಗ್ರಪ್ಪ:-** ಮಾನ್ಯ ಉಪಸಭಾಪತಿಯವರೆ, ಯಾವಾಗ intentionಗೆ ಪತ್ರ ಕೊಡುತ್ತೇವೆ, ಅದರಲ್ಲಿ ಆರೋಪಗಳನ್ನು ಕೊಡುವುದಕ್ಕೆ ಬರುವುದಿಲ್ಲ. That is the constitutional mandate.

**ಉಪ ಸಭಾಪತಿಯವರು:-** ಕೊಡಲೇಬೇಕು.

**ಶ್ರೀ ವಿ.ಎಸ್.ಉಗ್ರಪ್ಪ:-** ಮಾನ್ಯ ಉಪಸಭಾಪತಿಯವರೆ, ತಾವು ದಯಮಾಡಿ Constitution ಅನ್ನು ಓದಿ. '*...Provided that no resolution for the purpose of clause (c) shall be moved unless at least fourteen days notice has been given of the intention to move the resolution'*. Yes, we have given notice for fourteen days. Where is the question of giving charges in the notice? ಏನಿದ್ದರೂ ಕೂಡ 14 ದಿವಸವಾದ ಮೇಲೆ ನಮ್ಮ ಆರೋಪಗಳನ್ನು while moving the resolution, we have to mention.

**ಶ್ರೀ ಹೆಚ್.ಎಂ.ರೇವಣ್ಣ:-** ಮಾನ್ಯ ಉಪಸಭಾಪತಿಯವರೆ, ಅದರಲ್ಲೂ ಹತ್ತು ಅಥವಾ ಹತ್ತಕ್ಕಿಂತ ಹೆಚ್ಚು ಜನರು ಸಮರ್ಥನೆ ಮಾಡಿದರೆ, ಅದಕ್ಕಿಂತ ಮೊದಲೇ ಏನಾದರೂ ನಿರ್ಣಯ ಅಂಗೀಕಾರವಾಗದೆ ಬಿದ್ದು ಹೋದರೆ; ಹತ್ತಕ್ಕಿಂತ ಕಡಿಮೆಯಾದರೆ ಆ ನಿರ್ಣಯವೂ ಅಕ್ಸೆಪ್ಟ್ ಆಗುವುದಿಲ್ಲ. ಇದೆಲ್ಲಾ ಆಗಿ ನಾವು ಮುಂದಕ್ಕೆ ಬಂದಿದ್ದೇವೆ. ಈಗ ವಿಷಯವನ್ನು ಪ್ರಸ್ತಾಪ ಮಾಡಲು ನಮಗೆ ಅವಕಾಶ ಕೊಡುವುದಿಲ್ಲ ಎಂದು ತಾವು ಹೇಳುವುದು ಸಮಂಜಸವಲ್ಲ. ದಯವಿಟ್ಟು ನಮಗೆ ಅವಕಾಶ ಕೊಡಿ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಉಪ ಸಭಾಪತಿಯವರು:–** ಮಾನ್ಯ ಉಗ್ರಪ್ಪನವರೆ, ತಾವು ಮಾತನಾಡಿ.

**ಶ್ರೀ ವಿ.ಎಸ್.ಉಗ್ರಪ್ಪ:–** ಮಾನ್ಯ ಉಪಸಭಾಪತಿಯವರೆ, Article 183 of Constitution ಕೆಳಗಡೆ ತಾವು ಅನುಮತಿಯನ್ನು ನೀಡಿದ್ದೀರಿ. Article 185 of Constitution ಕೆಳಗೆ ನಿರ್ಣಯವನ್ನು ಮಂಡಿಸುವಂತಹ ಸಂದರ್ಭದಲ್ಲಿ ನಾನು ಅವರ ಮೇಲೆ ಏನೆಲ್ಲಾ ಆರೋಪಗಳಿವೆ, ಅವರು ಏಕೆ ಸದನದ ವಿಶ್ವಾಸವನ್ನು ಕಳೆದುಕೊಂಡಿದ್ದಾರೆ ಎನ್ನುವುದನ್ನು ಹೇಳತಕ್ಕಂಥ ಹಕ್ಕು ನನಗಿದೆ; ನಮಗೆಲ್ಲರಿಗೂ ಆ ಹಕ್ಕಿದೆ ಎಂದು ನಾನು ಹೇಳುವುದಕ್ಕೆ ಬಯಸುತ್ತೇನೆ.

1. ಸಂತಾಪ ಸೂಚನೆ ನಿರ್ಣಯವನ್ನು ಮಂಡಿಸಬೇಕಾದರೆ ಸಭಾನಾಯಕರಿಗೂ ಮತ್ತು ವಿರೋಧ ಪಕ್ಷದ ನಾಯಕರಿಗೆ ಅವಕಾಶ ಕೊಡುತ್ತಾರೆ. ಕೆಳಮನೆ ಸದನದಲ್ಲಿ ಅಥವಾ ಪಾರ್ಲಿಮೆಂಟ್‌ನಲ್ಲಿ ನಮ್ಮ ಸದನದ ಸದಸ್ಯರು ಸ್ವರ್ಗಸ್ಥರಾದ ಸಂದರ್ಭದಲ್ಲಿ ನಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸುವುದಕ್ಕೆ ನಮ್ಮ ಸದನದಲ್ಲಿ ಬಿಟ್ಟರೆ ಉಳಿದ ಎಲ್ಲಾ ಕಡೆಯಲ್ಲೂ ಅವಕಾಶ ಇದೆ. ಈ ವಿಚಾರದಲ್ಲಿ ಎಲ್ಲೋ ಒಂದು ಕಡೆ ಮಾನ್ಯ ಸಭಾಪತಿಗಳು ನಮ್ಮ ಹಕ್ಕನ್ನು ಮೊಟಕು ಮಾಡುವಂತಹ ಕೆಲಸವನ್ನು ಮಾಡುತ್ತಿದ್ದಾರೆ.

2. ಪ್ರಶ್ನೋತ್ತರ ಅವಧಿ ಒಂದು ಗಂಟೆ ಸಮಯದಲ್ಲಿ ಮುಗಿಸಬೇಕು. ಆದರೆ ನಿನ್ನೆ ಮೂರು ಗಂಟೆಗಳ ಸಮಯ ತೆಗೆದುಕೊಂಡರು. That is the duty of the Chairman.

3. ಕೆಲವರಿಗೆ ಮಾತ್ರ ಅವಕಾಶ ಮಾಡಿಕೊಡುವಂಥದ್ದು. ನಾವು British Traditions and Conventions follow ಮಾಡತಕ್ಕಂಥದ್ದಕ್ಕೆ ಪಕ್ಷಾತೀತವಾಗಿರಬೇಕು ಎನ್ನುವುದು ನಮ್ಮ ಸಂವಿಧಾನದ ಆಶಯಗಳಲ್ಲಿರುವಂಥದ್ದು. ಇಲ್ಲಿ ಪಕ್ಷಾತೀತವಾಗಿರದೆ ಅವರು ಒಂದು ಪಕ್ಷದ ಪರವಾಗಿ ನಿಲುವನ್ನು ತೆಗೆದುಕೊಂಡಿರುವುದು ಸದನದ ಮೂಲಕವೇ ಅನೇಕ ಸಲ ಪ್ರಸ್ತಾಪ ಮಾಡಿದ್ದಾರೆ. ಪಕ್ಷದ ಸಂಘಟನೆ ಮಾಡಬೇಕಾದರೆ ನಾನು ಸಹ ದಿವಂಗತ ಶ್ರೀಮತಿ ವಿಮಲಾಗೌಡ ರವರ ಜೊತೆಯಲ್ಲಿ ಹೋಗುತ್ತಿದ್ದೆ ಎನ್ನುವ ವಿಚಾರವನ್ನು ಮೊನ್ನೆ ತಾನೇ ಅದನ್ನು ಅವರು ಪ್ರಸ್ತಾಪ ಮಾಡಿದ್ದಾರೆ. ಶಿಷ್ಟಾಚಾರ ಉಲ್ಲಂಘನೆ ಮಾಡುವುದರ ಮೂಲಕ ಮಾನ್ಯ ಮುಖ್ಯಮಂತ್ರಿಗಳ ಫೋಟೋವನ್ನು ಅವರ ಕಚೇರಿಯಲ್ಲಿ ಹಾಕದೆ, ಯಾವ ಸಂಘಟನೆಗೆ ಅವರು ಸೇರಿದ್ದಾರೆಯೋ ಆ ಸಂಘಟನೆಯ ಫೋಟೋಗಳನ್ನು; ಆರ್‌ಎಸ್‌ಎಸ್‌ನ ಪ್ರಮುಖರ ಫೋಟೋಗಳನ್ನು ಹಾಕಿರುವಂಥದ್ದು ನಿಯಮಾವಳಿಗೆ ಮತ್ತು protocol ಗೆ ವಿರುದ್ಧವಾಗಿರುವಂಥದ್ದನ್ನು ಮಾಡಿದ್ದಾರೆ.

**ಶ್ರೀ ಬಸನಗೌಡ ಆರ್.ಪಾಟೀಲ್(ಯತ್ನಾಳ್):–** ಮಾನ್ಯ ಉಪಸಭಾಪತಿಯವರೆ, ನನ್ನದೊಂದು ಪಾಯಿಂಟ್ ಆಫ್ ಆರ್ಡರ್ ಇದೆ.

“ ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**ಉಪ ಸಭಾಪತಿಯವರು:–** ಮಾನ್ಯ ಬಸನಗೌಡ ಪಾಟೀಲ್ ಯತ್ನಾಳ್‌ರವರೆ, ತಾವು ದಯವಿಟ್ಟು ಕುಳಿತುಕೊಳ್ಳಿ.

**ಶ್ರೀ ಐವನ್ ಡಿ'ಸೋಜಾ(ಸರ್ಕಾರದ ಮುಖ್ಯ ಸಚೇತಕರು):–** ಮಾನ್ಯ ಉಪಸಭಾಪತಿಯವರೆ, ತಾವು ಮಾತನಾಡುವುದಕ್ಕೆ ಮಾನ್ಯ ಉಗ್ರಪ್ಪನವರಿಗೆ ಅವಕಾಶ ಕೊಟ್ಟಿದ್ದೀರಿ, ಅವರು ಮಾತನಾಡಲಿ. ಅವರು ಮಾತನಾಡುವಾಗ ಇವರು ಏಕೆ ಮಧ್ಯೆ ಮಾತನಾಡುತ್ತಿದ್ದಾರೆ?

**ಶ್ರೀ ಬಸನಗೌಡ ಆರ್.ಪಾಟೀಲ್(ಯತ್ನಾಳ್):–** ಮಾನ್ಯ ಉಪಸಭಾಪತಿಯವರೆ, ಅವರು ಅನೇಕ ಗಂಭೀರವಾದಂತಹ ಆರೋಪಗಳನ್ನು ಮಾಡುತ್ತಿದ್ದಾರೆ. ಅದಕ್ಕೆ ಅವರಿಗೆ ಅವಕಾಶ ಕೊಡಬಾರದು. ತಕ್ಷಣ ಇದನ್ನು ಮತಕ್ಕೆ ಹಾಕಬೇಕೆಂದು ಕೇಳಿಕೊಳ್ಳುತ್ತಿದ್ದೇನೆ.

**ಶ್ರೀ ವಿ.ಎಸ್.ಉಗ್ರಪ್ಪ:–** ಮಾನ್ಯ ಉಪಸಭಾಪತಿಯವರೆ, ನಾನು ಹೇಳಿರುವ ಆರೋಪವೇನಾದರೂ disprove ಆದರೆ ನಾನು ಈ ಸದನದ ಸದಸ್ಯನಾಗಿ ಒಂದು ನಿಮಿಷ ಕೂಡ ಮುಂದುವರೆಯುವುದಿಲ್ಲ.

[XXX]

**ಶ್ರೀ ವಿ.ಸೋಮಣ್ಣ:–** ಮಾನ್ಯ ಉಪಸಭಾಪತಿಯವರೆ, ತಮ್ಮ ರೂಲಿಂಗ್ ಏನಾಯಿತು?

**ಶ್ರೀ ವಿ.ಎಸ್.ಉಗ್ರಪ್ಪ:–** ಮಾನ್ಯ ಉಪಸಭಾಪತಿಯವರೆ, ಈ ಬಾಗಿಲುಗಳ ಚಿಲಕಗಳೇನಿವೆ, ಇಡೀ ವಿಧಾನಸೌದಕ್ಕೆ ನೀರು ಸಪ್ಲೈ ಮಾಡುವುದಕ್ಕೆ.....

**ಉಪ ಸಭಾಪತಿಯವರು:–** ಮಾನ್ಯ ಉಗ್ರಪ್ಪನವರೆ, ತಾವು ಗಾಂಧಿ ಪ್ರತಿಮೆ ಬಗ್ಗೆ ಏನು ಮಾತನಾಡಿದ್ದೀರಿ ಅದನ್ನು ಕಡತದಿಂದ ತೆಗೆದಿದ್ದೇನೆ.

**ಶ್ರೀ ವಿ.ಎಸ್.ಉಗ್ರಪ್ಪ:–** ಮಾನ್ಯ ಉಪಸಭಾಪತಿಯವರೆ, [XXX]

---

[XXX] ಸಭಾಪತಿಯವರ ಆಜ್ಞಾನುಸಾರ ಕಡತದಿಂದ ತೆಗೆದುಹಾಕಲಾಗಿದೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಉಪ ಸಭಾಪತಿಯವರು:–** ಮಾನ್ಯ ಉಗ್ರಪ್ಪನವರೆ, ನಾನು ಪದೇಪದೇ ಹೇಳುತ್ತಿದ್ದೇನೆ. ಇಂತಹ ಆಧಾರ ರಹಿತವಾದ ವಿಷಯಗಳನ್ನು ಇಂಥ ಹುದ್ದೆಯಲ್ಲಿರುವಂಥವರ ಬಗ್ಗೆ ತಾವು ಈ ಸಂದರ್ಭದಲ್ಲಿ ಮಾತನಾಡತಕ್ಕಂಥದ್ದು ಉಚಿತವಲ್ಲ. ತಾವು ನೋಟಿಸ್‌ನಲ್ಲಿ ಕೊಡದಿರುವುದರಿಂದ ಅದನ್ನು ನಾನು ಕಡತದಿಂದ ತೆಗೆದಿದ್ದೇನೆ.

(ಮುಂದು)

***(755) 15–06–2017/ 1–20/ ಕೆಹೆಚ್/ವಿಕೆ***

**ಶ್ರೀ ಐವನ್ ಡಿ'ಸೋಜಾ (ಸರ್ಕಾರಿ ಮುಖ್ಯ ಸಚೇತಕರು):–** ಮಾನ್ಯ ಸಭಾಪತಿಯವರೆ, ಹಾಗಾದರೆ, ಮುಂದೆ ತಾವು ಮಾತನಾಡುವುದಕ್ಕೆ ಅವಕಾಶ ಕೊಡಬಾರದು.

**ಉಪ ಸಭಾಪತಿಯವರು:–** ದಯವಿಟ್ಟು ಕುಳಿತುಕೊಳ್ಳಿ.

**ಶ್ರೀ ಐವನ್ ಡಿ'ಸೋಜಾ:–** ಮಾನ್ಯ ಸಭಾಪತಿಯವರೆ,

**ಉಪ ಸಭಾಪತಿಯವರು:–** ಶ್ರೀ ಉಗ್ರಪ್ಪನವರನ್ನು ಕರೆದಿದ್ದೇನೆ. ಅವರು ಮಾತನಾಡುತ್ತಿದ್ದಾರೆ.

**ಶ್ರೀ ಐವನ್ ಡಿ'ಸೋಜಾ:–** ಮಾನ್ಯ ಸಭಾಪತಿಯವರೆ, ಶ್ರೀ ಉಗ್ರಪ್ಪನವರಿಗೆ ಮಾತನಾಡುವುದಕ್ಕೆ ಅವಕಾಶವನ್ನು ಕೊಡಬಾರದಿತ್ತು. ಅವಕಾಶವನ್ನು ಕೊಟ್ಟ ಮೇಲೆ ಅದೇ ಮಾತನಾಡಬೇಕು. ಇದೇ ಮಾತನಾಡಬೇಕು ಎಂದು ಹೇಳುವಂತಹದ್ದು, ಎಷ್ಟರಮಟ್ಟಿಗೆ ಸರಿ. You should not have allowed....

**ಉಪ ಸಭಾಪತಿಯವರು:–** ಶ್ರೀ ಐವನ್ ಡಿ'ಸೋಜಾ ರವರೇ ದಯವಿಟ್ಟು ಕುಳಿತುಕೊಳ್ಳಿ.

**ಶ್ರೀ ಐವನ್ ಡಿ'ಸೋಜಾ:–** ಮಾನ್ಯ ಸಭಾಪತಿಯವರೆ, ಅವಕಾಶವನ್ನು ಕೊಡಬಾರದಿತ್ತು. ಒಂದು ಬಾರಿ ಅವಕಾಶವನ್ನು ಕೊಟ್ಟ ಮೇಲೆ ನನಗೆ ಬೇಕಾಗಿರುವುದನ್ನೇ ಮಾತನಾಡಿ, ಬೇಡವಾಗಿರುವುದನ್ನು ಮಾತನಾಡಬೇಡಿ. ಅದೇ ಮಾತನಾಡಿ. ಇದೇ ಮಾತನಾಡಿ. ಕಡತದಿಂದ ತೆಗೆದು ಹಾಕುತ್ತೇನೆ ಎಂದು ಹೇಳುವುದು ಸರಿಯಲ್ಲ. If you disallow, don't allow them to speak. But, you have allowed them to speak and let them speak....

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಉಪ ಸಭಾಪತಿಯವರು:-** ಶ್ರೀ ಐವನ್ ಡಿ'ಸೋಜಾ ರವರೇ ಕುಳಿತುಕೊಳ್ಳುತ್ತೀರೋ, ಇಲ್ಲವೋ? ದಯವಿಟ್ಟು ಕುಳಿತುಕೊಳ್ಳಿ.

**ಶ್ರೀ ವಿ.ಎಸ್.ಉಗ್ರಪ್ಪ:-** ಮಾನ್ಯ ಸಭಾಪತಿಯವರೆ,

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಯವರೆ,

**ಉಪ ಸಭಾಪತಿಯವರು:-** ಮಾನ್ಯ ಪುಟ್ಟಣ್ಣನವರೆ ದಯವಿಟ್ಟು ಕುಳಿತುಕೊಳ್ಳಿ., ಉಗ್ರಪ್ಪನವರು ಮಾತನಾಡಿ ಮುಗಿಸಲಿ.

**ಶ್ರೀ ಪುಟ್ಟಣ್ಣ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಎರಡು ನಿಮಿಷಗಳ ಕಾಲ ಮಾತನಾಡುತ್ತೇನೆ. ದಯವಿಟ್ಟು ಯಾರು ಅನ್ಯಥಾ ಭಾವಿಸುವ ಅಗತ್ಯವಿಲ್ಲ. ನನ್ನ ವೈಯಕ್ತಿಕ ವಿನಂತಿಯೇನೆಂದರೆ 15 ವರ್ಷಗಳಿಂದ ಬಹಳಷ್ಟು ಜನರನ್ನೂ ನೋಡಿದ್ದೇವೆ. ಸಭಾಪತಿಗಳಾದವರನ್ನು ಮತ್ತು ಎಲ್ಲ ಮಾನ್ಯ ಸದಸ್ಯರುಗಳನ್ನು ಸಹ ನೋಡಿದ್ದೇವೆ. ಕುರ್ಚಿಯಲ್ಲಿರುವವರ ಮೇಲೆ ಆಪಾದನೆಯನ್ನು ಮಾಡಿದಾಗ ನಾವೇ ಆಗಲಿ ಅಥವಾ ಯಾರಾದರೂ ಆಗಲಿ, ಅವರು ನಿರ್ಣಯವನ್ನು ಕೊಡುವಂತಹ ಸಂದರ್ಭದಲ್ಲಿ ಮಾತನಾಡುವುದಕ್ಕೆ ಆಸ್ಪದ ಮಾಡಿಕೊಡಬಹುದಾಗಿತ್ತು. ನೀವು ಕೇಳಿರುವುದಕ್ಕೆ ನಾನು ಹೇಳುತ್ತಿದ್ದೇನೆ. ಈ ಕಡೆಯವರು ನನ್ನನ್ನು ಅದೇ ರೀತಿ ತಡೆದರಲ್ಲವೇ? ಆಗ ನನಗೆ ಮಾತನಾಡುವುದಕ್ಕೆ ಅವಕಾಶವೇ ಸಿಗಲಿಲ್ಲ. ಶ್ರೀ ಬಸವರಾಜ ಹೊರಟ್ಟಿಯವರಿಗೂ ಸಹ ಮಾತನಾಡುವುದಕ್ಕೆ ಅವಕಾಶ ಸಿಗಲಿಲ್ಲ.

**ಶ್ರೀ ಹೆಚ್.ಎಂ.ರೇವಣ್ಣ:-** ಮಾನ್ಯ ಸಭಾಪತಿಯವರೆ, ...

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರೆ, ನಾನು ಮಾತನಾಡುವುದನ್ನು ಸ್ವಲ್ಪ ಕೇಳಿ. ನಾನು ಮಾತನಾಡುವುದನ್ನು ಏಕೆ ಕೇಳುವುದಿಲ್ಲ. ನಾವು ಮಾತನಾಡಬಾರದೇ? ನಾನು ಅನುಮತಿಯನ್ನು ತೆಗೆದುಕೊಂಡು ಮಾತನಾಡುತ್ತಿದ್ದೇನೆ. ನನಗೆ ನಾನೇನು ಎಂದು ಹೇಳುವುದಕ್ಕೆ ಅವಕಾಶ ಸಿಗಲೇ ಇಲ್ಲ. ಶ್ರೀ ಬಸವರಾಜ ಹೊರಟ್ಟಿಯವರಿಗೂ ಸಹ ಮಾತನಾಡುವುದಕ್ಕೆ ಅವಕಾಶ ಸಿಗಲಿಲ್ಲ. ನಾನು ಏಕೆ ಹೇಳುತ್ತೇನೆಂದರೆ, bad precedent ಆಗುವುದು ಬೇಡ. ಯಾರೇ ಆಗಿರಲಿ, ಇವತ್ತಿನ ದಿವಸ ಅವರು ಇರುತ್ತಾರೆ, ನಾಳೆ ನೀವು ಆಗುತ್ತೀರಿ, ಇನ್ನೊಬ್ಬರು ಯಾರೋ ಆಗುತ್ತಾರೆ. ಆದರೆ ಆ ಪೀಠದ ಬಗ್ಗೆ ಅವರ ಗೈರು ಹಾಜರಿಯಲ್ಲಿ ಅವರು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಈಗ ಏನು ಮಾತನಾಡುವುದಕ್ಕೆ ಆಗುವುದಿಲ್ಲ ಮತ್ತು ಸಮರ್ಥನೆ ಮಾಡಿಕೊಳ್ಳುವುದಕ್ಕೂ ಆಗುವುದಿಲ್ಲವೆಂದು ನಿಮಗೂ ಗೊತ್ತು, ನಮಗೂ ಗೊತ್ತಿದೆ. ಎಲ್ಲರಿಗೂ ಗೊತ್ತಿದೆ. ನಾನು ಅದರ ಬಗ್ಗೆ ಮಾತನಾಡುವುದಕ್ಕೆ ಹೋಗುವುದಿಲ್ಲ. ಆದರೆ bad precedent ಆಗುವುದು ಬೇಡ. ದಯವಿಟ್ಟು ಅದನ್ನು ಬಿಟ್ಟು, ಈಗ ಏನು ಮಾಡಬೇಕೆಂದು ಅಂದುಕೊಂಡಿದ್ದೀರಿ? ದಯವಿಟ್ಟು, ಅಷ್ಟನ್ನು ಮಾತ್ರ ಹೇಳಿ. ಉಳಿದಿದ್ದು ಏನೂ ಬೇಡ. ನಾವೆಲ್ಲರೂ ಸೇರಿ ಆ ಪೀಠದ ಮರ್ಯಾದೆಯನ್ನು ಉಳಿಸೋಣ.

**ಶ್ರೀ ವಿ.ಎಸ್.ಉಗ್ರಪ್ಪ:–** ಮಾನ್ಯ ಸಭಾಪತಿಯವರೆ, bad precedent ಅನ್ನು precedent ಎಂದು ಹೇಳಿ ತೆಗೆದುಕೊಳ್ಳುವುದಕ್ಕೆ ಬರುವುದಿಲ್ಲ. ದಯಮಾಡಿ, ಅವರನ್ನು ಬಿಟ್ಟಿರುವುದು ತಪ್ಪು. That was a bad precedent. ಸಂವಿಧಾನದ ಆಶಯಗಳ ರೀತ್ಯಾ ಅಥವಾ ನಿಯಮಾವಳಿಯ ರೀತ್ಯಾ ಯಾರ ಮೇಲೆ ಸದನದಲ್ಲಿ ಆರೋಪಗಳನ್ನು ಮಾಡುತ್ತಾರೆ. ಆ ಆರೋಪಗಳಿಗೆ ಉತ್ತರ ಕೊಡುವುದಕ್ಕೆ ಅವಕಾಶವಿದೆ. *M. N. Kaul* and S. L. *Shakdher* ನಲ್ಲೂ ಅದನ್ನೇ ಹೇಳುತ್ತಾರೆ. ಬೇರೆಯದನ್ನು ಹೇಳುತ್ತಾರೆ. ನಾನು ಇವತ್ತಿನ ದಿವಸ ನೇರವಾಗಿ ಹೇಳುತ್ತಿದ್ದೇನೆ. ನಾನು ಹೇಳಿರುವಂತಹ ಪ್ರತಿಮೆಯ ಅಳತೆಯಲ್ಲಿ ಏನಾದರೂ ವ್ಯತ್ಯಾಸವಿದ್ದರೆ, ಈ ಸದನದ ಸದಸ್ಯನಾಗಿ ಒಂದು ನಿಮಿಷ ಕೂಡ ಸದನದಲ್ಲಿರುವುದಕ್ಕೆ ಸಿದ್ಧನಿಲ್ಲ. ರಾಜೀನಾಮೆಯನ್ನು ಕೊಟ್ಟು ಹೋಗುತ್ತೇನೆ.

**ಶ್ರೀ ಕೆ.ಬಿ. ಶಾಣಪ್ಪ:–** ಮಾನ್ಯ ಸಭಾಪತಿಯವರೆ, ರಾಜೀನಾಮೆಯನ್ನು ಕೊಟ್ಟು ಹೋಗಲಿ.

**ಶ್ರೀ ವಿ.ಎಸ್.ಉಗ್ರಪ್ಪ:–** ಶ್ರೀ ಶಾಣಪ್ಪನವರೆ, ನಿಮ್ಮ ಮಾತಿನ ರೀತಿಯಲ್ಲಿಯೇ ನೀವು ನಮ್ಮ ಹತ್ತಿರ ಏನು ಹೇಳುತ್ತೀರಿ. ರೂಮ್‌ನಲ್ಲಿ ಏನು ಹೇಳುತ್ತೀರಿ. ಇಲ್ಲಿ ಏನು ಹೇಳುತ್ತೀರಿ ಎನ್ನುವುದನ್ನು ... ನೀವೇ ಹೇಳಿದ್ದೀರಿ. ನಾನು ಬೇಕಾದರೆ ಆಚೆಗೆ ಹೋಗುತ್ತೇನೆ. ಮೊದಲು ಮೂವ್ ಮಾಡಿ ಎಂದು ಹೇಳಿದವರಲ್ಲಿ ಶ್ರೀ ಶಾಣಪ್ಪನವರು ಸಹ ಒಬ್ಬರು.

**ಉಪ ಸಭಾಪತಿಯವರು:–** ಮಾನ್ಯ ಉಗ್ರಪ್ಪನವರೆ, ...

**ಶ್ರೀ ವಿ.ಎಸ್.ಉಗ್ರಪ್ಪ:–** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರೆ, ಈ ರೀತಿ ಏಕೆ ಮಾತನಾಡುತ್ತೀರಿ, ಕುಳಿತುಕೊಳ್ಳಿ. ಮಾನ್ಯ ಶಾಣಪ್ಪನವರೆ ನೀವು ಹೇಳಿದ್ದೀರಿ, ಮಾನ್ಯ ಬಿ.ಜೆ.ಪುಟ್ಟಸ್ವಾಮಿಯವರು ಹೇಳಿದರು.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅದೆಷ್ಟೋ ಜನ ಹೇಳಿದರು. ಅದು ಬೇರೆ ಪ್ರಶ್ನೆ. ಮಾನ್ಯ ಶಾಣಪ್ಪನವರೆ ಕುಳಿತುಕೊಳ್ಳಿ. ನೀವು ಏನು ಪಕ್ಷ ನಿಷ್ಠೆಯನ್ನು ತೋರಿಸುತ್ತೀರಿ.

(ಗೊಂದಲ)

**ಶ್ರೀ ಹೆಚ್.ಎಂ.ರೇವಣ್ಣ:-** ಮಾನ್ಯ ಸಭಾಪತಿಯವರೆ, ಯಾರ್‍ಯಾರು ಹೇಳಿದರು ಎಂದು ಹೇಳಬೇಕಲ್ಲವೇ?

(ಗೊಂದಲ)

**ಶ್ರೀ ಕೆ.ಬಿ. ಶಾಣಪ್ಪ:-** ಮಾನ್ಯ ಸಭಾಪತಿಯವರೆ, ನೀವು ನನ್ನ ಹತ್ತಿರ ಬಂದು ನಮಗೆ ಮತ ಹಾಕಿ ಎಂದು ಕೇಳಿದ್ದೀರಿ. ನಾನು, I am the Deputy Leader of the party and I will not vote ಎಂದು ಹೇಳಿದೆ.

**ಶ್ರೀ ವಿ.ಎಸ್.ಉಗ್ರಪ್ಪ:-** ಮಾನ್ಯ ಸಭಾಪತಿಯವರೆ, ನೀವು ನನ್ನ ಹತ್ತಿರ ಬಂದು ಎಷ್ಟು ಸಾರಿ ಹೇಳಿದ್ದೀರಿ. ಶ್ರೀ ಪುಟ್ಟಸ್ವಾಮಿಯವರು ಹೇಳಿದ್ದಾರೆ.

**ಉಪ ಸಭಾಪತಿಯವರು:-** ಮಾನ್ಯ ಉಗ್ರಪ್ಪನವರೆ, ...

(ಗೊಂದಲ)

**ಶ್ರೀ ವಿ.ಎಸ್.ಉಗ್ರಪ್ಪ:-** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರೆ, ಸುಳ್ಳನ್ನು ಏಕೆ ಹೇಳುತ್ತೀರಿ.

(ಗೊಂದಲ)

**ಉಪ ಸಭಾಪತಿಯವರು:-** ಶ್ರೀ ಉಗ್ರಪ್ಪನವರೆ, ದಯವಿಟ್ಟು ಕುಳಿತುಕೊಳ್ಳಿ. ಶ್ರೀ ಶಾಣಪ್ಪನವರೆ ದಯವಿಟ್ಟು ಕುಳಿತುಕೊಳ್ಳಿ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಭಾನುಪ್ರಕಾಶ:–** ಮಾನ್ಯ ಸಭಾಪತಿಯವರೆ, ಅವರು ಏನು resolution move ಮಾಡುತ್ತಿದ್ದಾರೆ ನೀವು ಸಮಯ ನಿಶ್ಚಯ ಮಾಡಿದ್ದೀರಿ. ವ್ಯಕ್ತಿಗತವಾಗಿ ಯಾರು ಏನು ಮಾತನಾಡಿದ್ದಾರೆ.

(ಗೊಂದಲ)

**ಉಪ ಸಭಾಪತಿಯವರು:–** ಶ್ರೀ ಭಾನುಪ್ರಕಾಶರವರೆ, ದಯವಿಟ್ಟು ಕುಳಿತುಕೊಳ್ಳಿ.

**ಶ್ರೀ ವಿ.ಎಸ್.ಉಗ್ರಪ್ಪ:–** ಮಾನ್ಯ ಉಪ ಸಭಾಪತಿಯವರೆ, ಒಂದು ಕಡೆ ಸಭಾಪತಿಯವರ ಹೆಸರಿನ ಬೇನಾಮಿ ವ್ಯವಹಾರಗಳ ಮೂಲಕ ನೀರು ಸರಬರಾಜು ಮಾಡುವಂತಹದ್ದು. ರಿಪೇರಿಗಳನ್ನು ಮಾಡುವಂತಹದ್ದು.

**ಉಪ ಸಭಾಪತಿಯವರು:–** ಶ್ರೀ ಉಗ್ರಪ್ಪನವರೆ, ದಯವಿಟ್ಟು ಸೆಕ್ಷನ್–307 ಅನ್ನು ಓದಿ.

(ಗೊಂದಲ)

**ಶ್ರೀ ವಿ.ಎಸ್.ಉಗ್ರಪ್ಪ:–** ಮಾನ್ಯ ಉಪ ಸಭಾಪತಿಯವರೆ, ವಾಹನಗಳು ಎಷ್ಟು ಅವಶ್ಯಕತೆಯಿದೆ. (ಗೊಂದಲ) ದುಡ್ಡನ್ನು ತೆಗೆದುಕೊಂಡಿದ್ದಾರೆ.

**ಉಪ ಸಭಾಪತಿಯವರು:–** ಶ್ರೀ ಉಗ್ರಪ್ಪನವರೆ, ದಯವಿಟ್ಟು ತಾವು ಹಿರಿಯರಿದ್ದೀರಿ. ದಯವಿಟ್ಟು ಸೆಕ್ಷನ್–307 ಅನ್ನು ಓದಿ.

**ಶ್ರೀ ವಿ.ಎಸ್.ಉಗ್ರಪ್ಪ:–** ಮಾನ್ಯ ಉಪ ಸಭಾಪತಿಯವರೆ, ದಯಮಾಡಿ, ಸೆಕ್ಷನ್–307 ರ ಹಿನ್ನಲೆಯಲ್ಲಿ ಅವರಿಗೆ no-confidence motion move ಮಾಡುವುದಕ್ಕೆ ನೋಟಿಸ್‌ನ್ನು ಕೊಟ್ಟಿದ್ದೇವೆ. No-confidence motion ಸರ್ಕಾರದ ವಿರುದ್ಧವೋ, ಸಭಾಪತಿಯವರ ವಿರುದ್ಧವೋ, ...

**ಉಪ ಸಭಾಪತಿಯವರು:–** ಶ್ರೀ ಉಗ್ರಪ್ಪನವರೆ, ಸೆಕ್ಷನ್–307 ಅನ್ನು ಓದಿ ಎಂದು ಹೇಳುತ್ತಿರುವುದು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ವಿ.ಎಸ್.ಉಗ್ರಪ್ಪ:–** ಮಾನ್ಯ ಉಪ ಸಭಾಪತಿಯವರೆ, ಸೆಕ್ಷನ್–307 ಅನ್ನು ಓದುತ್ತೇನೆ. This 307 is not a Section, it's a Rule.

> ***"307. Procedure regarding allegation against a person:-*** *No allegations of a defamatory or incriminatory nature shall be made by a member against any person unless the member has given previous intimation to the Chairman and also the Minister concerned so that the Minister may be able to make an investigation into the matter for the purpose of reply:*
>
> *Provided that the Chairman, may, at any time, prohibit any member from making any such allegation, if he is of opinion that such allegation is derogatory to the dignity of the Council or that no public interest is served by making such allegation."*

**ಉಪ ಸಭಾಪತಿಯವರು:–** ಮಾನ್ಯ ಉಗ್ರಪ್ಪನವರೆ, ಸೆಕ್ಷನ್–307 ಏನು ಹೇಳುತ್ತದೆ ಎಂಬುದನ್ನು ಹೇಳಿ.

**ಶ್ರೀ ವಿ.ಎಸ್.ಉಗ್ರಪ್ಪ:–** ಮಾನ್ಯ ಉಪ ಸಭಾಪತಿಯವರೆ, ಇಲ್ಲಿ ಬೇರೆ ಆರೋಪಗಳು ಮಾಡುವುದಕ್ಕೂ, no-confidence motion ಮಾಡಿದ್ದಂತಹ ಸಂದರ್ಭದಲ್ಲಿ 'sky is the limit'.

**ಉಪ ಸಭಾಪತಿಯವರು:–** ಉಗ್ರಪ್ಪನವರು ಕಾನೂನು ಪಂಡಿತರಿದ್ದಾರೆ. ದಯಮಾಡಿ, ಇನ್ನೂ ಒಂದು ಬಾರಿ ಓದಿ.

**ಶ್ರೀ ವಿ.ಎಸ್.ಉಗ್ರಪ್ಪ:–** ಮಾನ್ಯ ಉಪ ಸಭಾಪತಿಯವರೆ, ತಾವು ಸಹ ದಯವಿಟ್ಟು ಒಂದು ಬಾರಿ ಓದಿ.

**ಉಪ ಸಭಾಪತಿಯವರು:–** ಶ್ರೀ ಉಗ್ರಪ್ಪನವರೆ, ನಾನಲ್ಲ ಓದುವುದು. ತಾವು ಒಂದು ಬಾರಿ ಓದಿ.

**ಶ್ರೀ ವಿ.ಎಸ್.ಉಗ್ರಪ್ಪ:–** ಮಾನ್ಯ ಉಪ ಸಭಾಪತಿಯವರೆ, ನನ್ನ ಜೀವನದಲ್ಲಿ ಒಂದು ಬಾರಿ ಅಲ್ಲ. ಹದಿನಾರು ಬಾರಿ ಓದಿದ್ದೇನೆ.

**ಉಪ ಸಭಾಪತಿಯವರು:–** ಶ್ರೀ ಉಗ್ರಪ್ಪನವರೆ, ಸ್ವಲ್ಪ ಮಾತಿನ ಬಗ್ಗೆ ಹಿಡಿತವಿರಲಿ. ತಾವು ಹಿರಿಯರಿದ್ದೀರಿ. ಹೆಚ್ಚು ಹೇಳಿಸಿಕೊಳ್ಳಬಾರದು. ಇಂತಹ ಸಂದರ್ಭದಲ್ಲಿ ಯಾವ ಹುದ್ದೆ ಬಗ್ಗೆ, ಯಾವ ನಿರ್ಣಯಕ್ಕೆ ನಾವೆಲ್ಲ

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಕುಳಿತುಕೊಂಡಿದ್ದೇವೆ ಎನ್ನುವ ಅರಿವಿರಬೇಕಾಗುತ್ತದೆ. ಗೌರವಯುತವಾಗಿ ನಿರ್ಣಯವಾಗಬೇಕು. ಆ ನಿಟ್ಟಿನಲ್ಲಿ ತಮಗೂ ಕೂಡ ಕಾನೂನು ಎಲ್ಲ ಗೊತ್ತಿದೆ.

**ಶ್ರೀ ವಿ.ಎಸ್.ಉಗ್ರಪ್ಪ:–** ಮಾನ್ಯ ಉಪ ಸಭಾಪತಿಯವರೆ, ಒಂದು ನಿಮಿಷ ...

**ಉಪ ಸಭಾಪತಿಯವರು:–** ಒಬ್ಬ ಸಾಮಾನ್ಯ ಸದಸ್ಯರ ವಿಚಾರದಲ್ಲೂ ಕೂಡ ಮಾತನಾಡಬೇಕೆಂದರೆ ಸೆಕ್ಷನ್–307 ಏನು ಹೇಳುತ್ತದೆ. ತಾವು ಇದುವರೆವಿಗೂ ಹೇಳಿದರಲ್ಲವೇ? ಅದರ ಬಗ್ಗೆ ಏನಾದರೂ ಕೂಡ ನೀವು ಮಾಹಿತಿಯನ್ನು ಕೊಟ್ಟಿದ್ದೀರಾ? ಈ ರೀತಿ ಮಾತನಾಡುವುದಕ್ಕೆ ಸದನದಲ್ಲಿ ಅವಕಾಶವನ್ನು ಕೊಡಬೇಕೇ? ದಯಮಾಡಿ, ಬೇಗ ಮುಗಿಸಿ.

**ಶ್ರೀ ವಿ.ಎಸ್.ಉಗ್ರಪ್ಪ:–** ಮಾನ್ಯ ಉಪ ಸಭಾಪತಿಯವರೆ, ದಯಮಾಡಿ ತಾವು ಒಂದು ಮಾತನ್ನು ತಿಳಿದುಕೊಳ್ಳಬೇಕಾಗುತ್ತದೆ. ನಾವು no-confidence ಗೆ ಸಂಬಂಧಪಟ್ಟ ಹಾಗೆ ನೋಟೀಸನ್ನು ಕೊಟ್ಟಿದ್ದೇವೆ. ತಾವು ದಯಮಾಡಿ ಅರ್ಥಮಾಡಿಕೊಳ್ಳಬೇಕಾಗುತ್ತದೆ. ಈ resolution ನಲ್ಲಿ ನನಗೆ ಹಕ್ಕಿದೆ. ಏನೆಲ್ಲ ಆರೋಪಗಳ ಮೇಲೆ resolution ಮಾಡುವಂತಹದ್ದು ಎಂದು ಹೇಳಿ. ಸಂವಿಧಾನದಲ್ಲಿ mandate ಇದೆ. ಅದರ ಅಡಿಯಲ್ಲಿ ನಾನು ಹೇಳುತ್ತಿದ್ದೇನೆ. ಇವತ್ತಿನ ದಿವಸ ಯಾರು ಸಭಾಪತಿಗಳಿದ್ದಾರೆ. ಸಂವಿಧಾನ ಮತ್ತು ನಿಯಮಾವಳಿಗಳಿಗೆ ವಿರುದ್ಧವಾಗಿ ನಡೆದುಕೊಂಡಿದ್ದಾರೆ. ಶಿಷ್ಟಾಚಾರಕ್ಕೆ ವಿರುದ್ಧವಾಗಿ ನಡೆದುಕೊಂಡಿದ್ದಾರೆ. ಆ ಸ್ಥಾನದಿಂದ ಭ್ರಷ್ಟಾಚಾರಕ್ಕೆ ಕುಮ್ಮಕ್ಕು ಕೊಟ್ಟಿದ್ದಾರೆ. ಸ್ವಜನ ಪಕ್ಷಪಾತ ಮಾಡಿದ್ದಾರೆ. ಇದಕ್ಕೆ ಅನೇಕ ಪುರಾವೆಗಳಿವೆ. ಅದರ ಜೊತೆಗೆ ಅವರು ಮತೀಯ ಶಕ್ತಿಗಳ ಪ್ರತೀಕವಾಗಿ ಫೋಟೋಗಳನ್ನು ಹಾಕಿಕೊಂಡಿರುವುದನ್ನು ನೋಡಿದರೆ, ನಮ್ಮ ಸಂವಿಧಾನದ ಆಶಯಗಳಿಗೆ ವಿರುದ್ಧವಾಗಿರುವಂತಹ ಹಿನ್ನಲೆಯಲ್ಲಿ ಮತೀಯ ಶಕ್ತಿಯ ಪ್ರತೀಕವಾಗಿರುವಂತಹ ಅಂಬೇಡ್ಕರ್ ಫೋಟೋವನ್ನು ಹಾಕುವುದಕ್ಕೂ ಸಹ ಅನೇಕ ಬಾರಿ ಕೇಳಿಕೊಳ್ಳಬೇಕಾಗಿತ್ತು.

(ಮುಂದು)

756/15-06-2017/1-30/bkp-vk

**ಶ್ರೀ ವಿ.ಎಸ್.ಉಗ್ರಪ್ಪ(ಮುಂದು)**

ಅಂತಿಮವಾಗಿ ವರ್ಷಗಳ ನಂತರ ಅಂಬೇಡ್ಕರ್ ಫೋಟೋ ಹಾಕುವುದಕ್ಕೆ ಅವಕಾಶವನ್ನು ಕೊಟ್ಟಿರುವುದಾಗಿದೆ. ಹೀಗಾಗಿ, ಮತೀಯ ಶಕ್ತಿಗಳ ಪ್ರತೀಕವಾಗಿರುವಂತಹವರು ಸಭಾಪತಿ ಸ್ಥಾನದಲ್ಲಿರುವಂತಹದ್ದು ಸಾಧುವಲ್ಲ.

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ದಯಮಾಡಿ, ಜಾತ್ಯಾತೀತ ತತ್ವಗಳಲ್ಲಿ ವಿಶ್ವಾಸ ಇರತಕ್ಕಂತಹ ನಾವೆಲ್ಲರೂ ಮತೀಯ ಶಕ್ತಿಯಾಗಿರುವಂತಹ, ಯಾವ ಸದನದ ಘನತೆ-ಗೌರವಕ್ಕೆ ದಕ್ಕೆ ತಂದಿರುವಂತಹ ಸಭಾಪತಿಯವರು ಮುಂದುವರಿಯಬಾರದು ಎಂದು ಹೇಳಿ, ಈ ನಿರ್ಣಯವನ್ನು ಮೂವ್ ಮಾಡಿದ್ದೇವೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಮತ್ತು ಜಾತ್ಯಾತೀತ ವ್ಯವಸ್ಥೆಯಲ್ಲಿ ವಿಶ್ವಾಸವನ್ನಿಟ್ಟಿರುವಂತಹ ಎಲ್ಲಾ ರಾಜಕೀಯ ಪಕ್ಷಗಳು ಪಕ್ಷೇತರರು ಮತ್ತು ಮತ್ತೊಬ್ಬರು ಎಲ್ಲರೂ ಸಹ ಬೆಂಬಲ ನೀಡುತ್ತಾರೆ, ನೀಡಬೇಕೆಂದು ಅವರುಗಳಲ್ಲಿ ವಿನಂತಿ ಮಾಡಿ ಈ ನಿರ್ಣಯಕ್ಕೆ ಸದನದ ಒಪ್ಪಿಗೆ ಕೊಡಬೇಕೆಂದು ವಿನಯವಾಗಿ ನಾನು ಸದನವನ್ನು ಕೇಳಲಿಕ್ಕೆ ಬಯಸುತ್ತೇನೆ.

**ಉಪ ಸಭಾಪತಿಯವರು:-** ಈಗ ಮಾನ್ಯ ಶ್ರೀ ಶಂಕರಮೂರ್ತಿಯವರಿಗೆ 5 ನಿಮಿಷಗಳ ಕಾಲ ಮಾತನಾಡಲಿಕ್ಕೆ ಅವಕಾಶವನ್ನು ಕೊಡುತ್ತೇನೆ.

**ಶ್ರೀ ಡಿ.ಹೆಚ್.ಶಂಕರಮೂರ್ತಿ:-** ಗೌರವಾನ್ವಿತ ಸಭಾಪತಿಗಳೆ,

**ಶ್ರೀ ಬಸವರಾಜ ಹೊರಟ್ಟಿ:-** ಮಾನ್ಯ ಸಭಾಪತಿಯವರೆ,

> **ನಿಯಮ-307. ಒಬ್ಬ ವ್ಯಕ್ತಿಯನ್ನು ಕುರಿತ ಅಪಾದನೆಯ ಬಗ್ಗೆ ಕೈಗೊಳ್ಳಬೇಕಾದ ಕಾರ್ಯವಿಧಾನ:-** ಸದಸ್ಯರು ಸಭಾಪತಿಯವರಿಗೆ ಮತ್ತು ಸಂಬಂಧಪಟ್ಟ ಮಂತ್ರಿಗಳಿಗೆ, ಮಂತ್ರಿಗಳು ಉತ್ತರ ನೀಡುವ ಉದ್ದೇಶಕ್ಕಾಗಿ ತನಿಖೆ ನಡೆಸಲು ಸಾಧ್ಯವಾಗುವಂತೆ ಪೂರ್ವ ಮಾಹಿತಿಯನ್ನು ಕೊಟ್ಟಿದ್ದ ಹೊರತು, ಯಾವ ಸದಸ್ಯರು ಯಾರೇ ವ್ಯಕ್ತಿಯ ವಿರುದ್ಧ ಅಪಮಾನಕರವಾದ ಅಥವಾ ಅಪರಾಧದ ಸ್ವರೂಪದ ಯಾವ ಆರೋಪವನ್ನು ಮಾಡತಕ್ಕದ್ದಲ್ಲ.
>
> ಪರಂತು, ಸಭಾಪತಿಯವರು ಅಂಥ ಆರೋಪವು ಸದನದ ಮರ್ಯಾದೆಗೆ ಕುಂದು ತರುವಂತಹದು ಅಥವಾ ಅದರಿಂದ ಯಾವುದೇ ಸಾರ್ವಜನಿಕ ಹಿತಾಸಕ್ತಿ ರಕ್ಷಣೆಯಾಗುವುದಿಲ್ಲ ಎಂದು ಅಭಿಪ್ರಾಯ ಪಡುವುದಾದರೆ, ಯಾವುದೇ ಸಂದರ್ಭದಲ್ಲಿ ಯಾರೇ ಸದಸ್ಯರು ಅಂತಹ ಯಾವುದೇ ಆರೋಪ ಮಾಡುವುದನ್ನು ನಿಷೇಧಿಸಬಹುದು ಎಂದು ಇದೆ. ಆದ್ದರಿಂದ, ತಾವು ನಿಷೇಧಿಸಬಹುದು. ಕ್ಲಿಯರ್ ಮಾಡಿ. ಅವರಿಗೆ ಮಾತನಾಡಲಿಕ್ಕೆ ಅವಕಾಶ ಕೊಡುವುದು ನಿಮಗೆ ಬಿಟ್ಟ ವಿಷಯ.

**ಉಪ ಸಭಾಪತಿಯವರು:-** ಮಾನ್ಯ ಶಂಕರಮೂರ್ತಿಯವರು 5 ನಿಮಿಷಗಳ ಕಾಲ ಮಾತನಾಡಬಹುದು.

**ಶ್ರೀ ಡಿ.ಹೆಚ್.ಶಂಕರಮೂರ್ತಿ:-** ಗೌರವಾನ್ವಿತ ಸಭಾಪತಿಗಳೆ, ಈ ಸಭೆ ವಿಧಾನ ಪರಿಷತ್ತಿಗೆ ಒಂದು ನೂರು ವರ್ಷಕ್ಕಿಂತ ಜಾಸ್ತಿ ಇತಿಹಾಸ ಇದೆ. ಯೋಗಾಯೋಗ, ಈ ಸಭೆಯಲ್ಲಿ ಸಭಾಪತಿ ಸ್ಥಾನದ ಹುದ್ದೆ, ನಾನು ಬೇರೆ ಬೇರೆ ಸ್ಥಾನದಲ್ಲೂ ಜವಾಬ್ದಾರಿಯನ್ನು ನಿರ್ವಹಿಸಿದ್ದೇನೆ. ಯೋಗಾಯೋಗ ಸಭಾಪತಿ ಸ್ಥಾನದ ಯೋಗ,

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಜವಾಬ್ದಾರಿಯನ್ನು ನನಗೆ ವಹಿಸಿದ್ದಾರೆ. ನಾನು ಈ ಜವಾಬ್ದಾರಿಯನ್ನು ವಹಿಸಿಕೊಂಡ ದಿವಸ ಸದನದಲ್ಲಿ ಮಾತನಾಡಿದ್ದು ನನಗೆ ಇನ್ನೂ ನೆನಪಿದೆ. ನಿಜ, ನಾನು ಭಾರತೀಯ ಜನತಾ ಪಾರ್ಟಿಯ ಸದಸ್ಯ. ಸಭಾಪತಿ ಸ್ಥಾನಕ್ಕೆ ಬರುವ ಮುಂಚೆ ಅದರ active Member ಎಂದು ಇದ್ದೆ. ಸಭಾಪತಿ ಸ್ಥಾನದ ಆ ಕುರ್ಚಿಯ ಮೇಲೆ ಕುಳಿತ ದಿವಸ ಮಾತನಾಡಿದ ಮಾತು, ಆ ಒಂದು ಐದು ರೂಪಾಯಿ ಮೆಂಬರ್‌ಶಿಫ್ ಮುಂದುವರಿಸಿಕೊಂಡು ಹೋಗುತ್ತೇನೆಯೇ ಹೊರತು, ಈ ಕುರ್ಚಿಯಲ್ಲಿ ಕುಳಿತಷ್ಟು ದಿವಸ ನಾನು ಪಕ್ಷಾತೀತವಾಗಿ ಆತ್ಮಸಾಕ್ಷಿಯಾಗಿ ನಡೆದುಕೊಳ್ಳುತ್ತೇನೆಂದು ಹೇಳಿ, ಮತ್ತು ಜವಾಬ್ದಾರಿಯುತವಾಗಿ ಈ ಕುರ್ಚಿಗೆ ಘನತೆ ತರುವ ರೀತಿಯಲ್ಲಿ ನಡೆದುಕೊಳ್ಳುತ್ತೇನೆ ಎನ್ನುವ ಮಾತನ್ನು ನಾನು ಹೇಳಿದ್ದೇನೆ. ಈ ಕುರ್ಚಿಯಲ್ಲಿ ನಾನು ಕುಳಿತ ದಿವಸ ತಾವು ಸಹ ಇದ್ದೀರಿ ಮತ್ತು ಬಹಳಷ್ಟು ಜನ ಸದಸ್ಯರುಗಳು ಸಹ ಇದ್ದರು. ಹಾಗೆಯೇ ನಡೆದುಕೊಂಡು ಬಂದಿದ್ದೇನೆ, ನಡೆಸಿಕೊಂಡು ಬಂದಿದ್ದೇನೆ. ನಾನು ನಡೆಸಿಕೊಂಡು ಬಂದಂತಹ ಸಂದರ್ಭದಲ್ಲಿ ನಾಲ್ಕು ಜನ ಮುಖ್ಯಮಂತ್ರಿಗಳು ಈ ರಾಜ್ಯದ ಜವಾಬ್ದಾರಿಯನ್ನು ನಿರ್ವಹಿಸಿದ್ದಾರೆ. ಸಭಾ ನಾಯಕರಾಗಿ ಕೆಲವರು ತಮ್ಮ ಜವಾಬ್ದಾರಿಯನ್ನು ನಿರ್ವಹಿಸಿಕೊಂಡು ಬಂದಿದ್ದಾರೆ. ನಾನು ಸದನವನ್ನು ಹೇಗೆ ನಡೆಸಿಕೊಂಡು ಬಂದಿದ್ದೇನೆ ಮತ್ತು ಸಭಾಪತಿ ಸ್ಥಾನದ ಒಂದು ಜವಾಬ್ದಾರಿಯನ್ನು ನಾನು ಹೇಗೆ ನಿರ್ವಹಿಸಿದ್ದೇನೆ ಎನ್ನುವುದನ್ನು ನನಗೆ ನಾನೇ ಹೇಳಿಕೊಂಡರೆ ಅದು ಒಳ್ಳೆಯದಲ್ಲವೆಂದು ನನಗೆ ಅನಿಸುತ್ತದೆ. ಮನುಷ್ಯ ಆತ್ಮ ಪ್ರಸಂಶೆಯನ್ನು ಮಾಡಿಕೊಳ್ಳಬಾರದು. ಆದರೂ ಸಹ ಈ ಸದನದ ಇಬ್ಬರು ಸಭಾನಾಯಕರು ಅಂದರೆ, ಹಿಂದಿನ ಸಭಾನಾಯಕರು ಮತ್ತು ಇವತ್ತಿನ ಸಭಾನಾಯಕರು ಆಡಿದ ಮಾತನ್ನು ನಾನು 'humility' ಎನ್ನುವಂತಹ ಪದವನ್ನು ಉಪಯೋಗಿಸುತ್ತೇನೆ. ಕನ್ನಡದಲ್ಲಿ ನನಗೆ ತಕ್ಷಣಕ್ಕೆ ಪದ ಸಿಕ್ಕುತ್ತಿಲ್ಲ. Humility ಯಿಂದ ನಾನು accept ಮಾಡಿ, ಅವರು ಏನು ಹೇಳಿದರು ಎಂದರೆ, ಈ ಕುರ್ಚಿಯಲ್ಲಿ ಕುಳಿತು ಕೆಲಸ ಮಾಡುತ್ತಿದ್ದೀರಿ, ತಾವು ಈ ಕುರ್ಚಿಯಲ್ಲಿ ಕುಳಿತ ಮೇಲೆ ತಮಗಲ್ಲಾ, ಆ ಕುರ್ಚಿಗೆ ಗೌರವ ಜಾಸ್ತಿಯಾಗಿದೆ. ಹಾಗಾಗಿ, ನಿಮಗೆ ಸದನದ ಪರವಾಗಿ ನಾವು ಅಭಿನಂದನೆ ಸಲ್ಲಿಸುತ್ತೇವೆ ಎನ್ನುವ ಮಾತನ್ನು ಒಬ್ಬ ಸಭಾನಾಯಕರಲ್ಲ, ಇಬ್ಬರು ಸಭಾನಾಯಕರು ಹೇಳಿದ್ದು, it is on record. ಮತ್ತೆ, ನನ್ನ ಆರ್ಥಿಕ ವ್ಯವಹಾರಗಳು ಯಾವುದಾದರೂ ಇಲ್ಲಿ ನಡೆದಿವೆ ಎನ್ನತಕ್ಕದ್ದು, ಸುಳ್ಳು ಹೇಳುವಾಗ ಅದಕ್ಕೆ ಒಂದು ಹಸಿ ಸುಳ್ಳು ಎಂದು ನಾವು ಕನ್ನಡದಲ್ಲಿ ಹೇಳುತ್ತೇವೆ. ಹಸಿ ಸುಳ್ಳುಗಳನ್ನು ಯಾರೂ ಹೇಳಬಾರದು. ವಿಷಯ ಗೊತ್ತಿಲ್ಲದೆ ಮಾತನಾಡಬಾರದು. ಹೇಗೆ ನಡೆಸಿದ್ದೇನೆ, ನಡೆದುಕೊಂಡಿದ್ದೇನೆ ಎನ್ನುವುದನ್ನು ನನ್ನ ಸಭಾಪತಿಯ ಜೀವನ ತೆರದಿಟ್ಟ ಪುಸ್ತಕದಂತಿದೆ. ಯಾವುದೂ ಗುಟ್ಟಾಗಿಲ್ಲ. ಈ ಎಲ್ಲಾ ಹಿನ್ನೆಲೆಯಲ್ಲಿ ನಾನು ಸಭಾಪತಿ ಸ್ಥಾನದಲ್ಲಿ ಮೊನ್ನೆ ದಿವಸ, ನಿನ್ನೆ ಅಲ್ಲ, ಮೊನ್ನೆ ರೂಲಿಂಗ್ ಕೊಡುವಾಗ ಕೆಲವು ವಿಷಯಗಳನ್ನು ನಾನು ಪ್ರಸ್ತಾಪ ಮಾಡಿದೆ. ಆ ವಿಷಯಗಳನ್ನು ನಾನು ಪುನಃ ಪ್ರಸ್ತಾಪ ಮಾಡುವುದಕ್ಕೆ ಇಷ್ಟಪಡುವುದಿಲ್ಲ. ಒಂದೇ ಒಂದು ವಿಷಯವನ್ನು ಹೇಳಿದ್ದನ್ನು ನಾನು ಸ್ವಲ್ಪ ಮಾತ್ರ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಮತ್ತೊಮ್ಮೆ ಉಲ್ಲೇಖ ಮಾಡುವುದಕ್ಕೆ ಇಷ್ಟಪಡುತ್ತೇನೆ. ಮೇಲ್ಕಂಡ ಅಂಶಗಳನ್ನು ಅಂದರೆ ನಾನು ಅಂದು ಏನು ಹೇಳಿದ್ದೆ, ಅದು on record ನಲ್ಲಿದೆ. ಮೇಲ್ಕಂಡ ಅಂಶಗಳನ್ನು ವಿಶ್ಲೇಷಿಸಿದಾಗ ಮಾನ್ಯ ಗೌರವಾನ್ವಿತ ಸದಸ್ಯರಾದ ಶ್ರೀ ವಿ.ಎಸ್.ಉಗ್ರಪ್ಪ ಹಾಗೂ ಇತರರು ನನ್ನ ವಿರುದ್ಧ ನೀಡಿರುವ ನಿರ್ಣಯದ ಸೂಚನೆಯು ಯಾವುದೇ ನಿರ್ದಿಷ್ಟ ಆರೋಪ ಮತ್ತು ಪ್ರಕರಣಗಳನ್ನು ಒಳಗೊಂಡಿಲ್ಲವಾದ್ದರಿಂದ ಹಾಗೂ ಮೇಲ್ಕಂಡ ಸೂಚನೆಯನ್ನು ಯಾವುದೇ ಆರೋಪ ರಹಿತವಾಗಿ ನೀಡಿರುವುದರಿಂದ ಸದರಿ ಸೂಚನೆ ಮೇರೆಗೆ ಆರೋಪ ಹೊಂದಿರುವ ನಾನು ಉತ್ತರಿಸಲು ಸಹ ಸಾಧ್ಯವಾಗದೇ ಇರುವುದರಿಂದ ಈ ಸೂಚನೆಯು ಅರ್ಹ ಹಾಗೂ ಕ್ರಮಬದ್ಧವಾಗಿರುವುದಿಲ್ಲ. ಹಾಗೂ ಈ ಸೂಚನೆಯು ಸ್ವಾಭಾವಿಕ ನ್ಯಾಯಕ್ಕೆ, Principles of Natural Justice ಗೆ ವಿರುದ್ಧವಾಗಿರುತ್ತದೆ. ಆದಾಗ್ಯೂ ಪ್ರಜಾಪ್ರಭುತ್ವ ಹಾಗೂ ಭಾರತದ ಸಂವಿಧಾನದ ತತ್ವಗಳನ್ನು ಮೊದಲಿನಿಂದಲೂ ನನ್ನ ಜೀವನದಲ್ಲಿ ನಾನು ಶಿಸ್ತಿನಿಂದ, ಬದ್ಧತೆಯಿಂದ ಪಾಲಿಸಿಕೊಂಡು ಬಂದಿರುತ್ತೇನೆ. ಈ ದೇಶದೊಳಗೆ emergency ಯನ್ನು declare ಮಾಡಿದಂತಹ ಸಂದರ್ಭದಲ್ಲಿ ಈ ಪ್ರಜಾಪ್ರಭುತ್ವ ನಮ್ಮ ಹಕ್ಕು ಎಂದು ಹೇಳಿ ಕೂಗಿ ಈ ದೇಶದ ಪತ್ರಿಕಾ ಮಾಧ್ಯಮದ ಸ್ವಾತಂತ್ರ್ಯ ಇರಬೇಕು, ಪ್ರಜಾ ಸ್ವಾತಂತ್ರ್ಯ ಈ ದೇಶದಲ್ಲಿ ಬದುಕಿರಬೇಕೆಂದು ಹೇಳಿ ಸತ್ಯಾಗ್ರಹವನ್ನು ಮಾಡಿ 19 ತಿಂಗಳುಗಳ ಕಾಲ ಜೈಲಿನಲ್ಲಿ ಇದ್ದು ಬಂದವನು ನಾನು. ಆ ರೀತಿಯ ಬದ್ಧತೆಯನ್ನು ಪಾಲಿಸಿಕೊಂಡು ಬಂದಿರತಕ್ಕಂತಹ ನಾನು ಮೇಲ್ಕಂಡ ಸೂಚನೆಯ ಅಂಗೀಕಾರಕ್ಕೆ ಅರ್ಹ ಇಲ್ಲದಿದ್ದಾಗ್ಯೂ ಸಹ ಸದನದ ಘನತೆ ಹಾಗೂ ಗಾಂಭೀರ್ಯವನ್ನು ಎತ್ತಿ ಹಿಡಿಯುವಲ್ಲಿ ಮಾನ್ಯ ಸದಸ್ಯರು ನೀಡಿರುವ ನಿರ್ಣಯವನ್ನು ಸದನದಲ್ಲಿ ಮಂಡಿಸಲು ಅನುಮತಿ ನೀಡುತ್ತಿದ್ದೇನೆಂದು ಹೇಳಿದ್ದಕ್ಕೆ ಕಾರಣ ನನ್ನ conscious, ನಾನು ನಡೆದು ಬಂದಂತಹ ಹಾದಿ, ನಂಬಿಕೆ, ತತ್ವ, ನನ್ನ ಜೀವನ ಪದ್ಧತಿ. ಹಾಗಾಗಿ, ನಾನು ಹೆಚ್ಚಿಗೆ ಏನೂ ಹೇಳುವುದಿಲ್ಲ. ಗೌರವಾನ್ವಿತ ಎಲ್ಲಾ ಸದಸ್ಯರು ನನ್ನನ್ನು ಇಷ್ಟು ದಿವಸಗಳ ಕಾಲ ನೋಡಿದ್ದೀರಿ. ಈ ನಿರ್ಣಯದ ಬಗ್ಗೆ ತಮ್ಮ ತಮ್ಮ conscious ಏನು ಹೇಳುತ್ತದೆ, ಹಾಗೆ ಓಟು ಮಾಡಿ ಎಂದು ಎಲ್ಲರನ್ನು ಬೇಡಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ, ಧನ್ಯವಾದಗಳು.

**ಶ್ರೀ ವಿ.ಎಸ್.ಉಗ್ರಪ್ಪ:-** ಆರ್ಟಿಕಲ್ 183 ಅನ್ನು ಅರ್ಥ ಮಾಡಿಕೊಳ್ಳದೇ ಈ ರೀತಿಯ ಮಾತುಗಳನ್ನು ಆಡುವಂತಹದ್ದು ಸೂಕ್ತವಲ್ಲ. ದಯಮಾಡಿ, ಸಂವಿಧಾನದ ಆಶಯಗಳ ರೀತ್ಯಾ charges ಹೇಳಲಿಕ್ಕೆ ಅವಕಾಶವಿದೆ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಉಪ ಸಭಾಪತಿಯವರು:–** ಶ್ರೀಯುತ ಉಗ್ರಪ್ಪನವರೆ, ತಾವು ಕುಳಿತುಕೊಳ್ಳಿ. ಈಗ ಮತಕ್ಕೆ ಹಾಕಲಾಗುತ್ತದೆ. ಮತಕ್ಕೆ ಹಾಕುವ ಮುನ್ನ ಸದಸ್ಯರುಗಳ ಗಮನಕ್ಕೆ ಕೆಲವು ಸೂಚನೆಗಳು. ಮಾನ್ಯ ಸದಸ್ಯರುಗಳು ತಮ್ಮ ತಮ್ಮ ಪೀಠದಲ್ಲಿ ಕುಳಿತುಕೊಳ್ಳಬೇಕು. ನಾವು ಮತಕ್ಕೆ ಹಾಕುವ ಮುನ್ನ ಮೂರು ನಿಮಿಷಗಳ ಕಾಲ ಈ ನಮ್ಮ ಸಭಾಂಗಣದ 4 (ನಾಲ್ಕು) ಬಾಗಿಲುಗಳು ಕೂಡ ತೆರೆಯಲ್ಪಡುತ್ತವೆ. ಮೂರು ನಿಮಿಷಗಳಾದ ಕೂಡಲೇ ಬಾಗಿಲುಗಳನ್ನು ಕ್ಲೋಸ್ ಮಾಡಲಾಗುತ್ತದೆ. ಯಾರಾದರೂ ಸದಸ್ಯರು ಹೊರಗಡೆ ಹೋಗುವವರು ಹೋಗಬಹುದು, ಒಳಗಡೆ ಬರುವವರು ಯಾರಾದರೂ ಇದ್ದರೆ ಬಾಗಿಲು ಮುಚ್ಚುವುದರೊಳಗಾಗಿ ಸದನದೊಳಗೆ ಕಡ್ಡಾಯವಾಗಿ ಹಾಜರಿರಬೇಕು. ತದನಂತರ ನಿರ್ಣಯವನ್ನು ಮತಕ್ಕೆ ಹಾಕಲಾಗುತ್ತದೆ ಮತ್ತು ಮತಕ್ಕೆ ಹಾಕುವಂತಹ ಸಂದರ್ಭದಲ್ಲಿ ಅನುಸರಿಸಬೇಕಾದಂತಹ ವಿಧಾನ ಏನೆಂದರೆ ಮತವನ್ನು ಲೆಕ್ಕ ಮಾಡುವ ಅನುಕೂಲಕ್ಕಾಗಿ ಮೊದಲು ಪ್ರಸ್ತಾವದ ನಿರ್ಣಯದ ಪರವಾಗಿ ಮತಯಾಚನೆಯನ್ನು ತಾವು ಮಾಡಬೇಕಾಗುತ್ತದೆ. ಮೊದಲಿಗೆ, ಮೊದಲನೆ ರೋಲ್‌ನಲ್ಲಿ ಇರತಕ್ಕಂತಹವರು ತಮ್ಮ ಮತವನ್ನು ಯಾರ ಪರವಾಗಿ ಎಂದು ಕೊಡಬೇಕು. ಎರಡು ಕಡೆಯಿಂದ ಮೊದಲನೆ ರೋಲ್‌ನಲ್ಲಿ ಇರತಕ್ಕಂತಹವರು ಮೊದಲು ಮತದಾನ ಮಾಡಬೇಕು. ತದನಂತರ ಎರಡನೇ ರೋಲ್‌ನಲ್ಲಿ ಇರತಕ್ಕಂತಹವರು ಮತದಾನ ಮಾಡಬೇಕು. ಮತ್ತೆ, 3ನೇ ರೋಲ್‌ನಲ್ಲಿ ಇರತಕ್ಕಂತಹವರು ಮತದಾನ ಮಾಡಬೇಕು. ತದನಂತರ ನಾಲ್ಕನೇ ರೋಲ್‌ನಲ್ಲಿ ಇರತಕ್ಕಂತಹವರು ಮತದಾನ ಮಾಡಬೇಕು. ಪರವಾಗಿರುವಾಗಲೂ ಅಷ್ಟೆ, ವಿರೋಧವಾಗಿರುವಾಗಲೂ ಅಷ್ಟೆ, ಈ ರೀತಿಯಲ್ಲಿ ಮತದಾನ ಮಾಡಬೇಕು ಮತ್ತು ಕಳೆಮನೆ ಸದಸ್ಯರು ಇಲ್ಲಿ ಮತದಾನದಲ್ಲಿ ಮತದಾನ ಮಾಡುವಂತಿಲ್ಲ.

**(ಮುಂದು)**

***(757) 15.06.2017 1.40 SPR-BNS***

**ಉಪ ಸಭಾಪತಿಯವರು:–** ಈಗ ಸದನದ ನಿಯಮಾವಳಿಗಳ ರೀತ್ಯಾ ಮೂರು ನಿಮಿಷಗಳ ಕಾಲ ಸದನದ ಕರೆಗಂಟೆಯನ್ನು ಬಾರಿಸಲಾಗುವುದು. ಕರೆಗಂಟೆ ಪ್ರಾರಂಭವಾದ ಕ್ಷಣದಿಂದ ಮೂರು ನಿಮಿಷಗಳ ಕಾಲ ಸದನದ ನಾಲ್ಕೂ ಬಾಗಿಲುಗಳನ್ನು ತೆರೆಯಲಾಗುವುದು. ಮೂರು ನಿಮಿಷಗಳ ನಂತರ ಕರೆಗಂಟೆಯನ್ನು ನಿಲ್ಲಿಸಿ ಎಲ್ಲಾ ಬಾಗಿಲುಗಳನ್ನು ಮುಚ್ಚಲಾಗುವುದು. ಈ ಸಂದರ್ಭದಲ್ಲಿ ಯಾವ ಸದಸ್ಯರಿಗೂ ಸದನದಿಂದ ಹೊರಗೆ ಹೋಗಲು ಅವಕಾಶವಿರುವುದಿಲ್ಲ.

**(ಈ ಹಂತದಲ್ಲಿ ಸದನದ ಬಾಗಿಲುಗಳನ್ನು ತೆರೆಯಲಾಯಿತು ಹಾಗೂ ಮೂರು ನಿಮಿಷಗಳ ಕಾಲ ಕರೆಗಂಟೆಯನ್ನು ಬಾರಿಸಲಾಯಿತು. ಮೂರು ನಿಮಿಷಗಳ ತರುವಾಯ ಸದನದ ಬಾಗಿಲುಗಳನ್ನು ಮುಚ್ಚಲಾಯಿತು)**

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಉಪ ಸಭಾಪತಿಯವರು:–** ಮಾನ್ಯ ಸದಸ್ಯರುಗಳು ಮತದಾನ ಮಾಡುವ ಸಂದರ್ಭದಲ್ಲಿ ತಾವೆಲ್ಲರೂ ಕೂಡ ತಮ್ಮ ತಮ್ಮ ಆಸನದಲ್ಲಿ ಎದ್ದು ನಿಂತು ಮತದಾನ ಮಾಡಬೇಕು. ಈಗ ನಿರ್ಣಯವನ್ನು ಮತಕ್ಕೆ ಹಾಕಲಾಗುವುದು.

**ನಿರ್ಣಯವನ್ನು ಮತಕ್ಕೆ ಹಾಕಲಾಯಿತು**

**ಉಪ ಸಭಾಪತಿಯವರು:–** ಮತದಾನದ ಫಲಿತಾಂಶ ಹೀಗಿದೆ:–

ನಿರ್ಣಯದ ಪರ : 36

ನಿರ್ಣಯದ ವಿರುದ್ಧ : 37

**ಉಪ ಸಭಾಪತಿಯವರು:–** ಈಗ ನಿರ್ಣಯಕ್ಕೆ ಸಂಬಂಧಪಟ್ಟಂತೆ ಹಾಜರಿದ್ದ ಸದಸ್ಯರಲ್ಲಿ ನಿರ್ಣಯಕ್ಕೆ ವಿರೋಧವಾಗಿ 37 ಮತಗಳು ಬಂದಿರುವುದರಿಂದ, ಇದು ಬಹುಮತ ಇರುವುದರಿಂದ **"ನಿರ್ಣಯವು ತಿರಸ್ಕೃತಗೊಂಡಿದೆ"** ಎಂದು ಘೋಷಿಸುತ್ತಿದ್ದೇನೆ.

**ನಿರ್ಣಯವು ತಿರಸ್ಕರಿಸಲ್ಪಟ್ಟಿತು ಹಾಗೂ ನಿರ್ಣಯಕ್ಕೆ ಸದನದ ಒಪ್ಪಿಗೆ ದೊರೆತಿರುವುದಿಲ್ಲ**

**(ಈ ಹಂತದಲ್ಲಿ ಮಾನ್ಯ ವಿರೋಧ ಪಕ್ಷದ ಸದಸ್ಯರು ಮೇಜನ್ನು ತಟ್ಟುವ ಮೂಲಕ ತಮ್ಮ ಹರ್ಷವನ್ನು ವ್ಯಕ್ತಪಡಿಸಿದರು)**

**ಉಪ ಸಭಾಪತಿಯವರು:–** ಈಗ ಸದನವನ್ನು ಭೋಜನ ವಿರಾಮಕ್ಕಾಗಿ ಮಧ್ಯಾಹ್ನ 3 ಗಂಟೆ 30 ನಿಮಿಷದವರೆಗೆ ಮುಂದೂಡುತ್ತಿದ್ದೇನೆ.

*(758) 15.06.2017 3.50 RC-KS(AK)*

**(ಭೋಜನ ವಿರಾಮಕ್ಕಾಗಿ ಮಧ್ಯಾಹ್ನ 1 ಗಂಟೆ 48 ನಿಮಿಷಕ್ಕೆ ಮುಂದೂಡಲ್ಪಟ್ಟ ಸದನವು ಪುನಃ ಮಧ್ಯಾಹ್ನ 3 ಗಂಟೆ 50 ನಿಮಿಷಕ್ಕೆ ಸಮಾವೇಶಗೊಂಡಿತು.
ಸನ್ಮಾನ್ಯ ಉಪ ಸಭಾಪತಿಯವರು(ಶ್ರೀ ಮರಿತಿಬ್ಬೇಗೌಡರು) ಪೀಠವನ್ನಲಂಕರಿಸಿದರು)**

**5. ಪ್ರಕಟಣೆಗಳು**

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಉಪ ಸಭಾಪತಿಯವರು:-** ಅ) ಸನ್ಮಾನ್ಯ ಸಭಾಧ್ಯಕ್ಷರಿಂದ ಈ ಮುಂದಿನ ಸಂದೇಶ ಬಂದಿರುತ್ತದೆ. ಕರ್ನಾಟಕ ವಿಧಾನ ಸಭೆಯ ಕಾರ್ಯ ವಿಧಾನ ಹಾಗು ನಡವಳಿಕೆ ನಿಯಮ 104ರ ಮೇರೆಗೆ ವಿಧಾನ ಸಭೆಯು ದಿನಾಂಕ:15-6-2017ರಿಂದ ಈ ಕೆಳಕಂಡ ವಿಧೇಯಕಗಳನ್ನು ಅಂಗೀಕರಿಸಿತೆಂದು ಹಾಗೂ ಸದರಿ ವಿಧೇಯಕಕ್ಕೆ ವಿಧಾನ ಪರಿಷತ್ತಿನ ಸಹಮತಿ ನೀಡಬೇಕೆಂದು ಕೋರುತ್ತಾರೆ.

1) ಕರ್ನಾಟಕ ಮಾರಾಟಗಳ ತೆರಿಗೆ (ತಿದ್ದುಪಡಿ) ವಿಧೇಯಕ, 2017
2) ಕರ್ನಾಟಕ ಸರಕು ಮತ್ತು ಸೇವೆಗಳ ವಿಧೇಯಕ, 2017

ಅದೇ ರೀತಿ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಒಂದು ಪತ್ರ ಬರೆದಿದ್ದಾರೆ.

ಆ) ಕರ್ನಾಟಕ ವಿಧಾನ ಸಭೆಯ ಕಾರ್ಯ ವಿಧಾನ ಮತ್ತು ನಡವಳಿಕೆ ನಿಯಮಾವಳಿಗಳ 363ರ ನಿಯಮದಲ್ಲಿ ಪ್ರದತ್ತವಾದ ಅಧಿಕಾರವನ್ನು ಉಪಯೋಗಿಸಿ ದಿನಾಂಕ:16-6-2017ರ ವರೆಗೆ ನಿಗಧಿಯಾಗಿದ್ದ ವಿಧಾನ ಸಭೆಯ ಅಧಿವೇಶನವನ್ನು ದಿನಾಂಕ:21-6-2017ರವರೆಗೆ ಮಾನ್ಯ ವಿಧಾನ ಸಭಾಧ್ಯಕ್ಷರು ವಿಸ್ತರಣೆ ಮಾಡಿರುತ್ತಾರೆ. ಅದರಂತೆ ಇಲಾಖಾ ಬೇಡಿಕೆಗಳ ಮೇಲಿನ ಚರ್ಚೆ ಹಾಗೂ ವಿಧೇಯಕಗಳ ಮಂಡನೆ ಮತ್ತು ಅಂಗೀಕಾರಕ್ಕಾಗಿ ವಿಧಾನ ಪರಿಷತ್ತಿನ ಅಧಿವೇಶನವನ್ನು ಸಹ ದಿನಾಂಕ:21-6-2017ರವರೆಗೆ ವಿಸ್ತರಿಸಬೇಕಾಗಿ ತಮ್ಮನ್ನು ಕೋರುತ್ತೇನೆ. ಹಾಗಾಗಿ ವಿಧಾನ ಪರಿಷತ್ತಿನ ಅಧಿವೇಶನಗಳನ್ನು ಹಾಗೂ ಕಾರ್ಯಕಲಾಪಗಳನ್ನು ಸಹ ದಿನಾಂಕ: 21/6/2017ರವರೆಗೆ ಮುಂದುವರೆಸಲಾಗುತ್ತದೆ.

## 6. ಮಕ್ಕಳ ಹಕ್ಕುಗಳ ರಕ್ಷಣೆ ಬಗ್ಗೆ ವಿಶೇಷ ಚರ್ಚೆ

**ಶ್ರೀಮತಿ ಮೋಟಮ್ಮ(ವಿಧಾನ ಸಭಾ ಕ್ಷೇತ್ರ):-** ಸನ್ಮಾನ್ಯ ಸಭಾಪತಿಯವರೇ, ಮಕ್ಕಳ ಹಕ್ಕುಗಳ ರಕ್ಷಣೆ ಬಗ್ಗೆ ಮಾತನಾಡಲು ಅವಕಾಶ ಕೊಟ್ಟ ತಮಗೆ ವಂದಿಸುತ್ತೇನೆ.

ಮುಖ್ಯವಾಗಿ ಇವತ್ತು ಮಕ್ಕಳು ಎಂದರೆ ನಮಗೆಲ್ಲರಿಗೂ ಬಹಳ ಸಂತೋಷ, ಆನಂದ ಮತ್ತು ಅಭಿಮಾನ ಉಂಟಾಗುತ್ತದೆ. ಏಕೆಂದರೆ ಬಡವರು "ಮಕ್ಕಳೇ ನಮಗೆ ಆಸ್ತಿ" ಎಂದು ಹೇಳುತ್ತಾರೆ. ಹಾಗೆ ದೇಶದಲ್ಲಿ ಮಕ್ಕಳ ಬಗ್ಗೆ ವಿಚಾರ ಮಾಡುವುದಾದರೆ ಮಕ್ಕಳು ದೇಶದ ಆಸ್ತಿ ಇದ್ದ ಹಾಗೆ. ಸಂಪತ್ತು ಇದ್ದ ಹಾಗೆ. ಆದುದರಿಂದ ಮಕ್ಕಳನ್ನು ನಾವು ರಕ್ಷಣೆ ಮಾಡುವುದು, ಮಕ್ಕಳ ಹಕ್ಕುಗಳನ್ನು ರಕ್ಷಣೆ ಮಾಡುವುದು, ಅವರಿಗೆ ಉತ್ತಮವಾದಂತಹ ಆರೋಗ್ಯವಂತರಾಗಿರುವಂತೆ ನೋಡಿಕೊಳ್ಳುವುದು, ಅದೇ ರೀತಿ ಉತ್ತಮ ವಿದ್ಯಾಭ್ಯಾಸ ಕೊಡಿಸುವುದರ ಬಗ್ಗೆಯು ಸಹ ವಿಚಾರ ಮಾಡಬೇಕಾಗುತ್ತದೆ. ಬಹಳಷ್ಟು ಜನರಲ್ಲಿ ಅದರಲ್ಲಿಯೂ ಶಾಸನ ಸಭಾ ಸದಸ್ಯರುಗಳ ಮನಸ್ಸಿನಲ್ಲಿ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಏನಿದೆ ಎಂದರೆ ನಾವು ಸಾರ್ವಜನಿಕರ ಸೇವಕರು ಮಾತ್ರ ಮತ್ತು ಇಂತಹ ಮಕ್ಕಳ ವಿಷಯದಲ್ಲಿ ನಾವು ಹೆಚ್ಚು ಈ ಸಭೆಯಲ್ಲಿ ಏಕೆ ತಲೆ ಕೆಡಿಸಿಕೊಳ್ಳಬೇಕು ಎಂಬ ಮನಸ್ಸು ಬಹಳಷ್ಟು ಜನರಲ್ಲಿದೆ.

ಮಕ್ಕಳು ದೇಶದ ಸಂಪತ್ತು ಎಂದು ನಾನು ಹೇಳಿದ್ದೆ. ಆ ದೃಷ್ಟಿಯಿಂದ ಮಕ್ಕಳಿಗೆ ಈ ದೇಶದಲ್ಲಿ ಈ ಸಮಾಜದಲ್ಲಿ ರಕ್ಷಣೆ ಸಿಗಬೇಕು, 0 – 6 ರಿಂದ 18 ವರ್ಷದವರೆಗೂ ಅವರನ್ನು ಮಕ್ಕಳೆಂದೇ ಕರೆಯುತ್ತೇವೆ. ದುರಂತವೆಂದರೆ, ಪ್ರಸವ ಸಮಯದಲ್ಲಿ ಮಕ್ಕಳು ಹುಟ್ಟುವಾಗ ಒಂದು ರೀತಿಯಲ್ಲಿ ಆತಂಕವೆನಿಸುತ್ತದೆ. ಬಹಳಷ್ಟು ಪೋಷಕರು ನಮಗೆ ಹೆಣ್ಣು ಮಗುವೇ ಆಗಬೇಕು, ಇನ್ನು ಕೆಲವರು ನಮಗೆ ಗಂಡು ಮಗುವೇ ಆಗಬೇಕೆಂದು ಬಯಸುತ್ತಾರೆ. ಕೆಲವರು ಹೆಣ್ಣು ಮಗುವಾದರೆ ಇದನ್ನು ಅಬಾರ್ಶನ್ ಮಾಡಿಸಬೇಕು, ಗಂಡು ಮಗು ಆದರೆ ಮಾತ್ರ ಅದನ್ನು ನಾವು ಹೆರಬೇಕು, ಬೆಳೆಸಬೇಕು ಎಂಬ ಒತ್ತಾಸೆಯನ್ನು ಇಟ್ಟುಕೊಂಡಿರುತ್ತಾರೆ. ಇದು ಬಹಳ ದೊಡ್ಡ ದುರಂತದ ಸಂಗತಿ. ಈ ರೀತಿ ಆಗಬಾರದು. ಇವತ್ತಿನ ದಿವಸ ಹೆಣ್ಣುಮಕ್ಕಳ ಮತ್ತು ಗಂಡು ಮಕ್ಕಳ ಸಂಖ್ಯೆಯನ್ನು ನೋಡುವುದಾದರೆ ಬಹಳ ಆತಂಕವಾಗುತ್ತದೆ. ನಮ್ಮ ಕರ್ನಾಟಕದಲ್ಲಿ ಹೆಣ್ಣು ಮಕ್ಕಳ ಸಂಖ್ಯೆ ಸರಾಸರಿ 904 ಇದ್ದರೆ 1,000 ಗಂಡು ಮಕ್ಕಳಿದ್ದಾರೆ. ಈ ರೀತಿ ಏಕೆ ಹೆಣ್ಣು ಮಕ್ಕಳ ಸಂಖ್ಯೆ ಕುಸಿಯುತ್ತಿದೆ ಎಂದು ವಿಚಾರ ಮಾಡುವುದಾದರೆ ನಾನು ಮೊದಲೆ ಹೇಳಿದ ಹಾಗೆ ಆಯ್ಕೆ ಮಾಡಿಕೊಂಡು ಮಕ್ಕಳನ್ನು ಪಡೆಯುವುದು ಇದೆಯಲ್ಲ, ಇದರಿಂದಾಗಿ ಒಂದು ರೀತಿಯಲ್ಲಿ ನಮಗೆ setback ಎಂದೇ ಹೇಳಬಹುದು.

ಇನ್ನೊಂದು ವಿಷಯವೇನೆಂದರೆ, ನಮ್ಮ ಸರ್ಕಾರ ಕೂಡ ಇದರ ಬಗ್ಗೆ ಬಹಳಷ್ಟು protective measure ತೆಗೆದುಕೊಂಡಿದೆ. ಪ್ರತಿಯೊಂದು ಆಸ್ಪತ್ರೆಯಲ್ಲಿಯೂ ಸಹ ಗರ್ಭಿಣಿ ಸ್ತ್ರೀಯನ್ನು ಸ್ಕ್ಯಾನಿಂಗ್ ಮಾಡಬಾರದು, ಲಿಂಗ ತಾರತಮ್ಯ ಆಗಬಾರದು ಹಾಗೂ ಶಿಶು ಹತ್ಯೆ ಆಗಬಾರದು, ಅದೊಂದು ದೊಡ್ಡ ಅಪರಾಧ ಎಂದು ದೊಡ್ಡದಾಗಿ ಬೋರ್ಡ್ ಸಹ ಹಾಕಿರುತ್ತಾರೆ. ಆದರೂ ಸಹ ನನಗೆ ಗೊತ್ತಿರುವ ಹಾಗೆ ನಮ್ಮ ರಾಜ್ಯದಲ್ಲಿ ಮಂಡ್ಯ ಹಾಗೂ ಇನ್ನಿತರ ಕಡೆಗಳಲ್ಲಿ ಗಂಡು ಮಕ್ಕಳನ್ನೇ ಪಡೆಯಬೇಕೆಂಬ ಹಂಬಲ ಇದೆ. ಗಂಡು ಮಗು ಹುಟ್ಟಿದರೆ ಸಿಹಿ ಹಂಚುವುದು, ಹೆಣ್ಣು ಮಗು ಹುಟ್ಟಿದರೆ ಅದರ ಬಗ್ಗೆ ತಾತ್ಸಾರ ಭಾವನೆ ತೋರುವುದು, ಇದೆಲ್ಲಾ ನಮ್ಮ ಸಮಾಜದಲ್ಲಿದೆ. ಅದರಲ್ಲಿಯೂ ಈ ಭಾಗದಲ್ಲಿ ಇರುವುದು ಬಹಳ ವಿಷಾದನೀಯವೆನಿಸುತ್ತದೆ. ಆ ರೀತಿ ಆಗಬಾರದು. ಆ ರೀತಿ ಆಗದಂತೆ ನಾವು ಸಮಾಜದಲ್ಲಿ ಮನವರಿಕೆ ಮಾಡಿಕೊಡಬೇಕಾಗುತ್ತದೆ. ಹೆರುವ ತಾಯಿಗೂ ಸಹ ನಾವು ಧೈರ್ಯ ತುಂಬಬೇಕಾಗುತ್ತದೆ. ಹೆಣ್ಣಾಗಲಿ, ಗಂಡಾಗಲಿ ನಾನು ಹೊತ್ತಿದ್ದೇನೆ ಅದನ್ನು ಹೆರುವುದು ನನ್ನ ಹಕ್ಕು ಎನ್ನುವ ದೃಷ್ಟಿಯಲ್ಲಿ ಆ ತಾಯಿ ಪ್ರತಿಪಾಧನೆ ಮಾಡಿ ಆ ಮಗುವನ್ನು ಹೆರಬೇಕಾಗುತ್ತದೆ ಮತ್ತು ಆ ಮಗುವನ್ನು ಅಷ್ಟೇ ಪ್ರೀತಿ ವಿಶ್ವಾಸದಿಂದ ಸಾಕುವಂತಹ ಕೆಲಸ ಕೂಡ ಆ ತಾಯಿ ಮಾಡಬೇಕಾಗುತ್ತದೆ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇದರ ಜೊತೆಯಲ್ಲಿ ಮಗು ಹೆರುವುದು ಎಂದರೆ ಬಸುರಿ ಸಮಯದಲ್ಲಿ ಸರಿಯಾದಂತಹ ಪೌಷ್ಠಿಕ ಆಹಾರ ತೆಗೆದುಕೊಳ್ಳದೆಯೇ ಅನಾರೋಗ್ಯದಿಂದ ನರಳುವ ಮಗುವನ್ನು ಹೆರುವುದರಲ್ಲಿ ಅರ್ಥವಿಲ್ಲ. ಯಾವುದೇ ಒಬ್ಬ ತಾಯಿ ಆರೋಗ್ಯವಂತ ಮಗುವನ್ನು ಹೆರಬೇಕು. ಆರೋಗ್ಯವಂತ ಮಗುವನ್ನು ಹೆರಬೇಕಾದರೆ ಆ ತಾಯಿಗೆ ಸರಿಯಾದಂತಹ ಪೌಷ್ಠಿಕ ಆಹಾರ ಸಿಗಬೇಕಾಗುತ್ತದೆ. ಎಷ್ಟೋ ಬಡ ಹೆಣ್ಣು ಮಕ್ಕಳ ಕುಟುಂಬದಲ್ಲಿ ಹೆಣ್ಣು ಮಕ್ಕಳ ಬಗ್ಗೆ ಹೆಚ್ಚು ಕಾಳಜಿಯನ್ನು ವಹಿಸುವುದಿಲ್ಲ. ಏಕೆಂದರೆ, ತಾಳಿ ಕಟ್ಟಿದ ಗಂಡನಿಗೂ ಸಹ ಆ ಬಗ್ಗೆ ಜವಾಬ್ದಾರಿ ಇರುವುದಿಲ್ಲ, ಮನೆಯಲ್ಲಿರುವಂತಹ ಹಿರಿಯರಿಗೂ ಸಹ ಜವಾಬ್ದಾರಿ ಇರುವುದಿಲ್ಲ. ಏನೋ ಬಸುರಿ ಆಗಿದ್ದಾಳೆ 9 ತಿಂಗಳು ತುಂಬಿದರೆ ಸಾಕು ಮಗುವನ್ನು ಹೆರುತ್ತಾಳೆ ಎಂದು ಕಾಯುತ್ತಾರೆ ವಿನ ಅವಳಿಗೆ ಹೊತ್ತು ಹೊತ್ತಿಗೆ ಪೌಷ್ಠಿಕ ಆಹಾರ ಕೊಡುವುದಾಗಲಿ, ಅಥವಾ ವಿಶ್ರಾಂತಿ ದೊರೆಯುವ ಹಾಗೆ ಮಾಡುವುದಾಗಲಿ ಮಾಡುವುದೇ ಇಲ್ಲ. ಜೊತೆಗೆ ನಮ್ಮಲ್ಲಿ ರಕ್ತ ಸಂಬಂಧದಲ್ಲಿ ಮದುವೆ ಮಾಡಿಕೊಳ್ಳುತ್ತಾರೆ. ಸಂಬಂಧದಲ್ಲಿ ಮದುವೆ ಮಾಡಿಕೊಳ್ಳುವುದು ಸಹ ತುಂಬಾ ಡೇಂಜರ್. ಏಕೆಂದರೆ, ರಕ್ತ ಸಂಬಂಧಿಗಳನ್ನು ಮದುವೆ ಮಾಡಿಕೊಂಡರೆ ಅಂಗವಿಕಲ ಮಗು ಅಥವಾ ಬುದ್ಧಿಮಾಂಧ್ಯ ಮಗುವನ್ನು ಹೆರುವುದು ಒಂದು ಪ್ರತೀತಿ ಇದೆ.

(ಮುಂದು)

***(759) 15.06.2017 KG.GR 4.00***

**ಶ್ರೀ ಎಸ್.ನಾಗರಾಜ್ (ಸಂದೇಶ್ ನಾಗರಾಜ್):-** ಮಾನ್ಯ ಸಭಾಪತಿಯವರೇ, ಅದು ಪ್ರತೀತಿ ಅಲ್ಲ. Zoology, Botany ಯಲ್ಲಿ ಅದು ಒಂದು ವಿಷಯ. ಅದರಲ್ಲಿ ಡಾಕ್ಟರೇಟ್ ಮಾಡಿದ್ದಾರೆ. ಒಂದೇ ಜೀನ್ಸ್ ಆದರೆ ಅಂಗವಿಕಲ ಮಕ್ಕಳು ಹುಟ್ಟುತ್ತವೆ ಎಂಬುದನ್ನು ಸಾಬೀತು ಮಾಡಿದ್ದಾರೆ. ಅಕ್ಕನ ಮಕ್ಕಳನ್ನು ಅಥವಾ ಒಂದೇ ಸಂಬಂಧಿಕರಲ್ಲಿ ಮದುವೆಯಾದರೆ ಮಕ್ಕಳು ಯಾವ ರೀತಿ ಹುಟ್ಟುತ್ತಾರೆ ಎಂಬುದನ್ನು ತೋರಿಸುವುದಕ್ಕೆ **"ಮೌನರಾಗ"** ಎಂಬ ಒಂದು ಚಲನ ಚಿತ್ರವನ್ನು ತೆಗೆದಿದ್ದೇನೆ. ದಯವಿಟ್ಟು ಮಾನ್ಯ ಸದಸ್ಯರು ಅದನ್ನು ನೋಡಬೇಕು.

**ಶ್ರೀಮತಿ ಮೋಟಮ್ಮ:-** ಮಾನ್ಯ ಸಭಾಪತಿಯವರೇ, ಒಬ್ಬ ಮಹಿಳೆಗೆ ತಮ್ಮ ಇದ್ದರೆ, ಆತನಿಗೆ ಆಕೆಯ ಮಗಳನ್ನೇ ಮದುವೆ ಮಾಡಿಕೊಳ್ಳುವಂತಹ ಪದ್ದತಿ ಇದೆ. ನಾನು ಇದನ್ನು ಪ್ರತೀತಿ ಎಂದು ಹೇಳಿದ್ದೇನೆ. ಈ ಪ್ರತೀತಿಯಿಂದ ಬಹಳಷ್ಟು ಅನಾಹುತಗಳು ಆಗುತ್ತವೆ. ಎಷ್ಟೋ ಜನ ಇದನ್ನು realise ಮಾಡಿಕೊಳ್ಳುವುದಿಲ್ಲ. ನಾವು ಸಮಾಜಕ್ಕೆ ಈ ರೀತಿ ಮಾಡಿಕೊಳ್ಳಬೇಡಿ ಎಂದು ಮನವರಿಕೆ ಮಾಡಿಕೊಡಬೇಕಾಗುತ್ತದೆ. ಒಂದು ಆರೋಗ್ಯವಂತ ಮಗು ಹುಟ್ಟುವುದಕ್ಕೆ ಸಮಸ್ಯೆಯಾಗುತ್ತದೆ ಎಂದು ಆ ಒಂದು ಕುಟುಂಬಗಳಿಗೆ ಮನವರಿಕೆ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡಿದರೆ ಇದು ಸಾಧ್ಯವಾಗಬಹುದು. ಆದರೆ, ಅವರು ನಮ್ಮ ಮಾತುಗಳನ್ನು ಎಷ್ಟೋ ಸಾರಿ ಕೇಳುವುದಿಲ್ಲ. ಅವರವರ ರಕ್ತ ಸಂಬಂಧದಲ್ಲಿಯೇ ಮದುವೆ ಮಾಡಿಕೊಳ್ಳಬೇಕೆಂದು ಹೇಳಿ ಮಾಡಿಕೊಳ್ಳುತ್ತಾರೆ. ಇದರಿಂದ ಎಷ್ಟೋ ಬುದ್ಧಿಮಾಂದ್ಯ ಮಕ್ಕಳು ಹುಟ್ಟುತ್ತಾರೆ. ಸರ್ಕಾರ ಬುದ್ಧಿಮಾಂದ್ಯ ಮಕ್ಕಳಿಗೂ ಸಹ ಶಾಲೆಗಳನ್ನು ತೆರೆದಿದೆ. ಅದಕ್ಕೂ ಸರ್ಕಾರ ಸಾಕಷ್ಟು ಹಣವನ್ನು ಖರ್ಚು ಮಾಡುತ್ತಿದೆ. ಇದರ ಜೊತೆಗೆ ಆ ಮಕ್ಕಳಿಗೆ ಔಷಧೋಪಚಾರವನ್ನು ನೀಡುತ್ತಿದೆ. ಎಷ್ಟೋ ಜನ ಬಡವರ ಮಕ್ಕಳು ಹುಟ್ಟಿದ ಮೇಲೆ ಅವರಿಗೆ ಸರಿಯಾಗಿ ಹಾಲು ಮತ್ತು ಪೌಷ್ಠಿಕವಾದ ಆಹಾರದ ಕೊರತೆಯಿಂದ ಆ ಮಕ್ಕಳ ಬೆಳವಣಿಗೆ ಬಹಳ ಮಂದಗತಿಯಿಂದ ಆಗುತ್ತದೆ. ಆ ಮಕ್ಕಳು ಆರೋಗ್ಯಕರವಾಗಿ ಬೆಳೆಯುವುದಕ್ಕೆ ಸಾಧ್ಯವಾಗುವುದಿಲ್ಲ. ಇದಕ್ಕೆ ಬಹಳಷ್ಟು ಚಿಂತನೆಗಳನ್ನು ಮಾಡಿ ದಿವಂಗತ ಮಾಜಿ ಪ್ರಧಾನ ಮಂತ್ರಿಯಾಗಿದ್ದ ಶ್ರೀಮತಿ ಇಂದಿರಾ ಗಾಂಧಿಯವರು 0 ರಿಂದ 6 ವರ್ಷದೊಳಗಿನ ಮಕ್ಕಳಿಗಾಗಿ ಅಂಗನವಾಡಿ ಕೇಂದ್ರಗಳನ್ನು ಮಾಡಿದರು. ಅಂಗನವಾಡಿ ಕೇಂದ್ರದಲ್ಲಿ ಆ ಮಕ್ಕಳಿಗೆ ಪೌಷ್ಠಿಕ ಆಹಾರ ಮತ್ತು Energy Food ಕೊಡುವುದಕ್ಕೆ ಪ್ರಾರಂಭ ಮಾಡಿದರು. ಹಾಗೆಯೇ, ಆ ಮಗುವನ್ನು ಹೆತ್ತ ತಾಯಿಗೂ ಸಹ take home food ಕೊಡುವುದಕ್ಕೆ ಪ್ರಾರಂಭ ಮಾಡಿದರು. ಇದರಿಂದ ಎಷ್ಟೋ help ಆಯಿತು. ಆದರೆ, ನಮ್ಮ ಸನ್ಮಾನ್ಯ ಮುಖ್ಯ ಮಂತ್ರಿಗಳಾದ ಸಿದ್ದರಾಮಯ್ಯ ರವರ ನಾಯಕತ್ವದ ಸರ್ಕಾರ ಬಹಳ ಒಳ್ಳೆಯ ಕೆಲಸಗಳನ್ನು ಮಾಡುತ್ತಿದೆ. "ಮಾತೃಪೂರ್ಣ ಯೋಜನೆ"ಯನ್ನು ಜಾರಿಗೆ ತಂದರು. ಇದರಿಂದ ಗರ್ಭಿಣಿಯರಿಗೆ ಆರು ತಿಂಗಳ ಮೊದಲೇ ಪೌಷ್ಠಿಕ ಆಹಾರವನ್ನು ಕೊಡುವಂತಹ ವ್ಯವಸ್ಥೆಯನ್ನು ಮಾಡಿದೆ. ಇದರಿಂದ ತಾಯಿಯ ಹೊಟ್ಟೆಯಲ್ಲಿರುವ ಮಗುವಿಗೆ ಸಂಪೂರ್ಣವಾದ ಪೌಷ್ಠಿಕ ಆಹಾರ ದೊರೆತು ಆರೋಗ್ಯ ಪೂರ್ಣವಾಗಿ ಬೆಳೆದು ಹುಟ್ಟುವುದಕ್ಕೆ ಸಾಧ್ಯವಾಗುತ್ತದೆ. ಅದನ್ನು ಸರ್ಕಾರ ಮಾಡುತ್ತಿದೆ. ಇದನ್ನು ಖಂಡಿತವಾಗಿ appreciate ಮಾಡಬೇಕಾಗುತ್ತದೆ. ಶಾಸಕರಾದ ನಾವು ಸಹ, ಈ ಬಗ್ಗೆ ಸಾಕಷ್ಟು ವಿಚಾರಗಳನ್ನು ಮಾಡುತ್ತೇವೆ. ನಾವು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ವಿಷಯಗಳು ಬಂದಾಗ ಯೋಚನೆ ಮಾಡುತ್ತೇವೆ. ಮಕ್ಕಳಿಗೆ ಪರಿಪೂರ್ಣವಾದ ಒಂದು ಅಂಗನವಾಡಿ ಕೇಂದ್ರ ಇರಬೇಕು ಹಾಗೂ ಆ ಮಕ್ಕಳಿಗೆ ಪರಿಪೂರ್ಣವಾದ ಪೌಷ್ಠಿಕ ಆಹಾರ ದೊರೆಯಬೇಕು. ಅಂಗನವಾಡಿ ಕೇಂದ್ರದಲ್ಲಿಯೇ Vaccination ಹಾಕಬೇಕೆಂದು ಇದನ್ನೆಲ್ಲಾ ಇಲಾಖೆಯೇ ಮಾಡುವ ಹಾಗೆ ಮಾಡಬೇಕೆಂದು ನಮ್ಮ ವಿಚಾರ ಸಹ ಇದೆ. ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಸನ್ಮಾನ್ಯ ಸಚಿವರಾದ ಶ್ರೀಮತಿ ಉಮಾಶ್ರೀ ರವರು ಇಲಾಖೆಯನ್ನು ಬಹಳ ಚೆನ್ನಾಗಿ handle ಮಾಡುತ್ತಿದ್ದಾರೆ. ಮತ್ತೆ ಅಂಗನವಾಡಿ ಕೇಂದ್ರಯಲ್ಲಿಯೇ ಬಿಸಿಜಿ ಹಾಕಿಸುವುದು. Polio Drops ಹಾಕುವುದು. DPT ಕೊಡಿಸುವುದು ಇಂತಹ ರೋಗ ನಿರೋಧಕಗಳನ್ನು ಮಕ್ಕಳಿಗೆ ನೀಡುವುದರಿಂದ ಆ ಮಕ್ಕಳು ಸಾಕಷ್ಟು

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಒಳ್ಳೆಯ ಆರೋಗ್ಯವನ್ನು ಪಡೆಯುವುದಕ್ಕೆ ಸಾಧ್ಯವಾಗುತ್ತದೆ. ನಾವು ಆ ದೃಷ್ಟಿಯಿಂದ ಪೌಷ್ಠಿಕ ಆಹಾರವನ್ನು ನೀಡುವುದರ ಮೂಲಕ ಮಕ್ಕಳ ಆರೋಗ್ಯವನ್ನು ಕಾಪಾಡಿಕೊಂಡು ಬರುತ್ತಿದ್ದೇವೆ.

ಮಾನ್ಯ ಸಭಾಪತಿಯವರೇ, ಎರಡನೆಯದಾಗಿ, ಇವತ್ತು ಬಡ ಕುಟುಂಬಗಳಲ್ಲಿರುವ ತಂದೆಯವರು ಮದ್ಯಪಾನ ಮಾಡುತ್ತಾರೆ. ಆ ಮನೆಯಲ್ಲಿ ತಾಯಿ ಒಬ್ಬಳೆ ದುಡಿಯುತ್ತಾಳೆ ಎಂದು ಅವರ ಮಕ್ಕಳು ಶಾಲೆಗೆ ಹೋಗದೆ, ಸಣ್ಣ ಪುಟ್ಟ ಅಂಗಡಿಯಲ್ಲಿ ಕೆಲಸ ಮಾಡುತ್ತಾರೆ. ಆ ಮಕ್ಕಳು ಮತ್ತಷ್ಟು ಬೆಳೆದು ದೊಡ್ಡವರಾದ ಮೇಲೆ ಸಣ್ಣ ಪುಟ್ಟ ಕೈಗಾರಿಕೆಗಳಿಗೆ ಹೋಗಿ ದುಡಿಯುತ್ತಾರೆ. ಇದರಿಂದ ಅವರಿಗೆ ವಿದ್ಯಾಭ್ಯಾಸ ದೊರೆಯುವುದಿಲ್ಲ. ಇದು ಒಂದು ರೀತಿಯಲ್ಲಿ ಅವರಿಗೆ ವಿದ್ಯಾಭ್ಯಾಸದಲ್ಲಿ ಅನ್ಯಾಯವಾಗುತ್ತದೆ. ಇದನ್ನು ಯಾವ ರೀತಿಯಲ್ಲಿ ತಡೆಗಟ್ಟಬೇಕೆಂದು ಗೊತ್ತಿಲ್ಲ. ಆದರೆ, ಕಾರ್ಮಿಕ ಇಲಾಖೆ ಇದನ್ನು ತಡೆಗಟ್ಟಲಿಕ್ಕೆ ಬಹಳಷ್ಟು ಶ್ರಮ ವಹಿಸುತ್ತಿದೆ. ಆ ನಿಟ್ಟಿನಲ್ಲಿ ಆ ಮಕ್ಕಳನ್ನು ಸಂರಕ್ಷಣೆ ಮಾಡುವುದು, ಆ ಮಕ್ಕಳು ಶಾಲೆಯನ್ನು ಬಿಟ್ಟು ಎಲ್ಲೆಲ್ಲಿ ಕೂಲಿ ಕೆಲಸ ಮಾಡುತ್ತಿರುತ್ತಾರೆ ಅಂತಹ ಮಕ್ಕಳನ್ನು ಗುರುತಿಸಿ ಶಾಲೆಗೆ ಸೇರಿಸುವಂತಹ ಕೆಲಸ ಮಾಡುತ್ತಿದ್ದಾರೆ. ಅಲ್ಲದೇ, ಆಶ್ರಮ ಶಾಲೆಗಳನ್ನು ತೆರೆಯುವಂತಹ ಕೆಲಸಗಳನ್ನು ಸಹ ಮಾಡುತ್ತಿದೆ. ಹಾಗಾಗಿ, ಎಷ್ಟೋ percent ಮಕ್ಕಳು ಮತ್ತೆ ಶಾಲೆಗೆ ಸೇರುವಂತಹ ಕೆಲಸ ಆಗುತ್ತಿದೆ ಎಂದು ಹೇಳಿದರೆ ತಪ್ಪಾಗಲಾರದು. Especially, ರಾಯಚೂರು, ಬೀದರ್ ಮತ್ತು ಗುಲ್ಬರ್ಗ ಈ ಭಾಗಗಳಿಂದ ಬೆಂಗಳೂರಿಗೆ ಬರುವಂತಹ ಕೂಲಿ ಕಾರ್ಮಿಕರ ಮಕ್ಕಳು ವಿದ್ಯಾಭ್ಯಾಸದಿಂದ ವಂಚಿತರಾಗುತ್ತಾರೆ. ಇವತ್ತು ಬಹಳಷ್ಟು ಜನ ಕೂಲಿ ಕಾರ್ಮಿಕರು ಬೆಂಗಳೂರಿಗೆ Construction work ಗಳಿಗೆ ಬರುತ್ತಾರೆ. construction ಮಾಡುವ ಸ್ಥಳದಲಿಯೇ ಅವರು ಗುಡಾರಗಳನ್ನು ಹಾಕಿಕೊಂಡು ಅಲ್ಲಿಯೇ ಮಕ್ಕಳನ್ನು ಇಟ್ಟುಕೊಳ್ಳುತ್ತಾರೆ. ಹೀಗಾಗಿ, ಅವರು ಮಕ್ಕಳನ್ನು ಶಾಲೆಗೆ ಕಳುಹಿಸುವುದಿಲ್ಲ. ಎಷೋ ಸಾರಿ ಆ ಮಕ್ಕಳ ಮೇಲೆ ಬಹಳಷ್ಟು ದೌರ್ಜನ್ಯಗಳು ಸಹ ನಡೆಯುತ್ತವೆ. ನಾವು ಸುಮಾರು ಪ್ರಕರಣಗಳನ್ನು ವಿಚಾರ ಮಾಡಿದ್ದೇವೆ. ಮಾನ್ಯ ಸಭಾಪತಿಯವರೆ, ಮೊನ್ನೆಯಷ್ಟೇ "ಕಾಡುಗೋಡಿ"ಯಲ್ಲಿ construction work ಗೆ ಬಂದಿರುವಂತಹ ಕೂಲಿ ಕಾರ್ಮಿಕರ ಒಂದು ಮಗುವಿಗೆ ಅದೇ ಊರಿನಿಂದ ಬಂದವನು ಮತ್ತು ಅದೇ ಅವರ ಪಕ್ಕದ ಶೆಡ್ಡಿನಲ್ಲಿಯೇ ಇದ್ದವನು ಒಂದು ಮಗುವಿಗೆ ಲೈಂಗಿಕ ಕಿರುಕುಳ ಕೊಟ್ಟಿದ್ದಾನೆ. ಆ ಮಗು ಅದಕ್ಕೆ ಪ್ರತಿವಿರೋಧಿಸಿದಾಗ ಆ ಮಗುವಿನ ಕೈಯನ್ನು ಕತ್ತರಿಸಿ ಕೊನೆಗೆ ಆ ಮಗುವಿನ ತಲೆಯ ಮೇಲೆ ಕಲ್ಲು ಎತ್ತಿ ಹಾಕಿ ಆ ಮಗುವನ್ನು ಬಿಸಾಡಿ ಹೋಗಿದ್ದಾನೆ. ನಮ್ಮ ಮಹಿಳಾ ಮತ್ತು ಮಕ್ಕಳ ದೌರ್ಜನ್ಯ ತಡೆಗಟ್ಟುವ ಸಮಿತಿಯಿಂದ ಬೌರಿಂಗ್ ಆಸ್ಪತ್ರೆಗೆ ಹೋಗಿ ಆ ಮಗುವನ್ನು ನೋಡಿಕೊಂಡು ಬಂದಿದ್ದೇವೆ. ಬೌರಿಂಗ್ ಆಸ್ಪತ್ರೆಯಲ್ಲಿ ಆ ಮಗುವನ್ನು ICUನಲ್ಲಿ ಇಟ್ಟಿದ್ದರು. ಮಹಿಳೆಯರು ಸರಿಯಾಗಿ ಕೆಲಸವನ್ನು ಮಾಡಲಿಲ್ಲವೆಂದು ಅವರಿಗೆ ಲೈಂಗಿಕ ಕಿರುಕುಳ ಕೊಡುವುದು ಮತ್ತು ಅವರಿಗೆ ಬಡಿಯುವಂತಹದ್ದು ಸಹ ಆಗುತ್ತಿದೆ.

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇದಕ್ಕೆ ನಾವು ನಮ್ಮ ಕಾರ್ಮಿಕ ಇಲಾಖೆಯಲ್ಲಿ ಸಾಕಷ್ಟು restrictions ಗಳನ್ನು ಹಾಕಬೇಕಾಗುತ್ತದೆ. ಯಾರು construction work ಗೆ ಈ ಒಂದು ಜನರನ್ನು ಕರೆತರುತ್ತಾರೆ, ಅಂತಹವರ ಮಕ್ಕಳನ್ನು compulsory ಅವರು ಶಾಲೆಗೆ ಕಳುಹಿಸಬೇಕು. ಅವರು ಇರುವುದಕ್ಕೆ ಸರಿಯಾದಂತಹ ಸ್ಥಳವನ್ನು ಮಾಡಿ ಕೊಡಬೇಕಾಗುತ್ತದೆ. ಈಗ ನಮ್ಮ ಪ್ರದೇಶದ Coffee Estate ಗಳಲ್ಲಿ Labourers Quarters ಎಂದು ಮಾಡಿದ್ದೇವೆ. ಅಲ್ಲಿ ಅವರಿಗೆ ನೀರು ಹಾಗೂ ಅವರಿಗೆ ಬೇಕಾದಂತಹ ಕನಿಷ್ಠ ಅವಶ್ಯಕತೆಗಳನ್ನು ಮಾಡಿಕೊಡುತ್ತೇವೆ. ಜೊತೆಗೆ ಆ ಮಕ್ಕಳಿಗೆ ಶಾಲೆಗೆ ಹೋಗುವುದಕ್ಕೆ Education Fund ಸಹ ಇಡುತ್ತೇವೆ. ಹಾಗೆಯೇ, ಅವರ ಆರೋಗ್ಯದ ದೃಷ್ಟಿಗೂ ಸಹ ಸಹಾಯ ಮಾಡುತ್ತೇವೆ. ಯಾವುದೇ ಒಂದು ಸಣ್ಣ ಪುಟ್ಟ ಅಂಗಡಿಗಳ ಮಾಲೀಕರು ಇರಬಹುದು ಅಥವಾ ಕೈಗಾರಿಕೆಗಳ ಮಾಲೀಕರು ಇರಬಹುದು ಅವರಿಗೆ ಈ bindings ಹಾಕಬೇಕಾಗುತ್ತದೆ. ಅಲ್ಲಿ ಕೆಲಸಕ್ಕೆ ಬರುವಂತಹವರ ಮಕ್ಕಳ ಶಿಕ್ಷಣಕ್ಕೆ ದಾರಿ ಮಾಡಿಕೊಡಬೇಕಾಗುತ್ತದೆ. ಅವರ ಶಿಕ್ಷಣಕ್ಕೆ ಸಹಾಯ ಮಾಡಬೇಕು. ಆ ಮಕ್ಕಳ ಆರೋಗ್ಯ ಹೆಚ್ಚು ಕಡಿಮೆಯಾದರೆ ಆಸ್ಪತ್ರೆಯ ಖರ್ಚನ್ನು ಸಹ ಕೊಡಬೇಕು. ಇದನ್ನೆಲ್ಲಾ ಮಾಡಿದಾಗ ಆ ಮಕ್ಕಳಿಗೆ ಒಂದು ಒಳ್ಳೆಯ ವಾತಾವರಣವನ್ನು ಕಲ್ಪಿಸಿದಂತೆ ಆಗುತ್ತದೆ. ಆ ದೃಷ್ಟಿಯಿಂದಲೂ ಸಹ ಬೇಕಾದಂತಹ ಕಾಯಿದೆ ಕಾನೂನುಗಳನ್ನು ಮಾಡಬೇಕಾಗುತ್ತದೆ. ಅವರಿಗೆ ಎಲ್ಲಾ ರೀತಿಯ ಸೌಲಭ್ಯಗಳನ್ನು ಒದಗಿಸಿಕೊಟ್ಟು ಅವರನ್ನು ಒಂದು ಉತ್ತಮ ದಾರಿಯಲ್ಲಿ ಹೋಗುವಂತೆ ಮಾಡಿ ಕೊಡುವುದು ನಮ್ಮ ಧರ್ಮ. ಆ ದೃಷ್ಟಿಯಲ್ಲಿ ನಾವು ವಿಚಾರ ಮಾಡಬೇಕಾಗುತ್ತದೆ. ಇವತ್ತಿನ ದಿವಸ ಎಷ್ಟೋ ಮಕ್ಕಳನ್ನು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ Remand Home ಗಳಲ್ಲಿ ಇಟ್ಟಿದ್ದೇವೆ. ಆದರೆ, ಅಲ್ಲಿಯೂ ಸಹ ಓದುವ ಮಕ್ಕಳಿಗೆ ಒಂದು ರೀತಿಯ ಹೊಸದೊಂದು inspiration ಬರುತ್ತದೆ. ಅವರಿಗೆ ಓದಬೇಕು, ಬರೆಯಬೇಕು ಎಂಬ ಆಸೆ ಬರುತ್ತದೆ. ಆದರೆ, ನಾವು ಸಣ್ಣ ಮಕ್ಕಳ ಜೊತೆಗೆ ದೊಡ್ಡ ಮಕ್ಕಳನ್ನು ಇಡುತ್ತೇವೆ. ಸಣ್ಣ ಪುಟ್ಟ ಅಪರಾಧ ಮಾಡಿದ ಚಿಕ್ಕ ಮಕ್ಕಳ ಜೊತೆಗೆ ದೊಡ್ಡ ಮಕ್ಕಳನ್ನು ಇಡುತ್ತೇವೆ. ಎಷ್ಟೋ ಬಾರಿ ಸಣ್ಣ ಮಕ್ಕಳ ಮೇಲೆ ದೊಡ್ಡ ಮಕ್ಕಳು ದೌರ್ಜನ್ಯ ಎಸಗುತ್ತಾರೆ. ಆ ಚಿಕ್ಕ ಮಕ್ಕಳು ಸಹ ದೊಡ್ಡ ಮಕ್ಕಳಂತೆ ನಡೆದು ಕೊಳ್ಳಬೇಕೆಂದು ಆ ಚಿಕ್ಕ ಮಕ್ಕಳಿಗೆ ದೊಡ್ಡ ಮಕ್ಕಳು ಕಿರುಕುಳ ಕೊಡುತ್ತಾರೆ. ಅವರಲ್ಲಿ ಕೆಲವು ಮಕ್ಕಳು ಹಿಂದೆ ಕಳವು ಮತ್ತು ಸಣ್ಣ ಪುಟ್ಟ ಅಪರಾಧಗಳನ್ನು ಮಾಡಿರುತ್ತಾರೆ. ಇಂತಹ ಕಿರುಕುಳದಿಂದ ಆ ಮಕ್ಕಳು ಮತ್ತೆ ಅದೇ ಅಪರಾಧಗಳನ್ನು ಮಾಡಲು ಆ ನಿಲಯವನ್ನು ಬಿಟ್ಟು ಹೊರಗಡೆ ಓಡಿ ಹೋಗುವಂತಹ ಪ್ರಸಂಗಗಳನ್ನು ಸಹ ನಾವು ನೋಡುತ್ತಿದ್ದೇವೆ.

(ಮುಂದು)

***(760) 04.10 15.06.2017 CS-GR***

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶ್ರೀಮತಿ ಮೋಟಮ್ಮ(ಮುಂದು)

ನಾನು ಒಮ್ಮೆ ಮೈಸೂರಿನಲ್ಲಿ ಜೈನರು ನಡೆಸುತ್ತಿದ್ದ ಒಂದು ಅನಾಥಾಶ್ರಮಕ್ಕೆ ಭೇಟಿಯನ್ನು ನೀಡಿದಾಗ ಆ ಮಕ್ಕಳ ಜೊತೆ ಮಾತನಾಡುತ್ತಾ ನಾನು ನೀವೆಲ್ಲ ಚೆನ್ನಾಗಿ ಓದಬೇಕು, ಓದಿ ಮುಂದೆ ಡಾಕ್ಟರ್, ಲಾಯರ್, ಇಂಜಿನಿಯರ್, ಪೊಲೀಸ್ ಆಗಬೇಕೆಂದು ಹೇಳಿ ನಂತರ ಒಂದು ಮಗುವನ್ನು ನೀನು ದೊಡ್ಡವನಾದ ಮೇಲೆ ಏನಾಗ್ತುತ್ತಿಯಾ ಎಂದು ಕೇಳಿದ್ದಕ್ಕೆ ಆ ಮಗು ನಾನು ದೊಡ್ಡವನಾದ ಮೇಲೆ ಪೊಲೀಸ್ ಆಗಿ ವೀರಪ್ಪನ್ ಅನ್ನು ಹಿಡಿಯುತ್ತೇನೆ ಎಂದು ಹೇಳಿತು. ಆ ಮಗುವಿನ ಮನಸ್ಸಿನಲ್ಲಿ ಆ ರೀತಿಯ ಒಂದು ಆಸಕ್ತಿ ಹುಟ್ಟಬೇಕಾದರೆ ಆ ಮಗುವಿಗೆ ನಾನು ಕಲಿಯಬೇಕು, ಬೇರೆ ಯಾರಿಗೂ ವೀರಪ್ಪನ್ ಹಿಡಿಯುವುದಕ್ಕೆ ಏಕೆ ಆಗುತ್ತಿಲ್ಲ ಎನ್ನುವುದನ್ನು ಕೂಡ ಯೋಚಿಸದೇ ನಾನು ಹಿಡಿಯುತ್ತೇನೆ ಎಂದು ಆ ಮಗು ಹೇಳಿತು. ಮಕ್ಕಳಿಗೆ ಇಂತಹ ಅದಮ್ಯ ಆಸಕ್ತಿ ಬರುತ್ತದೆ. ಈಗ ಅಂಬೇಡ್ಕರ್ ಜಯಂತಿ ನಡೆದರೂ ಕೂಡ ನಾನು ಮಕ್ಕಳನ್ನೆಲ್ಲ ಸೇರಿಸಿ, pledge ಮಾಡಿಸಿ, ಆ ಮಕ್ಕಳಿಗೆ ನೀವೆಲ್ಲ ಮುಂದೆ ಏನಾಗುತ್ತೀರಾ ಎಂದು ಕೇಳಿ, ಅವರಿಗೆ ನೋಡಿ ನೀವೆಲ್ಲರೂ ಅಂಬೇಡ್ಕರ್ ಫೋಟೋ ಮುಂದೆ ಪ್ರಮಾಣ ಮಾಡುತ್ತಾ ಇದ್ದೀರಿ., ಅವರಂತೆಯೇ ನೀವು ಮುಂದೆ ಬರಬೇಕೆಂದು ಅವರಿಗೊಂದು bindings ಹೇಳಿ ಬರುವುದು ನನ್ನದೊಂದು ಪ್ರತೀತಿಯಾಗಿದೆ. ಆ ನಿಟ್ಟಿನಲ್ಲಿ ನಾವು ಮಕ್ಕಳಿಗೆ ಪ್ರೋತ್ಸಾಹವನ್ನು ನೀಡಬೇಕಾಗುತ್ತದೆ. ನಾವು ಎಷ್ಟೇ ದೊಡ್ಡವರಾದರೂ ಯಾವುದೇ ಹುದ್ದೆಯಲ್ಲಿದ್ದರೂ ಸಹ ಎಲ್ಲರ ಮಕ್ಕಳನ್ನು ನಮ್ಮ ಮಕ್ಕಳಂತೆಯೇ ನೋಡಿ ಮಕ್ಕಳಿಗೆ ಒಂದು ಉಜ್ವಲ ಭವಿಷ್ಯವನ್ನು ರೂಪಿಸುವ ನಿಟ್ಟಿನಲ್ಲಿ ಮಕ್ಕಳಿಗೆ ನಾವು ಸ್ಫೂರ್ತಿ ತುಂಬಬೇಕಾಗುತ್ತದೆ. ಆ ನಿಟ್ಟಿನಲ್ಲಿ ಮಕ್ಕಳಿಗೆ ನಾವು ತಿಳುವಳಿಕೆಯನ್ನು ನೀಡಬೇಕಾಗುತ್ತದೆ. ಆಗ ಮಾತ್ರ ಮಕ್ಕಳ ಹಕ್ಕನ್ನು ಅವರಿಗೆ ನೀಡಿದಂತಾಗುತ್ತದೆ. ಜೊತೆಗೆ ಮಕ್ಕಳ ರಕ್ಷಣೆಯನ್ನು ಕೂಡ ನಾವು ಮಾಡಿದಂತಾಗುತ್ತದೆ. ಆ ನಿಟ್ಟಿನಲ್ಲಿ ಇವತ್ತು ಮಕ್ಕಳ ರಕ್ಷಣೆಗಾಗಿ ಶಾಸಕರ ವೇದಿಕೆ ಎಂದು ರೂಪಿಸಿದ್ದಾರೆ ಅದನ್ನು ನಾವು ಅಭಿನಂದಿಸಬೇಕಾಗುತ್ತದೆ. ಅದಕ್ಕಾಗಿ ನಮ್ಮ concern ಮತ್ತು dedication ಅನ್ನು ತೋರಿಸಬೇಕಾಗುತ್ತದೆ ಎನ್ನುವುದು ನನ್ನದೊಂದು ಅನಿಸಿಕೆ.

ಇದರ ಜೊತೆಯಲ್ಲಿ ಕೆಲವರು ಅನಾಥ ಮಕ್ಕಳನ್ನು ಅಡಾಪ್ಟ್ ಮಾಡಿಕೊಳ್ಳುತ್ತಾರೆ. ಇಂತಹ ಮಕ್ಕಳನ್ನು ಅಡಾಪ್ಟ್ ಮಾಡಿಕೊಳ್ಳುವುದಕ್ಕೂ ಕೂಡ ನಾವು ಹೆಚ್ಚಿನ ಪ್ರೋತ್ಸಾಹವನ್ನು ನೀಡಬೇಕಾಗುತ್ತದೆ. ಈ 'adoption' ನಲ್ಲಿ ಏನಾಗಿದೆ ಎಂದರೆ ಬಹಳ restrictions ಇದೆ. Adoption ಮಾಡಿಕೊಳ್ಳುವವರು ಯಾವ ರೀತಿ ಇದ್ದಾರೆ, ಅವರ ಕುಟುಂಬ, ಅವರ ಹಿನ್ನಲೆ ಏನು, ದತ್ತು ಮಗುವನ್ನು ತನ್ನ ಮಗುವಂತೆ ಬೆಳೆಸುತ್ತಾರೋ ಇಲ್ಲವೋ ಎನ್ನುವುದರ ಬಗ್ಗೆ ಕೋರ್ಟಿನಲ್ಲಿ ಪ್ರಮಾಣ ಪತ್ರ ಸಲ್ಲಿಸಬೇಕು, ಹೀಗೆ ಬಹಳಷ್ಟು

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಪ್ರೋಸಿಜರ್ ಇದೆ. ಹಾಗಾಗಿ ಎಷ್ಟೊಂದು ಜನ adoption ಗೆ ಹೋಗುವವರು ಆ ಪ್ರೋಸಿಜರ್ ನೋಡಿ adoption ಗೆ ಮುಂದೆ ಬರುವುದಿಲ್ಲ. ಆದ್ದರಿಂದ adoptionಗೆ ಇರುವ ರೂಲ್ ಅನ್ನು ಸ್ವಲ್ಪ ರಿಲ್ಯಾಕ್ಸ್ ಮಾಡಬೇಕೆಂದು ನಾನು ಸಚಿವರಿಗೆ ಹೇಳುತ್ತಿದ್ದೇನೆ. ಈ ದತ್ತು ವಿಧಾನವನ್ನು ಸರಳೀಕರಿಸಿದರೆ ಅನಾಥ ಮಕ್ಕಳನ್ನು ದತ್ತು ತೆಗೆದುಕೊಳ್ಳುವುದಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಜನರು ಮುಂದೆ ಬರುತ್ತಾರೆ. ನಮ್ಮ ಬೆಂಗಳೂರಿನ ಇಂದಿರಾ ನಗರದಲ್ಲಿ ಒಂದು Adoption Centre ಇದೆ. 'ನಮಿತಾಚಾಂಡಿ' ಎನ್ನುವವರು ಆ Adoption Centre ನ್ನು ಬಹಳ ಚೆನ್ನಾಗಿ ನಡೆಸುತ್ತಾ ಇದ್ದಾರೆ. ಅಲ್ಲಿ ಇಲ್ಲಿ ಹೆತ್ತು ಬಿಸಾಡಿದ ಮಕ್ಕಳು ಅಥವಾ ಬೀದಿಯಲ್ಲಿ ಅಲ್ಲಿ ಇಲ್ಲಿ ತಪ್ಪಿಸಿಕೊಂಡ ಮಕ್ಕಳನ್ನು ತಂದು ಬಹಳ ಚೆನ್ನಾಗಿ ಅವರನ್ನೆಲ್ಲ ಸಾಕುತ್ತಿದ್ದಾರೆ. ಶ್ರೀಮತಿ ಉಮಾಶ್ರೀಯವರು ಅದನ್ನು ನೋಡಿದ್ದಾರೋ ಇಲ್ಲವೋ ನನಗೆ ಗೊತ್ತಿಲ್ಲ. ಯಾವಾಗಲಾದರೂ ಸಾಧ್ಯವಾದರೆ ಅವರು ಹೋಗಿ ನೋಡಲಿ.

**ಶ್ರೀ ತನ್ವೀರ್ ಸೇಠ್:-** ಈ Child Adoption Policy, ದತ್ತು ತೆಗೆದುಕೊಳ್ಳುವ ನಿಯಮಗಳೇನಿವೆ ಅದನ್ನು ಮಾಡಿರುವುದು ಕೇಂದ್ರಸರ್ಕಾರ, ರಾಜ್ಯಸರ್ಕಾರ ಇದರಲ್ಲಿ ಹಸ್ತಕ್ಷೇಪವನ್ನು ಮಾಡುವುದಕ್ಕೆ ಆಗುವುದಿಲ್ಲ. ಮೊನ್ನೆ ಸಹ ಕೇಂದ್ರಸರ್ಕಾರದವರು Child Adoption Policy ಯನ್ನು ಮತ್ತೆ redesign ಮಾಡಿದ್ದಾರೆ. ಹಾಗಾಗಿ ರಾಜ್ಯ ಸರ್ಕಾರಕ್ಕೆ ಏನು ಸಲಹೆ ಕೊಡಬಹುದು ಅದನ್ನು ಕೊಟ್ಟರೆ ನಾವು ತೆಗೆದುಕೊಳ್ಳಬಹುದು.

**ಶ್ರೀಮತಿ ಮೋಟಮ್ಮ:-** ದತ್ತು ಪಡೆಯುವುದಕ್ಕೆ ಕೇಂದ್ರ ಸರ್ಕಾರದ ಮಾರ್ಗದರ್ಶನ ಬಿಟ್ಟು ನಮ್ಮಲ್ಲಿ ಏನಾದರೂ ಎಷ್ಟು ಸಾಧ್ಯವೋ ಅಷ್ಟು ನಿಯಮಗಳನ್ನು ಸರಳೀಕರಣ ಮಾಡಿದರೆ ಒಳ್ಳೆಯದು ಎನ್ನುವುದು ನನ್ನ ಭಾವನೆ. ಶಿಕ್ಷಣ ಸಚಿವರು ಈ ವಿಚಾರದ ಬಗ್ಗೆ ಆಸಕ್ತಿ ವಹಿಸಿರುವ ಕಾರಣ ನಾನು ಅವರಿಗೆ ಧನ್ಯವಾದಗಳನ್ನು ಸಮರ್ಪಿಸುತ್ತೇನೆ. ಮಕ್ಕಳ ವಿಚಾರದಲ್ಲಿ ಅವರ ಹೊಣೆಗಾರಿಕೆಯೂ ಸಹ ಜಾಸ್ತಿಯಿದೆ. 'ಚಿಣ್ಣರ ಅಂಗಳ', 'ಕಲಿ-ನಲಿ' ಈ ಯೋಜನೆಗಳು ಶಾಲಾ ಬಿಟ್ಟ ಮಕ್ಕಳು ಬಡವರ ಮಕ್ಕಳನ್ನು ಶಾಲೆಯತ್ತ ಸೆಳೆಯುವ ಒಂದು ಉತ್ತಮ ಯೋಜನೆಗಳು. ಇದನ್ನು ಇನ್ನು ಹೆಚ್ಚು ಹೆಚ್ಚು ಮಾಡುವ ಪ್ರಯತ್ನವನ್ನು ನಾವು ಮಾಡಬೇಕಾಗುತ್ತದೆ. ಇನ್ನು 'ಪ್ರತಿಭಾ ಕಾರಂಜಿ' ಎಂದು ರಾಜ್ಯ, ಜಿಲ್ಲಾ ಮತ್ತು ತಾಲ್ಲೂಕು ಮಟ್ಟದಲ್ಲಿ ನಡೆಸುತ್ತಿರುವುದು ಬಹಳ ಚೆನ್ನಾಗಿದೆ. ಅದರಿಂದ ಮಕ್ಕಳಿಗೆ ಬಹಳ ಪ್ರಯೋಜನಕಾರಿಯಾಗಿದೆ. ಈ ಯೋಜನೆಯಿಂದ ಮಕ್ಕಳಲ್ಲಿನ ಸೂಕ್ತ ಪ್ರತಿಭೆ ಹೊರಬರಲಿಕ್ಕೆ ಸಾಧ್ಯವಾಗಿದೆ. ಇನ್ನು 'ಕಲಿ-ನಲಿ', ಯೋಜನೆಯಿಂದ ಕೂಡ ಸಾಕಷ್ಟು ಮಕ್ಕಳು ಶಾಲೆಗೆ ಬಂದು ಶಿಕ್ಷಣದತ್ತ ಮನಸ್ಸನ್ನು ಮಾಡುತ್ತಿದ್ದಾರೆ. ಇದು ಬಹಳ ಮೆಚ್ಚಬೇಕಾದ ಒಂದು ಯೋಜನೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಮತ್ತೊಂದು ವಿಚಾರ ಏನೆಂದರೆ ನಗರಪ್ರದೇಶಗಳಲ್ಲಿ ಬೆಳೆಯುವ ಮಕ್ಕಳಿಗೂ ಗ್ರಾಮೀಣ ಪ್ರದೇಶದಲ್ಲಿ ಬೆಳೆಯುವಂತಹ ಮಕ್ಕಳಿಗೂ ಬಹಳ ವ್ಯತ್ಯಾಸವಿರುತ್ತದೆ. ನಗರ ಪ್ರದೇಶದಲ್ಲಿನ ಮಕ್ಕಳ ವಾತಾವರಣವೇ ಬೇರೆ, ಗ್ರಾಮೀಣ ಪ್ರದೇಶದ ಮಕ್ಕಳಿನ ವಾತಾವರಣವೇ ಬೇರೆ. ನಗರ ಪ್ರದೇಶದ ಮಕ್ಕಳ ರೀತಿಯಲ್ಲಿಯೇ ಅವರಿಗೆ ಯೋಜನೆಗಳನ್ನು ಮಾರ್ಗದರ್ಶನವನ್ನು ನೀಡಿದರೆ ಈ ಮಕ್ಕಳು ಸಹ ಮುಂದೆ ಬರುವುದಕ್ಕೆ ಸಾಧ್ಯವಾಗುತ್ತದೆ. ಏಕೆಂದರೆ ನಗರ ಪ್ರದೇಶದಲ್ಲಿರುವ ಮಕ್ಕಳನ್ನು ಗ್ರಾಮೀಣಪ್ರದೇಶದಲ್ಲಿನ ಮಕ್ಕಳಿಗೆ ಹೋಲಿಕೆ ಮಾಡುವುದಕ್ಕೆ ಆಗುವುದಿಲ್ಲ. ನಗರ ಪ್ರದೇಶದಲ್ಲಿರುವ ಮಕ್ಕಳೆಲ್ಲರೂ ಆರೋಗ್ಯವಂತ ಕುಟುಂಬದವರು ಎಲ್ಲಾ ಸೌಲಭ್ಯ ಸವಲತ್ತುಗಳನ್ನು ಪಡೆಯುತ್ತಿದ್ದಾರೆ ಎಂದು ಹೇಳುವುದಕ್ಕೆ ಆಗುವುದಿಲ್ಲ. ನಗರಪ್ರದೇಶದಲ್ಲಿರುವ ಮಕ್ಕಳಿಗೂ ಸಹ ಬಹಳಷ್ಟು ತೊಂದರೆಗಳಿವೆ. ನಾನೇ ಎಷ್ಟೋ ಮಕ್ಕಳು ಬೀದಿಯಲ್ಲಿ ಭಿಕ್ಷಾಟನೆ ಮಾಡುವುದನ್ನು ನೋಡಿದ್ದೇನೆ. ಇದನ್ನೆಲ್ಲ ತಪ್ಪಿಸುವ ಕೆಲಸವನ್ನು ಸರ್ಕಾರ, ಪೊಲೀಸ್ ಇಲಾಖೆ ಹಾಗೂ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಸಹಾಯದಿಂದ ಆಗಬೇಕು. ಸುಮ್ಮನೆ ಮುಗುಮ್ಮಾಗಿ ಹೋಗಿ ಭಿಕ್ಷಾಟನೆ ಮಾಡುವಂತಹ ಮಕ್ಕಳನ್ನು ಕರೆತಂದು ಅನಾಥಾಶ್ರಮಗಳಲ್ಲಿ ಸೇರಿಸುವಂತಹ ಕೆಲಸ ಕೂಡ ನಡೆಯುತ್ತಿದೆ. ಆದರೂ ಮಕ್ಕಳು ಎಲ್ಲಾ ಸರ್ಕಲ್‌ಗಳಲ್ಲಿ ಮಕ್ಕಳು ಭಿಕ್ಷಾಟನೆ ಮಾಡುತ್ತಿರುವುದನ್ನು ನಾವು ಕಾಣುತ್ತಿರುತ್ತೇವೆ. ಇದನ್ನೆಲ್ಲ ಅವಾಯ್ಡ್ ಮಾಡಲಿಕ್ಕೆ ಸಾಧ್ಯವಾದಷ್ಟು ಪ್ರಯತ್ನವನ್ನು ಸರ್ಕಾರ ಮಾಡಬೇಕಾಗುತ್ತದೆ.

ಇನ್ನೊಂದು ವಿಚಾರ ಎಂದರೆ ದಂಧೆಗೋಸ್ಕರ ಮಕ್ಕಳನ್ನು ಅಪಹರಿಸುತ್ತಾರೆ. ಮಕ್ಕಳನ್ನು ಅಪಹರಿಸಿ ಭಿಕ್ಷಾಟನೆಗೆ ಮತ್ತು ಕಳ್ಳತನ ಮಾಡುವುದಕ್ಕೆ ಈ ಮಕ್ಕಳನ್ನು ಕೆಲವು ದಂಧೆಕೋರರು ಬಳಸಿಕೊಳ್ಳುತ್ತಾರೆ ಎನ್ನುವುದನ್ನು ನಾವು ಕೇಳಿದ್ದೇವೆ. ಆದರೆ ಇದುವರೆವಿಗೂ ಪೊಲೀಸ್ ಇಲಾಖೆಯವರು ಇಂತಹ ದಂಧೆಕೋರರನ್ನು ಅರೆಸ್ಟ್ ಮಾಡಿರುವುದಿಲ್ಲ, ಯಾವುದೇ ಶಿಕ್ಷೆಯನ್ನು ಕೂಡ ನೀಡಿರುವುದಿಲ್ಲ. ಮಕ್ಕಳಿಂದ ದಂಧೆ ನಡೆಸುವ ಸಂಘಟನೆ ಏನಿದೆ ಅದನ್ನು ಪತ್ತೆ ಹಚ್ಚಿ ಅವರಿಂದ ಮಕ್ಕಳನ್ನು ಮುಕ್ತರನ್ನಾಗಿ ಮಾಡುವುದಕ್ಕೆ ಇನ್ನೂ ಸಾಧ್ಯವಾಗಿಲ್ಲ. ಇದನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಬೇಕೆಂದು ಸರ್ಕಾರದ ಮೇಲೆ ಹೆಚ್ಚು ಒತ್ತಡವನ್ನು ತರಬೇಕಾಗುತ್ತದೆ. ಆಗ ಮಾತ್ರ ಮಕ್ಕಳನ್ನು ಅಪಹರಿಸಿ, ಭಿಕ್ಷಾಟನೆ ಮತ್ತು ಕದಿಯುವುದಕ್ಕೆ ಹಾಕುವುದನ್ನು ತಡೆಗಟ್ಟಬಹುದು ಎಂದು ನನಗನಿಸುತ್ತದೆ.

ಇನ್ನೊಂದು ವಿಚಾರ ಏನೆಂದರೆ 6 ನೇ ವಯಸ್ಸಿನಿಂದ 18 ವರ್ಷದವರೆಗಿನ ಹೆಣ್ಣುಮಕ್ಕಳು ಬಹಳಷ್ಟು ಸಂಖ್ಯೆಯಲ್ಲಿ ನಾಪತ್ತೆಯಾಗಿದ್ದಾರೆ. ಹೆಣ್ಣುಮಕ್ಕಳ ಮೇಲಿನ ದೌರ್ಜನ್ಯ ಮತ್ತು ಅತ್ಯಾಚಾರ ತಡೆಗಟ್ಟುವ ವಿಚಾರದಲ್ಲಿ ನಾವು ಪ್ರತಿ ಜಿಲ್ಲೆಯ ಪೊಲೀಸ್ ಇಲಾಖೆಯಿಂದ ಮಾಹಿತಿಯನ್ನು ಪಡೆದಾಗ ಬಹಳಷ್ಟು ಈ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ವಯೋಮಿತಿಯ ಹೆಣ್ಣುಮಕ್ಕಳು ನಾಪತ್ತೆಯಾಗಿರುವುದು ಕಂಡು ಬಂದಿದೆ. ಏಕೆ ಈ ಮಕ್ಕಳು ನಾಪತ್ತೆಯಾಗಿದ್ದಾರೆ, ಏನು ಉದ್ದೇಶ, ಮಕ್ಕಳನ್ನು ಅಪಹರಿಸಿ ಬೇರೆ ದೇಶಕ್ಕೆ ಏನಾದರೂ ರವಾನೆ ಮಾಡುತ್ತಿದ್ದಾರಾ ಎನ್ನುವ ಮಾಹಿತಿ ನಮಗೆ ಸರಿಯಾಗಿ ಸಿಗಲಿಲ್ಲ. ಮಾನ್ಯ ಉಗ್ರಪ್ಪನವರಂತೂ ಪ್ರತಿ ಜಿಲ್ಲೆಯ ಪೊಲೀಸ್ ಅಧಿಕಾರಿಗಳಿಗೆ ಈ ವಿಚಾರದಲ್ಲಿ ಬಹಳ ಗಂಭೀರವಾಗಿ ಒತ್ತಡವನ್ನು ಹೇರಿದ್ದಾರೆ. ಯಾವ ವರ್ಗದ ಹೆಣ್ಣುಮಕ್ಕಳು ನಾಪತ್ತೆ ಆಗುತ್ತಿದ್ದಾರೆ ಮತ್ತು ಎಷ್ಟು ಮಕ್ಕಳು ಜಿಲ್ಲಾವಾರು ನಾಪತ್ತೆ ಆಗಿದ್ದಾರೆ, ಅವರು ಬದುಕಿದ್ದಾರೋ ಇಲ್ಲವೋ ಅಥವಾ ಒತ್ತೆಯಾಳುಗಳಾಗಿ ಮಾರಾಟ ಆಗಿದ್ದಾರೋ ಎನ್ನುವ ಮಾಹಿತಿ ನೀಡಬೇಕೆಂದು ಪ್ರಸ್ತಾಪಿಸಿದ್ದೇವೆ. ಇವನ್ನೆಲ್ಲ ತಡೆಗಟ್ಟುವ ವಿಚಾರದಲ್ಲಿ ಹೆಚ್ಚು ಕೆಲಸವನ್ನು ಮಾಡಬೇಕಾಗುತ್ತದೆ, ಹೊಸ ಹೊಸ ಕಾನೂನನ್ನು ಜಾರಿಗೆ ತರಬೇಕಾಗುತ್ತದೆ.

ಇಷ್ಟು ಮಾತ್ರ ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ, ಏಕೆಂದರೆ ಇನ್ನೂ ಹಲವರು ಈ ವಿಚಾರದ ಬಗ್ಗೆ ಮಾತನಾಡಬೇಕೆಂದಿರುವ ಕಾರಣ, ಕೆಲವು ವಿಚಾರಗಳನ್ನು ಮಾತ್ರ ಇಲ್ಲಿ ಪ್ರಸ್ತಾಪಿಸಿದ್ದೇನೆ. ಅದರ ನಮ್ಮ ಸ್ನೇಹಿತರು ಮಾತನಾಡತಕ್ಕ ಸಂದರ್ಭದಲ್ಲಿ ಒಂದೊಂದೆ ವಿಚಾರವನ್ನು ಸುದೀರ್ಘವಾಗಿ ಮಾತನಾಡಬಹುದು. ಅದಕ್ಕೆ ಅವರು ಪ್ರಯತ್ನ ಮಾಡಲಿ ಎನ್ನುವ ಮಾತನ್ನು ಹೇಳಿ, ನನಗೆ ತಿಳಿದ ಹಾಗೆ ನಾನು ಈ ಇಲಾಖೆಯಲ್ಲಿ ಕೆಲಸ ಮಾಡಿದಾಗ ವಿಶೇಷವಾಗಿ ಪೌಷ್ಠಿಕ ಆಹಾರವನ್ನು ಮಕ್ಕಳಿಗೆ ಕೊಡಬೇಕೆಂದು Energy Food ಜೊತೆಯಲ್ಲಿ ಬೇರೆ ಆಹಾರವನ್ನು ಕೂಡ ಸರಬರಾಜು ಮಾಡುವ ಕೆಲಸ ಆಗಿತ್ತು. ಈಗಲೂ ಕೂಡ ಅದೇ ಕೆಲಸ ಆಗುತ್ತಿದೆ. ಆಯಾ ಏರಿಯಾವೈಸ್ ಮಕ್ಕಳಿಗೆ ಮತ್ತು ಬಾಣಂತಿಯರಿಗೆ ಆಹಾರ ಒದಗಿಸುವ ಕೆಲಸ ನಡೆಯುತ್ತಿದೆ.

(ಮುಂದು)

***(761) 4.20 15-06-2017:ಎಂವಿ:ಎಂಡಿ***
**ಶ್ರೀಮತಿ ಮೋಟಮ್ಮ (ಮುಂದು)**

Area wise food ನ್ನು ಮಕ್ಕಳಿಗೆ ಮತ್ತು ಬಾಣಂತಿಯರಿಗೆ ಸರಬರಾಜು ಮಾಡುವಂತಹ ಕೆಲಸ ಕೂಡ ಆಗುತ್ತಿದೆ. ಈ ಸಂದರ್ಭದಲ್ಲಿ ಮಾನ್ಯ ಮಂತ್ರಿಗಳು ಇಲ್ಲೇ ಇರುವುದರಿಂದ ನಾನು ಹೇಳುತ್ತೇನೆ. ಈಗ ನಾವು ಏನು 'ಮಾತೃಪೂರ್ಣ' ಯೋಜನೆಯನ್ನು ಜಾರಿಗೆ ತಂದಿದ್ದೇವೆ, ಅಲ್ಲಿ ಮತ್ತೆ ಈ ಬಾಣಂತಿ ಮತ್ತು ಬಸುರಿಯರಿಗೆ ಅಡುಗೆ ಮಾಡುವ ಕೆಲಸ ನಮ್ಮ ಅಟೆಂಡರ್‌ಗೆ ಆಗಬಾರದು. ಅದರ ಜೊತೆಗೆ take home food ಇದೆಯಲ್ಲಾ, ಅದೇ ತಾಯಂದಿರಿಗೆ better ಎನ್ನುವಂತಹ ಮಾತನ್ನು ಹೇಳುವುದಕ್ಕೆ ನಾನು ಇಷ್ಟಪಡುತ್ತೇನೆ. ನಾನು ಮಾತನಾಡುತ್ತಾ ಮಾನ್ಯ ಮುಖ್ಯಮಂತ್ರಿಗಳಿಗೂ ಕೂಡ ಹೇಳುತ್ತಿದ್ದೆ. ಅಂಗನವಾಡಿ ಮಕ್ಕಳಿಗೆ ಬೇರೆ ಅಡುಗೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡಬೇಕು, ತಾಯಂದಿರಿಗೆ ಬೇರೆ ಅಡುಗೆ ಮಾಡಬೇಕೆಂದು ಹೇಳಿದರೆ, ಅವರಿಗೂ ಸಹ ಕಷ್ಟವಾಗುತ್ತದೆ ಮತ್ತು ಎಷ್ಟು ಜನ ತಾಯಂದಿರು ಮಕ್ಕಳ ಜೊತೆ ಬಂದು ಊಟ ಮಾಡುತ್ತಾರೆ ಎಂದು ಹೇಳುವುದಕ್ಕೆ ಕಷ್ಟ.

**ಉಪ ಸಭಾಪತಿಯವರು:-** ಮಾನ್ಯ ಸದಸ್ಯರಾದಂತಹ ಶ್ರೀಮತಿ ಮೋಟಮ್ಮನವರೆ conclude ಮಾಡಿ.

**ಶ್ರೀಮತಿ ಮೋಟಮ್ಮ:-** ಮಾನ್ಯ ಸಭಾಪತಿಯವರೆ, ಅದಕ್ಕೋಸ್ಕರ ಆ take home food ಕೊಟ್ಟರೆ, ಅವರುಗಳೇ ಮನೆಯಲ್ಲಿ ಒಂದು ತುತ್ತನ್ನು ಮಗುವಿಗೆ ಹೆಚ್ಚಿಗೆ ಕೊಡಬಹುದು, ತಾನು ಊಟ ಮಾಡಿ, ಆರೋಗ್ಯವಂತ ಒಬ್ಬ ಹೆಣ್ಣು ಮಗಳಾಗಿ, ಆರೋಗ್ಯವಂತ ತಾಯಿಯಾಗಿ, ಆರೋಗ್ಯವಂತ ಮಗುವನ್ನು ಹೆರುವುದಕ್ಕೆ ಸಾಧ್ಯವಾಗುತ್ತದೆ ಎನ್ನುವಂತಹ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತಾ, ಒಟ್ಟಾರೆಯಾಗಿ ಕರ್ನಾಟಕ ರಾಜ್ಯದ ಮಕ್ಕಳ ಹಕ್ಕನ್ನು ನಾವು ಕಾಪಾಡುವುದಕ್ಕೆ ಮುಂದಾಗಬೇಕಾಗುತ್ತದೆ. ಅದಕ್ಕೋಸ್ಕರ ನಾವು ಶಾಸಕರಾಗಿ concern and commitment ಅನ್ನು ತೋರಿಸೋಣವೆಂದು ಹೇಳಿ, ಅವಕಾಶಕ್ಕಾಗಿ ವಂದಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

**ಶ್ರೀ ರಾಮಚಂದ್ರಗೌಡ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಶ್ರೀಮತಿ ಮೋಟಮ್ಮನವರು ಮತ್ತು ಶ್ರೀಮತಿ ತಾರಾ ಅನುರಾಧರವರು ಬಹಳ ಮಹತ್ವವಾದ ವಿಚಾರವನ್ನು ತಂದಿಟ್ಟಿದ್ದಾರೆ. ಇದರ ಮಹತ್ವವಾದ ವಿಚಾರವೆಂದರೆ ಮುಂದಿನ ಪೀಳಿಗೆಯನ್ನು ರಕ್ಷಣೆ ಮಾಡುವಂಥದ್ದು, ಮುಂದಿನ ಪೀಳಿಗೆಯ ಜವಾಬ್ದಾರಿಯನ್ನು ನಾವು ಇವತ್ತಿನ ಜನ ಬಹಳ ಜೋಪಾನವಾಗಿ ನೋಡಬೇಕಾಗಿದೆ. ಇವತ್ತಿನ ದಿವಸ ಬಹಳ ಸಂಕಟದಿಂದ ಹೇಳುವುದೇನೆಂದರೆ, ಮಕ್ಕಳ ಮಾರಾಟಗಳು ನಡೆಯುತ್ತಿವೆ, ಮಕ್ಕಳನ್ನು ಭಿಕ್ಷಾಟನೆಗೆ ತೆಗೆದುಕೊಂಡು ಹೋಗುತ್ತಿದ್ದಾರೆ, ಹೊರ ರಾಜ್ಯಗಳಿಗೆ ತೆಗೆದುಕೊಂಡು ಹೋಗಿ ವೇಶ್ಯಾವಾಟಿಕೆಗೆ ತಯಾರು ಮಾಡುವಂತಹ ಕೆಲಸ ನಡೆಯುತ್ತಿದೆ. ಇಂತಹ ಸಂದರ್ಭದಲ್ಲಿ ಏನು ಮಕ್ಕಳಿಗೆ ಹಕ್ಕೋತ್ತಾಯವನ್ನು ತಂದಿದ್ದೀರಾ, ನಿಜಕ್ಕೂ ನಿಮಗೆ ನನ್ನ ಅಭಿನಂದನೆಗಳು. ಇವತ್ತಿನ ದಿವಸ ನಮ್ಮ ದೇಶದಲ್ಲಿ ಮಕ್ಕಳ ಪ್ರಮಾಣ 1000 ಜನಸಂಖ್ಯೆಗೆ 30 ಜನ ಮಕ್ಕಳಿದ್ದರೆ. ಭಾರತದಲ್ಲಿ 39, ಕೇರಳ ರಾಜ್ಯದಲ್ಲಿ 30 ಮತ್ತು ಕರ್ನಾಟಕ ರಾಜ್ಯದಲ್ಲಿ 34. ರಾಷ್ಟ್ರದಲ್ಲಿ 1000 ಜನಸಂಖ್ಯೆಗೆ ಶೇಕಡ 39 ಪ್ರಮಾಣವಿದ್ದರೆ, ನಮ್ಮ ಕರ್ನಾಟಕ ರಾಜ್ಯದಲ್ಲಿ 34 ಜನ ಇದ್ದಾರೆ, ಕಮ್ಮಿ ಎಂದರೆ ಕೇರಳ ರಾಜ್ಯದಲ್ಲಿ 30 ಜನರಿದ್ದಾರೆ. ಅಂದ ಮೇಲೆ ನಮ್ಮ ಕರ್ನಾಟಕ ರಾಜ್ಯದ ವಿಚಾರ ತೆಗೆದುಕೊಂಡರೆ 1000ಕ್ಕೆ 34 ಜನ ಮಕ್ಕಳು ನಮ್ಮ ರಾಜ್ಯದಲ್ಲಿ ಇರಬೇಕಾದರೆ, ಈ ಮಕ್ಕಳನ್ನು ಯಾವ ರೀತಿಯಾಗಿ ಸಂರಕ್ಷಣೆ ಮಾಡಬೇಕು. ಅವರ ಹಕ್ಕುಗಳನ್ನು ನಾವು ಹೇಗೆ ದೊರಕಿಸಿಕೊಡಬೇಕು. ಅವರಿಗೆ ಹೇಗೆ ವಿದ್ಯಾಭ್ಯಾಸವನ್ನು ಕೊಡಬೇಕು. ಇದು ಬಡವರ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಕ್ಕಳು ಮತ್ತು ಶ್ರೀಮಂತರ ಮಕ್ಕಳು ಎಂದು ಅಲ್ಲ, ಇದು ಎಲ್ಲಾ ಒಟ್ಟು ಸಂಖ್ಯೆ ಇರುವುದು. ಇದರೊಳಗೆ ಬಹುತೇಕ ಬಡ ಮಕ್ಕಳು ಎಷ್ಟು ತೀವ್ರವಾದ ಅನಿಷ್ಟ ಸ್ಥಿತಿಯಲ್ಲಿ ಇದ್ದಾರೆಂದರೆ, ಅದನ್ನು ನಾವು ಬಹಳ ಗಮನಿಸಬೇಕಾಗಿದೆ. ವಿಶೇಷವಾಗಿ ಅಲ್ಪಸಂಖ್ಯಾತರ ಮನೆಗಳಲ್ಲಿ, ಹರಿಜನರ ಮನೆಯಲ್ಲಿ ಮತ್ತು ಬಡವರ ಮನೆಯಲ್ಲಿ ಮಕ್ಕಳನ್ನು ಕೆಲಸಕ್ಕೆ ಕಳುಹಿಸಿಬಿಡುತ್ತಾರೆ. ಅವರಿಗೆ ಹೊಟ್ಟೆಗಿಲ್ಲ, ಅವರು ಜೀವನ ಮಾಡುವುದಕ್ಕೆ ಆಗುವುದಿಲ್ಲ, ಗಂಡ ಮತ್ತು ಹೆಂಡತಿ ಇಬ್ಬರು ಇರುತ್ತಾರೆ. ಮೂರು ವರ್ಷದ್ದೋ ಅಥವಾ ನಾಲ್ಕು ವರ್ಷದ್ದೋ ಮಗು ಇದ್ದಾಗ ಸ್ಕೂಲಿಗೆ ಕಳುಹಿಸುವುದಿಲ್ಲ. ಅವರು ಕೆಲಸಕ್ಕೆ ಕಳುಹಿಸಿಬಿಡುತ್ತಾರೆ, ಅವರ ಜೊತೆಯಲ್ಲಿ ಕೆಲಸಕ್ಕೆ ಇಟ್ಟುಕೊಂಡು ಬಿಡುತ್ತಾರೆ. ಎಷ್ಟೋ ಸಂಘ–ಸಂಸ್ಥೆಗಳು ಬಹಳ ಪ್ರಯತ್ನ ಮಾಡುತ್ತಿವೆ, ನಮ್ಮ ಕರ್ನಾಟಕ ರಾಜ್ಯದಲ್ಲಿ, ರಾಜ್ಯ ಸರ್ಕಾರ ವಿಶೇಷವಾದಂತಹ ಕಾಳಜಿಯನ್ನು ವಹಿಸಿದೆ. ಮತ್ತೊಂದು ವಿಚಾರವನ್ನು ತಮ್ಮ ಗಮನಕ್ಕೆ ತರುವುದಾದರೆ, ಲಿಂಗ ಪ್ರಮಾಣ. ಆರು ವರ್ಷದವರೆಗೆ ಇರುವಂತಹ ಮಕ್ಕಳ ಲಿಂಗ ಪ್ರಮಾಣ, ಇದು ಬಹಳ ಪ್ರಮುಖವಾದದ್ದು, ಈ ಲಿಂಗ ಪ್ರಮಾಣದಲ್ಲಿ ಭಾರತ ದೇಶದಲ್ಲಿ 1000ಕ್ಕೆ 990 ಹೆಣ್ಣು ಮಕ್ಕಳಿದ್ದಾರೆ. ಆದರೆ ನಮ್ಮ ಕರ್ನಾಟಕ ರಾಜ್ಯದಲ್ಲಿ 1000ಕ್ಕೆ 948 ಹೆಣ್ಣು ಮಕ್ಕಳಿದ್ದಾರೆ. ಹೆಣ್ಣು ಮಕ್ಕಳು ಮತ್ತು ಗಂಡು ಮಕ್ಕಳು ಸಮ–ಸಮ ಆಗಬೇಕಲ್ಲ. ನಿಜಕ್ಕೂ ಈ ವಿಚಾರದಲ್ಲಿ ನಮ್ಮ ರಾಜ್ಯ ಸರ್ಕಾರದಲ್ಲಿ ಏನೂ ಲೋಪವಿಲ್ಲ ಅವರು ಒಳ್ಳೆಯ ಕೆಲಸ ಮಾಡುತ್ತಿದ್ದಾರೆ. ನಮ್ಮ ಸಚಿವರು ಇಲ್ಲೇ ಇದ್ದಾರೆ, ಅವರು ಬಹಳ ವಿಶೇಷವಾದಂತಹ ಕೆಲಸವನ್ನು ಮಾಡುತ್ತಿದ್ದಾರೆ. ಆದರೂ ಕೂಡ ಸಾಕಾಗುತ್ತಿಲ್ಲ. ಒಂದೊಂದು ಸಾರಿ ನಾವು ಎಷ್ಟು ಮಾತನಾಡಿದರೂ ಸಾಕಾಗುವುದಿಲ್ಲ. ನೀವು ಕುಳಿತುಕೊಳ್ಳಿ ಎಂದು ಹೇಳುತ್ತೀರಿ, ಏಕೆಂದರೆ ನಮಗೆ ಮಾತನಾಡುವುದಕ್ಕೆ ಸಾಕಾಗುವುದಿಲ್ಲ, ನಾವು ಹೆಚ್ಚು ಮಾತನಾಡಬೇಕಾಗುತ್ತದೆ. ಈ ಪ್ರಮಾಣವನ್ನು ಸರಿದೂಗಿಸಬೇಕಾದರೆ, ಬೇಕಾದಷ್ಟು ಕೆಲಸ ಮಾಡಬೇಕಾಗುತ್ತದೆ. ಏಳು ವರ್ಷದಿಂದ ಹದಿನೆಂಟು ವರ್ಷದ ವಿಚಾರವನ್ನು ತೆಗೆದುಕೊಂಡಾಗ, ವರ್ಷವಾರು ಲಿಂಗ ಪ್ರಮಾಣ, ಏಳು ವರ್ಷದಿಂದ ಹತ್ತು ವರ್ಷದ ಲಿಂಗ ಪ್ರಮಾಣವನ್ನು ನೋಡಿದರೆ, ಭಾರತದಲ್ಲಿ 914. ಹನ್ನೊಂದು ವರ್ಷದಿಂದ ಹದಿನಾಲ್ಕು ವರ್ಷದ ಲಿಂಗ ಪ್ರಮಾಣವನ್ನು ನೋಡಿದರೆ ಭಾರತದಲ್ಲಿ 916. ಹದಿನೈದು ವರ್ಷದಿಂದ ಹದಿನೆಂಟು ವರ್ಷದ ಲಿಂಗ ಪ್ರಮಾಣವನ್ನು ನೋಡಿದರೆ ಭಾರತದಲ್ಲಿ 876. ಅಂದರೆ, ಹದಿನೈದು ವರ್ಷದಿಂದ ಹದಿನೆಂಟು ವರ್ಷದಲ್ಲಿರತಕ್ಕಂಥ ಲಿಂಗ ಪ್ರಮಾಣವನ್ನು ನೋಡಿದರೆ ನಮಗೆ ಗಾಬರಿಯಾಗುತ್ತದೆ. ಎಷ್ಟು ಗಾಬರಿಯಾಗುತ್ತದೆಂದರೆ 914 ಈಗಿನ ಪರಿಸ್ಥಿತಿಯಲ್ಲಿದೆ. 876 ಹೆಣ್ಣು ಮಕ್ಕಳು ಇಷ್ಟೇ ಆಗಿ, ಗಂಡು ಮಕ್ಕಳು ಜಾಸ್ತಿಯಾದರೆ, ಏನು ಸಂದರ್ಭಗಳು ಆಗಬಹುದು ಎಂಬ ಕಲ್ಪನೆಯನ್ನು ಕೂಡ ನಾವೆಲ್ಲರೂ ಮಾಡಬೇಕಾಗುತ್ತದೆ. ಈ ವಿಚಾರದಲ್ಲಿ ಭಾರತದ ಸ್ಥಿತಿ ಇದ್ದರೆ, ನಮ್ಮ ಕರ್ನಾಟಕ ರಾಜ್ಯಕ್ಕಿಂತ ಕೇರಳ ರಾಜ್ಯದಲ್ಲಿ ಬಹಳ ಚೆನ್ನಾಗಿದೆ. ಕೇರಳ ರಾಜ್ಯದಲ್ಲಿ ಹದಿನೈದು ವರ್ಷದಿಂದ ಹದಿನೆಂಟು ವರ್ಷಕ್ಕೆ 964 ಹೆಣ್ಣು ಮಕ್ಕಳಿದ್ದಾರೆ. ನಮ್ಮ ರಾಜ್ಯದಲ್ಲಿ ಹೇಳುವುದಾದರೆ 904 ಇದೆ. ಎಲ್ಲಾ ವಿಚಾರಗಳಲ್ಲಿ ವಿಶೇಷವಾಗಿ ಮಕ್ಕಳ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ವಿಚಾರಗಳಲ್ಲಿ ಕೇರಳ ರಾಜ್ಯ ಮುಂದುವರೆದು ಹೋಗುತ್ತಿದೆ. ಆದರೆ, ನಮ್ಮ ರಾಜ್ಯದಲ್ಲಿ ಬಹಳ ಆಸಕ್ತಿ ವಹಿಸಬೇಕಾಗುತ್ತದೆ. ಈಗ ಹುಟ್ಟಿದ ಮಕ್ಕಳು ನಾಲ್ಕು ವಾರದ ಒಳಗಾಗಿ ಸಾಯುತ್ತಿರುವಂತಹ ಪ್ರಮಾಣ ಇದೆ. ಒಂದು ವರ್ಷದೊಳಗೆ ಸಾಯುವಂತಹ ಪ್ರಮಾಣಗಳ ಮಾಹಿತಿ ನನ್ನ ಬಳಿ ಇದೆ. ಈ ರೀತಿಯಾಗಿ ರಾಜ್ಯದಲ್ಲಿ ಮತ್ತು ರಾಷ್ಟ್ರದಲ್ಲಿ ಹುಟ್ಟಿದಂತಹ ಮಕ್ಕಳನ್ನು ಸಂರಕ್ಷಣೆ ಮಾಡಬೇಕಾದಂತಹ ಜವಾಬ್ದಾರಿ ನಮ್ಮೆಲ್ಲರದ್ದು ಇದೆ. ಆಡಳಿತ ಮಾಡುವವರು, ವಿರೋಧ ಪಕ್ಷದಲ್ಲಿರುವವರು, ಜವಾಬ್ದಾರಿಯನ್ನು ಹೊತ್ತಿರುವಂತಹವರು, ಈ ಸಮಾಜವನ್ನು ರಕ್ಷಣೆ ಮಾಡಬೇಕೆನ್ನುವವರು ಮತ್ತು ಮುಂದಿನ ಪೀಳಿಗೆಯನ್ನು ಕಾಪಾಡಬೇಕು ಎನ್ನತಕ್ಕಂಥ ಎಲ್ಲಾ ಜನರನ್ನು ನೋಡಿದರೆ, ನಾಲ್ಕು ವಾರದೊಳಗೆ ಸಾಯುವಂತಹ ಮಕ್ಕಳು ಕರ್ನಾಟಕ ರಾಜ್ಯದಲ್ಲಿ 1000ಕ್ಕೆ 19 ಜನ ಇದ್ದಾರೆ. ಒಂದು ವರ್ಷದಲ್ಲಿ ಸಾಯುವಂತಹ ಮಕ್ಕಳು 1000ಕ್ಕೆ 28 ಜನ ಇದ್ದಾರೆ. ಇದರಲ್ಲಿ ಕೇರಳ ರಾಜ್ಯವನ್ನು ನೋಡಿ, ಅಲ್ಲಿ ನಾಲ್ಕು ವಾರದೊಳಗೆ ಸಾಯುವಂತಹ ಮಕ್ಕಳು 1000ಕ್ಕೆ ಕೇವಲ 6 ಜನ ಇದ್ದಾರೆ. ಒಂದು ವರ್ಷದಲ್ಲಿ ಸಾಯುವಂತಹ ಮಕ್ಕಳು 1000ಕ್ಕೆ 12 ಜನ ಇದ್ದಾರೆ. ನಮ್ಮ ನೆರೆ ರಾಜ್ಯದಲ್ಲಿ ಯಾವ ರೀತಿಯಾಗಿ ಮಕ್ಕಳ ಸಂರಕ್ಷಣೆಯಾಗುತ್ತಿದೆ ಎಂಬುದನ್ನು ನೋಡಿದರೆ, ಸ್ವಲ್ಪ ನಮಗೆ ಎಲ್ಲೋ ಒಂದು ಕಡೆ ಅಂಜಿಕೆ ಬರಬೇಕಾಗುತ್ತದೆ. ಆ ದೃಷ್ಠಿಯಿಂದ ಹಕ್ಕೋತ್ತಾಯ ಒಂದು ಮತ್ತು ಮಕ್ಕಳ ರಕ್ಷಣೆ ಒಂದು. ಈ ರೀತಿಯಾಗಿ ನೋಡಿದಾಗ, ಇದು ಒಂದು ವಿಚಾರವಾಯಿತು. ಇದಾದ ಮೇಲೆ ಇದಕ್ಕೆಲ್ಲಾ ಕಾರಣ ರೋಗಗಳು, ರೋಗ ನಿರೋಧಕ ಹೇಗೆ ಇರಬೇಕು. ರೋಗ ನಿರೋಧಕಗಳಲ್ಲಿ ನೋಡುವುದಾದರೆ, 12 ರಿಂದ 23 ತಿಂಗಳ ಮಕ್ಕಳನ್ನು ನೋಡಿದಾಗ, ಭಾರತ ದೇಶದಲ್ಲಿ 62 ಜನ ರೋಗಪೀಡಿತರಾಗಿದ್ದಾರೆ. ಕರ್ನಾಟಕದಲ್ಲಿ 62.6, ಸ್ವಲ್ಪ ಭಾರತ ದೇಶದ ಅಷ್ಟೇ ಮಟ್ಟದಲ್ಲಿದ್ದಾರೆ. ಕೇರಳ ರಾಜ್ಯದಲ್ಲಿ 82.1, ಇಲ್ಲಿ ಸ್ವಲ್ಪ ಏಕೋ ಅವರು ಎಡವಿದ್ದಾರೆ. ಐದು ವರ್ಷದೊಳಗಿನ ಮಕ್ಕಳ ಮರಣವನ್ನು ನೋಡಿದಾಗ ಭಾರತ ದೇಶದಲ್ಲಿ 1000ಕ್ಕೆ 43 ಜನ ಮಕ್ಕಳು ಸಾಯುತ್ತಾರೆ. ಕೇರಳ ರಾಜ್ಯದಲ್ಲಿ 1000ಕ್ಕೆ 13 ಜನ ಮಕ್ಕಳು ಸಾಯುತ್ತಿದ್ದಾರೆ, ಆದರೆ, ನಮ್ಮ ರಾಜ್ಯದಲ್ಲಿ 1000ಕ್ಕೆ 31 ಜನ ಸಾಯುತ್ತಿದ್ದಾರೆ. ಐದು ವರ್ಷಕ್ಕೂ ಮೇಲ್ಪಟ್ಟ ಮಕ್ಕಳ ಬಗ್ಗೆ ಹೇಳುವುದಾದರೆ ತಂದೆ-ತಾಯಿ ಆ ಮಕ್ಕಳನ್ನು ಬೆಳೆಸುವುದಕ್ಕೆ ಎಷ್ಟು ಕಷ್ಟವಾಗುತ್ತದೆ.

**(ಮುಂದು)**

*(762) 15.06.2017 04.30 LL-MD*

ಶ್ರೀ ರಾಮಚಂದ್ರಗೌಡ(ಮುಂದು)

5 ವರ್ಷದೊಳಗಿನ ಮಕ್ಕಳ ಮರಣದ ಪ್ರಮಾಣವನ್ನು ನೋಡುವುದಾದರೆ, ಭಾರತದಲ್ಲಿ ಒಂದು ಸಾವಿರಕ್ಕೆ 43 ಜನ ಮಕ್ಕಳು ಸಾಯುತ್ತಿದ್ದಾರೆ. ಕೇರಳದಲ್ಲಿ ಕೇವಲ 13 ಜನ ಮಕ್ಕಳು, ನಮ್ಮ ರಾಜ್ಯದಲ್ಲಿ 31 ಜನ ಮಕ್ಕಳು ಸಾಯುತ್ತಿದ್ದಾರೆ. ಅಂದರೆ, 5 ವರ್ಷದವರೆಗೆ ಮಕ್ಕಳು ಹೇಗೋ ಬದುಕುತ್ತವೆಯಲ್ಲವೇ? 5 ವರ್ಷ ಆ ಮಕ್ಕಳು

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಬದುಕುವಷ್ಟರಲ್ಲಿ ತಂದೆ–ತಾಯಂದಿರಿಗೆ ವಹಳಷ್ಟು ಕಷ್ಟವಾಗಿರುತ್ತದೆ, ಬಹಳಷ್ಟು ತ್ರಾಸಾಗಿರುತ್ತದೆ ಈ ತ್ರಾಸಿನ ಮಧ್ಯೆ ಆ ಮಕ್ಕಳನ್ನು ಅವರು 5 ವರ್ಷ ಬದುಕಿಸಿಕೊಂಡಿದ್ದರೂ ಸಹ 1 ಸಾವಿರಕ್ಕೆ ಭಾರತದಲ್ಲಿ 43 ಜನ ಮಕ್ಕಳು, ನಮ್ಮ ರಾಜ್ಯದಲ್ಲಿ 31 ಮಕ್ಕಳು, ಕೇರಳದಲ್ಲಿ 13 ಜನ ಮಕ್ಕಳು ಸಾಯುತ್ತಿದ್ದಾರೆ. ಬೇರೆ ಬೇರೆ ರಾಜ್ಯದ ವಿವರ ಕೂಡ ನನ್ನ ಬಳಿಯಿದೆ. ಆದರೆ, ಅದು ಅವಶ್ಯಕತೆಯಿಲ್ಲವೆಂದು ನಾನು ಹೇಳುತ್ತಿಲ್ಲವಷ್ಟೇ. ಹೆರಿಗೆ ಆಗುವಂತಹ ಸಂದರ್ಭದಲ್ಲಿ ಮಕ್ಕಳ ಜೊತೆಗೆ ತಾಯಂದಿರೂ ಸಹ ಮರಣ ಹೊಂದುತ್ತಿದ್ದಾರೆ. ತಾಯಂದಿರ ಮರಣದ ಪ್ರಮಾಣವನ್ನು ನೋಡಿದಾಗ 'ಅಬ್ಬಾ!' ಭಾರತದಲ್ಲಿ 1 ಸಾವಿರಕ್ಕೆ 167 ಜನ ತಾಯಂದಿರು ಹೆರಿಗೆಯ ಸಂದರ್ಭದಲ್ಲಿಯೇ ಸಾಯುತ್ತಿದ್ದಾರೆ. ಕರ್ನಾಟಕದಲ್ಲಿ 133 ಜನ ತಾಯಂದಿರು, ಕೇರಳದಲ್ಲಿ 61 ಜನ ತಾಯಂದಿರು ಸಾಯುತ್ತಿದ್ದಾರೆ. ಏತಕ್ಕೆ? ಆರೋಗ್ಯ ಇಲಾಖೆ ಏನು ಮಾಡುತ್ತಿದೆ? ಅವರು ಗಮನ ಹರಿಸಬೇಕಲ್ಲವೇ? ಆರೋಗ್ಯ ಇಲಾಖೆ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಎಲ್ಲವನ್ನೂ ಕೊಡುತ್ತಾರೆ, ನಿಜ. ಪ್ರಚಾರ ಮಾಡುತ್ತಾರೆ. ಈ ಪ್ರಚಾರಕ್ಕಾಗಿ ದುಡ್ಡು ಖರ್ಚಾಗುತ್ತದೆಯೇ ವಿನಃ ಔಷಧಿ ವಿತರಣೆಯಾಗುವುದಿಲ್ಲ. ಪರಿಸ್ಥಿತಿ ಏನಿದೆ? ಇದಕ್ಕೆ ಅನೇಕ ನಿಲುವುಗಳನ್ನು ಕೊಡಬಹುದು. ಆದರೆ, ನಾನು ಇಲ್ಲಿ ಅದನ್ನು ಹೇಳುವುದಕ್ಕೆ ಇಷ್ಟಪಡುವುದಿಲ್ಲ. ಏಕೆಂದರೆ, ಇದಕ್ಕಾಗಿ ಅನೇಕ ಇಲಾಖೆಗಳಿವೆ ಅವರು ಅದನ್ನು ಮಾಡಿಕೊಳ್ಳಬೇಕು. ನಾನು ಕೇವಲ ಮಾಹಿತಿ ಏನಿದೆ ಎಂಬುದನ್ನು ಮಾತ್ರ ಹೇಳುವುದಕ್ಕೆ ಇಷ್ಟಪಡುತ್ತೇನೆ. ಪೌಷ್ಠಿಕತೆ, ರಕ್ತಹೀನತೆ; ರಕ್ತಹೀನತೆ ಹೇಗಿದೆಯೆಂದರೆ, 6 ರಿಂದ 59 ತಿಂಗಳ ಮಕ್ಕಳು ಅಂದರೆ 6 ತಿಂಗಳಿನಿಂದ 5 ವರ್ಷದ ಮಕ್ಕಳಲ್ಲಿ ರಕ್ತಹೀನತೆ ಹೇಗಿದೆಯೆಂದರೆ, ನಮ್ಮ ರಾಜ್ಯದಲ್ಲಿಯೇ ಇಂತಹ ಮಕ್ಕಳ ಸಂಖ್ಯೆ ಜಾಸ್ತಿ ಇದೆ. 1 ಸಾವಿರಕ್ಕೆ 60.9 ಜನ ಮಕ್ಕಳು ರಕ್ತಹೀನರಾಗಿದ್ದಾರೆ. ಭಾರತದ ಸರಾಸರಿ 58.4. ಮತ್ತೆ ಕೇರಳ 35.6ರಷ್ಟಿದೆ. ಅಭಿವೃದ್ಧಿಯಾಗಲಿಲ್ಲ, ಈ ಪ್ರಾಜೆಕ್ಟ್‌ಗಳಾಗಿಲ್ಲವೆಂದು ನಾವು ಬೇಕಾದಷ್ಟು ಗುದ್ದಾಡುತ್ತೇವೆ. ಈ ಎಲ್ಲಾ ಪ್ರಾಜೆಕ್ಟ್‌ಗಳನ್ನು ಮುಂದೆ ಉಪಯೋಗಿಸತಕ್ಕಂತಹ ಜನಾಂಗ, ಈ ಮಾನವ ಸಂಪನ್ಮೂಲವನ್ನು ಅಭಿವೃದ್ಧಿಪಡಿಸುವಲ್ಲಿ ನಾವು ಎಡವಿದ್ದೇವೆ. ಇದು ಬಹಳ ಪ್ರಮುಖವಾದದ್ದು. ಮಾನವ ಸಂಪನ್ಮೂಲ ಇಲ್ಲದಿದ್ದರೆ, ಜಗತ್ತಿನಲ್ಲಿ ಜಲ ಮೂಲ ಇದ್ದರೇನು? ವಿದ್ಯುತ್ ಮೂಲ ಇದ್ದರೇನು? ಗಣಿ ಮೂಲ ಇದ್ದರೇನು ಪ್ರಯೋಜನ? ಇವೆಲ್ಲವನ್ನೂ ಬಳಸುವಂತಹ ಜನ ಮಾನವ ಸಂಪನ್ಮೂಲ. ಮಾನವ ಸಂಪನ್ಮೂಲವನ್ನು ನಾವು ರಕ್ಷಣೆ ಮಾಡಿಕೊಳ್ಳದೇ ನಾವು ಎಲ್ಲಿಗೋ ಹೋಗುತ್ತಿದ್ದೇವೆ. ಅನೇಕ ಸಲ ನಾವು ರಾಜಕಾರಣದಲ್ಲಿಯೇ ಇರುತ್ತೇವೆ. ನಮ್ಮ ಮಕ್ಕಳ ಮೇಲೆ ಹಿಡಿತವಿಲ್ಲದೇ ಅವರು ಪೋಲಿ ಬೀಳುತ್ತಾರೆ. ಸಮಾಜದಲ್ಲಿ ನಾವು ಎಲ್ಲಾ ಕೆಲಸ ಮಾಡುತ್ತಿದ್ದೇವೆ. ದೇಶ ಅಭಿವೃದ್ಧಿ ಆಗಬೇಕು, ಅಣೆಕಟ್ಟುಗಳು ಬೇಕು, Aeroplane ಗಳು ಬೇಕು, ಕಟ್ಟಡಗಳು ಬೇಕು, ಈ ಎಲ್ಲವನ್ನು ಮಾಡುತ್ತೇವೆ. ಆದರೆ, ನಾಳೆ ಇವುಗಳನ್ನು ಬಳಸುವಂತಹ ಮಾನವ ಸಂಪನ್ಮೂಲವನ್ನು ಅಭಿವೃದ್ಧಿಪಡಿಸುವಂತಹ ಹಾದಿಯಲ್ಲಿ ನಾವು ಎಲ್ಲೋ ಒಂದು ಕಡೆ ಎಡವಿದ್ದೇವೆ. ಈ ಪ್ರಮುಖವಾದ ಕೆಲಸವನ್ನು ನಾವು ಮಾಡಬೇಕಾಗಿದೆ. ಇದರ ಬಗ್ಗೆ

ಸರ್ಕಾರ ಬಹಳ ಕಾಳಜಿ ವಹಿಸಬೇಕು ಎನ್ನುವಂತಹ ಮಾತನ್ನು ಹೇಳುವುದಕ್ಕೆ ನಾನು ಇಷ್ಟಪಡುತ್ತೇನೆ. ಎಷ್ಟು ಚೆನ್ನಾಗಿ estimate ಮಾಡಿದ್ದಾರೆ, ಇದು ಭಾರತ ಸರ್ಕಾರದ ರಾಷ್ಟ್ರೀಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯು 2015–16ರಲ್ಲಿ ಮಾಡಿರುವಂತಹ ಉಲ್ಲೇಖವಾಗಿದೆ. 5 ವರ್ಷದ ಮಕ್ಕಳು ಎಷ್ಟು ಎತ್ತರ ಬೆಳೆಯಬೇಕೋ ಅಷ್ಟು ಬೆಳೆಯದೇ ಕುಬ್ಜರಾಗಿರುತ್ತಾರೆ. ನಮ್ಮ ರಾಜ್ಯದಲ್ಲಿ ಅದರ ಪ್ರಮಾಣ 1 ಸಾವಿರಕ್ಕೆ 26.1 ರಷ್ಟಿದೆ. ಕೇರಳ ಮೊದಲನೇ ಸ್ಥಾನದಲ್ಲಿದೆ. ಎತ್ತರ ಬೆಳೆಯುವುದರೊಳಗೆ ಮಕ್ಕಳನ್ನು ನಾವು ಸರಿಯಾಗಿ ಪೋಷಣೆ ಮಾಡಲಿಲ್ಲ. ಇನ್ನೊಂದು ವಿಚಾರವೆಂದರೆ, ಮಕ್ಕಳ ತೂಕವೂ ಕೂಡ ಇದೇ ರೀತಿ ಹೆಚ್ಚು–ಕಡಿಮೆಯಾಗಿದೆ. 5 ವರ್ಷಕ್ಕೆ ಮಕ್ಕಳು ಯಾವ ಎತ್ತರಕ್ಕೆ ಎಷ್ಟು ತೂಕವಿರಬೇಕು, ಆ ತೂಕದಲ್ಲಿ ಕೂಡ ಮಕ್ಕಳು ಇಲ್ಲ. ಆಮೂಲಾಗ್ರವಾಗಿ ಮಕ್ಕಳನ್ನು ಹೇಗೆ ರಕ್ಷಣೆ ಮಾಡಬೇಕು? ಪೋಷಣೆ ಮಾಡಬೇಕು ಎಂದು ಯೋಚನೆ ಮಾಡಿದರೆ ಎಲ್ಲಾ ದಿಕ್ಕಿನಲ್ಲಿಯೂ ಕರ್ನಾಟಕ ಸರಿಯಾದ ಹಾದಿಯಲ್ಲಿ ಹೋದರೂ ಸಹ ಆ ಮಕ್ಕಳನ್ನು ರಕ್ಷಣೆ ಮಾಡುವುದಕ್ಕಾಗುವುದಿಲ್ಲ. ವಿಶೇಷವಾಗಿ ಏತಕ್ಕೆ ಹೀಗೆ ಆಗುತ್ತಿದೆಯೆಂದರೆ, 5 ಅಡಿಗೆ ಎಷ್ಟು ತೂಕವಿರಬೇಕು, ಅಷ್ಟು ತೂಕವಿಲ್ಲದೇ ಇರುವ ಮಕ್ಕಳು ಕರ್ನಾಟಕದಲ್ಲಿ 1 ಸಾವಿರಕ್ಕೆ 54 ಜನ ಇದ್ದಾರೆ. ಈ ವಿಚಾರದಲ್ಲಿ ಪುದುಚೇರಿ ರಾಜ್ಯ ಮಾತ್ರ ಉತ್ತಮವಾಗಿದೆ. ಅಲ್ಲಿ 45 ಮಕ್ಕಳಿದ್ದರೆ ಭಾರತದಲ್ಲಿ 55 ಜನ ಮಕ್ಕಳಿದ್ದಾರೆ. ಇದಕ್ಕೆ ಯಾವ ಕಾರಣವನ್ನು ಕೊಟ್ಟಿದ್ದಾರೆ ಎಂದರೆ, ಮಕ್ಕಳಿಗೆ ಎದೆ ಹಾಲು ಉಣಿಸದೇ ಬಹಳ ದೊಡ್ಡ ಕಾರಣವೆಂದು ತಿಳಿಸಿದ್ದಾರೆ. ಇದೊಂದು fashion ಆಗಿಬಿಟ್ಟಿದೆ. ನಾವು ಈ ಬಗ್ಗೆ ಬಹಳಷ್ಟು ಹೇಳುತ್ತೇವೆ. ನಾನು ಒಂದು ವಿದೇಶಿ ಹೆಣ್ಣುಮಗಳ ಚಿತ್ರ ನೋಡಿದೆ. ಅದರಲ್ಲಿ ಆ ಹೆಣ್ಣುಮಗಳು ಒಂದು ಕಡೆ ತನ್ನ ಶಿಶುವಿಗೆ ಹಾಲುಣಿಸುತ್ತಿದ್ದರೆ ಮತ್ತೊಂದು ಕಡೆ ಬೆಕ್ಕಿಗೆ ಹಾಲುಣಿಸುತ್ತಿದ್ದಾಳೆ. ನಿಜವಾಗಿಯೂ ನೋಡಿರುವಂತಹದ್ದು. ವಿದೇಶದಲ್ಲಿ ಹೆಣ್ಣುಮಕ್ಕಳು ಹೇಗೆ ತಮ್ಮ ಪ್ರಾಣಿಗಳನ್ನು ಸಹ ಮಕ್ಕಳನ್ನು ಸಾಕುತ್ತಾರೆ ಎಂಬುದಕ್ಕೆ ಇದು ಒಂದು ನಿದರ್ಶನವಾಗಿದೆ. ನಮ್ಮ ದೇಶದಲ್ಲಿನ ಹೆಣ್ಣುಮಕ್ಕಳಿಗೆ ತಮ್ಮ ಮಕ್ಕಳಿಗೆ ಹಾಲುಣಿಸುವುದಕ್ಕೆ ಏನಾಗಿದೆ? ಅದನ್ನು ಹೇಳುವಂತಹವವರು ಹೇಳಬೇಕು. ಅದಕ್ಕೆ ಸರಿಯಾದಂತಹ ಪ್ರಚಾರ ಆಗಬೇಕು. ಆದರೆ, ಹಳ್ಳಿಗಳಲ್ಲಿ ಮಕ್ಕಳಿಗೆ ತಾಯಂದಿರು ಹಾಲು ಉಣಿಸಲು ಹೋದರೆ, ತಾಯಿಗೇ ಹಾಲಿರುವುದಿಲ್ಲ. ಆ ಸ್ಥಿತಿಯಿದೆ. ಯಾವ ಸ್ಥಿತಿಯಲ್ಲಿ ಆ ಹೆಣ್ಣುಮಕ್ಕಳು ಇರುತ್ತಾಳೆಂದರೆ, ಉಫ್! ಎಂದರೆ ಬಿದ್ದು ಹೋಗುತಾರೆ, ನನ್ನ ಹಾಗೆ.

“ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**ಶ್ರೀ ಶರಣಪ್ಪ ಮಟ್ಟೂರ(ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರು ಬೀಳುವುದಿಲ್ಲ. ಅವರು ಬಹಳ ಬಲವಾಗಿದ್ದಾರೆ.

**ಶ್ರೀ ರಾಮಚಂದ್ರಗೌಡ:–** ಮಾನ್ಯ ಸಭಾಪತಿಯವರೆ, ಬೆಳಿಗ್ಗೆ ಹೇಳಿದೆನಲ್ಲವೇ, ನಾವು ಬೀಳುವುದಿಲ್ಲವೆಂದು.

**ಶ್ರೀ ಶರಣಪ್ಪ ಮಟ್ಟೂರ:–** ಮಾನ್ಯ ಸಭಾಪತಿಯವರೆ, ಅದಕ್ಕಾಗಿಯೇ ಮಾನ್ಯ ಮುಖ್ಯಮಂತ್ರಿಗಳು ಬೆಳಿಗ್ಗೆ 'ಮಾನ್ಯ ರಾಮಚಂದ್ರಗೌಡರವರು ಬೀಳುವುದಿಲ್ಲ' ಎಂದು ಹೇಳಿದರು.

**ಶ್ರೀ ರಾಮಚಂದ್ರಗೌಡ:–** ಮಾನ್ಯ ಸಭಾಪತಿಯವರೆ, ಕೇವಲ ತಾಯಿ ತನ್ನ ಹಾಲಷ್ಟೇ ಕೊಡುವುದಲ್ಲ. ಹಾಲಿನ ಜೊತೆಗೆ ಘನ ಆಹಾರವನ್ನು ಕೊಡಬೇಕು. Solid food ಕೊಡದೇ ಬರೀ ಹಾಲು ಕುಡಿಸಿದರೆ ಆಗುವುದಿಲ್ಲ. ನಾನು ಮೊನ್ನೆಯ ದಿವಸ ಪತ್ರಕರ್ತರಿಗೆ, "ಶುಗರ್ ಕಡಿಮೆಯಾದಾಗ, ಚಾಕೋಲೇಟ್ ನಿಯಂತ್ರಣಕ್ಕೆ ಬರುವುದಿಲ್ಲ. ಚಾಕೋಲೇಟ್ ತೆಗೆದುಕೊಂಡು ಸ್ವಲ್ಪ ಬಿಸ್ಕೆಟ್ ಅಥವಾ ಬೇರೆ ಏನಾದರೂ ತಿಂದರೆ ಮಾತ್ರ ಬಚಾವಾಗುವುದು. ಇಲ್ಲವಾದರೆ ನೆಗೆದು ಬಿದ್ದು ಹೋಗುತ್ತಾನೆ" ಎಂದು ಹೇಳಿದೆನು. ಪೌಷ್ಠಿಕ ಆಹಾರ ಕೊಡಲೇಬೇಕಾಗುತ್ತದೆ. ಅದರ ಬಗ್ಗೆ ಗಮನ ಹರಿಸಬೇಕು. ಅನೇಕ ಅಭಿವೃದ್ಧಿಗಳು, ನಾವು ಬೇಕಾದ್ದು ಹೇಳುತ್ತೇವೆ. ಕೇಂದ್ರ ಸರ್ಕಾರದವರು, ರಾಜ್ಯ ಸರ್ಕಾರದವರು ಹೇಳುತ್ತಾರೆ. ಅನೇಕ ಸಂಘ–ಸಂಸ್ಥೆಗಳವರು ಹೇಳುತ್ತಾರೆ. ಆದರೆ, ಮಕ್ಕಳ ಮೇಲೆ ಪ್ರೀತಿ ಇಟ್ಟುಕೊಂಡು ಮುಂದಿನ ಜನಾಂಗವನ್ನು ತಯಾರು ಮಾಡುವುದರಲ್ಲಿ ನಾವು ಎಲ್ಲೋ ಎಡವಿದ್ದೇವೆ ಎಂದು ನನಗನಿಸುತ್ತಿದೆ. ಈ ಎಲ್ಲದಕ್ಕೂ ಇನ್ನೊಂದು ಕಾರಣವೆಂದರೆ, ನೀರು. ನಮ್ಮ ರಾಜ್ಯದಲ್ಲಿ ಸನ್ಮಾನ್ಯ ಗ್ರಾಮೀಣಾಭಿವೃದ್ಧಿ ಮಂತ್ರಿಗಳು ಸ್ವಚ್ಛವಾದ ನೀರನ್ನು ಕೊಡುವುದರಲ್ಲಿ ಬಹಳ ಪ್ರಯತ್ನ ಮಾಡಿದ್ದಾರೆ, ಅದ್ಭುತವಾಗಿ ಕೆಲಸ ಮಾಡಿದ್ದಾರೆ, ಆದರೂ ಕೂಡ ಇನ್ನೂ ಅನೇಕ ಹಳ್ಳಿಗಳಲ್ಲಿ ಇನ್ನೂ ಸ್ವಚ್ಛ ನೀರು ಪೂರೈಸಬೇಕಾಗಿದೆ, ಸ್ವಚ್ಛ ಶೌಚಾಲಯ ಬೇಕಾಗಿದೆ. ಸ್ವಚ್ಛ ಶೌಚಾಲಯಕ್ಕೆ ಸ್ವಚ್ಛ ನೀರು ಬೇಕಾಗಿದೆ. ಅಲ್ಲಿಯೂ ಕೂಡ ನಾವು ಗಮನ ಹರಿಸಬೇಕಾಗಿದೆ. ನಮ್ಮ ರಾಜ್ಯದಲ್ಲಿ 1 ಸಾವಿರಕ್ಕೆ 57.8 ಜಾಗಗಳಲ್ಲಿ ಶೌಚಾಲಯವಿಲ್ಲ. ಕುಡಿಯುವ ನೀರೂ ಇಲ್ಲ. ಈ ವ್ಯವಸ್ಥೆ ಇದೆ. ಆದರೆ, ಕೇರಳದಲ್ಲಿ 1 ಸಾವಿರಕ್ಕೆ 98.1 ಇದೆ. ಈ ವಿಚಾರದಲ್ಲಿ ಕೇರಳದಲ್ಲಿ ಬಹಳ ಕೆಟ್ಟ ಪರಿಸ್ಥಿತಿಯಲ್ಲಿದ್ದಾರೆ. ಶುದ್ಧ ಕುಡಿಯುವ ನೀರಿನ ಮೂಲವನ್ನು ಹೊಂದಿರುವಂತಹ ಮನೆಗಳೆಷ್ಟಿವೆ ಎನ್ನುವಂತಹ ಮಾಹಿತಿಗಳನ್ನೆಲ್ಲಾ ಹುಡುಕಿದ್ದಾರೆ. ಯಾವ ಯಾವ ಮನೆಗಳಲ್ಲಿ ಶುದ್ಧ ಕುಡಿಯುವ ನೀರಿದೆಯೆಂದು ನೋಡಿದರೆ, ಕರ್ನಾಟಕದಲ್ಲಿ 1 ಸಾವಿರಕ್ಕೆ 89.3 ಮನೆಗಳಲ್ಲಿ ಶುದ್ಧ ಕುಡಿಯುವ ನೀರು ಸಿಗುತ್ತಿಲ್ಲ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(ಮುಂದುವರೆದಿದೆ)

*(763) 15.06.2017 4–40 ಎಲ್‌ಎಂ–ಎಕೆ*

**ಶ್ರೀ ರಾಮಚಂದ್ರಗೌಡ(ಮುಂದು)**

ಮುಖ್ಯ ವಿಷಯಕ್ಕೆ ಬರುವುದಾದರೆ, ಇವೊತ್ತು ಮಕ್ಕಳಿಗೆ ಒಳ್ಳೆಯ ಶಿಕ್ಷಣವನ್ನು ಕೊಡಬೇಕು. ಎತ್ತರಕ್ಕೆ ತಕ್ಕ ತೂಕ, ತೂಕಕ್ಕೆ ತಕ್ಕಂತೆ ಎತ್ತರ ಎಲ್ಲವೂ ಇದೆ. ಮಕ್ಕಳು ಬದುಕಿದ್ದಾರೆ. ಆದರೆ ಆ ಮಕ್ಕಳಿಗೆ ಸಿಗುತ್ತಿರುವ ಶಿಕ್ಷಣದ ವಿಚಾರದಲ್ಲಿ ನೋಡುವುದಾದರೆ ಭಾರತದಲ್ಲಿ 100 ಕ್ಕೆ 76 ಮಕ್ಕಳಿಗೆ ಇವತ್ತು ಶಿಕ್ಷಣ ಇಲ್ಲ. ಗಂಡು ಮಕ್ಕಳು ಮತ್ತು ಹೆಣ್ಣು ಮಕ್ಕಳ ಶೈಕ್ಷಣಿಕ ಮಟ್ಟದ ಪ್ರಮಾಣವನ್ನು ನೋಡಿದಾಗ ಗಂಡಸರು ಜಾಸ್ತಿ ಇದ್ದಾರೆ, ಹೆಂಗಸರು ಕಡಿಮೆ ಇದ್ದಾರೆ. ಅದು ಕರ್ನಾಟಕದಲ್ಲಿ 83% ಗಂಡು ಮಕ್ಕಳಿಗೆ ಶಿಕ್ಷಣ ಇಲ್ಲ, 63% ಹೆಣ್ಣುಮಕ್ಕಳಿಗೆ ಇವತ್ತು ಶಿಕ್ಷಣ ಇಲ್ಲ. 6 ರಿಂದ 13 ವರ್ಷದ ಮಕ್ಕಳು ಶಾಲೆಯಿಂದ ಹೊರಗೆ ಉಳಿದಿದ್ದಾರೆ. ಇದರ ಪ್ರಮಾಣ ಕರ್ನಾಟಕದಲ್ಲಿ 1.49%, ಭಾರತದಲ್ಲಿ 2.97%, ಕೇರಳದಲ್ಲಿ .82% ಪುದುಚೇರಿಯಲ್ಲಿ 1.8% ಇದೆ. ನಮ್ಮಲ್ಲಿ ಎಷ್ಟೋ ಜನರಿಗೆ ಜನನ ನೋಂದಣಿ ಮಾಡಬೇಕು ಎನ್ನುವುದು ಗೊತ್ತಿಲ್ಲ. ಎಷ್ಟು ಜನ ಜನನ ನೋಂದಣಿ ಮಾಡುತ್ತಾರೆ ಎನ್ನುವುದನ್ನು ನೋಡಿದಾಗ, ತಮಿಳುನಾಡಿನಲ್ಲಿ 100ಕ್ಕೆ 100 ಜನ ನೋಂದಣಿ ಮಾಡುತ್ತಾರೆ. ಕರ್ನಾಟಕದಲ್ಲಿ 100ಕ್ಕೆ 95 ಜನ ನೋಂದಣಿ ಮಾಡುತ್ತಾರೆ. ಒಟ್ಟು ಭಾರತದಲ್ಲಿ ಸರಾಸರಿ ನೋಡಿದಾಗ ಈ ಪ್ರಮಾಣ 82% ಇದೆ. ಬಾಲ್ಯವಿವಾಹದ ಬಗ್ಗೆ ಹೇಳಬೇಕು ಎಂದರೆ, ಕರ್ನಾಟಕದಲ್ಲಿ ಇನ್ನು 23.1 ರಷ್ಟು ಬಾಲ್ಯ ವಿವಾಹಗಳು ನಡೆಯುತ್ತಿವೆ. ಒಟ್ಟು ಭಾರತ ದೇಶದಲ್ಲಿ 26.8% ರಷ್ಟು ಬಾಲ್ಯ ವಿವಾಹಗಳು ನಡೆಯುತ್ತಿವೆ. ಇದರ ಬಗ್ಗೆ ಸರ್ಕಾರ ಗಮನ ಹರಿಸುವ ಗಂಭೀರತೆ ಇದೆ. ಇವತ್ತು ಒಳ್ಳೆಯ ವಿಚಾರವನ್ನು ಚರ್ಚೆಗೆ ತಂದಿದ್ದಾರೆ. ಇದು ತುಂಬಾ ಪ್ರಮುಖವಾದ ವಿಚಾರ. ಮಾನವ ಸಂಪನ್ಮೂಲವನ್ನು ವೃದ್ಧಿಗೊಳಿಸುವ ನಿಟ್ಟಿನಲ್ಲಿ ಮಕ್ಕಳ ಬಗ್ಗೆ ನಾವು ಅಲಕ್ಷ್ಯ ಮಾಡಬಾರದು. ಮಕ್ಕಳಿಗೆ ಒಳ್ಳೆಯ ವಿದ್ಯಾಭ್ಯಾಸವನ್ನು ಕೊಡಬೇಕು, ಮಕ್ಕಳಿಗೆ ಒಳ್ಳೆಯ ಆರೋಗ್ಯವನ್ನು ಕೊಡಬೇಕು, ಮಕ್ಕಳ ಮಾರಾಟವನ್ನು ತಪ್ಪಿಸಬೇಕು, ಮಕ್ಕಳು ಭಿಕ್ಷಾಟನೆಗೆ ಹೋಗದ ರೀತಿಯಲ್ಲಿ ನೋಡಿಕೊಳ್ಳಬೇಕು. ಈ ನಿಟ್ಟಿನಲ್ಲಿ ಸರ್ಕಾರ ಗಮನಹರಿಸಬೇಕೆಂದು ಹೇಳಿ, ಅವಕಾಶ ಕೊಟ್ಟಿದ್ದಕ್ಕಾಗಿ ವಂದಿಸಿ, ನನ್ನ ಮಾತುಗಳನ್ನು ಮುಕ್ತಾಯಗೊಳಿಸುತ್ತೇನೆ.

**ಶ್ರೀಮತಿ ಜಯಮ್ಮ(ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಗಳೆ, ಮಕ್ಕಳ ಹಕ್ಕುಗಳ ಬಗ್ಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದಗಳು. ಮಕ್ಕಳ ಹಕ್ಕು-ರಕ್ಷಣೆ ಬಗ್ಗೆ ಈಗಾಗಲೇ ಸಹೋದರಿಯಾದ ಶ್ರೀಮತಿ ಮೋಟಮ್ಮನವರು, ಸಹೋದರರಾದ ಸಹೋದ್ಯೋಗಿ ಹಿರಿಯ ನಾಯಕರಾದ ಮಾನ್ಯ ರಾಮಚಂದ್ರಗೌಡರು ಅಂಕಿ-ಅಂಶಗಳ ಮೂಲಕ ಮಕ್ಕಳಿಗೆ ಏನೇನು ಹಕ್ಕುಗಳು ಇವೆ ಎನ್ನುವ ಬಗ್ಗೆ ಸಾಕಷ್ಟು ವಿಷಯಗಳನ್ನು ಮಾತನಾಡಿದ್ದಾರೆ. ಹಿಂದೆಯು ಮಕ್ಕಳ ಹಕ್ಕುಗಳ ಬಗ್ಗೆ ಬಹಳಷ್ಟು ಸಂದರ್ಭದಲ್ಲಿ ಚರ್ಚೆಗಳಾಗಿವೆ. ಮಕ್ಕಳ ಹಕ್ಕಿನ ಜೊತೆಯಲ್ಲಿ 'Health is Wealth' ಎಂದು ಏನು ಹೇಳುತ್ತೇವೆ, ಆ ರೀತಿ ಒಳ್ಳೆಯ ಆರೋಗ್ಯ ಮಕ್ಕಳಿಗೆ ಇರಬೇಕಾಗುತ್ತದೆ. ಮಕ್ಕಳು ಆರೋಗ್ಯದಿಂದ ಇದ್ದರೆ ಮುಂದೆ ಅವರು ತಮ್ಮ ಹಕ್ಕುಗಳನ್ನು ಪಡೆಯಲು ಸಾಧ್ಯವಾಗುತ್ತದೆ. ಮಹಿಳೆಯರು ಮತ್ತು ಮಕ್ಕಳ ಪರವಾಗಿ ಸರ್ಕಾರ ಇವತ್ತು ಅನೇಕ ಕಾರ್ಯಕ್ರಮಗಳನ್ನು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹಾಕಿಕೊಂಡಿದೆ. ಅನೇಕ ರೀತಿಯಲ್ಲಿ ಸಹಕಾರ–ಸಹಾಯವನ್ನು ಸರ್ಕಾರ ಮಾಡುತ್ತಿದೆ. ಮಕ್ಕಳು ಆರೋಗ್ಯದಿಂದ ಇರಬೇಕು ಎಂದರೆ ತಾಯಿ ಗರ್ಭವತಿಯಾದಾಗಲೇ ಪೋಷಣೆ ಮಾಡಬೇಕಾಗುತ್ತದೆ. ಹಿಂದೆ ಮನೆಯಲ್ಲಿ ಹಿರಿಯರಿರುತ್ತಿದ್ದರು. ಹಿರಿಯರು ಇರಲೇ ಬೇಕಾಗುತ್ತದೆ. “ಹಿರಿಯರಿಲ್ಲದ ಮನೆ ಮನೆಯಲ್ಲ, ಗುರುವಿಲ್ಲದ ಮಠ ಮಠ ಅಲ್ಲ” ಎಂದು ಗಾದೆ ಮಾತನ್ನು ಹೇಳುತ್ತಾರೆ. ಏಕೆಂದರೆ ಹಿರಿಯರಿಗೆ ಗರ್ಭವತಿ ವಿಚಾರದಲ್ಲಿ ಹೇಗೆ ಪಾಲನೆ–ಪೋಷಣೆ ಮಾಡಬೇಕು ಎನ್ನುವ ಅನುಭವವಿರುತ್ತದೆ. ಬಾಣಂತಿಯನ್ನು ಹೇಗೆ ನೋಡಿಕೊಳ್ಳಬೇಕು, ಜನಿಸಿದ ಮಗುವಿನ ಲಾಲನೆ–ಪಾಲನೆ ಯಾವ ರೀತಿ ಮಾಡಬೇಕು ಎನ್ನುವ ಅನುಭವ ಅವರಿಗೆ ಇರುತ್ತದೆ. ಮೊದಲು ಹಿರಿಯರೇ ಮನೆಯಲ್ಲಿ ಮಕ್ಕಳನ್ನು ವೈದ್ಯರಂತೆ ನೋಡಿಕೊಳ್ಳುತ್ತಿದ್ದರು. ಹಿರಿಯರ ಸಲಹೆಯಂತೆ ಮಕ್ಕಳನ್ನು ಬೆಳೆಸುವಂತಹ ಪದ್ಧತಿ ಮೊದಲು ಇತ್ತು. ಆದರೆ ಇವತ್ತಿನ ದಿನಗಳಲ್ಲಿ ಮನೆಯಲ್ಲಿ ಹಿರಿಯರು ಇರುವುದೇ ಇಲ್ಲ. ಮಕ್ಕಳು ನೌಕರಿಗಾಗಿ ಬೇರೆ–ಬೇರೆ ಕಡೆಗಳಲ್ಲಿ ಹೋಗಿರುತ್ತಾರೆ. ಇವತ್ತು ವಿಜ್ಞಾನ ಮುಂದುವರೆದಿರುವುದರಿಂದ ಎಲ್ಲರೂ ಆಸ್ಪತ್ರೆಗೆ ಹೋಗುವ ಪದ್ಧತಿ ಇದೆ. ಇವತ್ತಿನ ಪರಿಸ್ಥಿತಿಗೆ ಸರಿಯಾಗಿ ಆಸ್ಪತ್ರೆ ಮತ್ತು ವೈದ್ಯರು ಇರಬೇಕಾಗುತ್ತದೆ. ಆದರೆ ಮೊದಲು ಮಗು ಗಟ್ಟಿ–ಮುಟ್ಟಾಗಿ ಬೆಳೆಯಲು ಅದರ ಬಗ್ಗೆ ತಾಯಿಗೆ ಮತ್ತು ಮನೆಯಲ್ಲಿ ಇರುವವರಿಗೆ ಅರಿವು ಇರಬೇಕಾಗುತ್ತದೆ. ಇದರ ಬಗ್ಗೆ ಒಂದು ಮಾತು ಇದೆ “ಹೊಟ್ಟೆಯಲ್ಲಿ ಹೊತ್ತ ತಾಯಿ ಬೆಟ್ಟದಷ್ಟು ಕಷ್ಟವನ್ನು ಗಟ್ಟಿಮನದಿ ತಾಳುವಳು ಕಂದಗೋಸ್ಕರ.” ಆದರೆ ಇವತ್ತು ಮಗು ಹುಟ್ಟುವ ಸಮಯವಾಗಿರದಿದ್ದರೂ ನೋವನ್ನು ತಾಳಲು ಆಗುವುದಿಲ್ಲ ಎಂದು ಪ್ರಸವವಾಗುವುದಕ್ಕಿಂತ ಮುಂಚೆಯೇ ಆಪರೇಶನ್ ಮಾಡಿ ಮಗುವನ್ನು ತೆಗೆಯುವಂತಹ ಪದ್ಧತಿ ಇವತ್ತು ನಡೆಯುತ್ತಿದೆ. ನೋವನ್ನು ತಾಳಿಕೊಳ್ಳಲು ಏಕೆ ಆಗುತ್ತಿಲ್ಲ ಎಂದರೆ, ಆ ತಾಯಿಗೆ ರಕ್ತದ ಕೊರತೆ, ಪೌಷ್ಠಿಕ ಆಹಾರದ ಕೊರತೆ ಇದಕ್ಕೆ ಕಾರಣ. ತಾಯಿ ಮತ್ತು ಮಗು ಇಬ್ಬರನ್ನು ಅಪಾಯದ ಪರಿಸ್ಥಿತಿ ಇದ್ದಾಗ ರಕ್ಷಣೆ ಮಾಡಬೇಕು. ಆಸ್ಪತ್ರೆಗಳು ಇವೆ ನಿಜ. ಇವತ್ತಿನ ದಿನ ಬುದ್ಧಿಮಾಂದ್ಯ, ಅಂಗವಿಕಲ, ಮೂಳೆಗಳು ಗಟ್ಟಿ ಇಲ್ಲದಂತಹ ನಿಶಕ್ತ ಮಕ್ಕಳು ಜನಿಸುತ್ತಿವೆ. ಮಕ್ಕಳು ದಷ್ಟ–ಪುಷ್ಟವಾಗಿ ಬೆಳೆಯಲು ಎರಡು ವರ್ಷವಾದರೂ ತಾಯಿ ಹಾಲನ್ನು ಕೊಟ್ಟರೆ ಅನುಕೂಲವಾಗುತ್ತದೆ. ಈ ಕೆಲಸವನ್ನು ತಾಯಿ ಮಾಡಬೇಕಾಗುತ್ತದೆ. ಎಲ್ಲ ವಿಚಾರದಲ್ಲಿ ಬರಿ ಸರ್ಕಾರವನ್ನೆ ದೂಷಣೆ ಮಾಡುತ್ತಾ ಇರುವುದು ಸರಿಯಲ್ಲ. ಈ ವಿಚಾರದಲ್ಲಿ ಸರ್ಕಾರ ಸಾಕಷ್ಟು ಯೋಜನೆಗಳನ್ನು ಹಾಕಿಕೊಂಡಿದೆ. ‘ಬಾಲಸಂಜೀವಿನಿ’ ಎನ್ನುವ ಯೋಜನೆ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯಲ್ಲಿ ಇದೆ.

(ಮುಂದು)

*(764) 15.06.2017 / YL-AK / 4.50*

ಶ್ರೀಮತಿ ಜಯಮ್ಮ (ಮುಂದು)

“ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹೀಗೆ ಅನೇಕ ಸಹಾಯ ಸಹಕಾರವನ್ನು ಸರ್ಕಾರ ಮಾಡುತ್ತಿದೆ. ಅದರ ಜೊತೆ ಜೊತೆಯಲ್ಲಿ ನಾವು ಕೂಡ ಮನೆಯ ಮದ್ದು ಎಂದು ಏನು ಹೇಳುತ್ತೇವೆ; ಇವತ್ತಿನ ದಿವಸ *'ಹಿತ್ತಲ ಗಿಡ ಮದ್ದೇ ಅಲ್ಲ'* ಎಂದು ಹೇಳುತ್ತೇವೆ. ಮಹಿಳೆಯೂ ಗರ್ಭ ಧರಿಸಿದಂತಹ ಸಂದರ್ಭದಲ್ಲಿ ಪೌಷ್ಠಿಕ ಆಹಾರವನ್ನು ಸೇವನೆ ಮಾಡಬೇಕಾಗುತ್ತದೆ. 'ಸಿ' ಅನ್ನಾಂಗದ ಕೊರತೆ ಮತ್ತು ಕ್ಯಾಲ್ಸಿಯಂನ ಕೊರತೆ ಇರುತ್ತದೆ. ಹಿಂದೆ ಗರ್ಭ ಧರಿಸಿದಂತಹ ಮಹಿಳೆಯರು ಹೆಚ್ಚಾಗಿ ಹಾಲು, ತುಪ್ಪ, ಮೊಸರು, ಮಜ್ಜಿಗೆ, ತರಕಾರಿ, ನುಗ್ಗೆ ಸೊಪ್ಪು; ನುಗ್ಗೆ ಸೊಪ್ಪಿನಲ್ಲಿ ಕಬ್ಬಿಣಾಂಶ ಇರುತ್ತದೆ. ಇವತ್ತಿನ ದಿವಸ ಕಬ್ಬಿಣಾಂಶ ಇರತಕ್ಕಂಥ ನುಗ್ಗೆ ಸೊಪ್ಪನ್ನು ಸೇವಿಸುವುದು ಕಡಿಮೆಯಾಗಿದೆ. ಈ ರೀತಿಯ ಎಲ್ಲಾ ಪೌಷ್ಠಿಕಾಂಶಗಳನ್ನು ಮಹಿಳೆಯೂ ಗರ್ಭ ಧರಿಸಿದಂತಹ ಸಂದರ್ಭದಲ್ಲಿಯೇ ತೆಗೆದುಕೊಂಡರೆ, ನಿಜವಾಗಿಯೂ ಆ ಮಗು ಗಟ್ಟಿಮುಟ್ಟಾಗಿ ಬೆಳೆಯುವುದಕ್ಕೆ ಅವಕಾಶವಾಗುತ್ತದೆಂದು ತಾಯಂದಿರಿಗೆ ಒಂದು ಕಿವಿ ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ರಾಗಿಯಲ್ಲಿಯೂ ಕ್ಯಾಲ್ಸಿಯಂ ಅಂಶ ಇರುತ್ತದೆ. ಇವತ್ತಿನ ದಿವಸ ರಾಗಿಯನ್ನು ಸಹ ಉಪಯೋಗಿಸುತ್ತಿಲ್ಲ. ಹಿಂದಿನ ಕಾಲದಲ್ಲಿ ಮಗುವಿಗೆ ಆರು ತಿಂಗಳಾದ ತಕ್ಷಣ ರಾಗಿಯನ್ನು ನೆನೆಸಿ, ನಂತರ ಒಣಗಿಸಿ ಹಿಟ್ಟು ಮಾಡಿ ಅದರ ಜೊತೆಗೆ ಹಾಲನ್ನು ಮಿಶ್ರಣ ಮಾಡಿ, ಮಗುವಿಗೆ ಆಹಾರವಾಗಿ ನೀಡುತ್ತಿದ್ದರು. ಆಮೇಲೆ ಹೆಣ್ಣು ಅಥವಾ ಗಂಡು ಮಕ್ಕಳು ಎರಡು ಸರಿಸಮಾನ ಎನ್ನುವಂತಹ ಭಾವನೆ ಪೋಷಕರಲ್ಲಿ ಮತ್ತು ತಂದೆ-ತಾಯಂದಿರಲ್ಲಿ ಬರಬೇಕಾಗುತ್ತದೆ. ಏಕೆಂದರೆ, ಮಗು ಹುಟ್ಟಿದಾಗಿನಿಂದ ಮನೆಯ ಪೋಷಕರಾಗಿರಬಹುದು; ಕೆಲವರಿಗೆ ಮಾತ್ರ ಅನ್ವಯಿಸುತ್ತದೆ, ಎಲ್ಲರಿಗೂ ಅನ್ವಯಿಸುವುದಿಲ್ಲ. ಹೆಣ್ಣು ಅಥವಾ ಗಂಡು ಮಗುವೇ ಎಂದು ಕೇಳುತ್ತಾರೆ. ಗಂಡು ಮಗುವೆಂದರೆ ಬಹಳ ಸಂತೋಷ ಪಡುತ್ತಾರೆ. ಹೆಣ್ಣು ಮಗುವೆಂದರೆ, ಸ್ವಲ್ಪ ಬೇಸರ ಪಡುತ್ತಾರೆ.

ಡಾ: ಜಯಮಾಲ ರಾಮಚಂದ್ರ:- ಹೆಣ್ಣು ಮಗುವೆಂದರೆ ತಾತ್ಸಾರ.

**ಶ್ರೀಮತಿ ಜಯಮ್ಮ:-** ಮಾನ್ಯ ಸಭಾಪತಿಯವರೆ, ಹೆಣ್ಣು ಮಗುವೆಂದರೆ ತಾತ್ಸಾರ. ಹೆಣ್ಣು ಮಗುವಾಗಿದೆ ಬಿಡಿ ಎಂದು ತಾತ್ಸಾರ ಮಾಡುತ್ತಾರೆ. ಆದರೆ, ಇವತ್ತಿನ ದಿವಸ ತಾತ್ಸಾರ ಕಡಿಮೆಯಾಗಿದೆ. ಆದರೆ, ಈ ರೀತಿಯ ತಾತ್ಸಾರದಿಂದಾಗಿ ಹೆಣ್ಣು ಮಗು ಹುಟ್ಟಿದಾಗಿನಿಂದಲೇ ಮಾನಸಿಕ ಒತ್ತಡಕ್ಕೊಳಗಾಗುತ್ತದೆ. ಏಕೆಂದರೆ, ನಮ್ಮ ಸಮಾಜ ಹೆಣ್ಣಾಗಲಿ, ಗಂಡಾಗಲಿ ಸರಿಸಮಾನವಾಗಿ ನೋಡಿದರೆ ಆ ಮಗು ಒಂದು ಉಲ್ಲಾಸ, ಉತ್ಸಾಹ, ಬುದ್ಧಿವಂತಿಕೆಯಿಂದ ಬೆಳೆಯುವುದಕ್ಕೆ ಸಾಧ್ಯವಾಗುತ್ತದೆ. ಹಾಗೆಯೇ ಹೆಣ್ಣು ಮಗುವನ್ನೇ ಬೇರೆ ಶಾಲೆಗೆ ಸೇರಿಸುವುದು. ಗಂಡು ಮಗುವನ್ನೇ ಬೇರೆ ಶಾಲೆಗೆ ಸೇರಿಸುವುದು ಅವರಲ್ಲಿ ತಾರತಮ್ಯ ಮಾಡಿದಂತಾಗುತ್ತದೆ. ಯಾವಾಗಲೂ ಹೆಣ್ಣಾಗಲಿ ಅಥವಾ ಗಂಡಾಗಲಿ ತಾರತಮ್ಯ ಮಾಡಬಾರದು. ಆಗ ಮಾತ್ರ ಮಕ್ಕಳ ಒಂದು ಮನಸ್ಥಿತಿ ಚೆನ್ನಾಗಿರುತ್ತದೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಹಾಗೆಯೇ ಮಗು ಸ್ವಲ್ಪ ವರ್ಷಗಳ ನಂತರ ಓದುವುದಕ್ಕಾಗಿ ಅಂಗನವಾಡಿಗೆ ಹೋಗಬೇಕಾಗುತ್ತದೆ. ಈಗಾಗಲೇ ಹೇಳಿದ ಹಾಗೆ ಅಂಗನವಾಡಿಯಲ್ಲಿಯೂ ಸಹ ನಲಿ–ಕಲಿ ಎಂಬ ಎಲ್ಲಾ ಸೌಲಭ್ಯವನ್ನು ಕೂಡ ಸರ್ಕಾರ ಒದಗಿಸಿದೆ. ಇನ್ನು ಕೆಲವು ಅಂಗನವಾಡಿಯಲ್ಲಿ ಶೌಚಾಲಯದ ಕೊರತೆ ಇದೆ. ಹಾಗೆಯೇ ನಾವು ಹೊರಗೆ ಹೋದಂತಹ ಸಂದರ್ಭದಲ್ಲಿ ನಮ್ಮಲ್ಲಿರತಕ್ಕಂಥ ಆಸ್ತಿ, ಹಣದ ಬಗ್ಗೆ ಯಾರು ಕೇಳುವುದಿಲ್ಲ. ಎಷ್ಟು ಮಕ್ಕಳೆಂದು ಕೇಳುತ್ತಾರೆ. ಆಗ *'ಇಂದಿನ ಮಕ್ಕಳೆ ನಾಳಿನ ಪ್ರಜೆಗಳೆಂದು'* ಹೇಳುತ್ತಿದ್ದೆವು. ಇವತ್ತಿನ ದಿವಸ ನಾಳೆ ಎನ್ನುವ ಬದಲಾಗಿ *'ಇವತ್ತಿನ ಮಕ್ಕಳೆ ಇಂದಿನ ಪ್ರಜೆಗಳು'* ಎನ್ನುವ ಒಂದು ಪರಿಸ್ಥಿತಿ ಇದೆ. ಬಹಳ ಚೆನ್ನಾಗಿ ಮಕ್ಕಳಿಗೆ ಗೌರವ, ಪ್ರೀತಿ, ಪ್ರೇಮ, ವಾತ್ಸಲ್ಯವನ್ನು ಕೊಡುತ್ತಿದ್ದಾರೆ. ಹಾಗೆಯೇ ಮಕ್ಕಳಿಗೆ ಶಿಕ್ಷಣ ಬೇಕು. ಆದರೆ, ಶಿಕ್ಷಣದ ಬದಲು ಅದು ಶಿಕ್ಷೆಯಾಗಬಾರದು. ಏಕೆಂದರೆ ಇವತ್ತಿನ ದಿವಸ ಮಕ್ಕಳು ತಮ್ಮ ಭಾರಕ್ಕಿಂತ ಜಾಸ್ತಿ ಹೊರೆಯನ್ನು ಹೆಗಲ ಮೇಲೆ ಎತ್ತಿಕೊಂಡು ಕಾನ್ವೆಂಟ್‌ಗೆ ಹೋಗುವಂತಹ ಪದ್ಧತಿ ಇದೆ. ಈ ಒಂದು ಪದ್ಧತಿಯೂ ಶಿಕ್ಷಣಕ್ಕಿಂತ ಜಾಸ್ತಿ ಶಿಕ್ಷೆ ಎನ್ನುವುದು ನನ್ನ ಭಾವನೆ. ಏಕೆಂದರೆ ಮಗುವಿನ ಮೂಳೆ ಇನ್ನೂ ಗಟ್ಟಿಯಾಗಿರುವುದಿಲ್ಲ. ಕೆಲವರು ವಾಹನದ ವ್ಯವಸ್ಥೆಯನ್ನು ಕಲ್ಪಿಸಿರುತ್ತಾರೆ. ಇನ್ನು ಕೆಲವು ಮಕ್ಕಳು ಹಾಗೆಯೇ ನಡೆದುಕೊಂಡು ಶಾಲೆಗೆ ಹೋಗುತ್ತಾರೆ. ಮಕ್ಕಳ ಪರಿಸ್ಥಿತಿ ನೋಡುವುದಕ್ಕಾಗುವುದಿಲ್ಲ. ಬೆನ್ನು ಮತ್ತು ಬೆನ್ನಿನ ಮೂಳೆ ಕೂಡ ಬಾಗಿ ಗೂನು ಮಕ್ಕಳಾಗಿರುವುದನ್ನು ಇವತ್ತಿನ ದಿವಸ ನೋಡುತ್ತಿದ್ದೇವೆ. ಅದೇ ರೀತಿ ಚೆನ್ನಾಗಿರತಕ್ಕಂಥ ಕಾನ್ವೆಂಟ್‌ಗಳಿಗೆ ಮಕ್ಕಳನ್ನು ಸೇರಿಸಿರುತ್ತಾರೆ. ಇವತ್ತಿನ ದಿವಸ ಬೇರೆ ಬೇರೆ ವಾತಾವರಣದಲ್ಲಿ ಮಕ್ಕಳು ಬೆಳೆದಿರುತ್ತಾರೆ. ಪ್ರಾಥಮಿಕ ಶಾಲೆಗಳಲ್ಲಿ ಗ್ರೂಪ್–ಡಿ ನೌಕರರನ್ನು ಒದಗಿಸಿಲ್ಲ. ಅಂದರೆ ಶೌಚಾಲಯದ ವ್ಯವಸ್ಥೆ ಇದ್ದರೂ ಶುಚಿತ್ವದ ಕೊರತೆಯಿಂದಾಗಿ ಮಕ್ಕಳಿಗೆ ಶೌಚಾಲಯಗಳನ್ನು ಉಪಯೋಗಿಸುವುದಕ್ಕೆ ಮನಸ್ಸು ಬರುವುದಿಲ್ಲ. ಹಾಗಾಗಿ ಪ್ರಾಥಮಿಕ ಶಾಲೆಗಳಿಗೆ ಗ್ರೂಪ್–ಡಿ ನೌಕರರನ್ನು ಒದಗಿಸಬೇಕೆಂದು ಸರ್ಕಾರಕ್ಕೆ ಮನವಿ ಮಾಡಿಕೊಳ್ಳುತ್ತೇನೆ. ಸರ್ಕಾರ ಮಹಿಳೆಯರಿಗಾಗಿ ಕಬ್ಬಿಣಾಂಶದ ಮಾತ್ರೆಗಳನ್ನು ಕೂಡ ಒದಗಿಸುತ್ತಿದೆ. ರಕ್ತ ಹೀನತೆಯಿಂದ ಯಾರು ಬಳಲುತ್ತಿದ್ದಾರೆ ಅಂಥವರಿಗೆ ಕಬ್ಬಿಣಾಂಶದ ಮಾತ್ರೆಗಳನ್ನು ಒದಗಿಸುತ್ತಿದ್ದಾರೆ. ವೈದ್ಯರು ಶಾಲೆಗಳಿಗೂ ಹೋಗಿ ಆರೋಗ್ಯ ತಪಾಸಣೆಯನ್ನು ಮಾಡುತ್ತಿದ್ದಾರೆ. ಈಗಾಗಲೇ ಹೇಳಿದ ಹಾಗೆ *'ಪ್ರತಿಭಾ ಕಾರಂಜಿ' 'ನಲಿ–ಕಲಿ'* ಎಂದು ಏನಿದೆ ಈ ಕಾರ್ಯಕ್ರಮಗಳ ಮುಖಾಂತರ ಈ ಪ್ರತಿಭಾ ಕಾರಂಜಿಯನ್ನು ನಿಜವಾಗಿಯೂ ಹೊರಹೊಮ್ಮುವಂತೆ ಮಾಡುತ್ತಿದ್ದಾರೆ. ಏಕೆಂದರೆ, ಪ್ರತಿಭೆಗಳು ಹೊರ ಬರಬೇಕಾದರೆ, ಸಾಕಷ್ಟು ಮಕ್ಕಳಿಗೆ ಉಡುಪುಗಳು, ವಸ್ತುಗಳು ಬೇಕಾಗುತ್ತದೆ. ಇದರಿಂದ ಎಷ್ಟೋ ಮಕ್ಕಳು ತಮ್ಮ ಪ್ರತಿಭೆಯನ್ನು ಹೊರ ಹಾಕದೇ ಅಲ್ಲಿಯೇ ಉಳಿಯುತ್ತಾರೆ. ಹಾಗಾಗಿ ಸರ್ಕಾರದಿಂದ 'ಪ್ರತಿಭಾ ಕಾರಂಜಿ' ಎಂಬ ಯೋಜನೆಯನ್ನು ಏನು ಮಾಡುತ್ತೇವೆ, ಅದಕ್ಕೆ ಇನ್ನೂ ಸ್ವಲ್ಪ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹೆಚ್ಚಿನ ಹಣವನ್ನು ಸರ್ಕಾರದವರು ಒದಗಿಸಿದರೆ, ಗ್ರಾಮೀಣ ಭಾಗದ ಸೊಗಡು, ದೇಶಿಯ ಆಟಗಳು, ಹಿಂದೆ ಯಾವ ರೀತಿಯ ಆಟಗಳಿತ್ತು. ಅವೆಲ್ಲವೂ ಕೂಡ ಹೊರ ಹೊಮ್ಮುತ್ತವೆ.

ಹೀಗೆ ಮಕ್ಕಳ ಹಕ್ಕಿನ ಜೊತೆ ನಾವು ಸಂಸ್ಕಾರವನ್ನು ಕೊಡಬೇಕಾಗುತ್ತದೆ. ಒಳ್ಳೆಯ ಸಂಸ್ಕಾರವಂತರಾಗಿ ಮಾಡಬೇಕಾಗುತ್ತದೆ. ಸಮಾಜ ಸುಧಾರಕರ ಬಗ್ಗೆ ಪಾಠ ಹೇಳಿ ಕೊಡಬೇಕಾಗುತ್ತದೆ. ಗುರು-ಹಿರಿಯರಿಗೆ ನಮಸ್ಕರಿಸಬೇಕು. ಹಿರಿಯರಲ್ಲಿ ಗೌರವ ಇರಬೇಕೆನ್ನುವುದನ್ನು ಸಹ ಶಿಕ್ಷಣದ ಜೊತೆ ಜೊತೆಯಲ್ಲಿ ಮಕ್ಕಳಿಗೆ ಅಳವಡಿಸಿದರೆ ನಿಜವಾಗಿಯೂ, ಆ ಮಕ್ಕಳು ಮುಂದೆ ಒಳ್ಳೆಯ ಪ್ರತಿಭಾವಂತ ಮಕ್ಕಳಾಗುತ್ತಾರೆ. ಸಮಾಜದಲ್ಲಿ ಗೌರವಯುತ ಮಕ್ಕಳಾಗಿ ಬಾಳುವುದಕ್ಕೆ ಸಾಧ್ಯವಾಗುತ್ತದೆ. ಹಾಗೆಯೇ ಸರ್ಕಾರವೂ 'ಶೂ ಭಾಗ್ಯ' ವನ್ನು ಸಹ ಕೊಟ್ಟಿದೆ. ಮಕ್ಕಳಿಗಾಗಿ ಮಧ್ಯಾಹ್ನ ವೇಳೆ ಬಿಸಿ ಊಟದ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ. ಸಮವಸ್ತ್ರವನ್ನು ಸಹ ಒದಗಿಸಲಾಗುತ್ತಿದೆ. ಏಕೆಂದರೆ ಬೇರೆ ಮಕ್ಕಳು ಶೂ ಹಾಕಿಕೊಂಡು ಬಂದಾಗ, ಅಂಗನವಾಡಿಯಲ್ಲಿ ಓದತಕ್ಕಂಥ ಮಕ್ಕಳು ಆಂಗ್ಲ ಮಾಧ್ಯಮದಲ್ಲಿ ಓದತಕ್ಕಂಥ ಮಕ್ಕಳನ್ನು ನೋಡಿ, ನಾವು ಏಕೆ ಶೂ ಹಾಕಬಾರದೆಂಬ ಮನೋಭಾವ ಬರಬಾರದೆಂದು ಮಾನ್ಯ ಮುಖ್ಯಮಂತ್ರಿಗಳು ಆ ಭಾಗ್ಯವನ್ನು ತಂದಿದ್ದಾರೆ. ಹೀಗೆ ಹಕ್ಕುಗಳು ಸಾಕಷ್ಟಿವೆ. ಈ ಹಕ್ಕುಗಳು ಪುಸ್ತಕದಲ್ಲಿರಬಾರದು. ಮಕ್ಕಳ ಗ್ರಾಮ ಸಭೆಗಳೆಂದು ನಡೆಯಬೇಕೆಂದು ಸರ್ಕಾರ ಹೇಳಿದೆ, ಮಕ್ಕಳ ಗ್ರಾಮ ಸಭೆಗಳು ನಡೆಯಲೇಬೇಕೆಂದು ಕಡ್ಡಾಯ ಮಾಡಲಾಗಿದೆ. ಗ್ರಂಥಾಲಯ ಸಹ ಇರಬೇಕು. ಹಿಂದೆ ಶಿಕ್ಷಣ ಕಲಿಯಬೇಕಾದರೆ ನೀತಿ ಪಾಠಗಳು Supplementary Reader ಎಂದಿತ್ತು. ಕ್ಲಾಸ್ ಮಾಡಿದ ನಂತರ ಹೊರಗೆ ಹೋಗುವಂತಹ ಸಂದರ್ಭದಲ್ಲಿ ಶಿಕ್ಷಕರು ನೀತಿ ಪಾಠವನ್ನು ಹೇಳಿ ಮಕ್ಕಳನ್ನು ಹೊರಗೆ ಬಿಡುವಂತಹ ಒಂದು ಪದ್ಧತಿ ಸಹ ಇತ್ತು. ಇವತ್ತಿನ ದಿವಸ ಆ ನೀತಿ ಪಾಠಗಳನ್ನು ಮಕ್ಕಳು ಕೇಳುವುದಿಲ್ಲ. ಹಾಗೆಯೇ ಕಥೆ ಹೇಳುವುದಕ್ಕೂ ಅಜ್ಜಿಯಂದಿರು ಇಲ್ಲ. ಹೀಗಾಗಿ ಅದರ ಬಗ್ಗೆ ಕೂಡ ನಾವು ಮತ್ತು ನಮ್ಮ ಸಮಾಜ ಹಾಗೂ ಮಹಿಳೆಯರೆಲ್ಲರೂ ಕೂಡ ಗಮನ ಹರಿಸಬೇಕಾಗುತ್ತದೆ. ಮಕ್ಕಳ ಹಕ್ಕುಗಳು ಸಾಕಷ್ಟು ಇದೆ. ಈ ಹಕ್ಕುಗಳೆಲ್ಲಾ ಜಾರಿಗೆ ಬರಬೇಕಾದರೆ, ಮಕ್ಕಳಿಗಾಗಿ ಹಾಗೂ ಮಹಿಳೆಯರಿಗಾಗಿ ಸರ್ಕಾರದಿಂದ ಏನೇನು ಸೌಲಭ್ಯವನ್ನು ಕಲ್ಪಿಸಲಾಗಿದೆ ಎಂಬುದನ್ನು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯವರು ಎಲ್ಲಾ ಕಡೆಯೂ ಅರಿವು ಮೂಡಿಸಿದರೆ ಹೆಚ್ಚಿನ ಸಹಕಾರವಾಗುತ್ತದೆಂದು ತಿಳಿಸುತ್ತಾ, ನನಗೆ ಮಾತನಾಡಲು ಅವಕಾಶ ಕಲ್ಪಿಸಿಕೊಟ್ಟಿದಕ್ಕಾಗಿ ಧನ್ಯವಾದಗಳನ್ನು ಸಲ್ಲಿಸಿ ನನ್ನ ಮಾತುಗಳನ್ನು ಮುಗಿಸುತ್ತಿದ್ದೇನೆ.

(ಮುಂದು)

*(765) 15.06.2017 5.00 ಬಿಎಸ್‌ಡಿ-ಆರ್‌ಎನ್*

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಐವನ್ ಡಿ'ಸೋಜಾ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಮಕ್ಕಳ ಹಕ್ಕುಗಳ ರಕ್ಷಣೆ ಬಗ್ಗೆ ವಿಶೇಷ ಚರ್ಚೆಗೆ ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಕಳೆದ ಬಾರಿ ಇದೇ ಸದನದಲ್ಲಿ ಮೂರು ದಿನಗಳ ಕಾಲ ಮಕ್ಕಳ ಹಕ್ಕುಗಳ ರಕ್ಷಣೆಗೆ ಬಗ್ಗೆ ಚರ್ಚೆಯನ್ನು ನಡೆಸಿದ್ದೆವು. ಅದರ ಪರಿಣಾಮವಾಗಿ ದೇಶದ ನಾನಾ ರಾಜ್ಯಗಳಲ್ಲಿ ಇಂತಹ ವಿಷಯಗಳ ಬಗ್ಗೆ ಚರ್ಚೆ ನಡೆದಾಗ ಮಕ್ಕಳಿಗೆ ಹೆಚ್ಚು ಬೆಂಬಲ ನೀಡಿದಂತಾಗುತ್ತದೆ ಮತ್ತು ಮಕ್ಕಳ ಬಗ್ಗೆ ವಿಶೇಷ ಗಮನವನ್ನು ಶಾಸಕರು ವಹಿಸಿಕೊಳ್ಳುತ್ತಾರೆ. ಮಕ್ಕಳ ರಕ್ಷಣೆ ಮತ್ತು ಬೆಳವಣಿಗೆಗೆ ಚಿಂತನೆ ಮಾಡುತ್ತಾರೆ ಎಂದು ರಾಷ್ಟ್ರದಾದ್ಯಂತ ಪ್ರಚಾರ ಆಯಿತು. ಅದರ ಪರಿಣಾಮವಾಗಿ ಇತರ ರಾಜ್ಯಗಳ ಶಾಸಕರು ಗಮನಹರಿಸುವಂತಾಗಿದೆ. ನಮ್ಮ ಕರ್ನಾಟಕ ರಾಜ್ಯದಲ್ಲಿ ಮಕ್ಕಳಿಗಾಗಿ ಶಾಸಕರ ವೇದಿಕೆ ಎಂದು 6 ವರ್ಷಗಳ ಹಿಂದೆ ರಚನೆ ಮಾಡಿಕೊಂಡಿದ್ದು, ಮಾನ್ಯ ಸಭಾಪತಿಯವರು ಅದಕ್ಕೆ ಅಧ್ಯಕ್ಷರಾಗಿದ್ದಾರೆ. ಆಡಳಿತ ಮತ್ತು ವಿರೋಧ ಪಕ್ಷಗಳ ಸಚೇತಕರುಗಳು ಸಂಚಾಲಕರಾಗಿ ವರ್ಷಕ್ಕೆ ಎರಡು-ಮೂರು ಬಾರಿ ಸಭೆ ನಡೆಸಿ, ವಿವಿಧ ಭಾಗಗಳಿಂದ ಮಕ್ಕಳನ್ನು ಕರೆಸಿಕೊಂಡು ರಾಜ್ಯದ ಮುಖ್ಯಮಂತ್ರಿಗಳ ಜೊತೆ ಚರ್ಚೆ ಮಾಡುವ ಅವಕಾಶ ಮಾಡಿಕೊಡುತ್ತೇವೆ. ಇದರ ಮೂಲಕ ಮಕ್ಕಳಿಗೂ ವಿಶೇಷ ಸ್ಥಾನ ಕೊಡುವ ಬಗ್ಗೆ ಶಾಸಕರು ವಹಿಸಿಕೊಂಡು, ಶಾಸನಬದ್ಧವಾಗಿ ಅವರ ಹಕ್ಕುಗಳನ್ನು ರಕ್ಷಿಸಲು ನಾವೆಲ್ಲರೂ ಬದ್ಧರಾಗಿದ್ದೇವೆ ಎನ್ನುವುದು ದೇಶದ ಸಂಸದೀಯ ವ್ಯವಸ್ಥೆಯಲ್ಲಿ ಅಚ್ಚಳಿಯದೇ ಉಳಿದಿರುವ ಚರಿತ್ರೆಯಾಗಿದೆ. ಈಗಾಗಲೇ ಮಾನ್ಯ ಮೋಟಮ್ಮನವರು, ಮಾನ್ಯ ರಾಮಚಂದ್ರಗೌಡ ಹಾಗೂ ಶ್ರೀಮತಿ ಜಯಮ್ಮನವರು ಮಾತನಾಡಿದ್ದಾರೆ ಹಾಗೂ ಇನ್ನೂ ಕೆಲವರು ವಿಚಾರಗಳನ್ನು ಮಂಡನೆ ಮಾಡುವವರಿದ್ದಾರೆ. ಮಕ್ಕಳ ರಕ್ಷಣೆ ಎಂದಾಗ ಮಕ್ಕಳಿಗೆ ಅಗತ್ಯವಾದ ಅನೇಕ ಕಾರ್ಯಕ್ರಮಗಳನ್ನು ಸರ್ಕಾರ ಹಾಕಿಕೊಂಡಿದ್ದು, ಅಪೌಷ್ಠಿಕತೆಯಿಂದ ನರಳುವ ಮಕ್ಕಳಿಗೆ ಪೌಷ್ಠಿಕ ಆಹಾರವನ್ನು ಬಾಲ್ಯದಿಂದಲೇ ಪ್ರಾರಂಭಗೊಂಡು ರಕ್ಷಣೆ ಮಾಡುತ್ತಿದ್ದೇವೆ. ಆದರೆ ಸುಮಾರು 3 ವರ್ಷಗಳ ನಂತರ ಮಕ್ಕಳನ್ನು ಬಾಲವಾಡಿಗೆ ಕಳುಹಿಸುತ್ತಾರೆ. ಮಕ್ಕಳನ್ನು ಅವರು one to five percent ನಷ್ಟು ಮಾತ್ರ ನೋಡುವಂತಹ ವ್ಯವಸ್ಥೆ ಇದ್ದು, ತಾಯಿ ಹೆಚ್ಚಾಗಿ ಮಕ್ಕಳ ರಕ್ಷಣೆಯನ್ನು ಮಾಡುತ್ತಾರೆ.

ಹುಟ್ಟಿದ ದಿನದಿಂದ 6 ವರ್ಷ, 6 ರಿಂದ 12 ವರ್ಷ, 12ರಿಂದ 18 ವರ್ಷಗಳವರೆಗೆ ಮೂರು categoryಗಳಲ್ಲಿ ಮಕ್ಕಳನ್ನು ವಿವಿಧ ಹಂತಗಳಲ್ಲಿ ನೋಡುತ್ತೇವೆ. ಪ್ರಾಥಮಿಕ ಹಂತದಲ್ಲಿ ತಾಯಿಯ ಎದೆಹಾಲು ಬಹಳ ಪ್ರಾಮುಖ್ಯತೆಯನ್ನು ಪಡೆಯುತ್ತದೆ ಎಂದು ಎಲ್ಲರೂ ನಂಬಿಕೊಂಡು ಬಂದಿದ್ದು, ನಾವು ಕೂಡ ಅದೇ ರೀತಿ ಬೆಳೆದ ಮಕ್ಕಳಾಗಿದ್ದೇವೆ. ಹಿಂದೆ ತಾಯಿಯ ಎದೆಹಾಲು ಮಕ್ಕಳಿಗೆ ಹೆಚ್ಚು ಸಾಮರ್ಥ್ಯವನ್ನು ಪಡೆಯುವಂತಿತ್ತು ಎಂದು ಹೇಳುತ್ತೇವೆ. ಹಿಂದಿನ ಕಾಲದಲ್ಲಿ 3ರಿಂದ 4 ವರ್ಷಗಳವರೆಗೆ ಎದೆಹಾಲು ಕುಡಿಯುತ್ತಿದ್ದ ಮಕ್ಕಳಿದ್ದರು. ಆದರೆ ಇತ್ತೀಚಿನ ಸಂಶೋಧನೆಗಳನ್ನು ನೋಡಿದಾಗ 5ರಿಂದ 6 ತಿಂಗಳವರೆಗೆ ಎದೆಹಾಲು ಉಣಿಸುವ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ತಾಯಂದಿರ ಸಂಖ್ಯೆ zero ಆಗಿರುವುದು ವಿಷಾದನೀಯವಾಗಿದೆ ಎಂದು ಅಂಕಿ-ಅಂಶಗಳಿಂದ ಕಾಣಬಹುದು. UNICEF (United Nations International Children's Emergency Fund) ನವರು ಅದರ ಬಗ್ಗೆ ಸಂಶೋಧನೆ ಮಾಡಿದ್ದು, 5ರಿಂದ 6 ತಿಂಗಳವರೆಗಿನ ಮಕ್ಕಳಿಗೆ ಎದೆಹಾಲು ಉಣಿಸುವವರ ಸಂಖ್ಯೆ zero ಆಗಿದೆ ಎಂದು ಹೇಳಿದ್ದಾರೆ. ಈ ಬಗ್ಗೆ ನಾವು awareness ಹೇಗೆ create ಮಾಡಬಹುದು? ಯಾವರೀತಿ ಚಿಂತನೆ ಮಾಡಿ, ಯಾವರೀತಿ awareness create ಮಾಡಬಹುದು ಎಂಬ ಅಗತ್ಯ ಇದೆ. ಇವತ್ತು ಮಕ್ಕಳ ರಕ್ಷಣೆಗಾಗಿ ಅನೇಕ ನೀತಿಗಳನ್ನು ಜಾರಿಗೆ ತಂದಿದ್ದೇವೆ. ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಕರ್ನಾಟಕ ರಾಜ್ಯದಲ್ಲಿ ಮಕ್ಕಳ ರಕ್ಷಣಾ ನೀತಿ ಎಂಬುದನ್ನು ಜಾರಿಗೆ ತಂದಿದ್ದೇವೆ ಎಂದು ಹೇಳುತ್ತಿದ್ದರು. ಮಕ್ಕಳ ರಕ್ಷಣಾ ನೀತಿಯನ್ನು ಜಾರಿಗೆ ತರುವುದರ ಮೂಲಕ ಮಕ್ಕಳನ್ನು ಶಾಲೆಗಳಲ್ಲಿ ಯಾವ ರೀತಿ ನೋಡಿಕೊಂಡು ಯಾವ ರೀತಿ ಬೆಳೆಸಬೇಕು. ಅವರಿಗೆ ಬಾಲವಾಡಿ, ಅಂಗನವಾಡಿಗಳಲ್ಲಿ ಯಾವ ರೀತಿ ಬೆಳೆಸಬೇಕು ಎಂಬುದರ ಬಗ್ಗೆ ವಿಶೇಷವಾದ ಚರ್ಚೆಗಳಾಗುತ್ತವೆ. ಅದಕ್ಕೆ ಬೇಕಾದ ಅಂಗನವಾಡಿ ಕಾರ್ಯಕರ್ತರನ್ನು ನೇಮಿಸಿ, ಅದಕ್ಕೆ ಬೇಕಾಗುವ ಪ್ರೋತ್ಸಾಹವನ್ನು ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಕೊಡುತ್ತಿವೆ. ತಾಯಿಯ ಎದೆಹಾಲು ಕೊಟ್ಟರೆ ಪ್ರಾಥಮಿಕವಾಗಿ ಮಕ್ಕಳ ರಕ್ಷಣೆ ಸಾಧ್ಯವಾಗುತ್ತದೆ ಎಂಬುದನ್ನು ಹೇಳಬಹುದು. ಅಂಕಿಅಂಶಗಳ ಪ್ರಕಾರ 54% ಮಕ್ಕಳು ಮಾತ್ರ ತಾಯಿ ಎದೆ ಹಾಲು ಕುಡಿದ 6 ವರ್ಷದೊಳಗಿನ ಮಕ್ಕಳು ಇದ್ದಾರೆ ಎಂದು ಕಾಣುತ್ತದೆ. ಇವತ್ತಿನ mode of lifestyle ಹೇಗಿದೆ ಎಂದರೆ ಎದೆ ಹಾಲು ಕೊಟ್ಟರೆ beauty ಕಡಿಮೆಯಾಗುತ್ತದೆ. ಮಕ್ಕಳ ರಕ್ಷಣೆ ಬದಲು ಅವರಿಗೆ ಏನಾದರೂ ಆಗಬಹುದು ಎನ್ನುವುದು ಒಂದಾಗಿದೆ. ಎರಡನೆಯದಾಗಿ working women ಬಗ್ಗೆ ಹೇಳುವುದಾದರೆ, ಮಗು ಜನಿಸಿದ ನಾಲ್ಕೈದು ತಿಂಗಳಲ್ಲಿ ಕೆಲಸಕ್ಕೆ ಹೋಗಲು ಪ್ರಾರಂಭ ಮಾಡುತ್ತಾರೆ. ಆಗ ಕೆಲಸ ಮಾಡುವ ಸ್ಥಳದಲ್ಲಿ ಎದೆ ಹಾಲು ಉಣಿಸಲು ಸರಿಯಾದ ಸ್ಥಳಗಳ ಕೊರತೆ ಇದೆ. ಇದನ್ನು ಯಾವ ರೀತಿ ನೀಗಿಸಬಹುದು ಎಂದು ಸರ್ಕಾರ ಚಿಂತನೆ ಮಾಡಬೇಕಾಗಿದೆ. ಕಾರ್ಖಾನೆಗಳು, ಕಟ್ಟಡದ ಕೆಲಸ ಮಾಡುವ ಸ್ಥಳಗಳು ಇತ್ಯಾದಿ ಬೇರೆ ಬೇರೆ ಸ್ಥಳಗಳಲ್ಲಿ ಕೆಲಸ ಮಾಡುತ್ತಿದ್ದು, ಬೇರೆ ಬೇರೆ ಊರುಗಳಿಂದ ವಲಸೆ ಬಂದು ಅನೇಕ ಕಡೆ ಮಹಿಳೆಯರು ಚಿಕ್ಕ ಚಿಕ್ಕ ಮಕ್ಕಳನ್ನು ಹಿಡಿದುಕೊಂಡು ಕಾಮಗಾರಿ ನಡೆಯುವ ಸ್ಥಳಗಳಲ್ಲಿ ಮಕ್ಕಳನ್ನು ಆಟವಾಡಲು ಅಥವಾ ಬೇರೆ ಕಡೆ ಬಿಟ್ಟು ಕೆಲಸ ಮಾಡುತ್ತಿರುತ್ತಾರೆ. ಸಮಯಕ್ಕೆ ಸರಿಯಾಗಿ ಹಾಲು ಕೊಡಲು ಅಥವಾ ಮಕ್ಕಳ ರಕ್ಷಣೆಗೆ ಅಥವಾ care ತೆಗೆದುಕೊಳ್ಳಲು ಸಾಧ್ಯವಾಗದ ಪರಿಸ್ಥಿತಿಯನ್ನು ಅನೇಕ ಕಡೆಗಳಲ್ಲಿ ನೋಡಿದ್ದೇವೆ. ಅಂತಹ ಮಕ್ಕಳಿಗೆ ಕಾರ್ಮಿಕ ಇಲಾಖೆಯವರು ಮಕ್ಕಳಿಗೆ ಹಾಲು ಉಣಿಸಲು ಸ್ಥಳದ ವ್ಯವಸ್ಥೆ ಮಾಡಬೇಕು. ಇದೇ ರೀತಿ ಬೇರೆ ಬೇರೆ establishment ಗಳಲ್ಲಿ ಅದು government ಇರಬಹುದು ಅಥವಾ semi-government ಇರಬಹುದು, ಬೇರೆ ಬೇರೆ ಸಂಘ ಸಂಸ್ಥೆ

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಮತ್ತು ಕಾರ್ಖಾನೆಗಳಲ್ಲಿ ಬೇರೆ ಬೇರೆ ಸ್ಥಳಗಳನ್ನು ಮಾಡುವುದು ಅಥವಾ ಕಾದಿರಿಸುವುದು ಉತ್ತಮ ಎನ್ನುವ ಸಲಹೆಯನ್ನು ಮಾನ್ಯ ಸಚಿವರಿಗೆ ನೀಡಬಯಸುತ್ತೇನೆ. ಈ ಬಗ್ಗೆ ಸರ್ಕಾರ ಕ್ರಮ ತೆಗೆದುಕೊಳ್ಳಬೇಕು ಮತ್ತು ಇದಕ್ಕಿಂತ ಹೆಚ್ಚಾಗಿ ಕಾರ್ಮಿಕ ಇಲಾಖೆಯು ಕ್ರಮ ತೆಗೆದುಕೊಳ್ಳಬೇಕು.

ಇನ್ನು ಮಕ್ಕಳು ಅಂಗ ಊನತೆಯನ್ನು ಹೊಂದಿದ್ದು, ಅಂದರೆ physically challenged ಆಗಿದ್ದು, ವಿಕಲಚೇತನರಾಗಿದ್ದು, ಅಂಗಾಂಗಳ ತೊಂದರೆಗೆ ಸಿಲುಕಿರುತ್ತಾರೆ. ಇದನ್ನು ಅನೇಕರು ನೋಡಿರುತ್ತಾರೆ. ನನ್ನ ಪತ್ನಿಯವರು Gynecologist ಆಗಿದ್ದು, ಅವರು ರಾತ್ರಿ ವೇಳೆ ಆಸ್ಪತ್ರೆಗಳಿಂದ ಕರೆ ಬಂದಾಗ ಮನೆಯಿಂದ ಹೋಗುತ್ತಿರುತ್ತಾರೆ. ಅದಕ್ಕೆ ನಾನು ಬೆಳಿಗ್ಗೆ ಹೆರಿಗೆ ಮಾಡಿಸುವ ಕೆಲಸ ಮಾಡಬಹುದಲ್ಲವೇ? ಎಂದು ಕೇಳಿದ್ದೇನೆ. ಅದಕ್ಕೆ ಅವರು in case if an one minute or one hour late, ಗರ್ಭಕೋಶದಲ್ಲಿರುವ ಮಗು ಸುತ್ತಾಡುವ ಸಂದರ್ಭದಲ್ಲಿ ಅಲ್ಲಿರುವ ನೀರಿನ ಅಂಶ ಕಡಿಮೆಯಾದರೆ disablement ಗೆ ಕೊಂಡೊಯ್ಯುತ್ತದೆ ಎಂದು ಹೇಳಿದರು. ಒಂದು ವೇಳೆ ಸರಿಯಾದ ಸಂದರ್ಭದಲ್ಲಿ ಹೆರಿಗೆ ಆಗದಿದ್ದರೆ ಹುಟ್ಟಿದ ಮಗು ಅಂಗ ಊನತೆಗೆ ಬಲಿಯಾಗುತ್ತದೆ ಎಂದು ಹೇಳಿದರು. ಇವತ್ತು ನಗರ ಪ್ರದೇಶಗಳಲ್ಲಿ ಬೇಕಾದ ಸವಲತ್ತು, ಆಸ್ಪತ್ರೆಗಳು ಹಾಗೂ ಹೆರಿಗೆ ವೈದ್ಯರು ಇರುತ್ತಾರೆ. ಆದರೆ ಗ್ರಾಮೀಣ ಪ್ರದೇಶಗಳಲ್ಲಿ ಇದರ ವ್ಯವಸ್ಥೆ ಹೇಗಿದೆ ಎಂಬುದರ ಬಗ್ಗೆ ಆಲೋಚನೆ ಮಾಡಬೇಕು. ಎಲ್ಲೋ ಒಂದು ಕಡೆ ಪ್ರಾಥಮಿಕ ಆರೋಗ್ಯ ಕೇಂದ್ರಗಳು ಇದ್ದು, ಅಲ್ಲಿ ವೈದ್ಯರು ಇರುವುದಿಲ್ಲ. ವೈದ್ಯರು ಇದ್ದರೂ specialist ವೈದ್ಯರು ಇರುವುದಿಲ್ಲ. ಹಿಂದೆ ಮನೆ ಮನೆಗಳಿಗೆ ಅಂಗನವಾಡಿ ಕಾರ್ಯಕರ್ತರು ಹೋಗಿ ಹೆರಿಗೆ ಮಾಡಿಸುವ ಪ್ರಸಂಗಗಳಿತ್ತು. ಇವತ್ತು ಸರಿಯಾದ ಸಮಯಕ್ಕೆ ಹೆರಿಗೆ ಮಾಡಿಸದಿದ್ದರಿಂದ ಅಂಗ ಊನತೆ ಮತ್ತು ಬೇರೆ ಬೇರೆ ರೀತಿ ಅಂದರೆ ಅದು brain ನಲ್ಲಿರಬಹುದು, ದೈಹಿಕವಾಗಿ ಇರಬಹುದು ಅಥವಾ ಬೆಳವಣಿಗೆಯಲ್ಲಿ ವಿಕಲತೆಗೆ ಕಾರಣವಾಗುತ್ತದೆ. ಇದರ ಬಗ್ಗೆ ಸರ್ಕಾರ ಒಂದು ಸರ್ವೆ ನಡೆಸಿ, ಈ ರೀತಿ ಆಗಿರುವ ಮಕ್ಕಳ ಸಂಖ್ಯೆ ರಾಜ್ಯದಲ್ಲಿ ಎಷ್ಟು ಹಾಗೂ ಯಾವ ಯಾವ ಭಾಗಗಳಲ್ಲಿ ಆಗುತ್ತಿರುತ್ತದೆ? ಹೆಚ್ಚಾಗಿ ಗ್ರಾಮೀಣ ಪ್ರದೇಶಗಳಲ್ಲಿ ರಸ್ತೆಗಳು ಮತ್ತು ಆಸ್ಪತ್ರೆಗಳು ಹಾಗೂ ವೈದ್ಯರು ಇಲ್ಲದೇ ಇರುವ ಭಾಗಗಳಲ್ಲಿ ಆಗುತ್ತಿರುವ ಸಂದರ್ಭದಲ್ಲಿ ಅಂತಹ ಕಡೆ ಕ್ರಮ ತೆಗೆದುಕೊಳ್ಳಬೇಕು ಎಂದು ಸರ್ಕಾರದ ಗಮನಕ್ಕೆ ತರಬಯಸುತ್ತೇನೆ. ನಮ್ಮ ರಾಜ್ಯದಲ್ಲಿ ವಿಶೇಷ ಮಕ್ಕಳ ಶಾಲೆಗಳನ್ನು ನಡೆಸುತ್ತಿದ್ದು, ಸುಮಾರು 13 ಸಾವಿರ ಮಕ್ಕಳು ಬೇರೆ ಬೇರೆ ವಿಶೇಷ ಶಾಲೆಗಳಲ್ಲಿ ಕಲಿಯುತ್ತಿದ್ದಾರೆ. ಅದರಲ್ಲಿ 9 ಸರ್ಕಾರಿ ವಿಶೇಷ ಶಾಲೆಗಳಿದ್ದು, ಸ್ವಯಂಸೇವಾ ಸಂಸ್ಥೆಗಳು ನಡೆಸುತ್ತಿರುವ ಅನುದಾನರಹಿತ 16 ವಿಶೇಷ ಶಾಲೆಗಳು ಹಾಗೂ ಶಿಶು ಕೇಂದ್ರೀಕೃತ ಯೋಜನೆಯಡಿ ಸ್ವಯಂಸೇವಾ ಸಂಸ್ಥೆಗಳು 132 ವಿಶೇಷ ಶಾಲೆಗಳಿದ್ದು, ಇತರ ಅಂದರೆ ಕೇಂದ್ರ ಸರ್ಕಾರದ ದೀನ್‌ದಯಾಳ್ ಯೋಜನೆಯನ್ವಯ ಸುಮಾರು 9 ಶಾಲೆಗಳನ್ನು ನಡೆಸುತ್ತಿದ್ದಾರೆ.

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

(ಮುಂದು)

*(766)15-06-2017 SK-RN 5.10*

**ಶ್ರೀ ಐವನ್ ಡಿ'ಸೋಜಾ(ಮುಂದು)**

ನಮ್ಮ ರಾಜ್ಯದಲ್ಲಿ ಒಟ್ಟಾರೆ 13000 ಮಕ್ಕಳು ವಿಶೇಷ ಶಾಲೆಗಳಲ್ಲಿ ಕಲಿಯುತ್ತಿದ್ದಾರೆ. ಇವತ್ತು ವಿಶೇಷ ಶಾಲೆಯ ಮಕ್ಕಳು ಅಥವಾ ಭಿನ್ನ ಸಾಮರ್ಥ್ಯದ ಮಕ್ಕಳಿದ್ದಾರೆ. ಇವತ್ತು ಅನೇಕ ವಿಶೇಷ ಶಾಲೆಗಳ ಮಕ್ಕಳ ಕೌಶಲ್ಯಗಳು, ಸಾಮರ್ಥ್ಯ, participation, talentನ್ನು ಗುರುತು ಮಾಡಿಕೊಟ್ಟಿದ್ದಾರೆ. ಅಂತರಾಷ್ಟ್ರೀಯ ಮಟ್ಟದಲ್ಲಿ ಹೋಲಿಕೆ ಮಾಡಿದರೆ, ಅನೇಕ ವಿಶೇಷ ಶಾಲೆಗಳ ಮಕ್ಕಳು ಕ್ರಿಕೆಟ್, ವಾಲಿಬಾಲ್, ಕಬ್ಬಡ್ಡಿ ಮತ್ತು ಬೇರೆ ಬೇರೆ ಕ್ರೀಡೆಗಳು ಮತ್ತು ಚಟುವಟಿಕೆಗಳಲ್ಲಿ ಭಾಗವಹಿಸಿ ಪ್ರಶಸ್ತಿಗಳನ್ನು ಪಡೆದುಕೊಂಡಿರುವುದನ್ನು ನಾವು ಕಾಣಬಹುದು. ಈ ವಿಶೇಷ ಶಾಲೆಯ ಮಕ್ಕಳಿಗೆ ರಕ್ಷಣೆಯನ್ನು ಕೊಡುವುದು ಮತ್ತು ಇನ್ನು ಹೆಚ್ಚು ಅನುಕೂಲವನ್ನು ಮಾಡಿಕೊಡಲು ಸರ್ಕಾರ ಏನು ಕಾರ್ಯಕ್ರಮ ಹಾಕಿಕೊಳ್ಳಬಹುದು ಎಂಬುದರ ಬಗ್ಗೆ ಸರ್ಕಾರ ಕೂಡ ಗಮನಹರಿಸಬೇಕು. ಇವತ್ತು ಸರ್ಕಾರ ಹಣವನ್ನು ಹೆಚ್ಚು ಖರ್ಚು ಮಾಡುತ್ತದೆ. ಶಾಲೆಗಳ ಮಕ್ಕಳಿಗೆ ಶಿಕ್ಷಕರನ್ನು ನೇಮಕ ಮಾಡುತ್ತಾರೆ. ಆದರೆ ಅನೇಕ ವಿಶೇಷ ಶಾಲಾ ಮಕ್ಕಳಿಗೆ ಶಿಕ್ಷಕರ ಕೊರತೆ, ಸೌಲಭ್ಯಗಳು ಮತ್ತು ಪೌಷ್ಟಿಕ ಆಹಾರಗಳನ್ನು ನೀಡುವುದಿಲ್ಲವೆಂಬುದು ನನ್ನ ಗಮನಕ್ಕೆ ಬಂದಿದೆ. ಈ ವಿಚಾರದಲ್ಲಿ ಸರ್ಕಾರ ಹೆಚ್ಚು ಗಮನವನ್ನು ಕೊಡಬೇಕಾದ ಅನಿವಾರ್ಯತೆ ಇದೆ ಎಂಬುದನ್ನು ನಾನು ಈ ಸದನದ ಮೂಲಕ ಹೇಳವುದಕ್ಕೆ ಬಯಸುತ್ತೇನೆ. ಈಗಾಗಲೇ ಬಾಲ ಕಾರ್ಮಿಕರ ವಿಚಾರಗಳ ಬಗ್ಗೆ ಅನೇಕ ಬಾರಿ ಪ್ರಸ್ತಾಪ ಮಾಡಿದ್ದೇವೆ. ಕರ್ನಾಟಕ ರಾಜ್ಯದಲ್ಲಿ ಪ್ರಸ್ತುತ ಸಮೀಕ್ಷೆಗಳ ಪ್ರಕಾರ ಶೇಕಡ 2.27 ರಷ್ಟು, 5 ರಿಂದ 14 ವರ್ಷದ ವಯಸ್ಸಿನ ಮಕ್ಕಳು ಬಾಲ ಕಾರ್ಮಿಕರಾಗಿರುತ್ತಾರೆಂದು ಹೇಳಿದೆ. ಒಟ್ಟಾರೆ ಜನಸಂಖ್ಯೆಯ ಸುಮಾರು ಶೇಕಡ 2.27 ರಷ್ಟು 5 ರಿಂದ 14 ವರ್ಷದ ವಯಸ್ಸಿನ ಮಕ್ಕಳು ಬಾಲ ಕಾರ್ಮಿಕರಾಗಿದ್ದಾರೆ ಎನ್ನುವ ಮಾತನ್ನು ಹೇಳುತ್ತೇನೆ. ನಮಗೆ ಗೊತ್ತಿರುವ ಹಾಗೆ ಬಾಲ ಕಾರ್ಮಿಕರು ಯಾರು ಹೆಚ್ಚಾಗಿದ್ದಾರೆ ಅವರ ಕುಟುಂಬದ ಆರ್ಥಿಕ ಪರಿಸ್ಥಿತಿ ಚೆನ್ನಾಗಿರುವುದಿಲ್ಲ. ಕುಟುಂಬದಲ್ಲಿ ಆಗಿರುವಂತಹ ಅವ್ಯವಸ್ಥೆ ಮತ್ತು ಬೇರೆ ಬೇರೆ ವಿಚಾರಗಳು ಈ ಒಂದು ಕೆಲಸಕ್ಕೆ ದೂಡುವಂತಹ ಪರಿಸ್ಥಿತಿ ಬರುತ್ತದೆ. ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇತ್ತೀಚೆಗೆ 'ಬಾಲ ಕಾರ್ಮಿಕರ ದಿನಾಚರಣೆ' ಮಾಡುವಂತಹ ಸಂದರ್ಭದಲ್ಲಿ ಬಾಲ ಕಾರ್ಮಿಕರು ಶೂನ್ಯ ಇರುವ ಜಿಲ್ಲೆ ಎಂದರೆ ಅದು ದಕ್ಷಿಣ ಕನ್ನಡ ಜಿಲ್ಲೆ ಎಂದು ಘೋಷಣೆ ಮಾಡುವ ಮೂಲಕ ಒಂದು ಮಾತನ್ನು ಹೇಳಿದರು. ಇವತ್ತು ರಾಜ್ಯದಲ್ಲಿ ಶೇಕಡ 2.27 ರಷ್ಟು ಬಾಲ ಕಾರ್ಮಿಕರಿದ್ದಾರೆಂಬುದನ್ನು ಅಂಕಿ-ಅಂಶಗಳ ಮೂಲಕ ಹೇಳಿದ್ದಾರೆ. ಇವತ್ತು ಇಲಾಖೆಯವರು ಏನು ಮಾಡುತ್ತಾರೆಂಬ ಪ್ರಶ್ನೆ ಬರುತ್ತದೆ. ಅವರು ಹೋಗಿ ಬಾಲ ಕಾರ್ಮಿಕರನ್ನು ಹುಡುಕಿ, ಎಲ್ಲಿ, ಏನು ಮಾಡುತ್ತಾರೆ? ಅವರು ಏತಕ್ಕೋಸ್ಕರ ಮಾಡುತ್ತಾರೆ. ಎಲ್ಲೆಲ್ಲಿ ಮಾಡುತ್ತಾರೆಂಬುದನ್ನು ಕಾರ್ಮಿಕ ಇಲಾಖೆಯವರು ಬೇರೆ ಬೇರೆ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಇಲಾಖೆಯವರು ಇದನ್ನು ತುರ್ತಾಗಿ ಹೋಗಿ ಪತ್ತೆ ಹಚ್ಚಿ, ಅವರಿಗೆ ರಕ್ಷಣೆ ಕೊಡುವುದು ಮತ್ತು ಜೀವನದಲ್ಲಿ ಬೆಳಕು ಕೊಡುವಂತಹ ಕೆಲಸವನ್ನು ಮಾಡುವುದು ಅನಿವಾರ್ಯತೆಯಿದೆ ಎಂಬುದನ್ನು ನಾನು ಹೇಳುವುದಕ್ಕೆ ಬಯಸುತ್ತೇನೆ. ಇವತ್ತು ನಮ್ಮ ಜಿಲ್ಲೆಯನ್ನು ತೆಗೆದುಕೊಳ್ಳುವುದಾದರೆ ನಮ್ಮ coastal belt ನಲ್ಲಿ Endosulfan ಪೀಡಿತರಿಂದ ಅನೇಕ ಮಕ್ಕಳು ಅಂಗ ಊನತ್ವದಿಂದ ಬಳಲುತ್ತಿದ್ದಾರೆ. ನಮ್ಮ ನೆರೆ ಜಿಲ್ಲೆಗಳಾದ ದಕ್ಷಿಣ ಕನ್ನಡ, ಉಡುಪಿ, ಕಾಸರಗೋಡು ಸುಮಾರು 3,000 ಕ್ಕಿಂತ ಅಧಿಕ ಮಕ್ಕಳು ಊನತ್ವದಿಂದ ಬಳಲುತ್ತಿದ್ದಾರೆ. ನಾನು ಅವರವರ ಮನೆಗಳಿಗೆ ಹೋಗಿ ಭೇಟಿ ಮಾಡಿ, ಅವರನ್ನು ನೋಡಿದ್ದೇನೆ ಮತ್ತು ಅವರ ಸಮಸ್ಯೆಗಳನ್ನು ಕಂಡಿದ್ದೇನೆ ಮತ್ತು ಎಲ್ಲಿಯವರೆಗೆ ಎಂದು ಹೇಳಿದರೆ ಅಂಗದಲ್ಲಿ ಬೆರಳುಗಳಿಲ್ಲ, ಕೈಗಳಿಲ್ಲ, ಮೂಗು ಇಲ್ಲ. ಇದು ಯಾವುದರಿಂದ ಆಯಿತು ಎಂದರೆ ಬರೀ chemical fertilizer ಸಿಂಪಡಣೆ ಮಾಡುವುದರಿಂದ ಆಯಿತು. ಇದರ ಬಗ್ಗೆ ನಿಷೇಧವಿದ್ದರೂ ಕೂಡ ನಾವು ಅನೇಕ ಕಡೆಗಳಲ್ಲಿ ಇದನ್ನು ಮುಂದುವರೆಸುತ್ತಿದ್ದೇವೆ. ಬೆಳೆಗಳಿಗೆ ಇರಬಹುದು ಇತರೆ ಕಡೆಗಳಲ್ಲಿ ಇದನ್ನು ಬಳಕೆ ಮಾಡುತ್ತೇವೆ. ಈ ಬೆಳೆಗಳ ಮೇಲೆ ಅನೇಕ ಮಕ್ಕಳಿಗೆ ಅಂಗ ಊನತ್ವ ಬರುವಂತಹದ್ದು. ನಾವು ಈಗ carbide ಅನ್ನು ಸಿಂಪಡಿಸುತ್ತೇವೆ. ಕಲ್ಲಂಗಡಿಗಳಿಗೆ ಇಂಜೆಕ್ಷನ್ ಕೊಟ್ಟು, ಅದನ್ನು ಕೆಂಪು ಮಾಡಿಸುತ್ತೇವೆ. ಇಂತಹ practices ಅನೇಕ ಕಡೆಗಳಲ್ಲಿ ಮಾಡುತ್ತೇವೆ. ಸಿಂಪಡಣೆ ಮಾಡಿದಂತಹ ಮಾವಿನಹಣ್ಣು, ಟೊಮ್ಯಾಟೋ, ಬಾಳೆಹಣ್ಣುಗಳನ್ನು ತಂದೆ-ತಾಯಿಯವರು ಗೊತ್ತಿಲ್ಲದೇ ತಂದಾಗ, ಸಿಪ್ಪೆ ತೆಗೆಯದೇ ತಿನ್ನುವಂತಹವರು ಇರುತ್ತಾರೆ. ಇಂತಹ ರೋಗಗಳಿಗೆ ಬಲಿಯಾಗಿ ಅಂಗ ಊನತ್ವವನ್ನು ಪಡೆದುಕೊಳ್ಳುತ್ತಾರೆ. ಅವರ ದೈಹಿಕ ಸಾಮರ್ಥ್ಯ ಅದರಿಂದ ಕಡಿಮೆಯಾಗುತ್ತದೆಂಬುದು ಇದು ಕೂಡ ನಮ್ಮ ಗಮನದಲ್ಲಿದೆ. ಸರ್ಕಾರ ಈ ಬಗ್ಗೆ ಕೂಡ ಕ್ರಮವನ್ನು ತೆಗೆದುಕೊಳ್ಳಬೇಕು ಮತ್ತು ಇದರ ಬಗ್ಗೆ ಜಾಗ್ರತೆ ವಹಿಸಬೇಕು. ಇವತ್ತು Child Right commission ಇದೆ. ಇವತ್ತು ಮಕ್ಕಳುಗಳಿಗೆ ತೊಂದರೆಯಾದಾಗ, ತಂದೆ-ತಾಯಿಯವರ ಮೇಲೆ ಅಥವಾ ಕುಟುಂಬದ ಮೇಲೆ ವಿರಸ ಉಂಟಾದಾಗ, ಕುಟುಂಬ ವಿವಾದ ಬಂದಾಗ, ಆ ಮಕ್ಕಳನ್ನು ಯಾರು ಪೋಷಣೆ ಮಾಡಬೇಕು? ಏನು ಮಾಡಬೇಕೆಂಬುದರ ಬಗ್ಗೆ ಅನೇಕ ಬಾರಿ ಚರ್ಚೆಯಾಗುತ್ತದೆ. Child Right commission ಇವತ್ತು ರಾಜ್ಯದಲ್ಲಿ ಕೆಲಸ ಮಾಡುತ್ತದೆ. ಅದರಲ್ಲಿ ಇರುವಂತಹ ಸದಸ್ಯರುಗಳ ಸಮಸ್ಯೆಗಳನ್ನು ನಾನು ಕೇಳಿದ್ದೇನೆ. ಅವರು ಏನು ಹೇಳುತ್ತಾರೆ ಎಂದರೆ ಛೇರ್ಮನ್‌ಗಳಿಗೆ ಮಾತ್ರ ಅಲ್ಲಿ ಇಲ್ಲಿ ಹೋಗುವುದಕ್ಕೆ ಬೇಕಾದಂತಹ ಸವಲತ್ತು ಕೊಡುತ್ತೀರಿ. ಸದಸ್ಯರುಗಳಿಗೆ ಏನು ವ್ಯವಸ್ಥೆಗಳಿಲ್ಲ. ನಮಗೆ ಬರೀ sitting fee ಬಿಟ್ಟರೆ, ಬೇರೆ ಹೋಗಿ ಬರುವಂತಹ ವ್ಯವಸ್ಥೆಗಳಿರುವುದಿಲ್ಲ. ಇಂತಹ ಘಟನೆಗಳು ಎಲ್ಲಿ ನಡೆಯುತ್ತದೆ? ಅಲ್ಲಿ ಹೋಗಿ ಪತ್ತೆ ಹಚ್ಚಿ ಅಂತಹವರನ್ನು ತಂದು, ಎರಡು ಪೋಷಕರುಗಳನ್ನು ಸೇರಿಸಿ, ಆ ಮಕ್ಕಳ ರಕ್ಷಣೆಗೆ ಏನು ಮಾಡಬೇಕು? ತಂದೆ ಹೇಳುತ್ತಾರೆ ನನಗೆ ಕೊಡಿ ಮತ್ತು ತಾಯಿ ಹೇಳುತ್ತಾರೆ ನನಗೆ ಕೊಡಿ. ಎಲ್ಲಿಗೆ

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಕೊಡಬೇಕು? ಯಾರಿಗೆ ಕೊಡಬೇಕು? ಎಷ್ಟು ವಯಸ್ಸಿನವರೆಗೆ ಕೊಡಬೇಕು? ಕೋರ್ಟಿಗೆ ಅವರನ್ನು ಕರೆದುಕೊಂಡು ಹೋಗಲು ಸಾಧ್ಯವಾಗುವುದಿಲ್ಲ. ಆ ವಿವಾದ ಪ್ರಾರಂಭವಾದಾಗಲೇ, ಅದನ್ನು resolve ಮಾಡುವಂತಹದ್ದಕ್ಕೆ ಕ್ರಮ ತೆಗೆದುಕೊಳ್ಳುವುದಕ್ಕೆ Child Right commission ಏನು ಇದೆ, ಅದನ್ನು ಹೆಚ್ಚು ಬಲವಂತ ಮಾಡುವಂತಹದ್ದು ಅವಶ್ಯಕತೆಯಿದೆ. ಅವರಿಗೆ ಹೆಚ್ಚು ಅಧಿಕಾರ ಕೊಡುವಂತಹ ಅವಶ್ಯಕತೆಯಿದೆ ಎಂದು ನಾನು ಹೇಳುವುದನ್ನು ಮಾನ್ಯ ಸಚಿವರ ಗಮನಕ್ಕೆ ತರ ಬಯಸುತ್ತೇನೆ. ಮಕ್ಕಳ ಬಾಲ್ಯವಿವಾಹದ ಬಗ್ಗೆ ನಾವು ಅನೇಕ ಬಾರಿ ಮಕ್ಕಳುಗಳು ಹುಟ್ಟಿದಂತಹ ಸಂದರ್ಭದಲ್ಲಿ ಎಂದರೆ ಗ್ರಾಮೀಣ ಪ್ರದೇಶಗಳಲ್ಲಿ ಮಕ್ಕಳುಗಳು ಹುಟ್ಟಿದಾಗ, ಅವರ ನೋಂದಣಿ ಇರುವುದಿಲ್ಲ. ಇದನ್ನು ಕಡ್ಡಾಯವಾಗಿ ನೋಂದಣಿ ಮಾಡಿ ಎಂದು ನಾವು ಹೇಳುತ್ತೇವೆ. ಗ್ರಾಮೀಣ ಪ್ರದೇಶಗಳಲ್ಲಿ ಮಕ್ಕಳುಗಳು ಹುಟ್ಟಿದಾಗ ಶೇಕಡ 95 ರಷ್ಟು ನೋಂದಣಿ ಇರುವುದಿಲ್ಲ. ಆ ನೋಂದಣಿ ಮಾಡುವುದಕ್ಕೆ ಏನು ವ್ಯವಸ್ಥೆ ಮಾಡುವುದು? ಗ್ರಾಮ ಪಂಚಾಯಿತಿಗಳಲ್ಲಿ ಮತ್ತು ಬೇರೆ ಬೇರೆ ಕಡೆಗಳಲ್ಲಿ ಮಾಡುತ್ತಾರೆ. ಆಸ್ಪತ್ರೆಗಳಲ್ಲಿ ಹೆರಿಗೆಯಾದರೆ, ವೈದ್ಯರುಗಳು ತಕ್ಷಣವೇ ಬರೆದುಕೊಡುವ ಕಾನೂನಿದೆ. ಆ ಕಾನೂನುಗಳು ಸರಿಯಾಗಿ ಪಾಲನೆಯಾಗುತ್ತಿಲ್ಲ. ಇವತ್ತು ರಸ್ತೆಗಳಲ್ಲಿ ಹಾಗೂ ಜಾತ್ರೆಗಳು ನಡೆದರೆ ಅಥವಾ ಹೆಚ್ಚು ಜನಸಂಖ್ಯೆಯಿರುವಂತಹ ಪ್ರದೇಶಗಳಲ್ಲಿ ತಾಯಿಯವರು ಮಕ್ಕಳನ್ನು ಕೈಯಲ್ಲಿ ಹಿಡಿದುಕೊಂಡು ಬಂದು, ಮಕ್ಕಳ ಕೈಯಲ್ಲಿ ಭಿಕ್ಷಾಟನೆಯನ್ನು ಮಾಡಿಸುತ್ತಾರೆ. ಇದೊಂದು ಅಮಾನವೀಯ ಕೃತ್ಯವಾಗುತ್ತಿದೆ. ಇದು ಇಲ್ಲಿ ಮಾತ್ರವಲ್ಲ ಅನೇಕ ಕಡೆಗಳಲ್ಲಿ ನಡೆಯುತ್ತಿದೆ. ದೊಡ್ಡ ಪಟ್ಟದ ಜಾತ್ರೆಗಳು ಎಲ್ಲಿ ನಡೆಯುತ್ತವೆಯೋ, ಅಲ್ಲಿ ಮಗುವನ್ನಿಟ್ಟುಕೊಂಡು ತಾಯಿಯವರು ಭಿಕ್ಷಾಟನೆ ಕೇಳುವಂತಹದ್ದನ್ನು ನಾವು ನೋಡುತ್ತೇವೆ. ಮಕ್ಕಳ ಕೈಯಲ್ಲಿ ಕೊಡುವಂತಹದ್ದು ಮತ್ತು ಆ ಮಕ್ಕಳು ಹೋಗಿ ಭಿಕ್ಷಾಟನೆಯನ್ನು ಮಾಡುವಂತಹದ್ದು ಇದನ್ನು ಮಟ್ಟ ಹಾಕಬೇಕು ಮತ್ತು ನಿಷೇಧಿಸಬೇಕು ಎಂಬ ಕಾನೂನುವಿದ್ದರೂ ಕೂಡ ಸರಿಯಾಗಿ ಪಾಲನೆಗಳು ಆಗುತ್ತಿಲ್ಲ. ಇದರ ಬಗ್ಗೆ ತೀವ್ರವಾದ ಚಿಂತನೆಗಳನ್ನು ಇಲಾಖೆಯವರು ಮಾಡಬೇಕು. ಪೊಲೀಸ್ ಇಲಾಖೆ ಇರಬಹುದು ಮತ್ತು ಅನೇಕ ಇಲಾಖೆಗಳು ಇರಬಹುದು. ಇದರ ಜವಾಬ್ದಾರಿಯನ್ನು ಬೇರೆ ಬೇರೆ ಇಲಾಖೆಯವರು ತೆಗೆದುಕೊಳ್ಳಬಹುದು. ಇವತ್ತು ಮಕ್ಕಳಿಗೆ ರಕ್ಷಣೆ ಕೊಡಬೇಕು. ಇವತ್ತು ಮಕ್ಕಳ ಬಗ್ಗೆ ಹೆಚ್ಚು ಮುಂಜಾಗ್ರತೆಯನ್ನು ವಹಿಸಬೇಕು ಎಂಬುದರ ಬಗ್ಗೆ ಈ ಒಂದು ಚರ್ಚೆಯನ್ನು ತಾವು ಏನು ಅನುವು ಮಾಡಿಕೊಟ್ಟಿದ್ದೀರಿ. ಇದು ದೇಶದ ಇತರ ರಾಜ್ಯಗಳಿಗೂ ಮಾದರಿಯಾಗುತ್ತದೆ. UNICEF (*United Nations International Children's Emergency* Fund) ನವರು ಈ ಬಗ್ಗೆ ಅನೇಕ ಸಂಶೋಧನೆಯನ್ನು ನಡೆಸಿದ್ದಾರೆ. ಮಕ್ಕಳನ್ನು ರಕ್ಷಣೆ ಮಾಡಿ ಆರೋಗ್ಯವಾಗಿ ಬೆಳೆಸುವುದಕ್ಕೆ, ಮಕ್ಕಳಿಗೆ ಪೂರಕವಾದ ಶಿಕ್ಷಣವನ್ನು ಕೊಟ್ಟು, ಈ ದೇಶದ ಒಂದು ಬಲಿಷ್ಠ ಸತ್ಪ್ರಜೆಗಳಾಗಿ ಬಾಳುವುದಕ್ಕೆ ಮತ್ತು ಅವರ ಜೀವನದಲ್ಲಿ ಬೆಳಕನ್ನು ಕೊಡುವುದಕ್ಕೆ ಸಾಧ್ಯವಾಗುವುದರ ಬಗ್ಗೆ ಅನೇಕ ಸೇವಾ ಸಂಸ್ಥೆಗಳು ಕೆಲಸ ಮಾಡುವಾಗ, ಶಾಸಕರುಗಳಾದ ನಾವು ಕೂಡ ಅವರನ್ನು ಬೆಳೆಸುವಂತಹ

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಜವಾಬ್ದಾರಿಯಿದೆ. ಒಳ್ಳೆಯ ಸಮಾಜವನ್ನು ನಿರ್ಮಾಣ ಮಾಡುವುದಕ್ಕೆ ಬೇರೆ ಬೇರೆ ಕಾರಣಗಳು ಜಾಸ್ತಿಯಾಗಿ, ಶಾಸಕರುಗಳಾದ ನಾವೆಲ್ಲರೂ ಕೂಡ ಮಕ್ಕಳ ರಕ್ಷಣೆ ಮತ್ತು ಅವರಿಗೆ ಬೇಕಾದಂತಹ ವ್ಯವಸ್ಥೆಗಳನ್ನು ಮಾಡಿಕೊಡುವುದಕ್ಕೆ ನಿಮ್ಮ ಜೊತೆಯಲ್ಲಿದ್ದೇವೆ ಎಂದು ಹೇಳುವುದಕ್ಕೋಸ್ಕರ ಮಕ್ಕಳಿಗಾಗಿ ಶಾಸಕರ ವೇದಿಕೆಯನ್ನು ನಮ್ಮ ಕರ್ನಾಟಕ ರಾಜ್ಯದಲ್ಲಿ ಅಸ್ತಿತ್ವಕ್ಕೆ ತಂದಿದ್ದೇವೆ. ಇದು ಬೇರೆ ರಾಜ್ಯಗಳಿಗೆ ಇದೊಂದು ಮಾದರಿಯಾಗಿರುವಂತಹ ವೇದಿಕೆಯಾಗಿದೆ. ಈ ಒಂದು ಸಂದರ್ಭದಲ್ಲಿ ಎಲ್ಲಾ ಶಾಸಕರುಗಳಿಗೆ ವಿನಂತಿ ಮಾಡಿಕೋಳ್ಳುವುದೇನೆಂದರೆ, ತಾವೆಲ್ಲರೂ ಇದರ ಸದಸ್ಯರಾಗಬೇಕು. ಎರಡೂ ಮನೆಗಳ ಸದಸ್ಯರುಗಳು ಸೇರಿ ಈ ಒಂದು ವೇದಿಕೆಯನ್ನು ಗಟ್ಟಿಯಾಗಿ ಬೆಳೆಸುವ ಮುಖಾಂತರ ಯಾರು ಯಾರು ಕಾನೂನಿನ ನೆರವು ಮತ್ತು ಬೇರೆ ಬೇರೆ ನೆರವುಗಳು ಮೂಲಕ ಹಾಗೂ ನಮ್ಮ ಶಾಸಕರ ನಿಧಿಗಳ ಮೂಲಕ ಏನಾದರೂ ಕೊಟ್ಟು, ಮಕ್ಕಳಿಗೆ ರಕ್ಷಣೆ ಮಾಡಿ ಒಳ್ಳೆಯ ಮಕ್ಕಳನ್ನಾಗಿ ಬೆಳೆಸುವುದಕ್ಕೆ ಸಾಧ್ಯವಾಗುತ್ತದೆಂಬ ಮಾತನ್ನು ಹೇಳಿ, ನನ್ನ ಧನ್ಯವಾದಗಳನ್ನು ಅರ್ಪಿಸುತ್ತೇನೆ.

**ಶ್ರೀ ಬಸವರಾಜ ಎಸ್. ಹೊರಟ್ಟಿ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಇವತ್ತು ಮಕ್ಕಳ ಹಕ್ಕಿನ ರಕ್ಷಣೆ ಬಗ್ಗೆ ಅನೇಕ ಮಾನ್ಯ ಸದಸ್ಯರುಗಳು ಮಾತನಾಡಿದ್ದಾರೆ. ಅಂಕಿ-ಸಂಖ್ಯೆಗಳನ್ನು ನೆರೆ ರಾಜ್ಯಗಳಲ್ಲಿರುವಂತಹ ಅವರ ಅನುಪಾತ ಮತ್ತು ನಮ್ಮ ರಾಜ್ಯದ ಅನುಪಾತ ಹಾಗೂ ಬಾಲ ಕಾರ್ಮಿಕರ ಬಗ್ಗೆ ಪ್ರತಿಯೊಂದನ್ನು ಮಾತನಾಡಿದ್ದಾರೆ. ಮಾನ್ಯ ಸಭಾಪತಿಯವರೇ, ನಾನು ಹೆಚ್ಚು ಸಮಯವನ್ನು ಮಾತಾನಾಡುವುದಕ್ಕೆ ತೆಗೆದುಕೊಳ್ಳುವುದಿಲ್ಲ. ಇವತ್ತು ಪ್ರಮುಖವಾದುದು ಎಂದರೆ, ನಾವೆಲ್ಲರೂ ಬಹಳ ಗಂಭೀರವಾಗಿ ಚಿಂತನೆಯನ್ನು ಮಾಡಬೇಕಾದಂತಹದ್ದು, ನಮ್ಮಲ್ಲಿ ಅವಿಭಕ್ತ ಕುಟುಂಬವಿಲ್ಲ. ಒಂದು ಕಾಲದಲ್ಲಿ ತಂದೆ, ಚಿಕ್ಕಪ್ಪ, ಇವರೆಲ್ಲರೂ ಕೂಡಿ ಇರುತ್ತಿದ್ದರು. ಆಗಿನ ಕಾಲದಲ್ಲಿ ನೌಕರಿ ಮಾಡುವವರು ಕಡಿಮೆ ಇರುತ್ತಿದ್ದರು. ಯಾರೋ ಒಬ್ಬ ಹೆಣ್ಣು ಮಗಳು ನೌಕರಿ ಮಾಡುವುದಕ್ಕೆ ಹೋಗಿದ್ದಾರೆಂದರೆ ಅದು ಒಂದು ದೊಡ್ಡ ಸುದ್ಧಿಯಾಗುತ್ತಿತ್ತು. ಎಲ್ಲಾ ಗಂಡಸರು ನೌಕರಿ ಮಾಡುವುದಕ್ಕೆ ಹೋದರೆ, ಅವರ ಮಕ್ಕಳನ್ನು ಅವರ ಅಣ್ಣ-ತಮ್ಮಂದಿರೆಲ್ಲಾ ನೋಡಿಕೊಳ್ಳುತ್ತಿದ್ದರು. ಈ ರೀತಿಯಲ್ಲಿ ನಡೆಯುತ್ತಿತ್ತು. ಇವತ್ತು ಏನಾಗಿದೆ ಎಂದು ಹೇಳಿದರೆ ಕುಟುಂಬ ಎಂದರೆ ಗಂಡ-ಹೆಂಡತಿ ಮತ್ತು ಇಬ್ಬರು ಮಕ್ಕಳು. ಅವಿಭಕ್ತ ಕುಟುಂಬಗಳು ಇಲ್ಲ. ಯಾರನ್ನು ನೋಡುವುದಕ್ಕೆ ಆಗುವುದಿಲ್ಲ ಇದು ಒಂದು. ಆಗಿನ ಕಾಲಕ್ಕೆ ಎಲ್ಲರೂ ಮನೆ ಯಜಮಾನನ ಮೇಲೆ ಅಥವಾ ತಂದೆಯ ಮೇಲೆ ಅವಲಂಬಿತರಾಗಿದ್ದರು. ಏಕೆಂದರೆ ದುಡಿಯುವವನು ಒಬ್ಬನೆ ಆಗಿರುತ್ತಿದ್ದ. ಇವತ್ತು ರೈತ ಇರಬಹುದು, ನೌಕರಿ ಮಾಡವವನು ಇರಬಹುದು, ವ್ಯಾಪಾರಸ್ಥರು ಇರಬಹುದು ಪುರುಷರು ಹೊರಗೆ ದುಡಿಯುತ್ತಿದ್ದರು, ಹಿರಿಯರು ಮತ್ತು ಹೆಂಗಳೆಯರು

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮನೆಯಲ್ಲಿದ್ದುಕೊಂಡು ಮಾಡುತ್ತಿದ್ದ ಮಕ್ಕಳ ಲಾಲನೆ-ಪಾಲನೆಯನ್ನು ಆ ಮಕ್ಕಳ ತಂದೆ-ತಾಯಿಗಳು ಸಹ ಗಮನಿಸುತ್ತಿದ್ದರು.

(ಮುಂದು)

***(767) 15.06.2017 5.20 ಹೆಚ್‌ವಿ-ವಿಕೆ***

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ(ಮುಂದುವರೆದದ್ದು)**

ಆದರೆ, ಇತ್ತೀಚಿನ ದಿನಗಳಲ್ಲಿ ಹೆಣ್ಣುಮಕ್ಕಳು ಇಂಜಿನಿಯರ್, ಡಾಕ್ಟರ್, ಐ.ಎ.ಎಸ್., ಐ.ಪಿ.ಎಸ್. ಅಧಿಕಾರಿಗಳಾಗುತ್ತಿದ್ದಾರೆ. ನಗರಪ್ರದೇಶಗಳಲ್ಲಿರುವ ಹೆಣ್ಣುಮಕ್ಕಳಲ್ಲಿ ನೂರಕ್ಕೆ ತೊಂಭತ್ತರಷ್ಟು ಹೆಣ್ಣು ಮಕ್ಕಳು ಸರ್ಕಾರಿ ನೌಕರಿ ಇರಬಹುದು ಅಥವಾ ಖಾಸಗಿ ನೌಕರಿ ಇರಬಹುದು ಒಟ್ಟು ಯಾವುದಾದರೊಂದು ನೌಕರಿಯನ್ನು ಮಾಡುತ್ತಿರುತ್ತಾರೆ. ಈ ರೀತಿ ನೌಕರಿ ಮಾಡುವ ಹೆಣ್ಣುಮಗಳು ನೌಕರಿ ಮಾಡುವ ಗಂಡನ್ನೇ ಹುಡುಕಿ ಮದುವೆಯಾಗುತ್ತಾಳೆ. ಪತಿ-ಪತ್ನಿಯರಿಬ್ಬರು ನೌಕರಿ ಮಾಡುವಾಗ ಮಕ್ಕಳ ಪರಿಸ್ಥಿತಿ ಏನಾಗುತ್ತದೆ ಎನ್ನುವುದನ್ನು ಬಹಳಷ್ಟು ಜನರು ಅರ್ಥ ಮಾಡಿಕೊಳ್ಳುವುದಿಲ್ಲ. ನಾವು ಒಂದು 'ಯುವ ಸೇವಾ ಟ್ರಸ್' ಎಂದು ಪ್ರಾರಂಭ ಮಾಡಿದ್ದೇವೆ. ಅಲ್ಲಿ ಇಂತಹ ಸಮಸ್ಯೆಗಳಿರುವ ಅನೇಕ ಪ್ರಕರಣಗಳು ಬರುತ್ತಿವೆ. ನೌಕರಿಗೆ ಹೋಗುವ ಹೆಣ್ಣುಮಕ್ಕಳು ಸಣ್ಣ ಮಕ್ಕಳನ್ನು ಪ್ಲೇ ಹೋಂಗಳಿಗೆ ಬಿಡುತ್ತಾರೆ. ನಾನು ಶಿಕ್ಷಣ ಮಂತ್ರಿಯಾಗಿ ಕೆಲಸ ಮಾಡಿದ್ದೇನೆ. ಶಿಕ್ಷಣ ವ್ಯವಸ್ಥೆ ಯಾವ ರೀತಿಯಲ್ಲಿದೆ ಎಂದರೆ, ಎರಡೂವರೆ ವರ್ಷದ ಮಕ್ಕಳನ್ನು ಪ್ಲೇ ಹೋಂಗೆ ಕಳುಹಿಸಿಬಿಡುತ್ತಾರೆ. ನಂತರ ಎಲ್.ಕೆ.ಜಿ., ಯು.ಕೆ.ಜಿ. ನಂತರ ಒಂದನೇ ತರಗತಿ ಹೀಗೆ ಶಾಲೆಗಳಲ್ಲಿ ಮತ್ತು ಕಾಲೇಜುಗಳಲ್ಲಿ ಮಕ್ಕಳು ತಮ್ಮ ಹೆಚ್ಚಿನ ಸಮಯವನ್ನು ಕಳೆಯುವುದರಿಂದ ತಂದೆತಾಯಿಗಳ ಪ್ರೀತಿ ವಿಶ್ವಾಸಗಳಿಂದ ವಂಚಿತರಾಗಿರುತ್ತಾರೆ. ವ್ಯವಸ್ಥೆ ಈ ರೀತಿ ಇರುವುದರಿಂದ ಮಕ್ಕಳು ಸ್ವತಂತ್ರವಾಗಿ ಬೆಳೆಯುವ ಮನೋಭಾವವನ್ನು ಹೊಂದಿರುತ್ತಾರೆ. ತಂದೆತಾಯಿ ಇಬ್ಬರು ಕೆಲಸಕ್ಕೆ ಹೋಗುವಂತಹ ಮನೆಗಳಲ್ಲಿ ಮಕ್ಕಳು ಸರಿಯಾಗಿ ಊಟ ಮಾಡಿದ್ದಾರೆಯೇ ಇಲ್ಲವೇ ಎಂದು ನೋಡಿಕೊಳ್ಳುವವರು ಇರುವುದಿಲ್ಲ. ಅವರಿಗೆ ಸರಿಯಾಗಿ ಪೌಷ್ಠಿಕ ಆಹಾರ ದೊರೆಯುವುದಿಲ್ಲ. ಬಹಳಷ್ಟು ಮಕ್ಕಳು ಸದೃಢರಾಗಿರುವುದಿಲ್ಲ. ಈಗ ಮಕ್ಕಳನ್ನು ಜೋಪಾನ ಮಾಡುವ ಕೇಂದ್ರಗಳೇನು ಸ್ಥಾಪನೆಯಾಗಿವೆ, ಅಲ್ಲಿಗೆ ಮಕ್ಕಳನ್ನು ಬಿಡುತ್ತಾರೆ. ಅಲ್ಲಿ ಮಕ್ಕಳಿಗೆ ಹಾಲಿನಲ್ಲಿ ನಿದ್ದೆ ಬರುವ 'ಟೆಸ್ಟನಿಲ್' ಮಾತ್ರೆಯನ್ನು ಹಾಕಿ ಮಲಗಿಸಿಬಿಡುತ್ತಾರೆ. ಆ ಮಕ್ಕಳು ನಿದ್ದೆ ಮಾಡುತ್ತಲೇ ಇರುತ್ತವೆ, ಊಟ ಮಾಡುವುದೇ ಇಲ್ಲ. 'ಟೆಸ್ಟನಿಲ್' ಮಾತ್ರೆಯನ್ನು ದೊಡ್ಡವರು ತೆಗೆದುಕೊಂಡರೇ ಸುಮಾರು 3-4 ಗಂಟೆಗಳ ಕಾಲ ನಿದ್ದೆ ಮಾಡುವಂತಾಗುತ್ತದೆ. ಆದರೆ, ಮಕ್ಕಳ ಜೋಪಾನ ಕೇಂದ್ರಗಳಲ್ಲಿ ಆ ಮಾತ್ರೆಗಳನ್ನು 3-4 ಮಕ್ಕಳಿಗೆ ಹಾಲಿನಲ್ಲಿ ಬೆರೆಸಿ ಕುಡಿಸಿಬಿಡುತ್ತಾರೆ. ಆಗ ಮಕ್ಕಳು ಎಲ್ಲಿ ಕುಳಿತಿದ್ದರೆ ಅಲ್ಲಿಯೇ ಮಲಗಿಬಿಡುತ್ತವೆ. ಈ ಬಗ್ಗೆ ಮಾಧ್ಯಮದಲ್ಲಿ ಫೋಟೋ ಜೊತೆಗೆ ವರದಿ ಪ್ರಕಟವಾಗಿತ್ತು. ಇದು ದಿನನಿತ್ಯ ನಡೆಯುತ್ತಿದೆ. ಇದರ ಬಗ್ಗೆ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಯಾರೂ ಯೋಚನೆ ಮಾಡುತ್ತಿಲ್ಲ. ಸುಮಾರು 34 ವರ್ಷಗಳ ಹಿಂದೆ ಇಂತಹ ಪರಿಸ್ಥಿತಿ ಇರಲಿಲ್ಲ. ಬೆಂಗಳೂರಿನಂತಹ ನಗರದಲ್ಲಿ ಬೆಳಿಗ್ಗೆ 10 ಗಂಟೆಗೆ ಹೆಣ್ಣುಮಕ್ಕಳು ಕಛೇರಿಗಳಲ್ಲಿ ಇರಬೇಕಾಗುತ್ತದೆ. ಮನೆಯನ್ನು ಬೆಳಿಗ್ಗೆ 8 ಗಂಟೆಗೆ ಅಥವಾ 9 ಗಂಟೆಗೆ ಬಿಡಬೇಕಾಗುತ್ತದೆ. ಕೆಲವು ಮನೆಗಳಲ್ಲಿ 8 ಗಂಟೆಗೆ ಮಕ್ಕಳು ಇನ್ನೂ ಮಲಗಿರುತ್ತವೆ. ತಾಯಿ ಕಛೇರಿಗೆ ಹೋಗಬೇಕಾಗಿರುವ ಹಿನ್ನೆಲೆಯಲ್ಲಿ ಆ ಮಕ್ಕಳನ್ನು 6 ಗಂಟೆಗೆ ನಿದ್ದೆಯಿಂದ ಏಳಿಸಬೇಕಾಗುತ್ತದೆ. ಆರ್ಥಿಕತೆಯ ದೃಷ್ಟಿಯಿಂದ ಇತ್ತೀಚಿನ ದಿನಗಳಲ್ಲಿ ಗಂಡು–ಹೆಣ್ಣು ಇಬ್ಬರು ದುಡಿಯುವುದು ಅನಿವಾರ್ಯವಾಗಿದೆ. ಇಬ್ಬರು ಹೊರಗೆ ಹೋಗಿ ದುಡಿಯುವುದರಿಂದ ಆರ್ಥಿಕವಾಗಿ ಒಳ್ಳೆಯ ಸ್ಥಿತಿಯಲ್ಲಿರುತ್ತಾರೆ. ಮನೆ, ಕಾರು ಮುಂತಾದವುಗಳನ್ನು ಖರೀದಿ ಮಾಡುತ್ತಾರೆ. ಆದರೆ, ಮಕ್ಕಳ ಲಾಲನೆ–ಪಾಲನೆ ಮಾಡುವುದರಲ್ಲಿ ದೋಷವಿರುತ್ತದೆ. ಮಕ್ಕಳಿಗೆ ಜ್ವರ ಬಂದರೆ ಅರ್ಧ ದಿನ ರಜೆ ಹಾಕಿ ಡಾಕ್ಟರ್ ಬಳಿಗೆ ಕರೆದುಕೊಂಡು ಹೋಗಿ ನಂತರ ಮರುದಿನ ಮಗುವನ್ನು ಜೋಪಾನ ಕೇಂದ್ರಕ್ಕೆ ಅಥವಾ ಶಾಲೆಗೆ ಕಳುಹಿಸಿ ತಾವು ಕಛೇರಿಗೆ ಬರುತ್ತಾರೆ. ನಮ್ಮಂತಹವರ ಮನೆಗಳಲ್ಲಿ ಮಕ್ಕಳು ಏನು ಓದುತ್ತಿದ್ದಾರೆ ಎನ್ನುವುದು ನಮಗೆ ಗೊತ್ತಿರುವುದಿಲ್ಲ. ಹೆಣ್ಣು ಮಕ್ಕಳೇ ಮಕ್ಕಳ ಕಾಳಜಿಯನ್ನು ವಹಿಸುತ್ತಾರೆ. ನಮ್ಮಲ್ಲಿರುವ ಪದ್ಧತಿಯ ಪ್ರಕಾರ ಮನೆಯ ಮತ್ತು ಮಕ್ಕಳ ಜವಾಬ್ದಾರಿಯನ್ನು ಹೆಣ್ಣುಮಕ್ಕಳೇ ವಹಿಸಿಕೊಳ್ಳಬೇಕು. ಯಾರಾದರು ನಮ್ಮನ್ನು 'ಮಗ ಏನು ಓದುತ್ತಿದ್ದಾನೆ' ಎಂದು ಕೇಳಿದರೆ ನಾವು ನಮ್ಮ ಹೆಂಡತಿಯ ಕಡೆಗೆ ನೋಡುವಂತಹ ಪರಿಸ್ಥಿತಿ ಬಂದಿದೆ. ಇಂತಹ ಅನೇಕ ಉದಾಹರಣೆಗಳು ಇವೆ. ಈ ರೀತಿ ಮಕ್ಕಳ ಬಗ್ಗೆ ಕಾಳಜಿ ವಹಿಸುವುದು ಕಡಿಮೆಯಾಗುತ್ತಿದೆ. ಇಂತಹ ಪರಿಸ್ಥಿತಿಯಲ್ಲಿ ಸರ್ಕಾರ ಇದಕ್ಕೊಂದು ಪರಿಹಾರವನ್ನು ಹುಡುಕಬೇಕಾಗಿದೆ. ಕುಟುಂಬ ವ್ಯವಸ್ಥೆಯಲ್ಲಿ ಸಂಬಂಧಗಳು ಬಹಳ ಮುಖ್ಯವಾಗಿದೆ. ಗಂಡ–ಹೆಂಡತಿ ನೌಕರಿ ಮಾಡುವ ಪ್ರತಿಯೊಂದು ಮನೆಯ ಮಕ್ಕಳ ಬಗ್ಗೆ ಅಧ್ಯಯನ ಮಾಡಿ ನೋಡಿದರೆ ನೂರಕ್ಕೆ ತೊಂಬತ್ತರಷ್ಟು ಮಕ್ಕಳ ಬಗ್ಗೆ ನಿಷ್ಕಾಳಜಿಯನ್ನು ವಹಿಸಲಾಗುತ್ತಿದೆ. ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಮತ್ತು ಬಾಲ ಕಾರ್ಮಿಕ ಇಲಾಖೆಯವರು ಅಥವಾ ಶಿಕ್ಷಣ ಇಲಾಖೆಯವರು ಅಂಕಿ–ಅಂಶಗಳನ್ನು ನೀಡುವಂತಹ ಸಂದರ್ಭದಲ್ಲಿ ಯಾವ ಅಧಿಕಾರಿಯೂ ಅಲ್ಲಿಗೆ ಹೋಗಿ ಏನು ನಡೆಯುತ್ತಿದೆ ಎನ್ನುವುದನ್ನು ಪರಿಶೀಲನೆ ಮಾಡಿರುವುದಿಲ್ಲ.

ಮಾನ್ಯ ಸಭಾಪತಿಯವರೇ, ಕೆಲಸಕ್ಕೆ ಹೋಗುವಂತಹ ತಂದೆತಾಯಿಗಳು ಮನೆಗೆ ಹೋದಾಗ ಮಕ್ಕಳು ಹತ್ತಿರ ಬಂದರೆ ಅವರನ್ನು ಗದರಿಸಿಬಿಡುತ್ತಾರೆ. ಪ್ರೀತಿಯಿಂದ ನೋಡುವುದೇ ಇಲ್ಲ. ಏಕೆಂದರೆ, ಕಛೇರಿಯಲ್ಲಿ ಕೆಲಸದ ಒತ್ತಡದಿಂದ ತಲೆಕೆಡಿಸಿಕೊಂಡು ಹೋಗಿರುತ್ತಾರೆ. ಇಂತಹ ಒತ್ತಡ ಸಣ್ಣ ನೌಕರರಿಂದ ಹಿಡಿದು ದೊಡ್ಡ ದೊಡ್ಡ ಅಧಿಕಾರಿಗಳವರೆಗೂ ಇರುತ್ತದೆ. ಒತ್ತಡದ ನಡುವೆ ಮಕ್ಕಳನ್ನು ಪ್ರೀತಿಯಿಂದ ನೋಡದೇ ಹೋದಾಗ,

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಕ್ಕಳು ತಂದೆ ತಾಯಿಗಳ ಮೇಲೆ ಮುನಿಸಿಕೊಳ್ಳುತ್ತಾರೆ. ಇದರಿಂದಾಗಿ ತಂದೆತಾಯಿಗಳ ಮತ್ತು ಮಕ್ಕಳ ನಡುವಿನ ಕರುಳ ಸಂಬಂಧಗಳು ಹದಗೆಡುತ್ತಿವೆ.

ಸನ್ಮಾನ್ಯ ಸಭಾಪತಿಯವರೇ, ಈಗ ಒಬ್ಬ ರೈತ ತನ್ನ ಮಗ ಅಥವಾ ಮಗಳು ತನ್ನ ಮೂಲ ಉದ್ಯೋಗ ಮಾಡುವುದಕ್ಕೆ ಬಿಡುವುದೇ ಇಲ್ಲ. ಹಿಂದೆ 3-4 ಜನ ಮಕ್ಕಳಿದ್ದರೆ ಒಬ್ಬನನ್ನು ಮೂಲ ಉದ್ಯೋಗಕ್ಕೆ ಹಚ್ಚುತ್ತಿದ್ದರು, ಮತ್ತೊಬ್ಬ ಕೆಲಸಕ್ಕೆ ಹೋಗುತ್ತಿದ್ದ, ಮಗದೊಬ್ಬ ಮತ್ತೊಂದು ಉದ್ಯೋಗವನ್ನು ನೋಡಿಕೊಳ್ಳುತ್ತಿದ್ದ. ಈಗ ಆ ರೀತಿ ಆಗುತ್ತಿಲ್ಲ. ಪ್ರತಿಯೊಬ್ಬರು ಶಿಕ್ಷಣವನ್ನು ಪಡೆಯಬೇಕು ನಂತರ ಉದ್ಯೋಗಕ್ಕೆ ಹೋಗಲೇಬೇಕು ಎನ್ನುವಂತಾಗಿದೆ.

ಸನ್ಮಾನ್ಯ ಸಭಾಪತಿಯವರೇ, ನಾನು ಒಂದು ಉದಾಹರಣೆಯನ್ನು ಹೇಳುವುದಕ್ಕೆ ಬಯಸುತ್ತಿದ್ದೇನೆ. ಬಿಜಾಪುರ ಜಿಲ್ಲೆಯಲ್ಲಿರುವ ಮದ್ದೇಬಿಹಾಳ ತಾಲ್ಲೂಕಿನಲ್ಲಿ ನನಗೆ ಪರಿಚಯವಿರುವ ಒಬ್ಬ ದೇಸಾಯಿಯವರು ಇದ್ದರು. ಅವರಿಗೆ ಸುಮಾರು 48 ಎಕರೆ ಹೊಲ ಇತ್ತು. ಅವರಿಗೆ ಒಬ್ಬನೇ ಮಗ ಇದ್ದ. ಮನೆಯಲ್ಲಿ 8-10 ಜನ ಕೆಲಸಗಾರರು ಇದ್ದರು. ದೇಸಾಯಿಯವರ ಮಗನಿಗೆ ಮದುವೆಯ ವಯಸ್ಸಾದಾಗ ಕನ್ಯೆಯನ್ನು ಹುಡುಕುವುದಕ್ಕೆ ಪ್ರಾರಂಭ ಮಾಡಿದರು. ಆದರೆ, ಆತನಿಗೆ ನೌಕರಿ ಇಲ್ಲವೆನ್ನುವ ಕಾರಣದ ಹಿನ್ನೆಲೆಯಲ್ಲಿ ಯಾರು ಹೆಣ್ಣು ಕೊಡಲಿಲ್ಲ. ಆಗ ನಾನು ಶಿಕ್ಷಣ ಸಚಿವನಾಗಿದ್ದೆ, ಅವರು ನನ್ನ ಬಳಿ ಬಂದು 'ಏನಾದರು ಕೆಲಸ ಕೊಡಿಸಿ' ಎಂದು ಕೇಳಿಕೊಂಡರು. ಆಗ ನಾನು ಲ್ಯಾಬ್ ಅಸಿಸ್ಟೆಂಟ್ ಕೆಲಸವನ್ನು ಕೊಡಿಸಿದೆ. ನಂತರ ಆತನಿಗೆ ಮದುವೆಯಾಯಿತು. ಇಂತಹ ಪರಿಸ್ಥಿತಿ ಇರುವುದರಿಂದ ಕಲಿತವರು ಎಲ್ಲರೂ ನೌಕರಿಯನ್ನು ಮಾಡಲೇಬೇಕಾಗಿದೆ. ಆದಕಾರಣ ಮಕ್ಕಳ ಬಗ್ಗೆ ಸರಿಯಾಗಿ ಲಕ್ಷ್ಯ ಕೊಡುವುದಕ್ಕೆ ಸಾಧ್ಯವಾಗಿಲ್ಲ. ಇದು ಬಹಳ ದೊಡ್ಡ ಸಮಸ್ಯೆಯಾಗಿದೆ.

**(ಈ ಹಂತದಲ್ಲಿ ಮಾನ್ಯ ಸಭಾಪತಿಯವರು ಸಭಾಪೀಠವನ್ನು ಅಲಂಕರಿಸಿದರು.)**

ಈ ದಿನ ನಾವು ಮಕ್ಕಳ ಹಕ್ಕುಗಳ ಬಗ್ಗೆ ಚರ್ಚೆ ಮಾಡುತ್ತಿದ್ದೇವೆ. ಮಕ್ಕಳ ಹಕ್ಕುಗಳಲ್ಲಿ ಎಲ್ಲ ಮಕ್ಕಳನ್ನು ಶಾಲೆಗೆ ಕಳುಹಿಸಬೇಕು, ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಶಾಲೆಗೆ ಕರೆದುಕೊಂಡು ಬರಬೇಕು ಹೀಗೆ ಸುಮಾರು 10-20 ಕಾರ್ಯಕ್ರಮಗಳಿವೆ. ಆದರೆ, ಮುಂದಿನ ಪ್ರಜೆಗಳನ್ನಾಗಿ ಮಕ್ಕಳನ್ನು ಯಾವ ರೀತಿಯಲ್ಲಿ ತಯಾರು ಮಾಡಬೇಕೆನ್ನುವುದರ ನಿಟ್ಟಿನಲ್ಲಿ ಸರ್ಕಾರ ಯಾವುದೇ ಯೋಜನೆಯನ್ನು ಮಾಡಿಲ್ಲ. ಈಗಾಗಲೇ ಮಾತನಾಡಿರುವ ಮಾನ್ಯ ಸದಸ್ಯರುಗಳು ಮಕ್ಕಳ ಹಕ್ಕುಗಳ ಬಗ್ಗೆ ಬಹಳಷ್ಟು ಮಾಹಿತಿಗಳನ್ನು ಕೊಟ್ಟಿದ್ದಾರೆ. ಪುಸ್ತಕದಲ್ಲಿ ಬಹಳಷ್ಟು ಕಾರ್ಯಕ್ರಮಗಳು, ಮಾಹಿತಿಗಳು ಮತ್ತು ಅಂಕಿ-ಅಂಶಗಳಿವೆ. ಆದರೆ, ಪ್ರಾಯೋಗಿಕವಾಗಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನೋಡಿದರೆ ಪರಿಸ್ಥಿತಿಯೇ ಬೇರೆ ಇದೆ. ಪುಸ್ತಕ ಓದಿ ಅಡುಗೆ ಮಾಡುವವರ ಪರಿಸ್ಥಿತಿ ಬಹಳ ಕಷ್ಟಕರವಾಗಿರುತ್ತದೆ. ನಮ್ಮ ಹಳ್ಳಿಗಳಲ್ಲಿ ಸಾಮಾನ್ಯವಾಗಿ ತಾಯಂದಿರೇ ಅಡುಗೆ ಮಾಡುತ್ತಿರುತ್ತಾರೆ. ಆ ರುಚಿ ಪುಸ್ತಕ ನೋಡಿ ಅಡುಗೆ ಮಾಡಿದರೆ ಬರುವುದಿಲ್ಲ. ಆದ್ದರಿಂದ ಪುಸ್ತಕದಲ್ಲಿರುವ ಅಂಕಿ-ಅಂಶಗಳನ್ನು ನೋಡಿ ಪರಿಸ್ಥಿತಿ ಉತ್ತಮವಾಗಿದೆ ಎಂದು ತಿಳಿದುಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ. ನಾವು ಸಣ್ಣ ಮಕ್ಕಳಾಗಿದ್ದಾಗ, ಚೆನ್ನಾಗಿ ಊಟ ಮಾಡುತ್ತಿದ್ದೆವು, ಚೆನ್ನಾಗಿ ಆಟವಾಡುತ್ತಿದ್ದೆವು, ಒಳ್ಳೆಯ ಬಿಸಿಲು, ಗಾಳಿಯನ್ನು ಪಡೆದುಕೊಳ್ಳುತ್ತಿದ್ದೆವು. ಆದರೆ, ಎಷ್ಟೋ ಜನ ಮಕ್ಕಳು ಬಿಸಿಲನ್ನು ನೋಡುವುದೇ ಇಲ್ಲ. ಮಕ್ಕಳನ್ನು ಬಿಸಿಲಿಗೆ ಕರೆದುಕೊಂಡು ಹೋಗುವ ಪದ್ಧತಿಯೇ ಇಲ್ಲದಂತಾಗಿದೆ. ಈ ಎಲ್ಲ ಕಾರಣಗಳಿಂದ ಆ ಮಕ್ಕಳು ಸದೃಢವಾಗುವುದಿಲ್ಲ. ಯಾವಾಗ ಶಾರೀರಿಕವಾಗಿ ಸದೃಢರಾಗುವುದಿಲ್ಲ ಅವರು ಮಾನಸಿಕವಾಗಿ ನೆಮ್ಮದಿಯಿಂದ ಇರುವುದಕ್ಕೆ ಸಾಧ್ಯವಾಗುವುದಿಲ್ಲ. ಇದು ಬಹಳ ಪ್ರಮುಖವಾಗಿರುವ ವಿಚಾರವಾಗಿದೆ. ಗಂಡ-ಹೆಂಡತಿ ಇಬ್ಬರು ಕೆಲಸಕ್ಕೆ ಹೋಗುವಂತಹ ಕುಟುಂಬಗಳಲ್ಲಿರುವ ಮಕ್ಕಳು ಸರಿಯಾದ ರೀತಿಯಲ್ಲಿ ಶಿಕ್ಷಣ ಪಡೆಯುವುದಕ್ಕೆ ಅಥವಾ ಸಮಾಜದೊಂದಿಗೆ ಸಂಪರ್ಕವನ್ನು ಬೆಳೆಸುವುದಕ್ಕೆ ಸಾಧ್ಯವಾಗುವುದಿಲ್ಲ. ಈ ಹಿನ್ನೆಲೆಯಲ್ಲಿ ಸರ್ಕಾರ ಒಂದು ಯೋಜನೆ ಮಾಡಬೇಕಾಗುತ್ತದೆ. ಐ.ಟಿ. ಕಂಪನಿಗಳಲ್ಲಿ ಇಷ್ಟು ಕೆಲಸ ಮಾಡಬೇಕೆಂದು ನಿಗದಿ ಮಾಡಿ ಕೆಲಸ ಕೊಡುತ್ತಾರೆ. ಆ ಕೆಲಸವನ್ನು ಅವರುಗಳು ಮನೆಯಲ್ಲಿಯೇ ಇದ್ದು ಮಾಡಬಹುದಾಗಿದೆ.

(ಮುಂದು)

## (768) 15.06.17 5.30 TCH-VK

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ(ಮುಂದು)**

ಈಗ ಐ.ಟಿ.ಯಲ್ಲಿ ಒಂದು ಕೆಲಸವನ್ನು ಮಾಡಲು ಕೊಡುತ್ತಾರೆ. ನೀವು ಇಷ್ಟು ಕೆಲಸವನ್ನು ಮಾಡಬೇಕಾಗಿರುತ್ತದೆ. ಅವನಿಗೆ ಸಮಯವಿರುವುದಿಲ್ಲ. ಆದರೆ ಕೆಲಸವನ್ನು ಮಾಡಬೇಕು. ಆ ಕೆಲಸ ಏನೆಂದರೆ, ಅವನು ಎಲ್ಲೋ ಮನೆಯಲ್ಲಿ ಕುಳಿತುಕೊಂಡು ಆ ಕೆಲಸವನ್ನು ಮಾಡುತ್ತಾನೆ. ಆದರೆ, ಅದನ್ನೇ ನಮ್ಮಲ್ಲಿ ಮಾಡುವುದಕ್ಕೆ ಆಗುವುದಿಲ್ಲ. ಸರ್ಕಾರದಲ್ಲಿ ಗಂಡ-ಹೆಂಡತಿ ನೌಕರಿ ಮಾಡುವವರಿಗೆ, ಈಗ ಹೆರಿಗೆ ರಜೆ ಎಂದು ಇರುತ್ತದೆ. ಅದನ್ನು ಗಂಡ-ಹೆಂಡತಿ ಇಬ್ಬರಿಗೂ ಕೊಡುತ್ತಾರೆ. ಆ ರೀತಿ ಇಲ್ಲಿ ಇಬ್ಬರು ನೌಕರಿ ಮಾಡುವಂತಹವರಿಗೆ ಎರಡು ಮಕ್ಕಳು ಆಗುವವರೆಗೆ, ಅವರಿಗೇನಾದರೂ ಒಂದು ಯೋಜನೆಯನ್ನು ಮಾಡಿ, ಅವರಿಗೆ ನಿರ್ಬಂಧವನ್ನು ಮಾಡಿ, ಕೆಲಸವನ್ನು ಯಾವ ರೀತಿ ಮಾಡಬೇಕೆಂದು ಹೇಳಬೇಕಾಗುತ್ತದೆ. ಈಗ ನಾನು ಹೇಳುವುದೇನೆಂದರೆ, ಅವರು ಟೆನ್ಷನ್‌ನಲ್ಲಿ ಕಛೇರಿಗೆ ಬಂದಿರುತ್ತಾರೆ. ಬೆಳಿಗ್ಗೆ 10.00 ಗಂಟೆಯಿಂದ ಸಾಯಂಕಾಲ 4.30ರವರೆಗೆ ಸರ್ಕಾರಿ ಕಛೇರಿಗಳಲ್ಲಿ ಕೆಲಸ ಇರುತ್ತದೆ, ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಒಂದು ಟೇಬಲ್ ಮೇಲೆ ಫೈಲ್‌ಗಳು ಸುಮಾರು

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

4–5 ದಿವಸಗಳ ಕಾಲ ಇರುತ್ತವೆ. ಆ ಫೈಲ್‌ಗಳು move ಆಗುವುದಿಲ್ಲ. ನಾವೇ ಎಷ್ಟೋ ಸಲ ಹೇಳಿದರೂ ಸಹ ಆ ಫೈಲ್‌ಗಳು move ಆಗುವುದಿಲ್ಲ. ಯಾರೂ ಅದನ್ನು ಕೇಳುವುದಿಲ್ಲ. ಅದಕ್ಕೆ ಏನಾದರೊಂದು yardstick ಇಲ್ಲ. ಅದರ ಬದಲಿಗೆ ಅವರು ಹೇಗೆ ಕೆಲಸ ಮಾಡಬೇಕು. ಅವರಿಗೆ ಮನೆಯಲ್ಲಿ ಟೆನ್ಷನ್, ಕಛೇರಿಯಲ್ಲಿ ಟೆನ್ಷನ್, ಕಛೇರಿಗೆ ಹೋಗಿ ತಲುಪಲು ಟೆನ್ಷನ್, ಕಛೇರಿಯಿಂದ ಮನೆಗೆ ಬರಲು ಟೆನ್ಷನ್ ಈ ಎಲ್ಲಾ ಟೆನ್ಷನ್‌ಗಳು ಇರುವುದರಿಂದ, ಇದೆಲ್ಲದರ ಪರಿಣಾಮ ಮಕ್ಕಳ ಮೇಲೆ ಆಗುತ್ತದೆ. ಇದನ್ನೆಲ್ಲಾ ಬಹಳ ಮಂದಿ ಅಧ್ಯಯನ ಮಾಡಿಲ್ಲ. ನಾನು ಬಹಳ ಮಂದಿಯನ್ನು practical ಆಗಿ ನೋಡಿದ್ದೇನೆ. ಹಾಗಾಗಿ, ಇವತ್ತಿನ ದಿವಸ ಏನಾಗಿದೆ ಎಂದರೆ ಮಾನ್ಯ ಸಭಾಪತಿಗಳೆ, ಇದಕ್ಕೆ ಒಂದು ಏನಾದರೂ ಯೋಜನೆ ರೂಪಿಸುವ ಬಗ್ಗೆ ಆಲೋಚನೆ ಮಾಡಬೇಕಾಗಿರುತ್ತದೆ. ಗಂಡ–ಹೆಂಡತಿ ಯಾರು ಇಬ್ಬರೂ ನೌಕರಿಯನ್ನು ಮಾಡುತ್ತಾರೆ, ಅಂತಹ ನೌಕರಿ ಮಾಡುವವರಿಗೆ ಯಾವುದಾದರೊಂದು ನಿರ್ಬಂಧ ಮಾಡಿ ಅಥವಾ ಅವರಿಗೆ ಏನಾದರೊಂದು ನಿರ್ದಿಷ್ಟವಾದಂತಹ ಕೆಲಸವನ್ನು ಕೊಟ್ಟು, part time ನೌಕರಿಯೋ ಅಥವಾ ಅವರಿಗೆ ಏನಾದರೊಂದು ವ್ಯವಸ್ಥೆ ಮಾಡಬೇಕಾಗುತ್ತದೆ. ಕೊನೆಪಕ್ಷ ಮಾನ್ಯ ಡಿಸೋಜಾ ಮತ್ತು ಇನ್ನಿತರ ಸದಸ್ಯರುಗಳೆಲ್ಲಾ ಹೇಳಿದ್ದಾರೆ. ಈ ಹೇಳಿದಂತಹ ನ್ಯೂನತೆಗಳನ್ನು ಸ್ವಲ್ಪಮಟ್ಟಿಗಾದರೂ ಕಡಿಮೆ ಮಾಡಬಹುದು ಎನ್ನುವುದು ನನ್ನ ಒಂದು ವೈಯಕ್ತಿಕವಾದ ಅಭಿಪ್ರಾಯವಾಗಿದೆ. ಇದು ಒಂದು. ಮಾನ್ಯ ಸಭಾಪತಿಗಳೆ, ಇನ್ನೊಂದು ಬಹಳ ಮುಖ್ಯವಾದ ವಿಚಾರವೆಂದರೆ, ಯಾವ ಮಗು ತಂದೆ–ತಾಯಿ ಪ್ರೀತಿಯನ್ನು ಪಡೆಯುವುದಿಲ್ಲವೋ ಆ ಮಗು ಬಹಳಷ್ಟು ಕಷ್ಟದಲ್ಲಿ ಇರುತ್ತದೆ. ಆ ಮಗು ಶಾಲೆಗೆ ಹೋಗಬಹುದು, ಚೆನ್ನಾಗಿ ಓದಿ ರ್‍ಯಾಂಕ್ ಅನ್ನು ಪಡೆದುಕೊಳ್ಳಬಹುದು. ಆದರೆ ಮುಂದಿನ ದಿನ–ಮಾನಗಳಲ್ಲಿ ಆ ಮಗು ಸರಿಯಾದ ರೀತಿಯಲ್ಲಿ ಬೆಳೆದಿರುವುದಿಲ್ಲ. ಆ ಮಗು ದೈಹಿಕವಾಗಿ ಸದೃಢವಾಗಿ ಇರುವುದಿಲ್ಲ. ಈಗ ಇಂಜಿನಿಯರ್ ಆಗಿರುವವರನ್ನು ನೋಡುತ್ತಿದ್ದೇವಲ್ಲಾ, ನಾನು ಒಮ್ಮೆ ರೈಲಿನಲ್ಲಿ ಬರುತ್ತಿದ್ದೆ. ತಂದೆ ಮತ್ತು ಮಗ ಇಬ್ಬರೂ ನನ್ನೊಟ್ಟಿಗೆ ಪ್ರಯಾಣ ಮಾಡುತ್ತಿದ್ದರು. ಮಗ ಇಂಜಿನಿಯರ್, ಎಂ.ಟೆಕ್‌ನಲ್ಲಿ ಡಿಸ್ಟಿಂಗ್ಷನ್. ತಂದೆ ಕರ್ನಾಟಕ ಯೂನಿವರ್ಸಿಟಿಯಲ್ಲಿ ಪ್ರೊಫೆಸರ್. ಮಗ ದೈಹಿಕವಾಗಿ ಸದೃಢವಾಗಿಲ್ಲದ ಕಾರಣ ಏಕೆ ಹೀಗೆ ಎಂದು ಕೇಳಿದೆ. ಅದಕ್ಕೆ ಆತನಿಗೆ ಮನೆಯಲ್ಲಿ ಆರೋಗ್ಯ ಸರಿ ಇರುವುದಿಲ್ಲ, ನಿಂತುಕೊಳ್ಳಲೂ ಆಗುವುದಿಲ್ಲ. ಮೂರ್ಛೆ ಬಂದು ತಲೆ ಚಕ್ಕರ್‌ನಿಂದ ಬೀಳುತ್ತಿರುತ್ತಾನೆ. ಚಿಕ್ಕವರಿದ್ದಾಗ ನಾವು ಅವನನ್ನು ಸುಮಾರು ಎರಡೂವರೆ ವರ್ಷದಿಂದ ಬಹಳ ಪ್ರೀತಿಯಿಂದ ಬೆಳೆಸಿದ್ದೇವೆ. ಅವರನ್ನು ಶಾಲೆಗೆ ಕಳುಹಿಸಿದ್ದೇವೆ. ಆಟವಾಡಲು ಕಳಿಹಿಸಿದ್ದೇನೆ. ಒಟ್ಟಾರೆ, ಅವನು ಮನೆಯಲ್ಲಿ ಸರಿಯಾದ ರೀತಿಯಿಂದ ಊಟ ಮಾಡಿರುವುದಿಲ್ಲ. ಮನೆಯಲ್ಲಿ ಊಟ ಮಾಡಿರುವುದು ಶೇ.20ರಷ್ಟು ಮಾತ್ರ. ಅವನು ಶೇ.70–80ರಷ್ಟು ಹೊರಗಡೆಯೇ ಊಟ ಮಾಡಿರುತ್ತಾನೆ. ಅಂದರೆ ಹಾಸ್ಟೆಲ್‌ನಲ್ಲಿ ಅಥವಾ ಹೋಟೆಲ್‌ನಲ್ಲಿ ಊಟ ಮಾಡಿರುತ್ತಾನೆ. ಹೀಗಾದರೆ, ಅವನು ಸದೃಢವಾಗಿ ಹೇಗೆ ಇರುತ್ತಾನೆ ಹೇಳಿ ಸಾರ್ ಎಂದು ಹೇಳಿದರು. ಸದೃಢವಾಗಿರದಂತಹ

ಮಗು ಮಾನಸಿಕವಾಗಿ ಮತ್ತು ನೆಮ್ಮದಿಯಿಂದ ಇರುವುದಕ್ಕೆ ಸಾಧ್ಯವಿಲ್ಲ. ಹಾಗಾಗಿ, ಅದರಿಂದ ತಂದೆ–ತಾಯಿ ಮತ್ತು ಮಕ್ಕಳಿಗೂ ಪರಿಣಾಮ ಬೀರುತ್ತದೆ. ಇದರ ಬಗ್ಗೆ ಸರ್ಕಾರ ಏನಾದರೂ ಯೋಚನೆಯನ್ನು ಮಾಡಬೇಕು ಎನ್ನುವಂತಹ ಮಾತನ್ನು ನಾನು ಹೇಳುತ್ತೇನೆ.

**ಸಭಾಪತಿಯವರು:–** ಮಾನ್ಯ ಬಸವರಾಜ ಹೊರಟ್ಟಿಯವರೆ, ಒಂದು ನಿಮಿಷ. ಸರ್ಕಾರ ಏನಾದರೂ ಮಾಡಬೇಕು ಎನ್ನುವುದರ ಬದಲು, ನೀವು ಹೇಳುತ್ತಿದ್ದ ಹಾಗೆ ನನಗೆ ಅನಿಸಿದ್ದು, ಈ ಸಕಾಲ ಯೋಜನೆ ಇದೆ. ಈ ರೀತಿ ಸಣ್ಣ ವಯಸ್ಸಿನ ಗಂಡ–ಹೆಂಡತಿ ಇಬ್ಬರು ಸರ್ಕಾರಿ ನೌಕರಿಯಲ್ಲಿದ್ದರೆ, ಅವರಿಗೆ ಮಗುವಾದಂತಹ ಸಂದರ್ಭದಲ್ಲಿ, ಆ ಮಕ್ಕಳ ಪಾಲನೆಗಾಗಿ ಅವರಿಗೊಂದು ವಿಶೇಷವಾಗಿ ಏನಾದರೊಂದು ಈ ಸಕಾಲದ ರೀತಿಯಲ್ಲಿ ಮಾಡಬೇಕೆಂದು ಸರ್ಕಾರ ಯೋಚನೆ ಮಾಡಿದರೆ, ಆಗ ಅವರ ಮಕ್ಕಳು ಚೆನ್ನಾಗಿ ಬೆಳೆಯುತ್ತವೆ, ಇಲ್ಲವಾದರೆ ಬಹಳ ಕಷ್ಟ. ಆ ತರಹ ಸರ್ಕಾರಕ್ಕೆ ನೇರವಾಗಿ ಹೇಳಿಬಿಡಿ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಮಾನ್ಯ ಸಭಾಪತಿಯವರೆ, ಅದನ್ನು ಹೇಳುತ್ತಿದ್ದೇನೆ. ಅದಕ್ಕೆ ಸರ್ಕಾರ ಏನು ಮಾಡಬೇಕೆಂದರೆ, ಶ್ರೀಮತಿ ಉಮಾಶ್ರೀಯವರೆ, ತಾವು ಇದರ ಬಗ್ಗೆ ವಿಚಾರ ಮಾಡಬೇಕು. ಇದರ ಬಗ್ಗೆ ಏನಾದರೊಂದು ತೀರ್ಮಾನವನ್ನು ಮಾಡಬೇಕು. Particularly in the cities like ಬೆಂಗಳೂರು ಮತ್ತು ಇನ್ನಿತರೆ ದೊಡ್ಡ ದೊಡ್ಡ ನಗರಗಳಲ್ಲಿ ಇರುವಂತಹವರಿಗೆ ಇದನ್ನು ಮಾಡಬೇಕಾಗಿರುತ್ತದೆ. ಈಗ ಹಳ್ಳಿಗಳಲ್ಲಿ ಗಂಡ–ಹೆಂಡತಿ ಇಬ್ಬರು ಶಿಕ್ಷಕರು ಇರುತ್ತಾರೆ. ಆ ಗಂಡ–ಹೆಂಡತಿ ಶಿಕ್ಷಕರಾಗಿದ್ದಾಗ ಅಲ್ಲೇ ಮನೆ ಇರುತ್ತದೆ. ಆದರೆ ಏನೋ ಒಂದು ತಾಸು ಅಥವಾ ಅರ್ಧ ತಾಸು ಮನೆಗೆ ಹೋಗಿ ಮಕ್ಕಳನ್ನು ಲಾಲನೆ–ಪಾಲನೆ ಮಾಡಬಹುದು. ಪಕ್ಕದ ಶಾಲೆಯಲ್ಲಿ ಅಥವಾ ಅವರ ಶಾಲೆಯಲ್ಲಿ ಇರುವವರಿಗೆ ಇದು ಸರಿ ಹೊಂದುತ್ತದೆ. ಆದರೆ ಯಾರೋ ಒಬ್ಬ ಗುಮಾಸ್ತ ತಾಲ್ಲೂಕಿನಲ್ಲಿ 5–6 ಕಿ.ಲೋ ದೂರ ಇರುವ ತನ್ನ ಕಛೇರಿಗೆ ಹೋಗಿ ಸಾಯಂಕಾಲ ವಾಪಸ್ಸು ಮನೆಗೆ ಬರುತ್ತಾನೆ ಅದು ಪರವಾಗಿಲ್ಲ. ಆದರೆ ಬೆಂಗಳೂರು, ಮೈಸೂರು, ಹುಬ್ಬಳ್ಳಿ–ಧಾರವಾಡ ಮತ್ತು ಬೆಳಗಾವಿಯಂತಹ ದೊಡ್ಡ ದೊಡ್ಡ ನಗರಗಳಲ್ಲಿ ಬಹಳ ದೊಡ್ಡದಾದ ಸಮಸ್ಯೆ ಇದೆ. ಇವತ್ತಿನ ದಿವಸ ನಾವು ಪೇಪರ್‌ನಲ್ಲಿ ಓದುತ್ತೇವೆ. ಏತಕ್ಕೆ ಮಕ್ಕಳು criminal activities ಗೆ ಹೋಗುತ್ತಾರೆಂದರೆ ಇದೂ ಒಂದು ಕಾರಣವಾಗಿದೆ. ಏಕೆಂದರೆ, ಮಕ್ಕಳಿಗೆ ತಂದೆ–ತಾಯಿ ಅಥವಾ ಪೋಷಕರ ಸಂಪರ್ಕವೇ ಇರುವುದಿಲ್ಲ. ಪೋಷಕರು ಬೆಳಿಗ್ಗೆ ಕಛೇರಿಗೆ ಹೊಗಿ, ಸುಮಾರು 5 ಗಂಟೆ ಯಿಂದ 6 ಗಂಟೆಯವರೆಗೆ ವಾಪಸ್ಸು ಮನೆಗೆ ಬರುತ್ತಾರೆ. ಆಯಿತು, ಮಕ್ಕಳನ್ನು ನೀವು ಶಾಲೆಗೆ ಹೋಗಿ ನಾವು ಕಛೇರಿಗೆ ಹೋಗುತ್ತೇವೆ ಎನ್ನುತ್ತಾರೆ. ಆಮೇಲೆ ಆ ತಂದೆ–ತಾಯಿ ಇಬ್ಬರೂ ಮನೆಯಲ್ಲಿ ಸಾಕಷ್ಟು ದುಡ್ಡನ್ನು ಇಟ್ಟಿರುತ್ತಾರೆ. ಅವರು ಆ ದುಡ್ಡನ್ನು ತೆಗೆದುಕೊಂಡು ಏನು ಬೇಕಾದರೂ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡಬಹುದು. ಆದರೆ ಅದನ್ನು ಈ ತಂದೆ-ತಾಯಿ ನೋಡುವುದೇ ಇಲ್ಲ. ಏಕೆಂದರೆ, ಇವರು ಬೆಳಿಗ್ಗೆ ಕಛೇರಿಗೆ ಹೋಗಬೇಕು ಮತ್ತು ಸಂಜೆ ಕಛೇರಿಯಿಂದ ಮನೆಗೆ ವಾಪಸ್ಸು ಬರಬೇಕು. ಈ ಎಲ್ಲಾ ವ್ಯವಸ್ಥೆಯಲ್ಲಿ ನಾವು ತಿಳಿದುಕೊಂಡಂತೆ ಮಾನಸಿಕವಾಗಿ ಇರಬಹುದು ಅಥವಾ ಶಾರೀರಿಕವಾಗಿ ಇರಬಹುದು ಮಕ್ಕಳು ಒಳ್ಳೆಯ ರೀತಿಯಲ್ಲಿ ಬೆಳೆಯುವುದಿಲ್ಲ. ನಾವು ಚಿಕ್ಕವರಿದ್ದಾಗ ಹಳ್ಳಿಯಲ್ಲಿ ಹೇಗೆ ಬೆಳೆದು ಬಂದೆವೋ ಹಾಗೆ ಇವೊತ್ತು ಇಲ್ಲ. ತಾಯಂದಿರು ಮಕ್ಕಳಿಗೆ ಎದೆ ಹಾಲು ಕೊಡುವುದು ಬಹಳ ಮಹತ್ವವಾದುದು. ನನಗೆ ಮೊನ್ನೆ ಒಬ್ಬರು ವೈದ್ಯರು ಹೇಳಿದರು, ಈ ಪ್ರಾಣಿಗಳಿಗೆ ಸಹಿತ, ನಮ್ಮಲ್ಲಿ ಪ್ರಾಣಿಗಳು ಮರಿ ಹಾಕಿದರೆ, ಮೊದಲನೆಯ ಹಾಲು ಅಂದರೆ, ನಮ್ಮ ಕಡೆ ಗಿಂಪದ ಹಾಲು ಎನ್ನುತ್ತಾರೆ. ಆ ಹಾಲನ್ನು ಆ ಪ್ರಾಣಿಗಳು ಎಷ್ಟು ಕುಡಿಯುತ್ತವೆಯೋ ಅಷ್ಟು ರೋಗ ಮುಂದೆ ಬರುವುದಿಲ್ಲ. ಅದೇ ರೀತಿ ಇವತ್ತಿನ ದಿವಸ ತಾಯಿಯೇ ಸದೃಢವಾಗಿಲ್ಲದಿದ್ದರೆ ಮಕ್ಕಳು ಹೇಗೆ ಸದೃಢರಾಗಿರಲು ಸಾಧ್ಯ? ಆ ಪರಿಸ್ಥಿತಿ ನಿರ್ಮಾಣವಾಗಿದೆ. ಈ ವ್ಯವಸ್ಥೆಯಲ್ಲಿ ತಾವು ಹೇಳಿದಂತೆ, ಸರ್ಕಾರ ಏನಾದರೊಂದು ಯೋಜನೆಯನ್ನು ಮಾಡಿ, ಎರಡು ಮಕ್ಕಳನ್ನು ಹಡೆಯುವಂತಹವರಿಗೆ ಸುಮಾರು 30 ವರ್ಷಗಳವರಗೆ, ನೀವು ಸಕಾಲದಂತಹ ಯೋಜನೆಯಡಿ ಸೂಕ್ತ ವ್ಯವಸ್ಥೆ ಮಾಡಿ, ಅವರಿಗೆ ಒಂದು restrict ಮಾಡಿ, ಕೆಲಸದ ಪ್ರಮಾಣವನ್ನು restrict ಮಾಡಿದರೂ ಸಹಿತ, ಆಗ ಅವರು ಕಛೇರಿಯಲ್ಲಿ 10.30 ರಿಂದ 4.30ರವರೆಗೆ ಮಾಡುವಂತಹ ಕೆಲಸವನ್ನು ಸುಮಾರು 2 ತಾಸಿನಲ್ಲಿ ಮಾಡುವಂತಹ ವ್ಯವಸ್ಥೆಯನ್ನು ಮಾಡಿದರೆ, ಏನಾದರು ಒಂದು ದಾರಿ ಬರಬಹುದು ಎನ್ನುವಂತಹ ಮಾತನ್ನು ನಾನು ಇಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಈ ಹಿನ್ನೆಲೆಯಲ್ಲಿ, ಸರ್ಕಾರ ಯೋಚನೆ ಮಾಡಬೇಕು. ಇದಕ್ಕೆ ಬರಿ ಮಕ್ಕಳ ರಕ್ಷಣೆ, ಹಕ್ಕು ಇದನ್ನೆಲ್ಲವನ್ನೂ ನಾವು ನೋಡುತ್ತೇವೆ. ಇನ್ನೊಂದು ಕಡೆ ನೋಡುವುದಾದರೆ, ಈ ಕುಟುಂಬದ ರೀತಿ ಅದೇ ಇರುವುದಿಲ್ಲ. ಇದು ಬಹಳ ದೊಡ್ಡದಾದ ಸಮಸ್ಯೆಯಾಗಿರುತ್ತದೆ. ನಾನು ಹೇಳುವುದೇನೆಂದರೆ, ಎರಡೂವರೆ ವರ್ಷದ ಮಕ್ಕಳನ್ನು ನೀವು ಹೊರಗೆ ಕಳುಹಿಸಿದರೆ, ಅವರಿಗೆ ಮದುವೆ ಮಾಡುವವರೆಗೆ ಹೊರಗೆ ಇರುತ್ತಾರೆ. ಆಗ ಅವರು ಏನು ಅನ್ನುತ್ತಾರೆ, ತಂದೆ-ತಾಯಿ ಕಷ್ಟಪಡುವುದು ಮಕ್ಕಳಿಗೆ ಗೊತ್ತಾಗುವುದಿಲ್ಲ. ಮಕ್ಕಳಿಗೆ ಏನು ತೊಂದರೆಯಾಗುತ್ತಿದೆ ಎನ್ನುವುದು ತಂದೆ-ತಾಯಿಗಳಿಗೆ ಗೊತ್ತಿರುವುದಿಲ್ಲ. ಇದನ್ನು ಪರಿಹಾರ ಮಾಡಲು ಒಂದು ಯೋಜನೆಯನ್ನು ಸರ್ಕಾರದಲ್ಲಿ ರೂಪಿಸಿದರೆ ಅನುಕೂಲವಾಗುತ್ತದೆ. ಈಗ ಏನು ಸರ್ಕಾರಿ ನೌರರರು ಬಂದಿರುತ್ತಾರೆ. ಅವರೆಲ್ಲಾ 100ಕ್ಕೆ 99.9ರಷ್ಟು ಸರಿಯಾಗಿ ಕೆಲಸ ಮಾಡುತ್ತಾರೆಂದು ನಾನೇ ನಂಬಿರುವುದಿಲ್ಲ. ಏನನ್ನು ಬೇಕಾದರೂ ಮಾಡುತ್ತಾರೆ, ಫೈಲ್‌ಗಳನ್ನು ಬೇಕಾದರೆ ನೋಡುತ್ತಾರೆ, ಬೇಡವೆಂದರೆ ಸುಮ್ಮನೆ ಕುಳಿತುಕೊಳ್ಳುತ್ತಾರೆ, ಇಲ್ಲವೆಂದರೆ ಅಡ್ಡಾಡುತ್ತಾರೆ. ಅದರ ಬದಲಿಗೆ ಅವರಿಗೆ restrict ಮಾಡಿ, ತಾವು ಹೇಳಿದಂತೆ ಸಕಾಲದಂತಹ ಒಂದು ಯೋಜನೆಯನ್ನು ಮಾಡಿ, ಅದಕ್ಕೆ ಅವರಿಗೆ ಇಷ್ಟು ಕೆಲಸ ಮಾಡುವಂತೆ ಮಾಡಬೇಕು. ಅದಕ್ಕೆ ಅವರಿಗೆ ಇಷ್ಟು ಸಮಯವನ್ನು ಕೊಡುವಂತೆ ಮಾಡಿದರೆ ಅದು ಒಳ್ಳಯದಾಗುತ್ತದೆಂದು ನನ್ನ ಅಭಿಪ್ರಾಯವನ್ನು ಹೇಳಿ, ನನ್ನ ಕೊನೆಯ ಮಾತನ್ನು

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮುಗಿಸುತ್ತೇನೆ ಮಾನ್ಯ ಸಭಾಪತಿಗಳೆ. ಇದೆಲ್ಲಾ ಮಕ್ಕಳಲ್ಲಿ ಹೇಗೆ ಬರುತ್ತಿದೆಯೆಂದರೆ, ಇವತ್ತಿನ ದಿವಸ ವೃದ್ಧಾಶ್ರಮಗಳು ಜಾಸ್ತಿ ಆಗುತ್ತವೆಂದು ನಾವು ಹೇಳುತ್ತೇವೆ. ಈ ವೃದ್ಧಾಶ್ರಮಗಳು ಬಹಳ ಕಡೆಗಳಲ್ಲಿ ತಲೆ ಎತ್ತುತ್ತಿವೆ, ನಾವು ಅದನ್ನು ನೋಡುತ್ತಿದ್ದೇವೆ. ಅವುಗಳು ಏತಕ್ಕೆ ಹೆಚ್ಚಾಗುತ್ತವೆಂದು ಒಂದು ಉದಾಹರಣೆಯನ್ನು ಕೊಡುತ್ತೇನೆ. ಇಲ್ಲೇ ಬೆಂಗಳೂರಿನಲ್ಲಿ ನನ್ನ ಆಪ್ತ ಸ್ನೇಹಿತನ ಒಬ್ಬ ಮಗ ಇದ್ದಾನೆ. ಅವರು ಅವನ ಮಗನನ್ನು ಎರಡೂವರೆ ವರ್ಷವಿದ್ದಾಗ residential schoolಗೆ ಕಳುಹಿಸಿದರು. ಅದಾದ ನಂತರ ಪಿ.ಯು.ಸಿ. ಗೆ ಅಳಿಕೆಗೆ ಅಥವಾ ಎಲ್ಲೋ ಬೇರೆ ಕಡೆಗೆ ಕಳುಹಿಸಿದರು. ಅಲ್ಲಿಂದ ಬಿ.ಇ. ಮಾಡಲು ಬೇರೆಬೇರೆ ಕಡೆಗೆ ಕಳುಹಿಸಿದರು. ಅದೆಲ್ಲಾ ಆಯಿತು. ಅದಾದ ನಂತರ ಎಂ.ಟೆಕ್. ಆಯಿತು. ಮೆಡಿಕಲ್ ಎಲ್ಲಾ ಆದವು. ಮದುವೆ ಮಾಡಿಕೊಳ್ಳಲು ಇಚ್ಛೆಪಟ್ಟರು. ಈತನೂ ಇಂಜಿನಿಯರ್ ಮತ್ತು ಆಕೆಯೂ ಇಂಜಿನಿಯರ್ ಇರುತ್ತಾರೆ. ನಂತರ ಮದುವೆ ಮಾಡಿಕೊಂಡರು. ಮದುವೆ ಮಾಡಿಕೊಂಡ ನಂತರ ನೌಕರಿ ಮಾಡಲು ಪ್ರಾರಂಭ ಮಾಡಿದರು. ಆಗ ಅವರ ತಂದೆಯವರು ನಮ್ಮ ಬಾಗಲಕೋಟೆ ಜಿಲ್ಲೆಯ ಬಿಳಗಿ ತಾಲ್ಲೂಕಿನಲ್ಲಿ ಮುಳುಗಡೆಯಾದಾಗ, ಅವರ ಸ್ವತ್ತಿಗೆ, ಸುಮಾರು 6 ಕೋಟಿ ರೂಪಾಯಿಗಳು ಪರಿಹಾರ ಬಂದಿತ್ತು. ಅವರಿಗೆ ಒಬ್ಬನೇ ಮಗ. ಅವನ ಹೆಸರು ಸಂದೀಪ್. ಅವರು, ಮಗನಿಗೆ ನಾಲ್ಕು ಬೆಡ್‌ರೂಂ ಇರುವ ಎರಡು ಕಟ್ಟಡಗಳು ಸೇರಿದಂತೆ ಒಟ್ಟು 4 ಕೋಟಿ ರೂಪಾಯಿ ಕೊಟ್ಟರು. ಅವನು ಮನೆಯಲ್ಲಿ ವಾಸವಾಗಿದ್ದ. ತಂದೆ–ತಾಯಿಗೆ ಒಬ್ಬನೇ ಮಗ ಮತ್ತು ಒಬ್ಬಳೇ ಮಗಳು ಇರುತ್ತಾಳೆ. ಆಕೆ ಬೇರೆ ಕಡೆ ವಾಸವಾಗಿದ್ದರು. ಆಗ ನಮ್ಮಂತಹವರು ಅವರ ಮಗನಿಗೆ, ನೀನು ಬೆಂಗಳೂರಿನಂತಹ ನಗರದಲ್ಲಿ ಒಂದು ದೊಡ್ಡ ಮನೆಯನ್ನು ತೆಗೆದುಕೊಂಡು ಆರಾಮವಾಗಿ ಇರು ಎಂದಾಗ, ಅವರು ಬೆಂಗಳೂರಿಗೆ ಬಂದು ಸುಮಾರು ಒಂದು ತಿಂಗಳು ವಾಸವಾಗಿದ್ದರು. ಇದು ನಡೆದ ಘಟನೆಯಾಗಿದೆ ಸರ್. ಅವನ ತಂದೆ ನನ್ನ ಆಪ್ತ ಸ್ನೇಹಿತರಾಗಿರುತ್ತಾರೆ. ಒಂದು ದಿವಸ ಅವರ ಮಗ ಅವರ ಅಮ್ಮನಿಗೆ "ಅಮ್ಮ ನಾವು ಬೇರೆ ಕಡೆ ಮನೆ ಮಾಡಿಕೊಂಡು ವಾಸವಿರುತ್ತೇವೆ ಎಂದು" ಹೇಳುತ್ತಾನೆ. ಬೇರೆ ಕಡೆ ಏತಕ್ಕೆ ಮನೆ ಮಾಡುತ್ತೀಯಾ ಎಂದು ಕೇಳಲಾಗಿ, ಇಲ್ಲಾ ಅಮ್ಮ ಸ್ವಲ್ಪ ಅಡ್ಜೆಸ್ಟ್ ಆಗುವುದಿಲ್ಲ. ಅವನ ತಂದೆ ಮನೆಗೆ ಬರುತ್ತಾನೆ. ಆತನಿಗೆ ಆ ವಿಷಯ ಗೊತ್ತಾಗುತ್ತದೆ. ಅವನ ತಂದೆ ಅದನ್ನು ಕೇಳಿ ಶಾಕ್ ಆಗುತ್ತಾನೆ. ಆತನಿಗೆ ಇಷ್ಟೆಲ್ಲಾ ತ್ಯಾಗ ಮಾಡಿ ಮಾಡಿದ್ದಕ್ಕೆ ಅವನ ತಂದೆ ಶಾಕ್ ಆದರು. ಅವರೂ ಸಹ ಮಗನನ್ನು ಏಕಪ್ಪಾ ಬೇರೆ ಕಡೆ ಮನೆ ಮಾಡುತ್ತೀಯಾ ಎಂದು ಕೇಳಿದರು. ಅದಕ್ಕೂ ಕೂಡ ನನ್ನ ಹೆಂಡತಿ ಜೊತೆ ಅಡ್ಜೆಸ್ಟ್ ಆಗುವುದಿಲ್ಲ ಅದಕ್ಕೆ ಬೇರೆ ಕಡೆ ಮನೆ ಮಾಡುತ್ತೇನೆ ಎಂದನು. ಅವನ ತಾಯಿ ಹಳ್ಳಿಗಾಡಿನಿಂದ ಬಂದವರು. ಮಗನ ಹೆಂಡತಿ ನೌಕರಿ ಮಾಡಲು ಹೋಗುತ್ತಿದ್ದಾಳೆ. ಮಗನ ಹೆಂಡತಿಗೆ, ನೀನು ನೌಕರಿಗೆ ಹೋಗುವಾಗ, ನೋಡಮ್ಮ ನೀನು ಕಾರನ್ನು ಸರಿಯಾಗಿ ನೋಡಿಕೊಂಡು ಓಡಿಸು, ಆ ಕಡೆ, ಈ ಕಡೆ ನೋಡಿಕೊಂಡು ಹೋಗಬೇಡ. ನೀನು ಪ್ಯಾಂಟ್ ಅನ್ನು ಹಾಕಿಕೊಂಡು ಹೋಗಬೇಡ. ಸೀರೆ ಉಟ್ಟುಕೊಂಡು ಹೋಗು ಬಹಳ ಚೆನ್ನಾಗಿ ಕಾಣುತ್ತೀಯ ಎಂದು ಈ ತರಹ ಎಲ್ಲಾ ಹಳ್ಳಿಯ ಹೆಣ್ಣು ಮಕ್ಕಳು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹೇಳುವುದು ಸಹಜ. ಅದನ್ನು ಬೇರೆ ರೀತಿಯಿಂದ ತಿಳಿದುಕೊಂಡು, ಹೊಂದಾಣಿಕೆ ಆಗಲಿಲ್ಲ. ಕೊನೆಗೆ ಎಲ್ಲರೂ ಬೇರೆ ಕಡೆ ಮನೆ ಮಾಡಿ ಹೋಗಬೇಡಿ ಎಂದು ಹೇಳಿದರೂ ಅದು ಪ್ರಯೋಜನವಾಗಲಿಲ್ಲ. ಕೊನೆಗೆ ನಾನು ಹೋದೆನು. ನಾವೆಲ್ಲಾ ಅವರಿಗೆ ಓದಲು ಸೀಟ್ ಅನ್ನು ಕೊಡಿಸಿದ್ದೆವು ಅದಕ್ಕೆ ಹೋದೆವು. ನಾವೆಲ್ಲರೂ ಸ್ವಲ್ಪ ಅವನಿಗೆ ಬೈದು ಬುದ್ಧಿ ಹೇಳಿದೆವು. ಅದಕ್ಕೆ ಆ ಸಂದೀಪ್ ಎನ್ನುವ ಹುಡುಗ ನಮಗೆ ಏನನ್ನು ಹೇಳಿದನೆಂದರೆ, ಸರ್ಕಾರ, ನೀವು ಹೇಳುತ್ತೀರಿ ಅದಕ್ಕೆ ನಾವು ಒಪ್ಪುತ್ತೇವೆ. ಈ ಮುಪ್ಪಿನ ಕಾಲಕ್ಕೆ ಈ ರೀತಿ ತಂದೆ-ತಾಯಿಗೆ ಮಾಡಿದರೆ ಹೇಗಪ್ಪಾ ಎಂದಾಗ, ಆ ಹುಡುಗ ಹೇಳುತ್ತಾನೆ, ನೀವು ಹೇಳಿದರೆ ಒಪ್ಪುತ್ತೇವೆ. ನಾನು ಚಿಕ್ಕವನಿದ್ದಾಗ residential ಶಾಲೆಯಲ್ಲಿ ಇಟ್ಟಿದ್ದರೋ ಇಲ್ಲವೋ, ಅವಾಗೆಲ್ಲಾ ಅವರಿಗೆ ಬಹಳಷ್ಟು ನೌಕರಿ ಇತ್ತು. ನನ್ನನ್ನು ರೆಸಿಡೆನ್ಸಿಯಲ್ ಶಾಲೆಯಲ್ಲಿ ಓದಿಸಿ, ನನ್ನ ಖರ್ಚಿಗೆ ಹಣ ಕೊಟ್ಟು ಹಾಸ್ಟೆಲ್‌ನಲ್ಲಿ ಇಟ್ಟಿದ್ದರು. ನನ್ನನ್ನು ಬೆಳೆಸಿ ದೊಡ್ಡವರನ್ನಾಗಿ ಮಾಡಿದರು. ಅದಕ್ಕೆ ನಾನು ನನ್ನ ತಂದೆ-ತಾಯಿಗಳಿಗೆ ವಂದನೆಗಳನ್ನು ಹೇಳುತ್ತೇನೆ. ಇದು ನಡೆದಿರುವ ಘಟನೆ ಮಾನ್ಯ ಸಭಾಪತಿಗಳೆ. ಅಲ್ಲಪ್ಪಾ, ನೀನು ಮನೆಯನ್ನು ತೆಗೆದುಕೊಂಡು ಈಗ ನೀನು ಹೊರಗೆ ಹೋಗುತ್ತೇನೆ ಎಂದರೆ ಏನು ಅರ್ಥ ಎಂದು ನಾನು ಕೇಳಿದೆ. ಅದೇ ಅಡ್ಜಸ್ಟ್ ಆಗುವುದಿಲ್ಲವೆಂದನು. ಅದಕ್ಕೆ ನಾನು ಅವನ ಹೆಂಡತಿಯನ್ನು ಕರೆ ಎಂದೆನು. ಆಕೆಯನ್ನು ನಾನು ಕೇಳಿದೆನು, ಏನಮ್ಮಾ ನಿಮ್ಮ ಮನೆಯಲ್ಲಿ ನಿಮ್ಮ ಅಪ್ಪ, ಅಮ್ಮ ಬಂದರೆ ನೀನು ಹೀಗೆ ಮಾಡುತ್ತೀಯಾ ಎಂದು ಕೇಳಿದೆ. ಏನು ಮಾಡುವುದು ಸರ್, ಹೀಗೆಲ್ಲಾ ಇದೆ ಎಂದು ಹೇಳಿದರು. ಕೊನೆಗೆ ನಾನು ಬಹಳ ಜೋರು ಮಾಡಿದಾಗ, ಆತನು ಏನು ಹೇಳಿದನೆಂದರೆ, ಸರ್ ತಪ್ಪೇನಿದೆ ನಮ್ಮದು. ಇಲ್ಲೇ ನೆಲಮಂಗಲದ ಬಳಿ ಒಂದು ಹೈಕ್ಲಾಸ್ ವೃದ್ಧಾಶ್ರಮವಿದೆ. ನಾವು ತಿಂಗಳಿಗೆ 25,000/- ರೂಪಾಯಿಗಳು ಕೊಟ್ಟು ಏರ್‌ಕಂಡೀಷನ್ ಇರುವ ವೃದ್ಧಾಶ್ರಮದಲ್ಲಿ ಇಡುತ್ತೇವೆ ಅದರಲ್ಲಿ ತಪ್ಪೇನಿದೆ. ಅದರ ಪ್ರಕಾರ ಹೇಳಿ ಎಂದನು ನಮಗೆ. ನಾವು ಚಿಕ್ಕವರಿದ್ದಾಗ ನಮ್ಮನ್ನು ರೆಸಿಡೆನ್ಸಿಯಲ್ ಶಾಲೆಯಲ್ಲಿ ಇರಿಸಿದ್ದರು. ಈಗ ನಾವು ದೊಡ್ಡವರಾದ ಮೇಲೆ ಅವರನ್ನು ಇಡುತ್ತಿದ್ದೇವೆ. ನಾವೇನು ತಪ್ಪು ಮಾಡಿದ್ದೇವೆ, ಅವರ ಒಳ್ಳೆಯದಕ್ಕೆ ಹೇಳುತ್ತಿದ್ದೇವೆ. ಅವರು ನಮ್ಮ ಮಾತು ಕೇಳಲಿಲ್ಲವೆಂದರೆ ನಾವೇನು ಮಾಡೋಣ ಎಂದು ಹೇಳಿದ. ಸರ್, ಅವನ ತಂದೆ-ತಾಯಿ ಕಣ್ಣೀರು ಹಾಕಿ ವಾಪಸ್ಸು ಹೋದರು. ಇದು ಇವತ್ತಿನ ಶಿಕ್ಷಣದ ವ್ಯವಸ್ಥೆಯಾಗಿದೆ. ಅದರ ಜೊತೆಗೆ ಮಕ್ಕಳಲ್ಲಿ ಬದಲಾವಣೆ ಆಗುವಂತಹದ್ದು. ಇವೆಲ್ಲಾ ಮೊದಲಿನಿಂದಲೂ ಬರುವಂಥದ್ದು. ನಾನು ಸುಮ್ಮನೆ ಅದನ್ನು ನಿಮ್ಮಗೆ ಹೇಳಿದೆ. ಹೀಗಾಗಿ, ಯಾವ ಮಕ್ಕಳು ತಂದೆ-ತಾಯಿಗಳ ಪ್ರೀತಿಯನ್ನು ನೋಡುವುದಿಲ್ಲವೋ ಆ ಮಕ್ಕಳು ಹೀಗೆ ಆಗುತ್ತಾರೆ. ಅದಕ್ಕಾಗಿಯೇ ಸರ್ಕಾರ ಎಲ್ಲವನ್ನೂ ಮಾಡುವುದಕ್ಕಾಗುವುದಿಲ್ಲ. ಸಮಾಜವೇ ಇದನ್ನು ಮಾಡಬೇಕಾಗುತ್ತದೆ. ಅದಕ್ಕೆ ದುಡಿಯುತ್ತಿರುವಂತಹ ಗಂಡ-ಹೆಂಡತಿ ಇಬ್ಬರೂ ನೌಕರಿ ಮಾಡುವಂತಹವರಿಗೆ ಏನಾದರೊಂದು ವ್ಯವಸ್ಥೆ ಮಾಡಲು ಸರ್ಕಾರ ಚಿಂತನೆಯನ್ನು ಮಾಡಬೇಕು.

**(ಮುಂದು)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

*(769) 15.6.2017 5.40 ಪಿಕೆ:ಬಿಎನ್‌ಎಸ್*

**ಶ್ರೀ ಬಸವರಾಜ ಎಸ್.ಹೊರಟ್ಟಿ (ಮುಂದುವರೆದಿದೆ)**

ಇದಕ್ಕೆ ಸಂಬಂಧಪಟ್ಟಂತೆ ಮಾರ್ಗದರ್ಶನ ಮಾಡುವವರು ಅನೇಕ ಜನ ಇದ್ದಾರೆ. ಕೊಟ್ಟ ಅಂಕಿ-ಸಂಖ್ಯೆಗಳನ್ನು ಒಪ್ಪಿಕೊಳ್ಳುತ್ತೇನೆ. ಕುಟುಂಬದ ಇಂತಹ ಹಿನ್ನೆಲೆ ಕಾರಣದಿಂದಲೇ ಈ ಅಂಕಿ-ಸಂಖ್ಯೆ ಇಷ್ಟೊಂದು ಆಗಿದೆ. ಈ ನಿಟ್ಟಿನಲ್ಲಿ ಸರ್ಕಾರ ಏನಾದರೂ ಒಂದು ಯೋಜನೆ ಮಾಡಬೇಕೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಕ್ಯಾಪ್ಟನ್ ಗಣೇಶ್‌ಕಾರ್ಣಿಕ್(ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಗಳೆ, ಮಾನ್ಯ ಐವನ್ ಡಿ'ಸೋಜಾರವರು ಹೇಳಿದ ಹಾಗೆ, ಎರಡು ವರ್ಷದ ಹಿಂದೆ, ಮಕ್ಕಳ ಹಕ್ಕು, ಮಕ್ಕಳ ರಕ್ಷಣೆ, ಮಕ್ಕಳ ಶಿಕ್ಷಣ, ಮಕ್ಕಳ ಆರೋಗ್ಯದ ಬಗ್ಗೆ ಮಾತನಾಡಲು ತಾವು ಅರ್ಧ ದಿನ ಅವಕಾಶ ಕೊಟ್ಟಿದ್ದಿರಿ. ಆದರೆ ಅದು ಮುಂದುವರೆದು ಮೂರೂವರೆ ದಿನಗಳ ಕಾಲ ಚರ್ಚೆಯಾಯಿತು. ಇದರಿಂದ, ಇಡೀ ರಾಜ್ಯದಲ್ಲಿ ಶಾಸಕಾಂಗಕ್ಕೆ ಮಕ್ಕಳ ಬಗ್ಗೆ ವಿಶೇಷವಾದ ಕಾಳಜಿ ಇದೆ ಎನ್ನುವ ಮಹತ್ವದ ಸಂದೇಶವನ್ನು ಕಳುಹಿಸುವುದಕ್ಕೆ ಸಾಧ್ಯವಾಯಿತು. 2008 ರಿಂದ ಕರ್ನಾಟಕದಲ್ಲಿ, ವಿಧಾನಮಂಡಲದ ಸದಸ್ಯರು ಮಕ್ಕಳಿಗಾಗಿ ಒಂದು ವೇದಿಕೆ ನಿರ್ಮಾಣ ಮಾಡಿದುದರ ಬಗ್ಗೆ ಮಾನ್ಯ ಸದಸ್ಯರು ಉಲ್ಲೇಖ ಮಾಡಿದರು. ಇದರ ಜೊತೆಗೆ, Child Rights Trust, Karnataka Child Rights Observatory, ಇವು ಮಕ್ಕಳಿಗೋಸ್ಕರ ಆಗಿರುವಂತಹ N.G.O.s ಆಗಿವೆ. ಇವು ಮತ್ತು The United Nations Children's Fund (UNICEF) ಒಟ್ಟಾಗಿ, ಕರ್ನಾಟಕದಲ್ಲಿ ಮಕ್ಕಳ ಹಕ್ಕಿನ ರಕ್ಷಣೆಗಾಗಿ ಏನೆಲ್ಲಾ ನಡೆಯುತ್ತಿದೆಯೋ ಅದಕ್ಕೆ ಇನ್ನಷ್ಟು ಪೂರಕವಾಗಿ ಕೆಲಸ ಮಾಡುತ್ತಿದ್ದಾರೆ. ಮಾನ್ಯ ಮಂತ್ರಿಗಳು ಇವತ್ತೂ ಕೂಡ ಸದನದಲ್ಲಿ ಆಸೀನರಾಗಿದ್ದಾರೆ. ಕಳೆದ ಬಾರಿ ಚರ್ಚೆ ಮಾಡಿದಾಗಲೂ ಮೂರುವರೆ ದಿನಗಳ ಕಾಲ ಪೂರ್ತಿ ಇದ್ದು, ಸುಮಾರು ನಾಲ್ಕೂವರೆ ಗಂಟೆಗಳ ಕಾಲ ಉತ್ತರ ಕೊಟ್ಟಿದ್ದಿರಿ ಎನ್ನುವುದನ್ನು ನಾನು ಈ ಸಂದರ್ಭದಲ್ಲಿ ನೆನೆಪು ಮಾಡಿಕೊಳ್ಳುತ್ತೇನೆ. ಅಂದರೆ, ರಾಜ್ಯದಲ್ಲಿ ಒಬ್ಬ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವೆ ಮಕ್ಕಳ ಹಕ್ಕಿನ ಬಗ್ಗೆ, ಮಕ್ಕಳ ರಕ್ಷಣೆ, ಆರೋಗ್ಯ, ಶಿಕ್ಷಣದ ಬಗ್ಗೆ ಇಷ್ಟೊಂದು ಆಸಕ್ತಿ ವಹಿಸುತ್ತಾರೆ ಎನ್ನುವುದಾದರೆ ಖಂಡಿತವಾಗಿ ನಮ್ಮಲ್ಲಿರುವ ಕೊರತೆಗಳನ್ನು, ನ್ಯೂನತೆಗಳನ್ನು ಮುಂದಿನ ದಿನಗಳಲ್ಲಿ ತುಂಬಿಕೊಳ್ಳುವುದಕ್ಕೆ ಸಾಧ್ಯವಿದೆ ಎಂದು ಹೇಳಬೇಕಾಗುತ್ತದೆ. ನಾವು ಇಲ್ಲಿ ಮಾತನಾಡುವ ಸಂಗತಿ ಎಲ್ಲೋ ಒಂದು ಕಡೆ ಮಕ್ಕಳ ಹಕ್ಕಿನ ರಕ್ಷಣೆ ಬಗ್ಗೆ ಸಮಾಜದಲ್ಲಿ ಜಾಗೃತಿ ಉಂಟು ಮಾಡುವುದಕ್ಕೆ ಸಹಾಯವಾಗುತ್ತದೆ. ನಮ್ಮ ಹಿರಿಯ ಸದಸ್ಯರಾದ ಮಾನ್ಯ ಹೊರಟ್ಟಿಯವರು ಬದಲಾಗುತ್ತಿರುವ ಕೌಟುಂಬಿಕ ಪರಿಸ್ಥಿತಿ, ಅದರಿಂದ ಮಕ್ಕಳ ಮೇಲೆ ಆಗುತ್ತಿರುವ ಮಾನಸಿಕ ಮತ್ತು ಇತರ ಸಂಗತಿಗಳಲ್ಲಿ ಆಗುತ್ತಿರುವ ಪರಿಣಾಮಗಳು ಪ್ರತಿಬಿಂಬಿತವಾಗುತ್ತಿರುವ ಬಗ್ಗೆ ಉಲ್ಲೇಖ ಮಾಡಿದರು.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಪ್ರಾಯಶಃ ಬದಲಾಗುತ್ತಿರುವ ಕೌಟುಂಬಿಕ ಪದ್ಧತಿಗಳ ಬಗ್ಗೆ ನಾವು ಹೇಳುವುದಕ್ಕಾಗುವುದಿಲ್ಲ. ಏಕೆಂದರೆ ಅದೊಂದು ಕಾಲದ ವಾಸ್ತವ ಎಂದು ನಾನು ಭಾವಿಸುತ್ತೇನೆ. ಅನೇಕ ಬಾರಿ, ನಮ್ಮ ದೇಶ ತರುಣ ರಾಷ್ಟ್ರ, ಇಲ್ಲಿ 0-35 ವಯಸ್ಸಿನ ಜನರ ಸಂಖ್ಯೆ ಪ್ರಪಂಚದ ಬೇರೆ ದೇಶಗಳಿಗೆ ಹೋಲಿಸಿದರೆ ಜಾಸ್ತಿಯಾಗಿದೆ, ಕರ್ನಾಟಕದಲ್ಲಿ 0-18 ವಯಸ್ಸಿನ ಮಕ್ಕಳ ಪ್ರಮಾಣ ಶೇಕಡ 34ರಷ್ಟಿದೆ ಎಂದು ಹೇಳುತ್ತೇವೆ. ಒಟ್ಟು ನಮ್ಮ ಎಲ್ಲಾ ಕಾರ್ಯಕ್ರಮಗಳ ಮೂಲಭೂತ ದೃಷ್ಟಿಕೋನ ಏನು ಎಂದರೆ, ಉತ್ತಮ ಗುಣಮಟ್ಟದ ಮಾನವ ಸಂಪನ್ಮೂಲದ ನಿರ್ಮಾಣ. ಒಂದು ದೇಶದ ಅಭಿವೃದ್ಧಿಯನ್ನು ನಾವು ಹೇಗೆ ನೋಡಬೇಕು ಎಂದರೆ, ಯಾವ ಗುಣಮಟ್ಟದ ಮಾನವ ಸಂಪನ್ಮೂಲ ನಿರ್ಮಾಣ ಮಾಡುತ್ತಿದ್ದೇವೆ, ಅದಕ್ಕಾಗಿ ಎಷ್ಟು ಹಣ ವಿನಿಯೋಗ ಮಾಡುತ್ತಿದ್ದೇವೆ, ಅದಕ್ಕಾಗಿ ಏನು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದೇವೆ ಎಂಬುದನ್ನು ನೋಡಬೇಕಾಗುತ್ತದೆ. ಆ ದೃಷ್ಟಿಯಲ್ಲಿ ನೋಡಿದಾಗ, ಮಕ್ಕಳಿಗಾಗಿ ಮತ್ತು ಮಕ್ಕಳ ಆರೋಗ್ಯವಂತ ವ್ಯಕ್ತಿತ್ವದ ಬೆಳವಣಿಗೆಗಾಗಿ ಇನ್ನೂ ಹೆಚ್ಚು ಸಮಯವನ್ನು, ಇನ್ನೂ ಹೆಚ್ಚು ಯೋಜನೆಗಳನ್ನು, ಇನ್ನೂ ಹೆಚ್ಚು ಅನುದಾನ ಕೊಡಬೇಕು ಎನ್ನುವ ವಾಸ್ತವ ನಮ್ಮ ಕಣ್ಣಮುಂದೆ ಬರುತ್ತದೆ. ಮಾನ್ಯ ಸಭಾಪತಿಗಳೆ, 0-18ರ ವಯಸ್ಸಿನವರನ್ನು ಮಕ್ಕಳು ಎಂದು ಹೇಳುತ್ತಾರೆ. ಆದರೆ ಅದಕ್ಕೆ ಇನ್ನೂ 9 ತಿಂಗಳು ಸೇರಿಸಿಕೊಳ್ಳಬೇಕು. ಏಕೆಂದರೆ, ಮಗು ತಾಯಿಯ ಗರ್ಭದಲ್ಲಿರುವಾಗ ತಾಯಿಗೆ ಯಾವ ಪೌಷ್ಟಿಕಾಂಶದ ಆಹಾರ ಕೊಡುತ್ತೇವೆಯೋ ಅದು ಮಗುವಿನ ಬೆಳವಣಿಗೆಯಲ್ಲಿ ಪಾತ್ರ ವಹಿಸುತ್ತದೆ. ಆಕೆಗೆ ಕೊಡುವ ಆಹಾರದ ಬಗ್ಗೆ, ಆಕೆ ಇರುವ ಪರಿಸರದ ಬಗ್ಗೆ, ಆಕೆಯ ರಕ್ಷಣೆ ಬಗ್ಗೆ ಮಾತನಾಡಲು ಪ್ರಾರಂಭ ಮಾಡಿದರೆ ಮಕ್ಕಳ ಆರೋಗ್ಯ ಪ್ರಾರಂಭದಿಂದಲೇ ಉತ್ತಮವಾಗಿ ನೋಡಿಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ. ಸುಸ್ಥಿರ ಅಭಿವೃದ್ಧಿ ಎಂಬ ದೃಷ್ಟಿಕೋನವನ್ನು ಇಟ್ಟುಕೊಂಡು, 2015 ರಿಂದ 2030ರವರೆಗೆ ವಿಶ್ವಸಂಸ್ಥೆಯ 193 ರಾಷ್ಟ್ರಗಳು ಒಟ್ಟು ಸೇರಿಕೊಂಡು, ಮುಂದಿನ 15 ವರ್ಷಗಳಲ್ಲಿ ಎಲ್ಲಾ ಸದಸ್ಯ ರಾಷ್ಟ್ರಗಳು ಸರ್ವಾಂಗೀಣ ಅಭಿವೃದ್ಧಿಗಾಗಿ ಯಾವ ಮಾನದಂಡಗಳನ್ನು ಹಮ್ಮಿಕೊಳ್ಳಬೇಕು, ಆ ಸುಸ್ಥಿರ ಅಭಿವೃದ್ಧಿಯ ಮಾನದಂಡಗಳು ಯಾವುದು ಎಂದು ಯೋಚನೆ ಮಾಡಿ, 17 ಗುರಿಗಳನ್ನು ಹಾಕಿಕೊಂಡು, ಅದಕ್ಕೆ 117 ಬೇಕಾದ ಸೂಚ್ಯಂಕಗಳನ್ನು ಇಟ್ಟುಕೊಂಡು ಆಲೋಚನೆ ಮಾಡಿದ್ದಾರೆ. ನಮ್ಮ ದೇಶ ವಿಶ್ವಸಂಸ್ಥೆಯ ಈ ಒಡಂಬಡಿಕೆಗೆ ಸಹಿ ಹಾಕಿದೆ. ನೀತಿ ಆಯೋಗ ಈ 17 ಸುಸ್ಥಿರ ಅಭಿವೃದ್ಧಿ ಗುರಿಗಳನ್ನು ತನ್ನ ಮುಂದಿನ 15 ವರ್ಷಗಳ ಯೋಜನೆಗೆ ಅಳವಡಿಸಿಕೊಂಡಿದೆ. ಅದರಲ್ಲಿ ಯಾವ ಗುರಿಗಳು ಇವೆ? ಆ ಗುರಿಗಳಲ್ಲಿ ಪ್ರಮುಖವಾಗಿ, ಮಾನವ ಅಭಿವೃದ್ಧಿ, ಆರ್ಥಿಕ ಅಭಿವೃದ್ಧಿ, ಪರಿಸರ ಅಭಿವೃದ್ಧಿ ಮತ್ತು ಒಳ್ಳೆಯ ಆಡಳಿತ ಎಂಬುದಿವೆ. ಈ ಪ್ರಮುಖ ನಾಲ್ಕು ಅಂಗಗಳ ಕೆಳಗೆ 17 ಗುರಿಗಳು ಇವೆ. ಬಡತನದಿಂದ ಮುಕ್ತಿ, ಹಸಿವಿನಿಂದ ಮುಕ್ತಿ, ಉತ್ತಮ ಆರೋಗ್ಯ ಮತ್ತು ಯೋಗಕ್ಷೇಮ, ಗುಣಮಟ್ಟದ ಶಿಕ್ಷಣ, ಲಿಂಗ ಸಮಾನತೆ ಇವು ಮಾನವ ಅಭಿವೃದ್ಧಿಯ ಸೂಚ್ಯಂಕಗಳು. ಅದೇರೀತಿ ಆರ್ಥಿಕ ಅಭಿವೃದ್ಧಿಯ ಸೂಚ್ಯಂಕಗಳಲ್ಲಿ, ಗೌರವಯುತವಾದ ಕೆಲಸ ಮತ್ತು ಆರ್ಥಿಕ ಬೆಳವಣಿಗೆ, ಉದ್ಯಮ ಆವಿಷ್ಕಾರ ಮತ್ತು ಮೂಲ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸೌಕರ್ಯ, ಸುಸ್ಥಿರ ನಗರಗಳು ಮತ್ತು ಸಮುದಾಯಗಳು, ಸುಸ್ಥಿರ ಬಳಕೆ ಮತ್ತು ಉತ್ಪಾದನೆ ಇವು ಬರುತ್ತವೆ. ಇದೇರೀತಿ, ಪರಿಸರ ಅಭಿವೃದ್ಧಿಗೆ ಸಂಬಂಧಪಟ್ಟ ಅಂಶಗಳು, ಒಳ್ಳೆಯ ಆಡಳಿತಕ್ಕೆ ಸಂಬಂಧಪಟ್ಟ ಅಂಶಗಳನ್ನೂ ಹಾಕಿಕೊಂಡಿದ್ದಾರೆ. ಈ 17 ಗುರಿಗಳಲ್ಲಿ 8 ಗುರಿಗಳು ಮಕ್ಕಳ ಮೇಲೆ ನೇರವಾಗಿ ಪರಿಣಾಮ ಬೀರುವ ಗುರಿಗಳಾಗಿವೆ. ಆ 8 ಗುರಿಗಳನ್ನು ನಾವು ಅತ್ಯಂತ ಗಂಭೀರವಾಗಿ ಪರಿಗಣಿಸಿ ನಮ್ಮ ಯೋಜನೆಗಳಲ್ಲಿ ಅಳವಡಿಸಿಕೊಂಡರೆ ಖಂಡಿತವಾಗಿ ಕರ್ನಾಟಕ ರಾಷ್ಟ್ರಮಟ್ಟದಲ್ಲಿ ಮತ್ತು ವಿಶ್ವ ಮಟ್ಟದಲ್ಲಿ ಉಲ್ಲೇಖಿತ ಸೂಚ್ಯಂಕಗಳ ಗುರಿಯನ್ನು ತಲುಪಬಹುದಾಗಿದೆ. ಮಕ್ಕಳಿಗಾಗಿ ಪ್ರತ್ಯೇಕ ಗುರಿಗಳನ್ನು ಹಾಕಿಕೊಂಡಿಲ್ಲ, ಆದರೆ ಮಕ್ಕಳಿಗೆ ಮತ್ತು ಮಕ್ಕಳ ಅಭಿವೃದ್ಧಿಗೆ ಪೂರಕವಾದ ಗುರಿಗಳನ್ನು ಮತ್ತು ಸಾಧಿಸಬೇಕಾದ ಲಕ್ಷ್ಯಗಳನ್ನು ಗುರುತಿಸಿಕೊಂಡು ನಾವು ಅನೇಕ ಇಲಾಖೆಗಳಲ್ಲಿ ಅಂದರೆ, ಮಕ್ಕಳ ಮತ್ತು ಮಹಿಳಾ ಕಲ್ಯಾಣ ಇಲಾಖೆ, ಶಿಕ್ಷಣ ಇಲಾಖೆ, ಪೊಲೀಸ್ ಇಲಾಖೆ, ಸಮಾಜ ಕಲ್ಯಾಣ ಇಲಾಖೆಗಳಲ್ಲಿ ಮಕ್ಕಳಿಗಾಗಿ ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದೇವೆ. ಆದರೆ ಆ ಕಾರ್ಯಕ್ರಮಗಳಲ್ಲಿ ಈ ಒಂದು ವಿಶೇಷ ಸಂಗತಿಗಳನ್ನು ಅಳವಡಿಸದೇ ಇದ್ದರೆ ಖಂಡಿತವಾಗಿ ನಾವು ನಿರೀಕ್ಷಿತ ಗುರಿ ಮುಟ್ಟುವುದಕ್ಕೆ ಸಾಧ್ಯವಿಲ್ಲ. ಸಂವಿಧಾನದ ವಿಧಿ 14 ರ ಪ್ರಕಾರ ಮಕ್ಕಳಿಗೆ ಸಮಾನತೆಯ ಹಕ್ಕು ಸಿಕ್ಕಿದೆ. ಸಂವಿಧಾನದ ವಿಧಿ 15(1) ಮತ್ತು (3)ರ ಪ್ರಕಾರ ಯಾವುದೇ ತಾರತಮ್ಯಕ್ಕೆ ಅವಕಾಶಗಳಿಲ್ಲ. ಸಂವಿಧಾನದ ವಿಧಿ 21ರ ಪ್ರಕಾರ ಜೀವನ ಮತ್ತು ವ್ಯಕ್ತಿತ್ವ ರಕ್ಷಣೆ ಕೊಟ್ಟಿದ್ದೇವೆ. ವಿಧಿ 21(ಎ) ಪ್ರಕಾರ ಉಚಿತ ಮತ್ತು ಕಡ್ಡಾಯ ಶಿಕ್ಷಣದ ಹಕ್ಕು ಮಕ್ಕಳಿಗೆ ಸಿಕ್ಕಿದೆ. ವಿಧಿ 24ರ ಪ್ರಕಾರ ಬಾಲ ಕಾರ್ಮಿಕ ಪದ್ಧತಿ ನಿಷೇಧವಾಗಿದೆ. ವಿಧಿ 39ರ ಪ್ರಕಾರ ಸರ್ಕಾರ ಇದನ್ನು ಅನುಷ್ಠಾನಗೊಳಿಸುವುದಕ್ಕೆ ಏನು ನೀತಿ-ಸಿದ್ಧಾಂತಗಳನ್ನು ರೂಪಿಸಬೇಕೋ ಆ ಅಧಿಕಾರವನ್ನು ಸರ್ಕಾರಕ್ಕೆ ಕೊಟ್ಟಿದೆ. ವಿಧಿ 45ರ ಪ್ರಕಾರ ಆರಂಭಿಕ ಬಾಲ್ಯದಲ್ಲಿ ಕಾಳಜಿ ಮತ್ತು ಶೈಕ್ಷಣಿಕ ಅವಕಾಶ ಒದಗಿಸುವಂತಹ ಜವಾಬ್ದಾರಿಯನ್ನು ಸಂವಿಧಾನ ಸರ್ಕಾರಕ್ಕೆ ಗೊತ್ತು ಮಾಡಿದೆ. ಪರಿಚ್ಛೇದ 1 ರಲ್ಲಿ, 18 ವರ್ಷದ ಒಳಗಿರುವವರೆಲ್ಲರೂ ಮಕ್ಕಳು ಎಂಬುದನ್ನು ಸಂವಿಧಾನ ಹೇಳುತ್ತದೆ. ಪರಿಚ್ಛೇದ 2ರಲ್ಲಿ, ತಾರತಮ್ಯ ರಹಿತ ನಿಯಮದ ಬಗ್ಗೆ ಹೇಳಬೇಕಾದರೆ, ತಂದೆ-ತಾಯಿಯರ ಅಥವಾ ಪೋಷಕರ ಸ್ಥಾನ-ಮಾನ, ಸಿದ್ಧಾಂತ-ನಿಲುವುಗಳು, ಚಟುವಟಿಕೆಗಳು ಮತ್ತು ನಂಬಿಕೆಗಳು ಏನೇ ಇದ್ದರೂ ಅವುಗಳ ಆಧಾರದ ಮೇಲೆ ಮಕ್ಕಳಿಗೆ ಶಿಕ್ಷೆ ಅಥವಾ ತಾರತಮ್ಯ ಮಾಡುವಂತಿಲ್ಲ. ಹಾಗೇನಾದರೂ ಆದಲ್ಲಿ ಸೂಕ್ತ ಕ್ರಮ ಕೈಗೊಂಡು ಸರ್ಕಾರ ಮಕ್ಕಳನ್ನು ರಕ್ಷಿಸಬೇಕೆಂದು ಸಂವಿಧಾನ ಹೇಳುತ್ತದೆ. ಪರಿಚ್ಛೇದ 3ರಲ್ಲಿ, ಮಗುವಿನ ಹಿತದೃಷ್ಟಿಯ ನಿಯಮ ಎಂದು ಹಾಕಿಕೊಂಡಿದ್ದಾರೆ. ಅದು, ಸಾರ್ವಜನಿಕ ಇಲ್ಲವೇ ಸಮಾಜ ಕಲ್ಯಾಣ ಸಂಸ್ಥೆಗಳು, ನ್ಯಾಯಾಲಯಗಳು, ಆಡಳಿತ ಮಂಡಳಿಗಳು, ಪ್ರಾಧಿಕಾರಗಳು ಅಥವಾ ಶಾಸಕಾಂಗ, ಹೀಗೆ ಯಾವುದೇ ಆಗಲಿ ಮಕ್ಕಳನ್ನು ಕುರಿತಾಗಿ ತೆಗೆದುಕೊಳ್ಳುವ ಯಾವುದೇ ನಿರ್ಧಾರ, ಕಾರ್ಯಕ್ರಮಗಳನ್ನು ಕೈಗೊಳ್ಳಬೇಕಾದರೆ ಅದರಲ್ಲಿ ಮಕ್ಕಳ ಹಿತದೃಷ್ಟಿಗೆ ಮೊದಲ ಆದ್ಯತೆ ನೀಡಬೇಕು ಎಂಬ ಬದ್ಧತೆಯನ್ನು ಸಂವಿಧಾನ ಹೇಳುತ್ತದೆ. ಪರಿಚ್ಛೇದ 6ರಲ್ಲಿ, ಮಕ್ಕಳು

ಜೀವಿಸುವ ಹಾಗೂ ಅಭಿವೃದ್ಧಿ ಹೊಂದುವ ಹಕ್ಕಿನ ನಿಯಮವನ್ನು ಉಲ್ಲೇಖ ಮಾಡುತ್ತಾರೆ. ಅದರಲ್ಲಿ ಮೊದಲನೆಯದು, ಪ್ರತಿಯೊಂದು ಮಗುವಿನಲ್ಲೂ ಅಂತರ್ಗತವಾಗಿರುವ ಬದುಕುವ ಹಕ್ಕನ್ನು ಸರ್ಕಾರಗಳು ಗುರ್ತಿಸಬೇಕು ಎಂದು ಹೇಳುತ್ತದೆ. ಎರಡನೆ ನಿಯಮ, ಮಕ್ಕಳ ಜೀವನಕ್ಕೆ ಮತ್ತು ಅಭಿವೃದ್ಧಿಗೆ ಸಾಧ್ಯವಿರುವ ಎಲ್ಲಾ ಗರಿಷ್ಠ ಕ್ರಮಗಳನ್ನು ಸರ್ಕಾರಗಳು ಖಾತರಿಪಡಿಸಲೇಬೇಕು ಎಂದು ಹೇಳುತ್ತದೆ. ಪರಿಚ್ಛೇದ 12ರಲ್ಲಿ ಮಕ್ಕಳು ಭಾಗವಹಿಸುವ ನಿಯಮ ಇದೆ. ತಮ್ಮ ಅಭಿಪ್ರಾಯಗಳನ್ನು ರೂಪಿಸಿಕೊಳ್ಳಲು ಸಮರ್ಥರಾದ ಮಕ್ಕಳಿಗೆ ತಮ್ಮ ಮೇಲೆ ಪರಿಣಾಮ ಬೀರಬಹುದಾದ ವಿಚಾರಗಳನ್ನು ಕುರಿತು ಯಾವುದೇ ಅಡ್ಡಿ-ಆತಂಕಗಳು ಇಲ್ಲದ ವಾತಾವರಣದಲ್ಲಿ ಸ್ವತಂತ್ರವಾಗಿ ವ್ಯಕ್ತಪಡಿಸಲು ಅವಕಾಶಗಳನ್ನು ಸರ್ಕಾರಗಳು ಖಾತರಿಪಡಿಸಬೇಕು. ಮಕ್ಕಳ ಮನಸ್ಸು, ವಯಸ್ಸು ಮತ್ತು ಪ್ರಬುದ್ಧತೆಯನ್ನು ಗಮನಿಸಿ ಅವರ ಅಭಿಪ್ರಾಯಗಳಿಗೆ ಸೂಕ್ತ ಪ್ರಾಮುಖ್ಯತೆ ನೀಡಬೇಕು ಎಂದು ಹೇಳುತ್ತದೆ. ಅನುಚ್ಛೇದ 19, ದುರುಪಯೋಗ ಮತ್ತು ನಿರ್ಲಕ್ಷ್ಯದ ವಿರುದ್ಧ ರಕ್ಷಣೆಯ ನಿಯಮವನ್ನು ಹೇಳುತ್ತದೆ. ಪೋಷಕರು ಮತ್ತು ಮಗುವಿನ ಕಾಳಜಿಯ ಜವಾಬ್ದಾರಿ ಹೊಂದಿರುವ ಯಾರಿಂದಲೇ ಆಗಲಿ, ಆಗುವ ಎಲ್ಲಾ ರೀತಿಯ ದುರುಪಯೋಗ, ಹಿಂಸೆಗಳಿಂದ ಮಕ್ಕಳನ್ನು ಸರ್ಕಾರ ರಕ್ಷಿಸಿ, ತೊಂದರೆಗೆ ಒಳಗಾದ ಮಕ್ಕಳ ಚಿಕಿತ್ಸೆ ಮತ್ತು ರಕ್ಷಣೆಗಾಗಿ ಸೂಕ್ತ ರೀತಿಯ ಸಾಮಾಜಿಕ ಕಾರ್ಯಕ್ರಮಗಳನ್ನು ಏರ್ಪಡಿಸಬೇಕು ಎಂದು ಹೇಳುತ್ತದೆ.

(ಮುಂದು)

*(770) 15-06-2017 MM-BNS 5-50*

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್(ಮುಂದು)**

ಇದನ್ನೇಕೆ ಉಲ್ಲೇಖ ಮಾಡಿದೆ ಎಂದರೆ, ಇಂದು ಮಾತನಾಡುತ್ತಿರುವ ಸಂಗತಿಗಳಾದ ಮಕ್ಕಳ ಶೋಷಣೆ, ಬಾಲಕಾರ್ಮಿಕರು, ಲಿಂಗ ಸಮಾನತೆ ಇಲ್ಲದೇ ಇರಬಹುದು, ಪೌಷ್ಠಿಕ ಆಹಾರ, ಶಿಕ್ಷಣ ಇರಬಹುದು ಈ ಎಲ್ಲಾ ಸಂಗತಿಗಳಲ್ಲಿ ಸಂವಿಧಾನ ನಮಗೆ ಕೊಟ್ಟಂತಹ ಜವಾಬ್ದಾರಿಯಿಂದ ನಾವೆಲ್ಲರೂ ನುಣುಚಿಕೊಳ್ಳುತ್ತಿದ್ದೇವೆ. ಅದನ್ನು ಪ್ರಾಮಾಣಿಕವಾಗಿ ಅನುಷ್ಠಾನಗೊಳಿಸುತ್ತಿಲ್ಲ. ಹಿಂದಿನ ಬಾರಿ ಇದರ ಬಗ್ಗೆ ಮೂರುವರೆ ದಿವಸಗಳ ಕಾಲ ಚರ್ಚೆ ಮಾಡಿದ್ದರು ಎಲ್ಲೋ ಒಂದು ಕಡೆ ಸರ್ಕಾರವಾಗಿ ನಾವು ವಿಫಲರಾಗುತ್ತಿದ್ದೇವೆ. ಮಕ್ಕಳಿಗೆ ಸಂವಿಧಾನ ಎಲ್ಲಾ ಹಕ್ಕುಗಳನ್ನು ಕೊಟ್ಟಿದ್ದರು ಕೂಡ, ಇಷ್ಟೊಂದು ವಿಸ್ತಾರವಾಗಿ ಅದರಲ್ಲಿ ಪ್ರಚುರಪಡಿಸಿದ್ದರು ಕೂಡ ಎಲ್ಲೋ ಒಂದು ಕಡೆ ನಮ್ಮ ಕಾರ್ಯಕ್ರಮಗಳಲ್ಲಿ, ನಮ್ಮ ಯೋಜನೆಗಳಲ್ಲಿ ಅದನ್ನು ಅನುಷ್ಠಾನಗೊಳಿಸುವಲ್ಲಿ ನಾವೆಲ್ಲ ವಿಫಲರಾಗುತ್ತಿದ್ದೇವೆ ಎಂಬ ಕೊರಗು ನನ್ನನ್ನು ಕಾಡುತ್ತಿದೆ. ನಾನು ಬಹಳ ಹೊತ್ತು ಮಾತನಾಡುವುದಿಲ್ಲ ಏಕೆಂದರೆ, ಉಲ್ಲೇಖವು ಮತ್ತೆ repetition ಆಗುತ್ತದೆ. ವಿಶೇಷ ಮಕ್ಕಳ ಬಗ್ಗೆ ಮಾತನಾಡಬೇಕಾದರೆ, ಮಾನ್ಯ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಐವನ್ ಡಿ'ಸೋಜಾ ರವರು ಉಲ್ಲೇಖ ಮಾಡಿದರು. ನಮ್ಮಲ್ಲಿರುವ ವಿಶೇಷ ಮಕ್ಕಳ ಸಂಖ್ಯೆ, ಅದಕ್ಕೆ ಬೇಕಾಗಿರುವ ಶಾಲೆಗಳು, ವಿಶೇಷ ಮಕ್ಕಳಿಗೆ ತರಬೇತಿ ಕೊಡುವುದಕ್ಕೆ ಬೇಕಾಗಿರುವ ಶಿಕ್ಷಕರು, ಈ ಸಂಖ್ಯೆಗಳನ್ನು ಗಮನಿಸಿದರೆ, ಒಂದಕ್ಕೂ ಎಲ್ಲಿಯೂ ಸಮಾನತೆ ಇಲ್ಲ. ಈ ರಾಜ್ಯದಲ್ಲಿ ವಿಶೇಷ ಮಕ್ಕಳಿಗೆ, ಸಮಸ್ಯೆ ಇರುವ ಮಕ್ಕಳಿಗೆ 1,500 ರೂಪಾಯಿಗಳನ್ನು ಮಾಸಿಕ Stipend ಕೊಡುತ್ತೇವೆ ಆ ಹಣವನ್ನು ಪಡೆಯಬೇಕಾದರೆ ಅವರು ಆದಾಯ ಪ್ರಮಾಣಪತ್ರವನ್ನು ಕೊಡಬೇಕು. ವಿಶೇಷ ಮಕ್ಕಳಿಗೆ ಅವರ ಸಮಸ್ಯೆಯೇ ಒಂದು ದೊಡ್ಡ ಸಮಸ್ಯೆ. ಆದರೆ ಅದನ್ನು ಕೊಡಬೇಕಾದರೆ ಅದು ಕೆಲವರಿಗೆ ಮಾತ್ರ ಎಂದು ಕಾನೂನೊಂದನ್ನು ಮಾಡಿದ್ದಾರೆ.

ನಾನು ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳ ತಾಲ್ಲೂಕಿನಲ್ಲಿರುವ ಒಂದು ಶಾಲೆಗೆ ಹೋಗಿದ್ದನು. ಯಾವುದೋ ಒಂದು ಕಾರ್ಯಕ್ರಮದಡಿ ಆ ವಿಶೇಷ ಮಕ್ಕಳಿಗಾಗಿ ಒಂದು ಶೌಚಾಲಯವನ್ನು ನಿರ್ಮಾಣ ಮಾಡಬೇಕೆಂಬ ಒಂದು ಕಾನೂನನ್ನು ಮಾಡಿದ್ದರು ಎಂದು ಕಾಣುತ್ತದೆ. ಅದಕ್ಕಾಗಿ ಒಂದು ಶೌಚಾಲಯವನ್ನು ನಿರ್ಮಾಣ ಮಾಡಿದ್ದಾರೆ. ನಾನು ಆ ಶಾಲೆಯ ಮುಖ್ಯೋಪಾಧ್ಯಾಯರನ್ನು ಕರೆದು ಒಂದು ವಿನಂತಿ ಮಾಡಿದೆನು. ದಯವಿಟ್ಟು ನನಗೆ ನೀವು ಈ ಶೌಚಾಲಯಕ್ಕೆ ವಿಶೇಷ ಮಕ್ಕಳು ಹೇಗೆ ಹೋಗುತ್ತಾರೆ ಎಂಬುದನ್ನು ತೋರಿಸಿ ಎಂದು ಕೇಳಿದೆ. ಅದು Entrance ನಲ್ಲಿಯೇ ಇದೆ. ಆ entrance ನಲ್ಲಿರುವ ರಸ್ತೆಯ ಮೇಲೆ ಹತ್ತಿಕೊಂಡು ಹೋಗಬೇಕು. ಪಕ್ಕದಲ್ಲಿ ಎರಡು ಅಡಿಗಳ ವ್ಯತ್ಯಾಸವಿದೆ, ಅಲ್ಲಿಗೆ ಯಾವುದು ರ್‍ಯಾಂಪ್ ಹಾಕಿಲ್ಲ, ಆ ಕಡೆ ಒಂದು ಶೌಚಾಲಯವನ್ನು ಕಟ್ಟಿದ್ದಾರೆ. ನಾನು ಕೇಳಿದರೆ, 'ಸರ್, ನನಗೆ ಗೊತ್ತೇ ಇಲ್ಲ, ಯಾವುದೋ ಒಂದು ಕಾರ್ಯಕ್ರಮವಿದೆಯೆಂದು ಸರ್ಕಾರದವರು ಅದನ್ನು ಕಟ್ಟಿ ಹೋಗಿದ್ದಾರೆ' ಎಂದು ಹೇಳಿದರು. ಉಳಿದ ಮಕ್ಕಳಿಗೆ ಇರುವ ಶೌಚಾಲಯವು ಅಲ್ಲಿಂದ ಸುಮಾರು 200 ಮೀಟರ್ ದೂರ ಇದೆ. ಇದನ್ನೇಕೆ ಉಲ್ಲೇಖ ಮಾಡುತ್ತಿದ್ದೇನೆಂದರೆ, ಯೋಜನೆಗಳು ಒಂದು ಭಾಗ ಆದರೆ ಅದನ್ನು ಅನುಷ್ಠಾನಗೊಳಿಸಬೇಕಾದರೆ ಎಲ್ಲೋ ಒಂದು ಕಡೆ ನಮಗೆ ಆ sensitivity ಇಲ್ಲ ಎನ್ನುವ ಕಾರಣಕ್ಕಾಗಿ ಯಾವ ಯೋಜನೆಗಳು ಸರಿಯಾದ ರೀತಿಯಲ್ಲಿ ಅಗತ್ಯವಿರುವ ಮಕ್ಕಳಿಗೆ ತಲುಪುವುದಿಲ್ಲ. ಇದನ್ನು ಉಲ್ಲೇಖ ಮಾಡಬೇಕಾದರೆ, ವಿಶೇಷವಾಗಿ, ವಿಶೇಷ ಮಕ್ಕಳಿಗೆ ಶಾಲೆಗಳ ಕೊರತೆ ಇದೆ, ಕೊಠಡಿಗಳ ಕೊರತೆ, ಸೌಲಭ್ಯಗಳ ಕೊರತೆ, ತರಬೇತಿ ಹೊಂದಿದ ಶಿಕ್ಷಕರ ಕೊರತೆ, ಶಾಲೆಗಳಲ್ಲಿ ಅವರಿಗೆ ಕೊಡಬೇಕಾದ ಸೌಲಭ್ಯಗಳ ಕೊರತೆ ಇದೆ. ಇದನ್ನು ನಾವು ಆದ್ಯತೆ ಮೇರೆಗೆ ಕೈಗೆತ್ತಿಕೊಳ್ಳುತ್ತೇವೆಯೇ? ವಿಶೇಷ ಮಕ್ಕಳ ಬಗ್ಗೆ ನಮಗೆ ಅನುಕಂಪ ಇದೆಯೇ? ಮಂಗಳೂರಿನಲ್ಲಿ 'ಮಂಗಳ ಸಮಗ್ರ ಜ್ಯೋತಿ ಶಾಲೆ' ಎಂಬ ಒಂದು ಶಾಲೆ ಇದೆ. ನಾನು ನೋಡಿದ ಹಾಗೆ ಸಾಮಾನ್ಯ ಮಕ್ಕಳ ಜೊತೆಗೆ ವಿಶೇಷ ಮಕ್ಕಳನ್ನು ಕೂಡ ಒಂದನೇ ತರಗತಿಯಿಂದ 10ನೇ ತರಗತಿಯವರೆಗೆ ಓದಿಸುವ ಒಂದು ಪದ್ಧತಿ ಇದೆ. ವಿಶೇಷ ಮಕ್ಕಳಿಗೆ ಓದಿಸಲು ಸಾಧ್ಯವೇ ಇಲ್ಲ ಎನ್ನುವ ಸಂದರ್ಭದಲ್ಲಿ ವಿಶೇಷ ಶಾಲೆಗಳಿಗೆ ಕಳುಹಿಸಬೇಕು ಎನ್ನುವುದನ್ನು ಬಿಟ್ಟರೆ ಅಂಗವಿಕಲತೆ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇರುವಂತಹ ಮಕ್ಕಳು, ಸಾಮಾನ್ಯ ಮಕ್ಕಳೊಟ್ಟಿಗೆ ಸಾಧಾರಣವಾಗಿ ಓದುವುದಕ್ಕಾಗುವಂತಹ ಮಕ್ಕಳು, ಅವರಿಗಾಗಿ ಇರುವ ವಿಶೇಷ ಶಾಲೆಗಳಿಗೆ ಮಕ್ಕಳನ್ನು ಕಳುಹಿಸಿದರೆ, ಅವರ ಮನಸ್ಸಿನಲ್ಲಿ ಪ್ರಾರಂಭದಿಂದಲೇ ಒಂದು ರೀತಿಯ ಕೀಳರಿಮೆ ಮನೋಭಾವ ಉಂಟಾಗಿ ಅವರನ್ನು ಸಮಾಜದ ಮುಖ್ಯವಾಹಿನಿಗೆ ಸೇರಿಸಿಕೊಳ್ಳುವುದಕ್ಕೆ ಸಾಧ್ಯವೇ ಆಗುವುದಿಲ್ಲ. ಆದ್ದರಿಂದ ಮಾನ್ಯ ಮಂತ್ರಿಯವರನ್ನು ಮತ್ತು ಶಿಕ್ಷಣ ಸಚಿವರನ್ನು ವಿನಂತಿ ಮಾಡಿಕೊಳ್ಳುವುದೇನೆಂದರೆ, ಯಾರಿಗೆ ದೈಹಿಕ ಅಶಕ್ತತೆ ಮಾತ್ರ ಇದೆ ಆ ಮಕ್ಕಳಿಗೆ ಎಲ್ಲಾ ಶಾಲೆಗಳಲ್ಲಿಯು ಉಳಿದ ಮಕ್ಕಳ ಜೊತೆಗೆ ಓದುವುದಕ್ಕೆ ಅವಕಾಶ ಮಾಡಿಕೊಡುವ ರೀತಿಯಲ್ಲಿ ನಮ್ಮ ಶಾಲೆಗಳನ್ನು ರೂಪಿಸಿಕೊಳ್ಳುವುದಕ್ಕೆ ಸಾಧ್ಯವಿಲ್ಲವೇ? ಇದನ್ನು ಮಾಡಿದರೆ ಆ ಮಕ್ಕಳು ಅಂಗವಿಕಲತೆಯನ್ನು ಮರೆತು ಉಳಿದ ಮಕ್ಕಳೊಟ್ಟಿಗೆ ಸೇರಿಕೊಂಡು ಸಮಾಜದ ಮುಖ್ಯ ವಾಹಿನಿಗೆ ಸೇರಿಕೊಳ್ಳಲು ಅನುಕೂಲವಾಗುತ್ತದೆ. ಇಲ್ಲವೆಂದರೆ ಜೀವನಪೂರ್ತಿ ಅವರಿಗೆ ಹಿಂಜರಿಕೆಯ ಭಾವನೆ ಕಾಡುತ್ತಿರುತ್ತದೆ. ಇದನ್ನು ಮಾಡುವುದಕ್ಕೆ ಕ್ರಮ ಕೈಗೊಳ್ಳಬೇಕೆಂದು ತಮ್ಮ ಮೂಲಕ ಮಾನ್ಯ ಸಚಿವರನ್ನು ವಿನಂತಿ ಮಾಡಿಕೊಳ್ಳುತ್ತೇನೆ.

ಶಿಕ್ಷಣವು ನಮ್ಮ ವ್ಯಕ್ತಿತ್ವವನ್ನು ಪ್ರತಿಬಿಂಬಿಸುವ ಒಂದು ಪ್ರಮುಖವಾದ ಅಂಗವಾಗಿದೆ. ನಾನು ಅಂದುಕೊಂಡ ಹಾಗೆ ಕೇಂದ್ರ ಸರ್ಕಾರ ಇರಬಹುದು ಅಥವಾ ರಾಜ್ಯಸರ್ಕಾರಗಳು ಇರಬಹುದು ಬಜೆಟ್‌ನ ದೊಡ್ಡ ಮೊತ್ತವನ್ನು ಶಿಕ್ಷಣಕ್ಕಾಗಿ ವಿನಿಯೋಗ ಮಾಡುತ್ತಾರೆ. ಶಿಕ್ಷಣಕ್ಕಾಗಿ ಏಕೆ ವಿನಿಯೋಗ ಮಾಡುತ್ತಾರೆ ಎಂದರೆ, ಉತ್ತಮ ಗುಣಮಟ್ಟದ ಮಾನವ ಸಂಪನ್ಮೂಲ ನಿರ್ಮಾಣವಾಗುವುದಕ್ಕೆ ವಿನಿಯೋಗ ಮಾಡುತ್ತಾರೆ. ಶಿಕ್ಷಣ ವ್ಯವಸ್ಥೆಯ ಮೂಲಕ ಹಾದುಹೋಗಿ ಮಕ್ಕಳು ಬರಬೇಕಾದರೆ ಅವರಲ್ಲಿ ಕೆಲವು ಸಂಗತಿಗಳು ಅಭಿವೃದ್ಧಿಯಾಗಬೇಕೆಂದು ನಾವೆಲ್ಲಾ ಅಪೇಕ್ಷೆ ಪಡುತ್ತೇವೆ. ಆ ಸಂಗತಿಗಳನ್ನು ಪಟ್ಟಿ ಮಾಡಿದರೆ, ಮೂರು ಮುಖ್ಯ ಆಯಾಮಗಳೆಂದರೆ, ಒಂದಷ್ಟು ಮಾಹಿತಿಗಳನ್ನು ಕೊಡುವುದು (information), ಕೌಶಲ್ಯವನ್ನು ಕೊಡುವುದು (skill development), ಅದೆಲ್ಲಕ್ಕಿಂತ ಪ್ರಮುಖವಾದುದು ಮೌಲ್ಯಗಳು. ಒಬ್ಬ ವಿದ್ಯಾರ್ಥಿ ಪಿ.ಯು.ಸಿ. ಮುಗಿಸಿ, 3-4 ವರ್ಷ ಡಿಗ್ರಿ ಮಾಡಿಕೊಂಡು ವಿದ್ಯಾಸಂಸ್ಥೆಗಳಿಂದ ಸಮಾಜಕ್ಕೆ ಹೊರಗಡೆ ಬರುತ್ತಾನೆ ಎಂದರೆ ನಾವೇ ನಮ್ಮನ್ನು ಪ್ರಶ್ನೆ ಮಾಡಿಕೊಂಡರೆ, ಆ ವಿದ್ಯಾರ್ಥಿಯು 16 ವರ್ಷಗಳ ಶಿಕ್ಷಣವನ್ನು ಪಡೆದುಕೊಂಡು ಹೊರಗಡೆ ಬರಬೇಕಾದರೆ ಅವನಿಗೆ ಸಾಮಾಜಿಕ ಪ್ರಜ್ಞೆ ಜಾಗೃತವಾಗಿದೆಯೇ, ಕರ್ತವ್ಯ ಪ್ರಜ್ಞೆ ಜಾಗೃತವಾಗಿದೆಯೇ, ನೈತಿಕ ಪ್ರಜ್ಞೆ, ಪರಿಸರ ಪ್ರಜ್ಞೆ, ಸಮಯ ಪ್ರಜ್ಞೆ ಜಾಗೃತವಾಗಿದೆಯೇ, ಈ ದೇಶದ ಕಾನೂನನ್ನು ಗೌರವಿಸಬೇಕೆನ್ನುವ ಕನಿಷ್ಠ ಪ್ರಜ್ಞೆ ಜಾಗೃತವಾಗಿದೆಯೇ ಎಂದು ಆಲೋಚನೆ ಮಾಡಬೇಕಾಗುತ್ತದೆ. ನಾನು ತಿಳಿದಂತೆ ಪ್ರತಿ ವರ್ಷವು ಕೇಂದ್ರ ಸರ್ಕಾರ ಶಿಕ್ಷಣಕ್ಕಾಗಿ ಮೂರುವರೆ ಲಕ್ಷ ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತದೆ. ಕರ್ನಾಟಕ ರಾಜ್ಯದ ಶಿಕ್ಷಣದ ಬಜೆಟ್ ಈ ವರ್ಷ 25,000 ಕೋಟಿ ರೂಪಾಯಿಗಿಂತ ಜಾಸ್ತಿ ಇದೆ. ಇಷ್ಟೊಂದು ದೊಡ್ಡ ಮೊತ್ತದ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹಣವನ್ನು ಖರ್ಚು ಮಾಡಬೇಕಾದರೆ ಮತ್ತು ಉತ್ತಮ ಗುಣಮಟ್ಟದ ಮಾನವ ಸಂಪನ್ಮೂಲ ನಿರ್ಮಾಣವಾಗಬೇಕಾದರೆ, ಜವಾಬ್ದಾರಿಯುತ ನಾಗರಿಕ ಪ್ರಪಂಚ ಮುಂದಿನ ತಲೆಮಾರಿನಲ್ಲಿ ಕಾಣಬೇಕೆಂದರೆ, ನಾವು ಶಿಕ್ಷಣ ಪದ್ಧತಿಯಲ್ಲಿ ಈ ಮೌಲ್ಯಗಳನ್ನು ಅಳವಡಿಸಿಕೊಳ್ಳುವುದಕ್ಕೆ ಸಾಧ್ಯವಿಲ್ಲವೇ? ಈ ಸಂದರ್ಭದಲ್ಲಿ ನನಗೆ ಒಂದು ಸಣ್ಣ ಕಥೆ ನೆನಪಾಗುತ್ತಿದೆ. ಮಾನ್ಯ ಮಂತ್ರಿಗಳೆ, ಇದು ಕಥೆಯಲ್ಲ, ಒಂದು ನೈಜ ಘಟನೆಯಾಗಿದೆ.

**ಶ್ರೀ ಕಾಗೋಡು ತಿಮ್ಮಪ್ಪ (ಕಂದಾಯ ಸಚಿವರು):-** ಮಾನ್ಯ ಕ್ಯಾಪ್ಟನ್ ಗಣೇಶ್ ಕಾರ್ಣಿಕ್‌ರವರೆ, ಇದು ನಿಜ, ನಾವು ಯಾವ ಸಮಾಜದಲ್ಲಿ ಬಂದಿದ್ದೇವೆ ಎನ್ನುವುದನ್ನು ಮೊದಲು ತಿಳಿದುಕೊಳ್ಳಬೇಕು. ಈ ನಿಮ್ಮ ಆಲೋಚನೆ-ವಿಚಾರಗಳನ್ನು ಕಾರ್ಯರೂಪಕ್ಕೆ ತರಬೇಕಾದರೆ, ಸರ್ಕಾರವು ಏನು ಮಾಡಬೇಕು ಎನ್ನುವುದರ ಬಗ್ಗೆ ಸ್ವಲ್ಪ ಸೂಚನೆ ಕೊಟ್ಟರೆ ಒಳ್ಳೆಯದು. ಕಾರಣವೇನೆಂದರೆ, ನಮ್ಮಲ್ಲಿ ಹರಿಜನ ಮಕ್ಕಳಿದ್ದಾರೆ, ಹಿಂದುಳಿದ ವರ್ಗದವರ ಮಕ್ಕಳಿದ್ದಾರೆ, ಬ್ರಾಹ್ಮಣರ ಮಕ್ಕಳಿದ್ದಾರೆ, ಆಯಾ ವರ್ಗದಲ್ಲಿ ಯಾವ ಜೀವನದ ವ್ಯವಸ್ಥೆ ಇರುತ್ತದೋ ಅದರ ಪ್ರಕಾರ ಇರುತ್ತದೆ. ಈಗ ಇವರ ತಾಯಿ ಅಥವಾ ನಮ್ಮ ತಾಯಿಯೇ ಇರಬಹುದು ನಿಮಗೆ ಕೊಟ್ಟಷ್ಟು ಶಿಕ್ಷಣವನ್ನು ಕೊಡುವುದಕ್ಕೆ ಸಾಧ್ಯವಾಗುವುದೇ? ಅಪ್ಪಿ ತಪ್ಪಿ ತಪ್ಪಿಸಿಕೊಂಡು ಬಂದು ಇಲ್ಲಿ ಸೇರಿಕೊಂಡು ಬಿಟ್ಟಿದ್ದೇವೆ. ಹಾಗಾಗಿ ತಾವು ಕೆಲವು ಸಲಹೆಗಳನ್ನು ಕೊಟ್ಟರೆ ಸರ್ಕಾರ ಅದರ ಬಗ್ಗೆ ಗಂಭೀರವಾಗಿ ಚಿಂತನೆ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಅದರಲ್ಲಿ ಯಾವುದೇ ಭಿನ್ನಾಭಿಪ್ರಾಯವಿಲ್ಲ, ನಿಜ. ಒಂದು ಸಮಾನತೆ ಎನ್ನುವುದು ಇದೆ. ಆ ಸಮಾನತೆ ಈ ವಿಚಾರದಲ್ಲಿ ಬರಬೇಕೆಂಬುದು ನಿಜ. ಅದನ್ನು ಕಾರ್ಯರೂಪಕ್ಕೆ ತರುವುದು ಹೇಗೆಂಬ ಬಗ್ಗೆ ಸಲಹೆಯನ್ನು ಕೊಟ್ಟರೆ ಅನುಕೂಲವಾಗುತ್ತದೆ.

**ಶ್ರೀ ಕೆ.ಎಸ್. ಈಶ್ವರಪ್ಪ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೆ, ಮಾನ್ಯ ಕಾಗೋಡು ತಿಮ್ಮಪ್ಪರವರು ಹೇಳಿದ ಅಂಶಗಳ ಬಗ್ಗೆ ಒಂದು ರೀತಿಯಲ್ಲಿ ಇಡೀ ಸಮಾಜವೇ ಜಾಗೃತಗೊಳ್ಳಬೇಕಾಗುತ್ತದೆ. ನನ್ನ ಜೀವನದಲ್ಲಿ ನಡೆದ ಒಂದು ಘಟನೆ ಇದು. ಹೈಸ್ಕೂಲಿನಿಂದ ನಾನು ಮತ್ತು ನನ್ನ ಸ್ನೇಹಿತ ಒಟ್ಟಿಗೇ ಓದಿಕೊಂಡು ಬಂದಿದ್ದೆವು. ನಾನು ಅವರ ಮನೆಗೆ ಹೋಗುತ್ತಿದ್ದೆ, ಅವನು ನಮ್ಮ ಮನೆಗೆ ಬರುತ್ತಿದ್ದನು. ಅವರ ತಾಯಿ ನಮ್ಮ ತಾಯಿ ಎಲ್ಲಾ; ತಮಗೆಲ್ಲಾ ಗೊತ್ತಿರುವ ಹಾಗೆ ನಮ್ಮ ತಾಯಿಯು ಕೂಲಿ ಕೆಲಸ ಮಾಡುತ್ತಿದ್ದರು, ಅವರ ತಾಯಿಯು ಕೂಲಿ ಕೆಲಸವನ್ನು ಮಾಡುತ್ತಿದ್ದರು. ಬರಬರುತ್ತಾ ಅವರು ಮಧ್ಯಮವರ್ಗಕ್ಕೆ ಬಂದು ಹಣಕಾಸಿನಲ್ಲಿಯು ಒಳ್ಳೆಯ ಸ್ಥಿತಿಗೆ ಬಂದರು. ನಮ್ಮ ತಂದೆ ಕೂಡ ಗುಮಾಸ್ತಗಿರಿ ಕೆಲಸಕ್ಕೆ ಹೋಗುತ್ತಿದ್ದರು. ನಮ್ಮ ಮನೆಯಲ್ಲಿಯು ಆರ್ಥಿಕವಾಗಿ ಚೀಟಿ ಕಟ್ಟಿಕೊಂಡು ಬೆಳೆಯುತ್ತಾ ಬಂದೆವು. ನಮ್ಮ ಸ್ನೇಹ ಕಾಲೇಜ್‌ಮಟ್ಟದವರೆಗೂ ಹೋಯಿತು. ಕಾಲೇಜ್‌ಗೆ ಹೋಗುತ್ತಿದ್ದ ಸಂದರ್ಭದಲ್ಲಿ ಅವರ ಮನೆಯಲ್ಲಿ ನಾನು ಊಟ ಮಾಡುತ್ತಿದ್ದೆ, ನಮ್ಮ ಮನೆಯಲ್ಲಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅವರು ಊಟ ಮಾಡುತ್ತಿದ್ದರು. ನಮ್ಮ ತಾಯಿಗೆ ಯಾರೋ ಒಬ್ಬರು ಆ ಹುಡುಗ ಹರಿಜನರ ಹುಡುಗ ಎಂದು ಹೇಳಿಬಿಟ್ಟರು. ಪರಿಸ್ಥಿತಿ ಏನಾಯಿತೆಂದರೆ, ಅವೋತ್ತಿನಿಂದ ನಮ್ಮಮ್ಮ ಯಾವ ಕಾರಣಕ್ಕೂ ಅವನ ಜೊತೆ ಸೇರಬೇಡ ಎಂದು ತಾಕೀತು ಮಾಡಿದರು. ಇದು ಪ್ರಾರಂಭವಾಯಿತು. ನಾನು ಅವರನ್ನು ಹೇಗೆ ಒಪ್ಪಿಸಬೇಕು? ಹೆಚ್ಚು ಕಡಿಮೆ ಹೈಸ್ಕೂಲಿನಿಂದಲೂ ಅಣ್ಣ ತಮ್ಮಂದಿರಿಗಿಂತ ಚೆನ್ನಾಗಿದ್ದೆವು. ಬಹಳ ಯೋಚನೆ ಮಾಡಿ ಕೊನೆಗೆ ಒಂದು ಮಾತನ್ನು ನಮ್ಮಮ್ಮನಿಗೆ ಹೇಳಿದೆ. ನಾನೇನು ಬ್ರಾಹ್ಮಣನೋ ಅಥವಾ ಬಹಳ ಮೇಲ್ವರ್ಗದ ಜನ ಅಲ್ಲ. ನಾವು ಕೂಡ ಕುರುಬರು. ನಾನೇನಾದರೂ ಬ್ರಾಹ್ಮಣರ ಮನೆಗೆ ಹೋದಾಗ ಅವರು ಊಟ ಮಾಡುವಂತಹ ಸಂದರ್ಭದಲ್ಲಿ 'ನೀನು ಕುರುಬನಾಗಿದ್ದೀಯೆ ಊಟ ಮಾಡಲು ಹೊರಗಡೆ ಕುಳಿತುಕೋ' ಎಂದರೆ ನನ್ನ ಮಗನನ್ನು ಹೊರಗೆ ಕೂರಿಸಿ ಊಟ ಕೊಟ್ಟಿದ್ದಾರೆ ಎಂದು ನಿನ್ನ ಹೊಟ್ಟೆಯಲ್ಲಿ ಕಿಚ್ಚು ಹತ್ತುವುದಿಲ್ಲವೇ, ಹೊಟ್ಟೆ ಉರಿಯುವುದಿಲ್ಲವೇ ಎಂದು ಹೇಳಿದೆ. ಅದಕ್ಕೆ ಮುಂಚೆ ಅವನೇನೂ ತೊಂದರೆ ಕೊಡುವುದಿಲ್ಲ ಅವನು ಬೇಕಾದರೆ ನಮ್ಮ ಮನೆಗೆ ಬರಲಿ ಊಟ ಮಾಡಲಿ ಆದರೆ ಮನೆಯೊಳಗೆ, ದೇವರಮನೆಗೆ, ಅಡಿಗೆ ಮನೆಗೆ ಬರಬಾರದು ಎಂದು ನಮ್ಮ ತಾಯಿ ಹೇಳಿದ್ದರು. ಸುಮಾರು 6-7 ವರ್ಷದವರೆಗೆ ಅಣ್ಣತಮ್ಮಂದಿರ ಹಾಗಿದ್ದು, ಸ್ವಂತ ಮಗನಿಗೆ ಊಟ ಹಾಕುತ್ತಿದ್ದ ಹಾಗೆ ಇದ್ದ ನಮ್ಮ ತಾಯಿಯು ಯಾರೋ ಹೇಳಿದರು ಎಂದು; ಇದನ್ನೇಕೆ ಪ್ರಸ್ತಾಪ ಮಾಡುತ್ತಿದ್ದೇನೆಂದರೆ, ಪರಿಸ್ಥಿತಿಯನ್ನು ಅರ್ಥಮಾಡಿಸುವ ವ್ಯವಸ್ಥೆಗೆ ಸರ್ಕಾರ ಇದರಲ್ಲಿ ಏನೂ ಮಾಡುವುದಕ್ಕಾಗುವುದಿಲ್ಲ. ಸಮಾಜದಲ್ಲಿ ಹಿಂದುಳಿದವರು, ದಲಿತರು, ಇತರರು ಅದರಲ್ಲಿಯೂ ಉಪಜಾತಿಗಳು ಇವೆ. ಸಾಮಾನ್ಯ ಜನರಿಗೆ ಈ ಜಾತಿಯ ವಿಷ ಎಲ್ಲಿಯತನಕ ಹೋಗಿದೆಯೆಂದರೆ, ಅಣ್ಣತಮ್ಮಂದಿರಿಗೂ ಕೂಡ ಸಮಸ್ಯೆಯಾಗುತ್ತಿದೆ. ನಮ್ಮ ಅಣ್ಣನಿಗೆ 'ತರೀಕೆರೆ'ಯಲ್ಲಿ ಒಂದು ಹೆಣ್ಣನ್ನು ನೋಡಿಕೊಂಡು ಬಂದಿದ್ದರು. ನಮ್ಮ ತಾಯಿಗೆ ಕೂಡ ಒಪ್ಪಿಗೆಯಾಗಿತ್ತು. ನಮ್ಮ ಅಣ್ಣನ ಮದುವೆಯ ನಿಶ್ಚಿತಾರ್ಥ ಸಂದರ್ಭದಲ್ಲಿ, ಕಂಕಣ ಕಟ್ಟುವ ಸಂದರ್ಭದಲ್ಲಿ ನಮ್ಮ ತಾಯಿಗೆ ಯಾರೊ ಒಬ್ಬರು ಅವರು ಉಣ್ಣೆ ಕಂಕಣ ಕಟ್ಟುವವರಂತೆ ಏನು ಮಾಡುವೆ ಎಂದು ಕೇಳಿದರು.

(ಮುಂದು)

**771/ 15-06-2017/6.00/ಡಿಎಸ್-ಕೆಎಸ್(ಎಸ್‌ಪಿ)**

**ಶ್ರೀ ಕೆ.ಎಸ್.ಈಶ್ವರಪ್ಪ(ಮುಂದು)**

ಯಾವ ಕಾರಣಕ್ಕೂ ಬೇಡ ಎಂದು ನಮ್ಮ ಅಮ್ಮ ಹಠ ಹಿಡಿದುಕೊಂಡು ಕುಳಿತುಕೊಂಡುಬಿಟ್ಟರು. ನಾನು ಸುಳ್ಳು ಹೇಳಿದೆ, 'ನೀನು ಅಂದುಕೊಂಡಿರುವುದು ತಪ್ಪು, ಯಾರೋ ಆ ರೀತಿ ಹೇಳಿದ್ದಾರೆ, ಅವರು ಹತ್ತಿ ಕಂಕಣ ಕಟ್ಟುವವರು' ಎಂದು ಹೇಳಿದೆ. ಮದುವೆ ಆಗಿ ಹೋಯಿತು. ನಮ್ಮ ಅತ್ತಿಗೆ ನಮ್ಮ ಮನೆಗೆ ಕಾಲಿಟ್ಟ ನಂತರ ನಮ್ಮ ಮನೆ ಅಭಿವೃದ್ಧಿ ಆಯಿತು. ಅವರು ಉಣ್ಣೆಯ ಕಂಕಣವನ್ನೇ ಕಟ್ಟುವುದು. ಸಮಾಜದಲ್ಲಿ ಏನಾಗುತ್ತದೆ ಎಂದರೆ, ಈ ರೀತಿಯ ಭಾವನೆಗಳನ್ನು ನಿರ್ಮಾಣ ಮಾಡಬೇಕಾದರೆ ಸರ್ಕಾರದ ಪಾಲು ಇದರಲ್ಲಿ ಬಹಳ ಕಡಿಮೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಬೆಳಿಗ್ಗೆಯಿಂದ ಸಂಜೆಯವರೆಗೆ ಪತ್ರಿಕೆ, ಟಿ.ವಿ.ಗಳಲ್ಲಿ ಜಾತಿ ಬಗ್ಗೆ ಹೇಳಿ ಪ್ರತಿಯೊಬ್ಬರು, ಜಾತಿ ಬಗ್ಗೆ ಕಲ್ಪನೆ ಇಲ್ಲದಿರುವಂತಹ ವ್ಯಕ್ತಿಗಳಲ್ಲೂ ಜಾತಿ ಪದ್ಧತಿಯ ಮನೋಭಾವ ಬಂದು ಬಿಟ್ಟಿದೆ. ಇದನ್ನು ಮಕ್ಕಳಲ್ಲಿ ಸಹ ಮೂಡಿಸುವಂತಹ ಪ್ರಯತ್ನ ನಡೆಯುತ್ತಿದೆ. ಮಾನ್ಯ ಕಾಗೋಡು ತಿಮ್ಮಪ್ಪನವರು ಹೇಳಿರುವುದು ಸತ್ಯ. ಸ್ನೇಹ, ವಿಶ್ವಾಸ, ಪ್ರೀತಿ, ಇವೆಲ್ಲಾ ದೂರವಾಗುತ್ತಿರುವಂತಹ ಸನ್ನಿವೇಶದಲ್ಲಿ ಮಕ್ಕಳಲ್ಲಿ ಅವುಗಳ ಬಗ್ಗೆ ಜಾಗೃತಿ ಮೂಡಿಸುವ ಪ್ರಯತ್ನಗಳನ್ನು ಸಮಾಜ ಮಾಡಬೇಕಾಗುತ್ತದೆ. ಸಮಾಜವನ್ನು ಜಾಗೃತಿಗೊಳಿಸುವುದಕ್ಕೆ ಮೌಢ್ಯತೆ ತೊರೆದು ಹಾಕುವುದಕ್ಕೆ ಪ್ರತಿಯೊಬ್ಬರು ಕಂಕಣ ತೊಡಬೇಕಾಗುತ್ತದೆ.

ನಮ್ಮ ತಾಯಿಯೂ ಓದಿರಲಿಲ್ಲ, ಅವರ ತಾಯಿಯೂ ಓದಿರಲಿಲ್ಲ. ಅವರಿಗೆ ಪೂರ್ಣ ಜ್ಞಾನ ಇಲ್ಲದಿರುವಂತಹ ಸಂದರ್ಭದಲ್ಲಿ ಅವರು ಅದನ್ನು ಸೂಚಿಸಿದ್ದರು. ಈ ರೀತಿಯ ವ್ಯವಸ್ಥೆ ಬದಲಾವಣೆಯಾಗಬೇಕೆನ್ನುವುದಾದರೆ, ನಾವು ಸ್ವಲ್ಪ ಮಟ್ಟಿಗೆ ಈ ಜಾತಿ ವ್ಯವಸ್ಥೆಯ ಕಟ್ಟುಪಾಡುಗಳನ್ನು ಸಡಿಲಿಸಿದಾಗ ಅದು ದೂರ ಹೋಗುತ್ತದೆ. ಮಕ್ಕಳಲ್ಲಿ ಈ ಪ್ರೀತಿ ಬರಬೇಕಾದರೆ, ಸರ್ಕಾರ ಇಲ್ಲಿ ಏನು ಮಾಡಬೇಕು, ಬಿಡಬೇಕು ಎಂದು ಹೇಳುವುದಕ್ಕೆ ಬರುವುದಿಲ್ಲ. ಖಂಡಿತ ನನಗೆ ಗೊತ್ತಿಲ್ಲ. ಏಕೆಂದರೆ ಪತ್ರಿಕೆ ಮತ್ತು ದೂರದರ್ಶನ ಮಾಧ್ಯಮಗಳಲ್ಲಿ 'ಜಾತಿ' ಎಂದು ಬರುವುದು ಕಡಿಮೆಯಾಗಿಬಿಟ್ಟರೆ ಸಮಾಜದಲ್ಲಿ ಸಾಕಷ್ಟು ಜಾಗೃತಿಯಾಗಬಹುದು ಎನ್ನುವುದು ನನ್ನ ಭಾವನೆಯಾಗಿದೆ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:-** ಮಾನ್ಯ ಸಭಾಪತಿಯವರೆ, ಅತ್ಯಂತ ಹಿರಿಯರು, ಅನುಭವಿಗಳಾದ ಮಾನ್ಯ ಕಾಗೋಡು ತಿಮ್ಮಪ್ಪನವರು ವಾಸ್ತವವನ್ನು ಕಣ್ಮುಂದೆ ಇಟ್ಟುಕೊಂಡು ಈ ಮಾತನ್ನು ಹೇಳಿದರು. ಅದು ವಾಸ್ತವ ಎನ್ನುವ ಕಾರಣಕ್ಕೆ ಸಂವಿಧಾನ ಮಾಡಿರುವಂಥದ್ದು. ಕಳೆದ 70 ವರ್ಷಗಳಲ್ಲಿ ಬಹಳಷ್ಟು ಬದಲಾವಣೆಗಳಾಗಿವೆ. ಆ ಸಂವಿಧಾನದ ಆಧಾರದಲ್ಲಿ ಈ ರೀತಿಯ ವೈಶಮ್ಯ, ಮೌಢ್ಯ, ತುಂಬಾ ಸಂಗತಿಗಳು ಕಡಿಮೆಯಾಗಿವೆ. ಇನ್ನಷ್ಟು ವೇಗವಾಗಿ ಕಡಿಮೆಯಾಗಬೇಕಾದರೆ ಏನು ಮಾಡಬೇಕೆಂದು ಅವರು ಕೇಳಿದರು, ಮೊದಲನೆಯದಾಗಿ, ನಾವೆಲ್ಲಾ ಮಾದರಿಯಾಗಬೇಕು. ಎರಡನೆಯದಾಗಿ, ಉತ್ತಮ ಗುಣಮಟ್ಟದ ಶಿಕ್ಷಣ ಕೊಡಬೇಕು. ಅದು ಬಿಟ್ಟರೆ ನಮ್ಮ ಹತ್ತಿರ ಬೇರೆ ಉಪಾಯವಿಲ್ಲ. ಅದನ್ನು ಮಾಡುವುದಕ್ಕಾಗಿ ಈಗಿರುವಂತಹ ಯೋಜನೆಗಳನ್ನು ಇನ್ನಷ್ಟು ಪರಿಣಾಮಕಾರಿಯಾಗಿ ಹೇಗೆ ಅನುಷ್ಠಾನಗೊಳಿಸುವುದಕ್ಕೆ ಸಾಧ್ಯ ಇದೆ ಆ ಯೋಜನೆಗಳನ್ನು ನಾವೆಲ್ಲಾ ಒಗ್ಗೂಡಿ ಮಾಡಿದರೆ ಬದಲಾವಣೆಯಾಗುತ್ತದೆ ಎಂದು ನಾನು ಭಾವಿಸಿದ್ದೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕಾಗೋಡು ತಿಮ್ಮಪ್ಪ:-** ಮಾನ್ಯ ಸಭಾಪತಿಯವರೆ, ಈ ಅಂಗನವಾಡಿ ಶಾಲೆ ಪ್ರಾರಂಭವಾದ ನಂತರ ಅಲ್ಲಿ ಎಲ್ಲಾ ಜಾತಿಯ ಮಕ್ಕಳು ಬಂದು ಸೇರಿಕೊಳ್ಳುತ್ತಿದ್ದಾರೆ. ಅಲ್ಲಿ ಎಲ್ಲಾ ಮಕ್ಕಳಿಗೂ ಊಟ ಕೊಡುತ್ತಾರೆ. ಬಿಸಿ ಊಟ ಕೊಡುವ ಕಾರ್ಯಕ್ರಮವೂ ಬಂದಿದೆ. ಅದರಿಂದ ಕೂಡ ಮಾಡಿದ ಅಡುಗೆಯನ್ನು ಎಲ್ಲಾ ಮಕ್ಕಳು ಹಂಚಿಕೊಳ್ಳುತ್ತಾರೆ. ಆ ಸಂದರ್ಭದಲ್ಲಿ ಆ ಮಕ್ಕಳಿಗೆ ನಾನು ಬೇರೆ, ಅವರು ಬೇರೆ ಎನ್ನುವ ಭಾವನೆ ಬರುವುದಿಲ್ಲ. ಎಲ್ಲರೂ ಒಂದು ಕಡೆ ಊಟ ಮಾಡುತ್ತಾರೆ, ಎಲ್ಲರೂ ಒಂದು ಕಡೆ ಸೇರುತ್ತಾರೆ. ಈ ವಾತಾವರಣ ನಿರ್ಮಾಣವಾಗುತ್ತಿರುವುದರಿಂದ ಇದರ ವೇಗ ಇನ್ನಷ್ಟು ಹೆಚ್ಚಾಗಬೇಕಾಗಿದೆ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:-** ಮಾನ್ಯ ಸಭಾಪತಿಯವರೆ, ಮೌಲ್ಯಗಳ ಬಗ್ಗೆ ಮಾತನಾಡುತ್ತಿರುವಂತಹ ಸಂದರ್ಭದಲ್ಲಿ ನಾನು ಒಂದು ಘಟನೆಯನ್ನು ಉಲ್ಲೇಖ ಮಾಡಬಯಸುತ್ತೇನೆ. ಇದು ನೈಜ ಘಟನೆಯಾಗಿದ್ದು ನಮ್ಮ ರಾಜ್ಯದ ಹಿರಿಯ ಐ.ಎ.ಎಸ್. ಅಧಿಕಾರಿಯೊಬ್ಬರು ತಮ್ಮ ಅನುಭವವನ್ನು ಹತ್ತು ವರ್ಷಗಳ ಹಿಂದೆ ಆಂಗ್ಲ ದೈನಿಕದಲ್ಲಿ ಬರೆದುಕೊಂಡಿರುವಂತಹ ಘಟನೆ. ನಮ್ಮ ಹಿರಿಯರೆಲ್ಲಾ ಈ ಬಗ್ಗೆ ಹೇಳಿದ್ದನ್ನು ನಾವು ಕೇಳಿದ್ದೇವೆ. ಬೆಂಗಳೂರಿನಲ್ಲಿ ಅದು ಉಲ್ಲೇಖವಾಗಿತ್ತು. ಐ.ಎ.ಎಸ್. ಅಧಿಕಾರಿ ವಾರಾಂತ್ಯಕ್ಕೆ ಸಂಜೆ ಹೊತ್ತು ಹಳ್ಳಿ ಕಡೆಗೆ ಹೆಂಡತಿ ಮಕ್ಕಳನ್ನು ಕರೆದುಕೊಂಡು ಕಾರಿನಲ್ಲಿ ಹೋಗುತ್ತಾರೆ. ಅದು ಬಯಲು-ಗದ್ದೆ ಪ್ರದೇಶ. ಅವರು ಇಳಿದು walk ಹೋಗಬೇಕಾದರೆ ಬಯಲು-ಗದ್ದೆಯ ಪಕ್ಕದಲ್ಲಿ ತೆಂಗಿನ ಮರದಲ್ಲಿ ಗೀಜಗನ ಗೂಡು ನೇತಾಡುವುದನ್ನು ನೋಡುತ್ತಾರೆ. ಅದು Weavers Bird ಎನ್ನುವ ಹಕ್ಕಿ ಬಹಳ ಸುಂದರವಾಗಿ ನೇಯ್ದಿರುವಂತಹ ಗೂಡು. ಆ ಐ.ಎ.ಎಸ್. ಅಧಿಕಾರಿಯ ಹೆಂಡತಿಗೆ ಅದನ್ನು ನೋಡಿ ಆಸೆಯಾಗುತ್ತದೆ. ಈ ಗೀಜಗನ ಗೂಡನ್ನು ಕಿತ್ತು ಮನೆಗೆ ತೆಗೆದುಕೊಂಡು ಹೋದರೆ ಅದರೊಳಗೆ ಲೈಟ್ ಹಾಕಿಬಿಟ್ಟರೆ ಡೈನಿಂಗ್ ಟೇಬಲ್ ಮೇಲೆ ಇಟ್ಟರೆ ಟೇಬಲ್ ಲ್ಯಾಂಪ್ ಆಗಬಹುದಲ್ಲಾ ಎಂದು ಆಲೋಚಿಸಿ ಆಕೆ ತನ್ನ ಗಂಡನಿಗೆ 'ದಯವಿಟ್ಟು ಆ ಗೀಜಗನ ಗೂಡು ಕಿತ್ತು ಕೊಡಿ' ಎಂದು ಹೇಳುತ್ತಾಳೆ. ಗಂಡ ಐ.ಎ.ಎಸ್. ಅಧಿಕಾರಿ. ಲಾಲ್ ಬಹದ್ದೂರ್ ಶಾಸ್ತ್ರಿ ಅಕಾಡೆಮಿಯಲ್ಲಿ ತರಬೇತಿಯಾಗಿದೆ. ಗಂಡನಿಗೆ ತೆಂಗಿನ ಮರ ಹತ್ತುವುದಕ್ಕೆ ಬರುವುದಿಲ್ಲ. ಆ ಕಡೆ ಈ ಕಡೆ ನೋಡಬೇಕಾದರೆ ಒಬ್ಬ ಹಳ್ಳಿಯ ಹುಡುಗ ಸಿಗುತ್ತಾನೆ, ಆತನಿಗೆ 'ಬಾ ಇಲ್ಲಿ' ಎಂದು ಕರೆದು 'ನೂರು ರೂಪಾಯಿ ಕೊಡುತ್ತೇನೆ, ನನಗೆ ಆ ಗೂಡನ್ನು ಕಿತ್ತು ಕೊಡುತ್ತೀಯಾ' ಎಂದು ಕೇಳುತ್ತಾರೆ. ಆ ಹುಡುಗ 'ಇಲ್ಲ, ಸರ್ ಕಿತ್ತುಕೊಡುವುದಿಲ್ಲ' ಎಂದು ಹೇಳುತ್ತಾನೆ. ನೂರು ರೂಪಾಯಿಗೆ ಆ ಕೆಲಸ ಮಾಡುವುದಕ್ಕಾಗುವುದಿಲ್ಲ ಎಂದು ಆತ ಹೇಳುತ್ತಿದ್ದಾನೆ ಎಂದುಕೊಂಡ ಅಧಿಕಾರಿ 'ಐನೂರು ರೂಪಾಯಿ ಕೊಡುತ್ತೇನೆ' ಕಿತ್ತುಕೊಡು ಎಂದು ಹೇಳುತ್ತಾರೆ. ಅವನು 'ಕಿತ್ತುಕೊಡುವುದಿಲ್ಲ ಸರ್' ಎಂದು ನಿರ್ದಾಕ್ಷಿಣ್ಯವಾಗಿ ಹೇಳುತ್ತಾನೆ. 'ನಾನು ಇನ್ನೂ ಜಾಸ್ತಿ ಹಣ ಕೊಡುತ್ತೇನೆ ಕಿತ್ತುಕೊಡು' ನಮ್ಮ ಮನೆಯವರು ಕೇಳುತ್ತಿದ್ದಾರೆ ಎಂದು ಕೇಳಿದಂತಹ ಸಂದರ್ಭದಲ್ಲಿ ಆಗ ಆ ಹುಡುಗ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹೇಳುತ್ತಾನೆ, 'ಸರ್, ನೀವು ಎಷ್ಟೇ ದುಡ್ಡು ಕೊಟ್ಟರೂ ನಾನು ಕಿತ್ತುಕೊಡುವುದಿಲ್ಲ. ಅಕಸ್ಮಾತ್ ನೀವೇನಾದರೂ ಕಿತ್ತುಕೊಳ್ಳುವುದಕ್ಕೆ ಹೋದರೆ ಜಾಗ್ರತೆ' ಎಂದು ಅವನು ಗದರಿಸುತ್ತಾನೆ. ಈ ಅಧಿಕಾರಿಗೆ ಇದು ಒಂದು ರೀತಿ ವಿಚಿತ್ರ ಅನಿಸುತ್ತದೆ. "ನೂರು, ಐನೂರು ರೂಪಾಯಿ ಕೊಟ್ಟರೂ ಕಿತ್ತುಕೊಡುವುದಿಲ್ಲ ಎಂದು ಹೇಳುತ್ತಿದ್ದಾನೆ. ಅಷ್ಟೇ ಅಲ್ಲದೆ ನೀವು ಕಿತ್ತುಕೊಳ್ಳುವುದಕ್ಕೂ ಬಿಡುವುದಿಲ್ಲವೆಂದು ಜೋರು ಮಾಡುತ್ತಾನಲ್ಲಾ" ಎಂದು ತಮ್ಮಲ್ಲೇ ಪ್ರಶ್ನಿಸಿಕೊಂಡು ಆತನನ್ನು ಹತ್ತಿರ ಕರೆದು 'ಯಾಕಪ್ಪಾ ಹೀಗೆ ಹೇಳುತ್ತೀಯಾ' ಎಂದು ಕೇಳುತ್ತಾರೆ. 'ನಾನು ಕಿತ್ತುಕೊಂಡರೆ ನಿನಗೇನು ಕಷ್ಟ' ಎಂದು ಆ ತರಹ ಚರ್ಚೆಯಾಗುತ್ತದೆ. ಹದಿನಾಲ್ಕು ವರ್ಷದ ಹಳ್ಳಿಯ ಹುಡುಗ ಶಾಲೆಗೆ ಹೋಗಿಲ್ಲ, ಅವನು ಹೇಳುತ್ತಾನೆ, 'ಸರ್, ನೀವೇನೋ ನಗರದವರು, ಗೂಡು ಕಿತ್ತು ತೆಗೆದುಕೊಂಡು ಹೋಗುತ್ತೀರಿ, ಆ ಮರಿ ಹಕ್ಕಿಗಳ ತಾಯಿ ಹೊರಗಡೆ ಮಕ್ಕಳಿಗೆ ಆಹಾರ ಹುಡುಕಿ ತೆಗೆದುಕೊಂಡು ಬರಲು ಹೋಗಿದ್ದು, ಅದು ಸಂಜೆಗೆ ವಾಪಸ್ ಬರುತ್ತದೆ, ತನ್ನ ಗೂಡಿಗೆ ಬಂದಾಗ ಅದಕ್ಕೆ ತನ್ನ ಗೂಡು ಕಾಣಿಸುವುದಿಲ್ಲ, ಆ ಗೂಡಿನಲ್ಲಿರುವ ಮೊಟ್ಟೆಗಳೂ ಕಾಣುವುದಿಲ್ಲ, ತುಂಬಾ ನೋವಿನಿಂದ ಅದು ಕಿರಿಚಾಡುವುದಕ್ಕೆ ಶುರು ಮಾಡುತ್ತದೆ. ನಾನು ಇಲ್ಲೇ ವಾಸ ಮಾಡುತ್ತೇನೆ, ನಾನು ವಾಸ ಮಾಡುತ್ತಿರುವ ಪ್ರದೇಶದಲ್ಲಿ ಆ ತಾಯಿ ಹಕ್ಕಿ ಅಳುವುದನ್ನು ನಾನು ಕೇಳುವುದಕ್ಕಾಗುವುದಿಲ್ಲ. ಅದಕ್ಕೆ ನೀವು ಎಷ್ಟೇ ದುಡ್ಡು ಕೊಟ್ಟರೂ ನಾನು ಅದನ್ನು ಕಿತ್ತು ಕೊಡುವುದಿಲ್ಲ, ನೀವು ಕಿತ್ತುಕೊಳ್ಳುವುದಕ್ಕೂ ಬಿಡುವುದಿಲ್ಲ' ಎಂದು ಐ.ಎ.ಎಸ್. ಅಧಿಕಾರಿಗೆ ಆ ಹಳ್ಳಿ ಹುಡುಗ ಹೇಳುತ್ತಾನೆ. ಈ ಅಧಿಕಾರಿ ವಾಪಸ್ ಬಂದು ಮಾರನೇ ದಿನ ಲೇಖನ ಬರೆಯುತ್ತಾರೆ. ಅದು ಪತ್ರಿಕೆಯಲ್ಲಿ ಪ್ರಕಟವಾಗುತ್ತದೆ.

ಆ ಲೇಖನದ ಶೀರ್ಷಿಕೆ ಏನಿರುತ್ತದೆಂದರೆ, "Who is educated?" ಎಂದು. ಇದು ನಿಜವಾದ ಘಟನೆ. ನಾನು ಸುಮ್ಮನೆ ಹೇಳುತ್ತಿಲ್ಲ. ನಾನು ಇದನ್ನು ಏಕೆ ಉಲ್ಲೇಖ ಮಾಡಿದೆ ಎಂದರೆ, ಶಿಕ್ಷಣದಲ್ಲಿ ಮೌಲ್ಯಗಳನ್ನು ಜೋಡಿಸಿಕೊಳ್ಳದಿದ್ದರೆ ಸಮಾಜ ಯಾವ ರೀತಿ ಪರಿವರ್ತನೆಯಾಗುತ್ತದೆ? ನಾವು ಎಲ್ಲಾ ಮಕ್ಕಳಿಗೂ ಶಿಕ್ಷಣ ಕೊಡಬೇಕು, ಮಕ್ಕಳ ಶಿಕ್ಷಣ ಹಕ್ಕು. ಇದರ ಬಗ್ಗೆ ಮಾಹಿತಿ ಕೊಟ್ಟು ಮಕ್ಕಳನ್ನು ಶಾಲೆಗೆ ಸೇರಿಸಲೇಬೇಕು. ಆದರೆ ಶಿಕ್ಷಣದೊಡನೆ ಈ ಮೌಲ್ಯಗಳನ್ನು ಜೋಡಿಸಿಕೊಳ್ಳದಿದ್ದರೆ, ಒಂದು ಮಗು ಬೆಳೆದು 15-16 ವರ್ಷ ಶಾಲಾ-ಕಾಲೇಜುಗಳಲ್ಲಿ ವಿದ್ಯಾಭ್ಯಾಸ ಮಾಡಿ ಹೊರಗಡೆ ಬರಬೇಕಾದರೆ, ಈ ಮೌಲ್ಯಗಳು ಮಾಯವಾದರೆ? ಮಾನ್ಯ ಬಸವರಾಜ ಹೊರಟ್ಟಿಯವರು ಹೇಳಿದ ಪ್ರಕಾರ ತಂದೆ-ತಾಯಿಗಳನ್ನು ವೃದ್ಧಾಶ್ರಮಕ್ಕೆ ಕಳುಹಿಸುವ ಪ್ರವೃತ್ತಿ ನಿರ್ಮಾಣವಾದರೆ, ಇದು ನಮ್ಮ ಕೌಟಂಬಿಕ ಪರಂಪರೆಗೆ ಭಿನ್ನವಾಗಿರುವ ಸಂಗತಿ. ಹಾಗಾಗಿ ಮಕ್ಕಳ ಹಕ್ಕುಗಳ ರಕ್ಷಣೆ, ಮಕ್ಕಳ ರಕ್ಷಣೆ, ಇವೆಲ್ಲದರ ಬಗ್ಗೆ ಮಾತನಾಡಬೇಕಾದರೆ, ಅತ್ಯಂತ ಪ್ರಮುಖವಾಗಿ ಗಮನಿಸಬೇಕಾದ ಸಂಗತಿ ಎಂದರೆ, ಆ ಮಕ್ಕಳಿಗೆ ನಾವು ಯಾವ ರೀತಿಯ ಶಿಕ್ಷಣ ಕೊಡುತ್ತಿದ್ದೇವೆ, ಮಕ್ಕಳ ಮುಂದೆ ನಾವು ಯಾವ ರೀತಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾದರಿಯಾಗಿದ್ದೇವೆ ಎನ್ನುವುದಾಗಿದೆ. ಇದೇ ಸದನದಲ್ಲಿ ಮೂರು ವರ್ಷಗಳ ಹಿಂದೆ, ಪ್ರತಿ ವರ್ಷ ನವೆಂಬರ್ 14ನೇ ತಾರೀಖಿಗೆ ಮಕ್ಕಳು ಮುಖ್ಯ ಮಂತ್ರಿಯವರನ್ನು ಭೇಟಿ ಮಾಡುವ ಸಂದರ್ಭ ಬರುತ್ತದೆ. ಮಾನ್ಯ ಮುಖ್ಯಮಂತ್ರಿಗಳಿಗೆ ಮಕ್ಕಳು 'ಸರ್ ನಮ್ಮ ಹತ್ತಿರವೂ ಲಂಚ ಕೇಳುತ್ತಾರೆ ಏನು ಮಾಡುವುದು ಎಂದು ಪ್ರಶ್ನೆ ಕೇಳುತ್ತಾರೆ. ಆ ಮಕ್ಕಳಿಗೆ ಮನಸ್ಸಿನಲ್ಲಿ ಮೌಲ್ಯ ಇದೆ. ಅವರಿಗೆ ನಾವು ಮಾದರಿಯಾಗಿಲ್ಲ. ಮಕ್ಕಳು ಮುಖ್ಯಮಂತ್ರಿಯವರನ್ನು ಕೇಳುತ್ತಾರೆ, "ನಮ್ಮ ಹತ್ತಿರವೇ ಈ ರೀತಿ ಲಂಚ ಕೇಳಿದರೆ ನಾವೇನು ಮಾಡಬೇಕು ಸರ್?" ಎಂದು ಕೇಳುವ ವಾತಾವರಣವನ್ನು ನಾವು ನಿರ್ಮಾಣ ಮಾಡಿದ್ದೇವೆ. ಹಾಗಾಗಿ ಬದಲಾವಣೆ ಹೇಗೆ ಆಗಬೇಕೆಂದರೆ, ಎಲ್ಲೋ ಒಂದು ಕಡೆ ನಾವುಗಳು ಬದಲಾಗಬೇಕು. ನಾವು ಮಕ್ಕಳಿಗೆ ಮಾದರಿಯಾಗಬೇಕು. 1950ರ ದಶಕದಲ್ಲಿ ಸಂವಿಧಾನವನ್ನು ರಚನೆ ಮಾಡಬೇಕಾದರೆ ಈ ಎಲ್ಲಾ ಸಂಗತಿಗಳನ್ನು ಆಲೋಚನೆ ಮಾಡಿ ಅನೇಕ ಪರಿಚ್ಛೇದಗಳನ್ನು, ಅನುಚ್ಛೇದಗಳನ್ನು, ವಿಧಿಗಳನ್ನು, ನಿಯಮಗಳನ್ನು ನಮ್ಮ ಹಿರಿಯರು ರೂಪಿಸಿಕೊಂಡರು. ಬಹಳಷ್ಟು ಸಂಗತಿಗಳನ್ನು ಅಳವಡಿಸಿಕೊಂಡು ಈ ಸಂವಿಧಾನವನ್ನು ರಚನೆ ಮಾಡಿದ್ದರೂ ಕೂಡ ಎಲ್ಲಿಯೋ ಒಂದು ಕಡೆ ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವಲ್ಲಿ ನಾವು ವಿಫಲರಾಗಿದ್ದೇವೆ.

ಈ ಸಂದರ್ಭದಲ್ಲಿ ನಾನು ಕೆಲವು ಸಲಹೆಗಳನ್ನು ಕೊಡುವುದಕ್ಕೆ ಪ್ರಯತ್ನ ಮಾಡುತ್ತೇನೆ. ಅವರು ಏನು ಹೇಳುತ್ತಾರೆಂದರೆ, Infant Mortality Rate ಸಮ್ಮದ್ದೇನಿದೆ, ಅದಾದ ಮೇಲೆ nearly 3/4th ಅಂದರೆ 72% infant death ಕರ್ನಾಟಕದಲ್ಲಿ ಆಗುತ್ತಿದೆ. 'ಅದು ಆಗುತ್ತಿರುವುದು, ಮೊದಲನೆ ನಾಲ್ಕು ವಾರದಲ್ಲಿ" ಎಂದು ಹೇಳುತ್ತಾರೆ. ಅಂದರೆ ಕರ್ನಾಟಕದಲ್ಲಿ ಆಗುತ್ತಿರುವಂಥದ್ದು, ಅಂಕಿ–ಅಂಶಗಳು ಸ್ವಲ್ಪ ಹೆಚ್ಚು ಕಡಿಮೆ ಇರಬಹುದು. ಸುಮ್ಮನೆ ಮಾಹಿತಿಗಾಗಿ ಕೊಟ್ಟಿದ್ದೇನೆ. ಅದಕ್ಕೆ ಸಲಹೆ ಏನು ಕೊಡುತ್ತಾರೆಂದರೆ, "Announce a 'State New born Mission' in order to tackle Neonatal and Infant Mortality in the State in an integrated manner to be placed in the monthly monitoring agenda of the Chief Minister." ಮಾನ್ಯ ಮುಖ್ಯಮಂತ್ರಿಗಳು ಯಾವುದನ್ನು ಮಾನಿಟರ್ ಮಾಡಬೇಕು? ಈ ಮಾಹಿತಿ ಅವರಿಗೆ ಪ್ರತಿ ತಿಂಗಳು ಸಿಗಬೇಕು. ಮೊದಲನೆ ನಾಲ್ಕು ವಾರದಲ್ಲಿ ಈ ರಾಜ್ಯದಲ್ಲಿ ಹುಟ್ಟಿದ್ದಂತಹ ಮಕ್ಕಳಲ್ಲಿ ಎಷ್ಟು ಮಕ್ಕಳು ಮರಣ ಹೊಂದುತ್ತಿವೆ, ಯಾವ ಕಾರಣಕ್ಕಾಗಿ ಮರಣ ಸಂಭವಿಸುತ್ತಿದೆ? ಅದನ್ನು ತಪ್ಪಿಸುವುದಕ್ಕೆ ನಾವೇನು ಮಾಡುತ್ತಿದ್ದೇವೆ? ಈ ಎಲ್ಲ ಸಂಗತಿಗಳ ಬಗ್ಗೆ ಪ್ರತಿ ತಿಂಗಳು ಮಾನಿಟರ್ ಮಾಡುವ ವ್ಯವಸ್ಥೆಯನ್ನು ಜಾರಿಗೆ ತರುವುದಕ್ಕೆ ಸರ್ಕಾರಕ್ಕೆ ಸಾಧ್ಯತೆ ಇದೆಯೇ? "Special programs or schemes to focus on quality health services in Labour Rooms in select worst performing blocks."

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನಿನ್ನೆ ಕಾರ್ಕಳ ತಾಲ್ಲೂಕಿನ ಅಜೆಕರ್ ಎನ್ನುವ ಗ್ರಾಮದ ಒಬ್ಬ ಅಲ್ಪಸಂಖ್ಯಾತ ವರ್ಗಕ್ಕೆ ಸೇರಿದ ಸುಮಾರು 26-27 ವರ್ಷ ವಯಸ್ಸಿನ ಯುವಕ ನನಗೆ ಫೋನ್ ಮಾಡಿದ. ಅವನಿಗೆ ಮದುವೆಯಾಗಿ ಒಂದೂವರೆ ವರ್ಷ ಆಗಿದೆ, ಅವನ ಹೆಂಡತಿ ಏಳೂವರೆ ತಿಂಗಳ ಗರ್ಭಿಣಿ. ನಾಲ್ಕು ದಿವಸಗಳಿಂದ ಅವನ ಹೆಂಡತಿಗೆ ಹೆರಿಗೆ ನೋವು ಬರುತ್ತಿದೆ ಎಂದು ಅಂದುಕೊಂಡಿದ್ದಾನೆ. ಅವರು ಮೂರು ಆಸ್ಪತ್ರೆಗೆ ಭೇಟಿ ಕೊಟ್ಟಿದ್ದಾನೆ, ಮೂರು ಆಸ್ಪತ್ರೆಗೆ ಹೋದರೂ ಅವರಿಗೆ ಸರಿಯಾದ ಚಿಕಿತ್ಸೆ ಸಿಕ್ಕಿಲ್ಲ. ನಿನ್ನೆ ರಾತ್ರಿ ಹನ್ನೊಂದೂವರೆ ಗಂಟೆಗೆ ಫೋನ್ ಮಾಡಿ ದಯವಿಟ್ಟು Lady Curzon Hospital ನಲ್ಲಿ ಒಂದು bed ಕೊಡಿಸಿ ಸರ್, ನನ್ನ ಹೆಂಡತಿ ತುಂಬಾ ನೋವಿನಿಂದ ನರಳುತ್ತಿದ್ದಾಳೆ ಎಂದು ಆ ಯುವಕ ಕೇಳಿಕೊಂಡ. ನಾನು ಈ ಸಂಗತಿಯನ್ನು ಉಲ್ಲೇಖ ಮಾಡುತ್ತಿರುವುದಕ್ಕೆ ಕಾರಣವೇನೆಂದರೆ, ಈ ರಾಜ್ಯದಲ್ಲಿರುವಂತಹ ಬಡವರು, ಅಲ್ಪಸಂಖ್ಯಾತರು, ಕಷ್ಟದಲ್ಲಿರುವವರಿಗೆ ಯಾವ ರೀತಿ ನಾವು ಆರೋಗ್ಯ ಸೌಲಭ್ಯವನ್ನು ಒದಗಿಸುತ್ತಿದ್ದೇವೆ? ಅದಕ್ಕಾಗಿ on priority ಈ ತರಹದ ಸಂಗತಿಗಳು ಆಗಬಾರದು ಎಂದರೆ, ನಾವು ಅವರ ಕಷ್ಟಕ್ಕೆ ಸ್ಪಂದಿಸುವ ಮನೋಭಾವವನ್ನು ವ್ಯಕ್ತಪಡಿಸಬೇಕು. ಅದು ನಮ್ಮ ಸರ್ಕಾರಿ ಆಸ್ಪತ್ರೆಗಳಿರಬಹುದು, ಖಾಸಗಿ ಆಸ್ಪತ್ರೆಗಳಿರಬಹುದು, ಯಾವುದೇ ಸಂಗತಿಗಳಿರಬಹುದು, ಅವರು ಸ್ಪಂದಿಸುವುದಕ್ಕೆ ಆಗುವುದಿಲ್ಲ ಎನ್ನುವುದಾದರೆ ಅಂತಹ ವ್ಯವಸ್ಥೆಯನ್ನು ಇಟ್ಟುಕೊಂಡು ಏನು ಪ್ರಯೋಜನ? ಎಲ್ಲಿಯೋ ಒಂದು ಕಡೆ ಇದರಲ್ಲಿ ವಿಫಲರಾಗುತ್ತೇವೆ ಎನ್ನುವ ಕಾರಣಕ್ಕಾಗಿ ಈ ದೃಷ್ಟಿಯಲ್ಲಿ ಅಂತಹ ದುರ್ಬಲ ಜನರಿಗೆ ವಿಶೇಷ ಕಾರ್ಯಕ್ರಮಗಳನ್ನು ಹಾಕಿಕೊಂಡು, ಅದನ್ನು ಅವರಿಗೆ ತಲುಪಿಸುವಂತಹ ಪ್ರಯತ್ನಗಳನ್ನು ನಾವು ಮಾಡದಿದ್ದರೆ, ಈ ಸಂಗತಿಗಳು ಕೇವಲ ಭಾಷಣಕ್ಕೆ ಮಾತ್ರ ಸೀಮಿತವಾಗುತ್ತವೆ.

ಅದೇ ರೀತಿ State Nutrition Policy, ಕಾರ್ಯಕ್ರಮಗಳು ಇವೆ. ಆದರೆ ಆಗಿಂದಾಗ್ಗೆ ಪತ್ರಿಕೆಯಲ್ಲಿ ವರದಿಯಾಗುತ್ತದೆ. ಅಂಗನವಾಡಿಯಲ್ಲಿ ಮಕ್ಕಳಿಗೆ ಕೊಡುವಂತಹ ಆಹಾರ, ಗರ್ಭಿಣಿ ಸ್ತ್ರೀಯರಿಗೆ ಕೊಡುವ ಆಹಾರ, ಇದರಲ್ಲಿ ಮತ್ತೆ ಗುತ್ತಿಗೆ ಕೊಡುವಾಗ commission, ಹೊರ ರಾಜ್ಯಕ್ಕೆ ಗುತ್ತಿಗೆ ಕೊಡುವುದು, ನಾವೇನು ಮಾಡುತ್ತಿದ್ದೇವೆ? ಆ ಮಕ್ಕಳ ಆಹಾರದಲ್ಲಿ, ಆ ಗರ್ಭಿಣಿಯರಿಗೆ ಕೊಡುವ ಆಹಾರದಲ್ಲಿ ಸಹ ದುಡ್ಡು ತಿಂದಾಕಿಕೊಂಡು ನಾವು ಸಮೃದ್ಧರಾಗಬೇಕೆ? ಇಂತಹ ಸಂಗತಿಗಳನ್ನು ಕೇಳುವಾಗ ಬೇಸರವಾಗುತ್ತದೆ. ಒಳ್ಳೆಯ ಕಾರ್ಯಕ್ರಮ ಇದೆ, ಆದರೆ ನಮಗೆ ಅದನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಸಾಧ್ಯವಾಗುತ್ತಿಲ್ಲ. ಅಲ್ಲಿಯೂ ಕೂಡ ನಮ್ಮ ಕೆಟ್ಟ ಪ್ರವೃತ್ತಿ ಏನಿದೆ ಅದನ್ನು ಬಿಡುವುದಕ್ಕಾಗುತ್ತಿಲ್ಲ. ನಾನು ಹೇಳುತ್ತಿರುವಂತಹ ಪರಿಸ್ಥಿತಿ ಆಗಿಲ್ಲದಿದ್ದರೆ ನನಗೆ ಬಹಳ ಸಂತೋಷ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(ಮುಂದು)

**(772) 15–06–2017/ 6–10/ ಕೆಹೆಚ್–ಕೆಎಸ್(ಎಸ್‌ಪಿ)**

**ಶ್ರೀಮತಿ ಉಮಾಶ್ರೀ (ಮಹಿಳಾ ಮತ್ತು ಮಕ್ಕಳ ಕಲ್ಯಾಣ, ಕನ್ನಡ ಮತ್ತು ಸಂಸ್ಕೃತಿ ಸಚಿವರು):–** ಮಾನ್ಯ ಸಭಾಪತಿಯವರೆ, ಅದರ ಬಗ್ಗೆ ನಮಗೆ ಮಾಹಿತಿ ಬಂದಿಲ್ಲ. ನಾವು ಹೊರ ರಾಜ್ಯಗಳಿಗೆ ಕೊಡುತ್ತಿದ್ದೇವೆಂಬುದನ್ನು ಮುಗುಂ ಆಗಿ ಹೇಳುವ ಬದಲು, ಯಾರಿಗೆ, ಯಾವ ಸಂಸ್ಥೆಗೆ, ಹೊರ ರಾಜ್ಯವೆಂದರೆ ಯಾವ ರಾಜ್ಯಕ್ಕೆ, ಯಾವ ಯೋಜನೆಯಲ್ಲಿ ಕೊಟ್ಟಿದ್ದೇವೆಂದು ತಾವು ಹೇಳಿದರೆ ನಾವು ನಿಮಗೆ ಉತ್ತರವನ್ನು ಕೊಡುತ್ತೇವೆ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರೆ, ಈಗ ನನ್ನ ಹತ್ತಿರ ಸ್ಪಷ್ಟ ಮಾಹಿತಿ ಇಲ್ಲ. ನಾನು ಅದನ್ನು ತೆಗೆದುಕೊಂಡು ಬಂದಿಲ್ಲ. ನಾನು ಪತ್ರಿಕೆಯಲ್ಲಿ ಓದಿರುವ ನೆನಪಾಯಿತು. ಪತ್ರಿಕೆಯಲ್ಲಿರುವುದನ್ನು ಹೇಳಿದ್ದೇನೆ. ಹೊರ ರಾಜ್ಯದ್ದು, ನಮ್ಮ ರಾಜ್ಯದ್ದಲ್ಲ. ನಮ್ಮ ರಾಷ್ಟ್ರದ್ದಲ್ಲ ಎಂದು ಹೇಳುತ್ತಿಲ್ಲ. ಆದರೆ ಮಕ್ಕಳಿಗೆ ಅಂಗನವಾಡಿಯಲ್ಲಿ ಕೊಡುವಂತಹ ಆಹಾರದ ಗುಣಮಟ್ಟ, ಗರ್ಭಿಣಿ ಸ್ತ್ರೀಯರಿಗೆ ಕೊಡುವಂತಹ ಆಹಾರದ ಗುಣಮಟ್ಟ, ಅದು ಯಾರೇ ಕೊಡಲಿ, ಅದು contract norms ಪ್ರಕಾರ ಕೊಟ್ಟಿದ್ದಾರೆಯೋ ಏನು ಎನ್ನುವುದರ ಬಗ್ಗೆ ನಾನು ಪ್ರಶ್ನೆ ಮಾಡುವುದಕ್ಕೆ ಹೋಗುವುದಿಲ್ಲ. ಅದು ನಿಜವಾಗಿಯೂ ಗುಣಮಟ್ಟದ ಆಹಾರವಾಗಿದೆಯೇ? ಎಂಬ ಬಗ್ಗೆ ಪ್ರಾಮಾಣಿಕವಾಗಿ ನಮ್ಮನ್ನು ನಾವು ಕೇಳಿಕೊಳ್ಳೋಣ. ಶಾಲಾ ಮಕ್ಕಳಿಗೆ ಮಧ್ಯಾಹ್ನ ಕೊಡುವಂತಹ ಬಿಸಿಯೂಟ. ಅವರ ಮನೆಯಲ್ಲಿ ಮಕ್ಕಳಿಗೆ ಊಟವೇ ಸಿಗುವುದಿಲ್ಲ. ಏನೇ ಊಟವನ್ನು ಕೊಡುತ್ತೇವೆಂದು ಹೇಳುವುದಕ್ಕಿಂತ, ನಾವು ನಿಜವಾಗಿಯೂ ಒಳ್ಳೆಯ ಗುಣಮಟ್ಟದ ಆಹಾರವನ್ನು ಕೊಡುತ್ತೇವೆಯೇ? ಎಷ್ಟೋ ಶಾಲೆಗಳಿಗೆ ಅನಿರೀಕ್ಷಿತವಾಗಿ ಭೇಟಿ ಕೊಟ್ಟಾಗ, ಅಲ್ಲಿ ಕೊಡುವಂತಹ ಆಹಾರದ ಗುಣಮಟ್ಟವನ್ನು ನೋಡಿದಾಗ, ನಾವು ನಮಗೆ ಪ್ರಶ್ನೆಗಳನ್ನು ಹಾಕಿಕೊಳ್ಳುವಂತಹ ಸಂದರ್ಭ ಬರುತ್ತದೆ. ಇದರಲ್ಲಿ ಆಕಸ್ಮಾತ್ ನಾನು ಹೇಳುವ ಮಾಹಿತಿ ತಪ್ಪಿದ್ದರೆ, ಅದನ್ನು ಸುಧಾರಣೆ ಮಾಡಿಕೊಳ್ಳುವುದಕ್ಕೆ ಅವಕಾಶವಿಲ್ಲವೇ? ನಿಜವಾಗಿಯೂ, ಸುಧಾರಣೆ ಮಾಡಿಕೊಳ್ಳುವುದಕ್ಕೆ ಅವಕಾಶವಿದೆ. ಆ ದೃಷ್ಟಿಯಿಂದ ಮಕ್ಕಳ ಅಭಿವೃದ್ಧಿಗೆ ಬೇಕಾದ ಅನೇಕ ಸಂಗತಿಗಳನ್ನು ಮಾಡುವುದಕ್ಕೆ ಸಾಧ್ಯವಿಲ್ಲವೇ? ಇದರಲ್ಲಿ ಶಾಸಕರು ಭಾಗವಹಿಸಬೇಕೆಂದು ಉಲ್ಲೇಖ ಮಾಡಿದ್ದೀರಿ. 300 ಜನ ಶಾಸಕರಿದ್ದೇವೆ. ನಾವು ಅನಿರೀಕ್ಷಿತವಾಗಿ ಅಂಗನವಾಡಿಗೆ ಭೇಟಿ ಕೊಡುವುದಕ್ಕೆ ಸಾಧ್ಯತೆಯಿಲ್ಲವೇ? ನಾವು ಹೋದಾಗ ಅನಿರೀಕ್ಷಿತವಾಗಿ ಹೆಲ್ತ್ ಕೇರ್ ಸೆಂಟರ್‌ಗಳಿಗೆ ಭೇಟಿ ಕೊಡುವುದಕ್ಕೆ ಸಾಧ್ಯತೆಯಿಲ್ಲವೇ? ಅಲ್ಲಿ ಹೋದಾಗ ನಾವೇ ನಮ್ಮನ್ನು ತೊಡಗಿಸಿಕೊಂಡರೆ, ನಮ್ಮ ಮಕ್ಕಳಿಗೆ ಸರ್ಕಾರದ

ಯೋಜನೆಗಳು ಎಷ್ಟು ಪರಿಣಾಮಕಾರಿಯಾಗಿ ಸಿಗುತ್ತಿವೆ. ಕೊರತೆಗಳು ಏನಿವೆ ಎಂಬುದು ಗೊತ್ತಾಗುತ್ತದೆ. 70 ವರ್ಷಗಳಾದ ಮೇಲೆ ಈ ರಾಜ್ಯದ ಶಾಲಾ-ಕಾಲೇಜುಗಳಲ್ಲಿ ಶೌಚಾಲಯಗಳನ್ನು ನಿರ್ಮಾಣ ಮಾಡಬೇಕಾದ ಅನಿವಾರ್ಯತೆಯಿದೆ ಎಂದು ಹೇಳಿದರೆ ನಾವು ಇದರ ಕಡೆಗೆ ಎಷ್ಟು ಗಮನವನ್ನು ಕೊಟ್ಟಿದ್ದೇವೆ. ಶೌಚಾಲಯದ ಪರಿಸ್ಥಿತಿ ಯಾವ ರೀತಿಯಲ್ಲಿದೆ ಎಂಬ ಬಗ್ಗೆ ಪ್ರಶ್ನೆ ಮಾಡುವುದಕ್ಕೆ ಹೋಗುತ್ತಿಲ್ಲ. ಇವತ್ತಿಗೂ ಕೂಡ ನಮ್ಮ ರಾಜ್ಯದ ಎಲ್ಲ ಶಾಲಾ-ಕಾಲೇಜುಗಳಲ್ಲಿ ಶೌಚಾಲಯದ ವ್ಯವಸ್ಥೆಯಿಲ್ಲವೆಂಬುದು ಸತ್ಯ. ಇಡೀ ರಾಜ್ಯದ ನಾಗರೀಕರ ಶೌಚಾಲಯ ವ್ಯವಸ್ಥೆ ಬಗ್ಗೆ ಮಾತನಾಡುತ್ತಿಲ್ಲ. ಶಾಲಾ-ಕಾಲೇಜುಗಳಿಗೆ ಶೌಚಾಲಯದ ವ್ಯವಸ್ಥೆಯನ್ನು ಕೊಡುವುದಕ್ಕೆ ಆಗುತ್ತಿಲ್ಲ. ಒಂದು ಬದ್ಧತೆಯಿಂದ ಕನಿಷ್ಠ ಸಂಗತಿಗಳ ಬಗ್ಗೆ ಪ್ರಯತ್ನ ಮಾಡುವುದಕ್ಕೆ ಸಾಧ್ಯತೆಯಿಲ್ಲವೇ? ವರ್ಷ ವರ್ಷ ಲಕ್ಷಾಂತರ ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತೇವೆ. ಇವರೆಲ್ಲ ನಮ್ಮ ಮಕ್ಕಳು ಎಂಬ ಭಾವನೆ ಬಂದರೆ ಈ ರೀತಿಯಲ್ಲಿ ವರ್ತಿಸುತ್ತೇವೆಯೇ? ನಮ್ಮ ಮನೆಯಲ್ಲಿ ನಮ್ಮ ಮಕ್ಕಳಿಗೆ ಯಾವ ರೀತಿ ಸೌಲಭ್ಯವನ್ನು ಕೊಡುವುದಕ್ಕೆ ಅಪೇಕ್ಷೆ ಪಡುತ್ತೇವೋ, ಯಾವ ಒಳ್ಳೆಯ ಗುಣಮಟ್ಟದ ಆಹಾರವನ್ನು ಕೊಡುವುದಕ್ಕೆ ಅಪೇಕ್ಷೆ ಪಡುತ್ತೇವೋ, ಯಾವ ಒಳ್ಳೆಯ ಗುಣಮಟ್ಟದ ಸೌಲಭ್ಯವನ್ನು ಕೊಡುವುದಕ್ಕೆ ಅಪೇಕ್ಷೆ ಪಡುತ್ತೇವೋ, ಆ ಶಾಲೆಗೆ ಬಂದಿರುವಂತಹ ಐವತ್ತೋ-ನೂರೋ-ನೂರೈವತ್ತೋ ಮಕ್ಕಳನ್ನು ಕೂಡ ನಮ್ಮ ಮಕ್ಕಳ ಹಾಗೆ ಎನ್ನುವಂತಹ ಭಾವನೆ ಜಾಗೃತವಾದರೆ ಏಕೆ ಇದನ್ನು ಮಾಡುವುದಕ್ಕೆ ಸಾಧ್ಯವಿಲ್ಲ. ಹಾಗಾಗಿ ನನ್ನ ವಿನಂತಿಯೇನೆಂದರೆ, ನಾವು ಮಕ್ಕಳನ್ನು ಈ ದೃಷ್ಟಿಯಿಂದ ನೋಡದೆ ಇದ್ದರೆ, ಗಾಂಧೀಜಿಯವರು ಹೇಳಿದ ಮಾತು ನೆನಪಾಗುತ್ತದೆ. ನಾನು ದೇವರನ್ನು ಮಕ್ಕಳ ಮುಖದಲ್ಲಿ ಕಾಣುತ್ತೇನೆ ಎಂಬ ಮಾತನ್ನು ಗಾಂಧೀಜಿಯವರು ಹೇಳಿದರು. ನಾವು ಮಕ್ಕಳ ಮುಖದಲ್ಲಿ ದೇವರನ್ನು ಏಕೆ ಕಾಣುವುದಕ್ಕೆ ಸಾಧ್ಯವಿಲ್ಲ. ನಾವು ಮಕ್ಕಳಿಗೆ ಒಳ್ಳೆಯ ಸೌಲಭ್ಯವನ್ನು ಏಕೆ ಕೊಡುವುದಕ್ಕೆ ಸಾಧ್ಯವಿಲ್ಲ. ಪದೇ ಪದೇ ಪೌಷ್ಠಿಕಾಂಶದ ಕೊರತೆಯಿದೆ. ಗರ್ಭಿಣಿ ಸ್ತ್ರೀಯರಿಗೆ ಕೊಡುವಂತಹ ಆಹಾರದಲ್ಲಿ ಕೊರತೆ ಇದೆ. ಅವರ ಬೆಳವಣಿಗೆಯಲ್ಲಿ ಕುಂಠಿತವಾಗಿದೆ. ಈ ಎಲ್ಲ ಸಂಗತಿಗಳ ಬಗ್ಗೆ ಮಾನದಂಡವನ್ನು ಇಟ್ಟುಕೊಂಡು, ಸೂಚ್ಯಂಕಗಳನ್ನಿಟ್ಟುಕೊಂಡು ಉಲ್ಲೇಖ ಮಾಡಬೇಕು. ಈ ದೃಷ್ಟಿಯಲ್ಲಿ ಸರ್ಕಾರದ ಕಡೆಯಿಂದ ಈ ಯೋಜನೆಗಳನ್ನು ಅತ್ಯಂತ ಪರಿಣಾಮಕಾರಿಯಾಗಿ ನಮ್ಮನ್ನು ತೊಡಗಿಸಿಕೊಳ್ಳಬೇಕೆಂಬ ಮಾತನ್ನು ಹೇಳುತ್ತಿದ್ದೇನೆ. ಕೊನೆಯದಾಗಿ ಒಂದು ಆತಂಕಕಾರಿ ವಿಷಯವನ್ನು ತಮ್ಮ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಇದು **Times of India** Newspaper ನಲ್ಲಿ ವರದಿಯಾಗಿರುವಂತಹ ಸಂಗತಿಯಾಗಿದೆ; "Why does Karnataka has the most child alcohol addicts?" ಇಡೀ ದೇಶದಲ್ಲಿ ನಮ್ಮ ರಾಜ್ಯದ ಮಕ್ಕಳು ಅತ್ಯಂತ ದೊಡ್ಡ ಪ್ರಮಾಣದಲ್ಲಿ alcohol addictionಗೆ ಒಳಗಾಗಿದ್ದಾರೆ. ಮಾನ್ಯ ಮಂತ್ರಿಯವರೇ, ಶಾಲೆಯ ಸುತ್ತಮುತ್ತ 100 ಮೀಟರ್ ವ್ಯಾಪ್ತಿಯಲ್ಲಿ alcohol ಮಾರಾಟ ಮಾಡಬಾರದೆಂಬ ಕಾನೂನು ಇದೆ. 100 ಮೀಟರ್ ಹೊರಗೆ ಅಂಗಡಿಯನ್ನು ಹಾಕಿಕೊಂಡರೆ ನಮಗೆ ಏನು

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡುವುದಕ್ಕಾಗುವುದಿಲ್ಲ. ಶಾಲೆಯ ಪಕ್ಕದಲ್ಲಿರುವಂತಹ ಗೂಡು ಅಂಗಡಿಗಳು, ಸಣ್ಣ–ಸಣ್ಣ ಅಂಗಡಿಗಳು, ಶಾಲೆಯ ಪಕ್ಕದಲ್ಲಿ ಈ ರೀತಿಯ ಆಲ್ಕೋಹಾಲ್ ಮಾರಾಟ ಮಾಡುವಂತಹ ಸಂಗತಿಗಳು ಮತ್ತು ಅಲ್ಲಿ ಆಗುತ್ತಿರುವ addiction ಕೆಲಸಗಳು. ಅದ್ಯಾವುದೋ ಚಾಕೋಲೇಟ್ ಬರುತ್ತದೆಯಂತೆ. ಅದರ ಬಗ್ಗೆ ಪಟ್ಟಿಯನ್ನು ಮಾಡಿ ತೆಗೆದುಕೊಂಡು ಬಂದಿದ್ದೇನೆ. ಅದರ ಬಗ್ಗೆ ಹೆಚ್ಚು ಮಾತನಾಡುವುದಕ್ಕೆ ಹೋಗುವುದಿಲ್ಲ. ಪ್ರಾಮಾಣಿಕವಾಗಿ ಹದಿಹರೆಯದ ಮಕ್ಕಳನ್ನು drug mafia ಉಪಯೋಗ ಮಾಡಿಕೊಳ್ಳುವಂತಹದ್ದು. ಇದಕ್ಕೆ ಮಕ್ಕಳು ಬಹಳ ಸುಲಭವಾಗಿ ತುತ್ತಾಗುತ್ತಾರೆ. ಒಂದು ಸಮೀಕ್ಷೆಯ ಪ್ರಕಾರ ಕರ್ನಾಟಕ ರಾಜ್ಯದಲ್ಲಿ ಶೇಕಡಾ 30 ರಷ್ಟು ಮಕ್ಕಳು ಒಂದಲ್ಲ ಒಂದು ರೀತಿಯ ಚಟಕ್ಕೆ ತುತ್ತಾಗುತ್ತಿದ್ದಾರೆ. ಇದು ನಾನು ಹೇಳುತ್ತಿರುವ ಮಾತಲ್ಲ. ಡಾ॥ ವಿವೇಕ್ ಬೆನೆಗಲ್, ನಿಮ್ಹಾನ್ಸ್ ಆಸ್ಪತ್ರೆಯ ವೈದ್ಯರು, ಸಮೀಕ್ಷೆ ಮಾಡಿರುವ ಪ್ರಕಾರ ತಿಳಿದು ಬಂದಿರುವಂತಹ ಸಂಗತಿ. ಕೇವಲ ತಂಬಾಕು ಅಥವಾ alcohol ಮಾತ್ರವಲ್ಲ. ಅದಕ್ಕಿಂತಲೂ ಗಂಭೀರವಾದ ಪರಿಣಾಮವನ್ನು ಬೀರುವಂತಹ serious drugs abuseಗೆ ಮಕ್ಕಳು ಒಳಗಾಗಿದ್ದಾರೆ. ನಮ್ಮ ಶಾಲೆ ಮತ್ತು ಕಾಲೇಜುಗಳ ವ್ಯಾಪ್ತಿಯಲ್ಲಿ ಈ ರೀತಿ ನಡೆಯುತ್ತಿದ್ದರೆ, ಇದರ ಬಗ್ಗೆ ಕ್ರಮ ತೆಗೆದುಕೊಳ್ಳುವ ಕರ್ತವ್ಯ ಯಾರದ್ದು? ಗಂಡ–ಹೆಂಡತಿ ಕೆಲಸಕ್ಕೆ ಹೋಗುತ್ತಾರೆ. ಒಂದೋ–ಎರಡೋ ಮಕ್ಕಳು ಎಲ್ಲೋ ಹುಟ್ಟಿ ಬೆಳೆಯುತ್ತಾರೆ. ಅವರ ಮನೆಯಲ್ಲಿ ಯಾವ ರೀತಿ ವ್ಯವಸ್ಥೆಯಿದೆಯೋ, ಇಲ್ಲವೋ? ಮತ್ತು ಅದನ್ನು ಸರಿ ಮಾಡುವುದಕ್ಕೆ ಆಗುತ್ತದೋ, ಇಲ್ಲವೋ? ಎಂಬುದು ಗೊತ್ತಿಲ್ಲವೆಂದು ತಾವು ಉಲ್ಲೇಖ ಮಾಡಿದ್ದೀರಿ. ಆದರೆ ಪ್ರೀತಿಯಿಂದ ವಂಚಿತರಾದ ಮಕ್ಕಳು ಶಾಲಾ–ಕಾಲೇಜುಗಳ ಸುತ್ತಮುತ್ತ ಈ ರೀತಿಯ ಚಟಗಳಿಗೆ ತುತ್ತಾದರೆ, ಯಾವ ರೀತಿಯ ಸಮಾಜ ನಿರ್ಮಾಣವಾಗಬಹುದು. ಪದೇ ಪದೇ ಇದರ ಬಗ್ಗೆ ಪ್ರಶ್ನೆಯನ್ನು ಕೇಳುತ್ತೇವೆ. ಮಾನ್ಯ ಗೃಹ ಮಂತ್ರಿಗಳು ಗಾಂಜಾ ಬಗ್ಗೆ ಮಾತ್ರ ಮಾತನಾಡುತ್ತಾರೆ. ಗಾಂಜಾಗೆ ಸಂಬಂಧಪಟ್ಟ ವ್ಯಕ್ತಿಗಳನ್ನು ಹಿಡಿದಿದ್ದೇವೆಂದು ಉಲ್ಲೇಖ ಮಾಡುತ್ತಾರೆ. ಈ ರಾಕೆಟ್‌ನ್ನು ನನಗೆ ಗೊತ್ತಿರುವ ಹಾಗೆ ಕರ್ನಾಟಕದಲ್ಲಿ ಇಲ್ಲಿಯವರೆಗೆ ಯಾರು ಭೇದಿಸಿಲ್ಲ. ಆ ಕೊನೆ link ಇರುವಂತಹ peddler ಅನ್ನು last link ನಲ್ಲಿ supply ಮಾಡುವಂತಹ ಒಬ್ಬ ವ್ಯಕ್ತಿಯನ್ನು ಬಂಧಿಸಿ, ನಾವು ಒಂದ್ನಾಲ್ಕು ದಿನ ನಾಟಕ ಮಾಡಿ ಮುಗಿಸಿಬಿಡುತ್ತೇವೆ. ಇದರ ಬಗ್ಗೆ ಪೊಲೀಸ್ ಇಲಾಖೆಯಲ್ಲಿ ಮಾಹಿತಿಯಿಲ್ಲವೇ? Narcotics Bureau ದಲ್ಲಿ ಮಾಹಿತಿಯಿಲ್ಲವೇ? ಇದನ್ನು ಏಕೆ ಗಂಭೀರವಾಗಿ ಪರಿಗಣಿಸುವುದಕ್ಕೆ ಸಾಧ್ಯವಿಲ್ಲ. ಈ ಸದನದಲ್ಲಿ ಅನೇಕ ಬಾರಿ ಈ ವಿಷಯದ ಬಗ್ಗೆ ಚರ್ಚೆಯಾಗಿದೆ. ಇದೇ ನಮ್ಮ ಮಾನವ ಸಂಪನ್ಮೂಲವನ್ನು target ಮಾಡುತ್ತಿರುವುದು. ಹಾಗಾಗಿ ಮಕ್ಕಳ ಹಿತ ಕಾಯುವ ಬಗ್ಗೆ, ಮಕ್ಕಳ ರಕ್ಷಣೆ ಬಗ್ಗೆ, ಮಕ್ಕಳ ಹಕ್ಕಿನ ಬಗ್ಗೆ, ಮಕ್ಕಳ ಶಿಕ್ಷಣದ ಬಗ್ಗೆ, ಮಕ್ಕಳ ಆರೋಗ್ಯದ ಬಗ್ಗೆ, ಮಕ್ಕಳ ಪೌಷ್ಠಿಕ ಆಹಾರದ ಬಗ್ಗೆ ಈ ಎಲ್ಲವುದರ ಬಗ್ಗೆ ಮಾತನಾಡುವಂತಹ ಸಂದರ್ಭದಲ್ಲಿ ಮಕ್ಕಳನ್ನು ಈ ರೀತಿಯಲ್ಲಿ ಶೋಷಣೆ ಮಾಡುತ್ತಿದ್ದೇವೆಯಲ್ಲವೇ? ಮಕ್ಕಳ

ಭವಿಷ್ಯವನ್ನೇ ಲೂಟಿ ಮಾಡುತ್ತಿದೆಯಲ್ಲವೇ? ಮಕ್ಕಳನ್ನು ಗುರಿ ಮಾಡಿಕೊಂಡು, ಯಾರು ಡ್ರಗ್ ಸರಬರಾಜು ಮಾಡುವಂಥ ಮಾಫಿಯಾಗಳಿದ್ದಾರೆ ಅವರನ್ನು ನಿರ್ಬಂಧಿಸುವುದಕ್ಕೆ ಆಗುತ್ತಿಲ್ಲವೇ? ಇದರ ಬಗ್ಗೆ ಅನೇಕ ಮಾಹಿತಿಗಳಿವೆ. ಆದರೆ ಸಮಯವಿಲ್ಲದೇ ಇರುವುದರಿಂದ, ಇದನ್ನು ಉಲ್ಲೇಖ ಮಾಡುತ್ತಿಲ್ಲ. ಆದರೆ ಅತ್ಯಂತ ಗಂಭೀರವಾಗಿ ನಾವೆಲ್ಲ ಒಟ್ಟಿಗೆ ಸೇರಿ, ಒಂದು ಸಮಾಜವಾಗಿ ಎದುರಿಸಬೇಕಾದ ಒಂದು ಮಾಫಿಯಾವೆಂದರೆ, ಅದು drug mafia. ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಈ ದೇಶಕ್ಕೆ ನಾವು ಈ ರೀತಿಯಲ್ಲಿ ಮಾದರಿಯಾಗುತ್ತೇವೆಂದು ಹೇಳಿದರೆ ಇದು ತಲೆತಗ್ಗಿಸುವಂತಹ ಸಂಗತಿಯಾಗಿದೆ. ಒಂದು ಸರ್ಕಾರವಾಗಿ, ಒಂದು ಆಡಳಿತ ವ್ಯವಸ್ಥೆಯಾಗಿ ಇದನ್ನು ನಿಗ್ರಹ ಮಾಡುವುದಕ್ಕೆ ಆಗಲಿಲ್ಲವೆಂದರೆ ಯಾರಿಗೂ ಕೂಡ ಈ ಸದನದಲ್ಲಿ ನಿಂತುಕೊಂಡು ಮಕ್ಕಳ ಹಕ್ಕಿನ ರಕ್ಷಣೆ ಬಗ್ಗೆ ಮಾತನಾಡುವ ನೈತಿಕ ಅಧಿಕಾರವಿಲ್ಲ. ಏಕೆಂದರೆ, ಇವತ್ತಿನ ದಿವಸ ನಾವು ಏನು ಅನುಭವಿಸುತ್ತೇವೆ. ಅದನ್ನು ನಾವು ಮುಂದಿನ ತಲೆಮಾರಿನಿಂದ ಎರವಲು ಆಗಿ ಪಡೆದುಕೊಂಡಿದ್ದೇವೆ. ಇದು ನಮ್ಮ ಸ್ವಂತ ಸಂಪಾದನೆ ಮಾಡಿದ ಆಸ್ತಿಯಲ್ಲ. ಪಿತ್ರಾರ್ಜಿತ ಆಸ್ತಿಯಲ್ಲ. ಗಾಂಧೀಜಿಯವರು ಮುಂದಿನ ತಲೆಮಾರಿನಿಂದ ಪಡೆದುಕೊಂಡಿರುವಂತಹ ಆಸ್ತಿಯೆಂದು ಹೇಳುತ್ತಾರೆ. ಅತ್ಯಂತ ಜಾಗ್ರತೆಯಿಂದ ಮುಂದಿನ ತಲೆಮಾರಿಗೆ ಇದನ್ನು ಇನ್ನು ಚೆನ್ನಾಗಿ ಬಿಟ್ಟು ಹೋಗಬೇಕು. ಆದರೆ ನಾವೆಷ್ಟು ಬೇಜವಬ್ದಾರಿಯಿಂದ ವರ್ತಿಸುತ್ತಿದ್ದೇವೆ. ಹಾಗಾಗಿ ನಾನು ಅಂದುಕೊಳ್ಳುತ್ತಿದ್ದೇನೆ. ತಾವೇನು ಮಕ್ಕಳ ಹಕ್ಕಿನ ರಕ್ಷಣೆ ಬಗ್ಗೆ ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟಿದ್ದೀರಿ. ಇದರ ಮೂಲಕ ನಮ್ಮ ರಾಜ್ಯದಲ್ಲಿ ಇರುವಂತಹ ಯೋಜನೆಗಳನ್ನು ಅತ್ಯಂತ ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವುದಕ್ಕೆ ವಿಧಾನ ಸಭೆಯ ಮತ್ತು ವಿಧಾನ ಪರಿಷತ್ತಿನ ಸದಸ್ಯರಾಗಿ ನಾವು ಇನ್ನು ಮುಂದೆ ಆಸಕ್ತಿಯಿಂದ ತೊಡಗಿಸಿಕೊಳ್ಳಬೇಕು. ಇವತ್ತಿನ ದಿವಸ ಅನೇಕ ಮಂತ್ರಾಲಯಗಳು. ಸಮಾಜ ಕಲ್ಯಾಣ ಇಲಾಖೆ ಇರಬಹುದು. ಮಕ್ಕಳ ಮತ್ತು ಮಹಿಳಾ ಕಲ್ಯಾಣ ಇಲಾಖೆ ಇರಬಹುದು. ಶಿಕ್ಷಣ ಇಲಾಖೆ ಇರಬಹುದು. ಪೋಲೀಸ್ ಇಲಾಖೆ ಇರಬಹದು ಅಥವಾ ಇನ್ನಾವುದೇ ಇಲಾಖೆ ಇರಬಹುದು. ಈ ಎಲ್ಲ ಕಾರ್ಯಕ್ರಮಗಳನ್ನು ಸಮನ್ವಯ ಮಾಡಿಕೊಂಡು, ನಮ್ಮ ಆದ್ಯತೆ ಈ ರಾಜ್ಯದ ಮಕ್ಕಳ ಶಿಕ್ಷಣ. ನಮ್ಮ ಆದ್ಯತೆ ಈ ರಾಜ್ಯದ ಮಕ್ಕಳ ಒಳ್ಳೆಯ ಆರೋಗ್ಯ. ನಮ್ಮ ಆದ್ಯತೆ ಈ ರಾಜ್ಯದ ಮಕ್ಕಳ ಅದ್ಭುತವಾದ ಬೆಳವಣಿಗೆ. ಈ ಸಂಗತಿಗಳನ್ನು ಮನಸ್ಸಿನಲ್ಲಿಟ್ಟುಕೊಂಡು, ನಮ್ಮ ಯೋಜನೆಗಳನ್ನು ಅನುಷ್ಠಾನಗೊಳಿಸುವುದಕ್ಕೆ ನಾವೆಲ್ಲರೂ ಕಟಿಬದ್ಧರಾಗಬೇಕೆಂಬ ವಿನಂತಿಯನ್ನು ಮಾಡಿಕೊಂಡು, ಅವಕಾಶಕ್ಕಾಗಿ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

**ಶ್ರೀ ಕೆ.ಎಸ್. ಈಶ್ವರಪ್ಪ:-** ಮಾನ್ಯ ಸಭಾಪತಿಯವರೆ, ಈ ವಿಷಯಕ್ಕೆ ಸಂಬಂಧಿಸಿದಂತೆ ಉತ್ತರವನ್ನು ಮಾನ್ಯ ಸಚಿವರು ನೀಡಬೇಕು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:–** ಈ ವಿಷಯಕ್ಕೆ ಸಂಬಂಧಪಟ್ಟ ಸಚಿವರು ಉತ್ತರವನ್ನು ನಾಳೆ ನೀಡುತ್ತಾರೆ.

**ಡಾ॥ ಜಯಮಾಲ ರಾಮಚಂದ್ರ (ನಾಮನಿರ್ದೇಶಿತರು):–** ಮಾನ್ಯ ಸಭಾಪತಿಯವರೆ, ಅವಕಾಶವನ್ನು ನೀಡಿದಕ್ಕಾಗಿ ಧನ್ಯವಾದಗಳು. ಮಾನ್ಯ ಗಣೇಶ್ ಕಾರ್ಣಿಕ್‌ರವರು, ಶ್ರೀಮತಿ ಮೋಟಮ್ಮರವರು, ಶ್ರೀಮತಿ ತಾರಾ ಅನುರಾಧ ರವರು, ಈ ಸಮಾಜದಲ್ಲಿ ಅತ್ಯಂತ ನಿರ್ಲಕ್ಷ್ಯಕ್ಕೆ ಒಳಪಟ್ಟಿರುವಂತಹ ಒಂದು ವರ್ಗವಾದ ಮಕ್ಕಳ ಕುರಿತಂತೆ, ಮಕ್ಕಳ ಹಕ್ಕಿನ ಬಗ್ಗೆ, ಮಕ್ಕಳ ರಕ್ಷಣೆಯ ಬಗ್ಗೆ ಬಹಳ ಒಳ್ಳೆಯ ಚರ್ಚೆಯನ್ನು ಇವತ್ತಿನ ದಿವಸ ಈ ಸದನದ ಮುಂದಿಟ್ಟಿದ್ದಾರೆ. ಈ ಸದನದಲ್ಲಿ ಇದು ಎರಡನೆಯ ಚರ್ಚೆ ಎಂದು ನಾನು ಭಾವಿಸುತ್ತೇನೆ. ಅದಕ್ಕಾಗಿ ತಮಗೆ ಧನ್ಯವಾದಗಳನ್ನು ಸಲ್ಲಿಸುತ್ತಾ, ಇಡೀ ಪ್ರಪಂಚವು ಭಾರತ ದೇಶವನ್ನು ಒಂದೇ ಒಂದು ಕಾರಣಕ್ಕಾಗಿ ನೋಡುತ್ತಿದೆ. ಈ ದೇಶದಲ್ಲಿ ಯುವಕರೇ ಹೆಚ್ಚಾಗಿದ್ದಾರೆ. ಈ ಯುವಕರು ತುಂಬಿರುವಂತಹ ಮುಂದಿನ ಜೀವನದಲ್ಲಿ, ಮುಂದಿನ ಬದುಕಿನಲ್ಲಿ ಈ ದೇಶ ಬಹಳಷ್ಟು ಅಭಿವೃದ್ಧಿಯನ್ನು ಹೊಂದುವಂತಹ ರಾಷ್ಟ್ರ ಎನ್ನುವಂತಹ ನಿಟ್ಟಿನಲ್ಲಿ ಪ್ರತಿ ರಾಷ್ಟ್ರಗಳ ದೃಷ್ಟಿ ನಮ್ಮ ಭಾರತ ದೇಶದ ಮೇಲಿದೆ. ಇಡೀ ರಾಷ್ಟ್ರದ ಬಗ್ಗೆ ನಾನು ಹೇಳುತ್ತಿರುವುದು. ಮೊದಲನೇಯದಾಗಿ ನೆನ್ನೆಯ ದಿವಸ ನಾನು ಮಾತನಾಡುವಾಗ ಹೇಳಿದೆ. ಮೊದಲು ಮಕ್ಕಳ ಬಗ್ಗೆ ನೂರು ಕನಸುಗಳನ್ನು ಕಟ್ಟಿರುವಂತಹ ತಂದೆ–ತಾಯಿಂದಿರು ನನಗೊಂದು ಮಗುವಾಗಬೇಕೆಂಬ ನೂರು ಕನಸುಗಳನ್ನು ಕಟ್ಟಿಕೊಳ್ಳುತ್ತಾರೆ.

(ಮುಂದು)

773/15-6-2017/6-20/bkp-gr

**ಡಾ॥ ಜಯಮಾಲ ರಾಮಚಂದ್ರ(ಮುಂದು)**

ನೂರು ಕನಸುಗಳನ್ನು ಕಂಡ ತಂದೆ–ತಾಯಿಂದಿರು ಮಕ್ಕಳು ಹುಟ್ಟಿದಾಗ, ಅನೇಕ ಮಕ್ಕಳು ಇವತ್ತು ಎಂತಹ ಒಂದು ಮಾನಸಿಕ ಚಿತ್ರಹಿಂಸೆಯನ್ನು ಅನುಭವಿಸುತ್ತಿದ್ದಾರೆಂದರೆ ಬಹುಶ: ಈ ಸದನದಲ್ಲಿ ಹೇಳಿರತಕ್ಕಂತಹ ಒಂದೊಂದು ಮಾತುಗಳನ್ನು ನಾವು ನೋಡಿದಾಗ ಅದು ಬಾಲ ಕಾರ್ಮಿಕರು ಇರಬಹುದು, ಅದು ಭ್ರೂಣಹತ್ಯೆ ಇರಬಹುದು, ಅದು ಬಾಲ್ಯ ವಿವಾಹ ಇರಬಹುದು, ಅದು trafficking ಇರಬಹುದು ಅಥವಾ ಅದು ಬುದ್ಧಿಮಾಂದ್ಯ ಮಕ್ಕಳು ಇರಬಹುದು, ಅದು ಹೆಚ್‌ಐವಿ ಪೀಡಿತ ಇರಬಹುದು, ಅದು ಅಂಗವಿಕಲತೆಯಿಂದ ಕೂಡಿರಬಹುದು, ವಿಶೇಷ ಮಕ್ಕಳಿರಬಹುದು, ಭೀಕ್ಷಾಟನೆ ಮಕ್ಕಳು ಇರಬಹುದು, ಈ ಎಲ್ಲಾ ವಿಷಯಗಳನ್ನು ತೆಗೆದುಕೊಂಡಾಗಲೂ ಈ ಎಲ್ಲಾ ಸಮಸ್ಯೆಗಳು ಒಂದಕ್ಕೊಂದು ಬೆಸುದುಕೊಂಡಿದೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾನ್ಯ ಸಭಾಪತಿಯವರೆ, ನಮ್ಮಲ್ಲಿನ ಎಲ್ಲಾ ಹೆಣ್ಣು ಮಕ್ಕಳ ಬಗ್ಗೆ, ಅದರಲ್ಲೂ ಎರಡು ವರ್ಷದ ಹೆಣ್ಣು ಮಕ್ಕಳ ರಕ್ಷಣೆ ಬಗ್ಗೆ ನಮ್ಮ ಮಾನ್ಯ ಸದಸ್ಯರಾದ ಶ್ರೀಮಾನ್ ಬಸವರಾಜ ಹೊರಟ್ಟಿಯವರು ಕ್ರಮ ಕೈಗೊಳ್ಳಬೇಕೆಂದು ಹೇಳಿದರು. ಆದರೆ, ಒಂದು ಆಲೋಚನೆ ಬರುತ್ತದೆ. ನಮ್ಮ 3 ತಿಂಗಳ ಹೆಣ್ಣು ಮಗುವಿನ ಮೇಲೆ ಅತ್ಯಾಚಾರವಾಗುತ್ತದೆ. ಎರಡು ವರ್ಷದ ಹೆಣ್ಣು ಮಗುವಿನ ಮೇಲೆ ಅತ್ಯಾಚಾರವಾಗುತ್ತದೆ. 9 ವರ್ಷದ ಹೆಣ್ಣು ಮಗು ತಾಯಿಯಾಗುತ್ತಾಳೆ. 9 ವರ್ಷದ ಹೆಣ್ಣು ಮಗು ತಾಯಿಯಾದಾಗ ಆಕೆಗೆ ಭ್ರೂಣ ಹತ್ಯೆಗಳಾಗುತ್ತದೆ, ಆಕೆಗೆ ಬಾಲ್ಯ ವಿವಾಹವಾಗುತ್ತದೆ, ಅವಳ ಇಡೀ ಬದುಕು ನಾಶವಾಗುತ್ತದೆ. ನಮ್ಮಲ್ಲಿ ನಾವೆಲ್ಲರೂ ಮಾತನಾಡುತ್ತೇವೆ. ಒಂದು ಸತ್ಯವಾದ ಮಾತನ್ನು ನಾವು ಒಪ್ಪಿಕೊಳ್ಳಲೇ ಬೇಕಾಗುತ್ತದೆ. ಈ ಮಕ್ಕಳ ಸುತ್ತ-ಮುತ್ತ ನಡೆಯುವಂತಹ ಶೋಷಣೆಗಳು, ಫಸ್ಟ್ ಸರ್ಕಲ್‌ನಿಂದಲೇ ಆಗಿರುತ್ತದೆ. ತಾಯಿ-ತಂದೆಗಳಿಂದ, ಕುಟುಂಬದ ಅತ್ಯಂತ ಆಪ್ತರಿಂದ, ನೆಂಟರಿಷ್ಟರಿಂದ, ಈ ರೀತಿಯ ಮೊದಲನೇ ಸರ್ಕಲ್‌ನಿಂದಲೇ ಮಕ್ಕಳನ್ನು ಇವತ್ತು ಅತ್ಯಂತ ಶೋಷಣೆಗೆ ಒಳಪಡುವಂತಹ ಕೆಲಸಗಳು ನಮ್ಮಲ್ಲಿ ಹೆಚ್ಚಾಗುತ್ತಿದೆ.

ಮಾನ್ಯ ಸಭಾಪತಿಯವರೆ, ನಾನು ಒಂದು ವಿಷಯವನ್ನು ಮೊದಲನೆಯದಾಗಿ ಹೇಳಲಿಕ್ಕೆ ಬಯಸುತ್ತೇನೆ. ಮಕ್ಕಳನ್ನು ಹೇಗೇಗೆ ಬಳಸಿಕೊಳ್ಳಲಾಗುತ್ತಿದೆ ಎನ್ನುವುದರ ಬಗ್ಗೆ ತಮ್ಮ ಗಮನಕ್ಕೆ ತರಬೇಕಾಗಿದೆ. ಇಲ್ಲಿ ಪಕ್ಕದಲ್ಲಿಯೇ ಇರುವಂತಹ ದಾವಣಗೆರೆ ಜಿಲ್ಲೆಯ ಹರಪ್ಪನಹಳ್ಳಿಯಲ್ಲಿ ಗ್ರೀನ್ ಹೌಸ್‌ಗಳಿವೆ. ಈ ಗ್ರೀನ್ ಹೌಸ್‌ಗಳಲ್ಲಿ ಏನು ಮಾಡುತ್ತಿದ್ದಾರೆಂದರೆ ಅಲ್ಲಿ ಸೌತೇಕಾಯಿ, ಮೆರಿಗೋಲ್ಡ್, ಚೆಂಡು ಹೂವು, ಸೇವಂತಿಗೆ, ಇದಕ್ಕೆಲ್ಲಾ cross-pollination ಮಾಡುತ್ತಾರೆ. ಈ pollination ಮಾಡುವಾಗ ಕೆಮಿಕಲ್ಸ್‌ಗಳನ್ನು ಬಳಸಲಾಗುತ್ತಿದೆ. ಈ ಕೆಲಸ ಸೂರ್ಯೋದಯಕ್ಕಿಂತ್ತ ಮುಂಚೆ ಆಗಬೇಕು. ಆ pollination ಕೆಲಸವನ್ನು ಬೆಳಗಿನ ಜಾವ 4 ಗಂಟೆಗೆ ಮಾಡುತ್ತಾರೆ. ಇದನ್ನು ಹೇಗೆ ಮಾಡುತ್ತಾರೆಂದರೆ ಜಾಸ್ತಿ 13 ರಿಂದ 14 ವರ್ಷದ ಹೆಣ್ಣು ಮಕ್ಕಳು ಅಲ್ಲಿಗೆ ಹೋಗಿ ಕೆಲಸ ಮಾಡುತ್ತಾರೆ. ಅವರಿಗೆ 110 ರೂಪಾಯಿಗಳ ಸಂಬಳವನ್ನು ಮಾತ್ರ ಕೊಡುತ್ತಾರೆ. ಈ ಮಕ್ಕಳು ಬೆಳಿಗ್ಗೆ 4 ಗಂಟೆಗೆ ಎದ್ದು, ಈ ಒಂದು ಕೆಲಸಕ್ಕೆ ಹೋಗುತ್ತಾರೆ. ಆ ಕೆಮಿಕಲ್ಸ್ ಎಷ್ಟು ತೀವ್ರತೆ ಇದೆ ಎಂದರೆ ಮಕ್ಕಳ ಕೂದಲುಗಳು ಉದುರುತ್ತದೆ. ಕೈಗಳು ಯಾವಾಗಲು ಹಳದಿ ಬಣ್ಣಕ್ಕೆ ತಿರುಗುತ್ತದೆ. ಕಣ್ಣು ಹಳದಿಯಾಗುತ್ತದೆ. ಅದು ಆ ಕೆಮಿಕಲ್‌ನ ಪ್ರಭಾವ. ಆ ಮಕ್ಕಳು 4 ಗಂಟೆಗೆ ಹೋಗಿ ಮುಗಿಸಿಕೊಂಡು ವಾಪಸ್ಸು ಬಂದಾಗ ಅವರಿಗೆ ಸಹಜವಾಗಿ ನಿದ್ದೆ ಬರುತ್ತದೆ. ಮಕ್ಕಳು ಮಲಗಿಕೊಂಡು ಬಿಡುತ್ತಾರೆ. ನಂತರ ಆ ಮಕ್ಕಳ dropout ಎಲ್ಲಿ ಆಗುತ್ತದೆ? ಇವತ್ತು dropouts ಎನ್ನುವಂತಹದ್ದು, ಶಾಲೆಗಳಲ್ಲಿ ನಾವು dropouts ಅನ್ನು ನೋಡುತ್ತಿದ್ದೇವೆ, ಇವತ್ತು ನಮ್ಮ ಮಕ್ಕಳ ಹಕ್ಕಿನ ಅಧ್ಯಕ್ಷರಾಗಿದ್ದಂತಹವರೇ dropoutsನ ಅಂಕಿ-ಅಂಶಗಳನ್ನು ನಮಗೆ ಕೊಟ್ಟರು.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

1,61,000 ಮಕ್ಕಳು ನಮ್ಮಲ್ಲಿ dropouts ಆಗುತ್ತಿದ್ದಾರೆ. ವಲಸೆ ಹೋಗುವಂತಹದ್ದು, ತಾಯಿ–ತಂದೆ ಬಿಡಿಸುವಂತಹದ್ದು, ಮಕ್ಕಳುಗಳ trafficking ಆಗುವಂತಹದ್ದು, ಹೀಗೆ ಹಲವಾರು ಕಾರಣಗಳಿಗೆ ಆ ಮಕ್ಕಳುಗಳು dropouts ಆಗುವುದನ್ನು ನಾವು ನೋಡುತ್ತಿದ್ದೇವೆ.

ಮಾನ್ಯ ಸಭಾಪತಿಯವರೆ, ಈ dropouts ಆದಂತಹ ಮಕ್ಕಳುಗಳು ಇಲ್ಲಾ, ಈ ಕೆಲಸವನ್ನು ಮಾಡುತ್ತಾರೆ, ಇಲ್ಲಾ ಪುರಿಭಟ್ಟಿಗಳಲ್ಲಿ ಕೆಲಸ ಮಾಡುತ್ತಾರೆ, ಇಲ್ಲವೆಂದರೆ ಅಕ್ಕಿ ಗಿರಣಿಗಳಲ್ಲಿ ಕೆಲಸಕ್ಕೆ ಹೋಗುತ್ತಾರೆ. ಕಲ್ಲಿನ ಕ್ವಾರಿಗಳಲ್ಲಿ ಕೆಲಸ ಮಾಡುತ್ತಾರೆ. ನನ್ನ ಅನುಭವದಲ್ಲಿ ಬಂದಂತಹ ಒಂದು ಘಟನೆಯ ಬಗ್ಗೆ ನಾನು ಹೇಳಲಿಕ್ಕೆ ಬಯಸುತ್ತೇನೆ. ರಾಯಚೂರು ಜಿಲ್ಲೆಯ ಸಿಂಧನೂರು ತಾಲ್ಲೂಕಿನ ಒಂದು ಸಭೆಗೆ ಹೋಗಿದ್ದೆ. ಅಲ್ಲಿ ನೋಡಿದರೆ ಅಲ್ಲಿನ ಹೊಲ–ಗದ್ದೆಗಳಲ್ಲಿ ಎಲ್ಲಾ ಕಡೆ ಚಿಕ್ಕ ಚಿಕ್ಕ ಮಕ್ಕಳುಗಳು ಓಡಾಡುವುದು ನನ್ನ ಕಣ್ಣಿಗೆ ಕಾಣಿಸಿತು. ತೊಗರಿ ಹಾಕಿದ್ದರು. ಏನು ಮಾಡುತ್ತಿದ್ದಾರೆಂದು ನಮ್ಮ ಜೊತೆಯಲ್ಲಿದ್ದ ಬಹಳಷ್ಟು ಜನರನ್ನು ನಾನು ಕೇಳಿದೆ. ಆಗ ಅವರು ಮಕ್ಕಳು ಕೆಲಸಕ್ಕೆ ಹೋಗುತ್ತಿದ್ದಾರೆ, ಅವರಿಗೆ 150 ರೂಪಾಯಿಗಳ ಸಂಬಳವನ್ನು ಕೊಡುತ್ತಾರೆ, ಮಕ್ಕಳು ತೊಗರಿ ಬಿಡಿಸುತ್ತಾರೆ, ಮತ್ತೆ, ಕಾಟನ್ ಬಿಡಿಸುತ್ತಾರೆಂದು ಹೇಳಿದರು. ನಾವು ಆಗ ಗಾಡಿಯನ್ನು ನಿಲ್ಲಿಸಿ, ಎರಡು ಮಕ್ಕಳನ್ನು ಕರೆದು ಮಾತನಾಡಿಸಿದೆವು. ಅವರುಗಳು ಎಷ್ಟೊಂದು ಹುರುಪಾಗಿದ್ದರೆಂದರೆ, ಅವರು ಶಾಲೆ ಬಿಟ್ಟಿರುವುದಕ್ಕೆ ಅವರುಗಳಿಗೆ ಚಿಂತೆಯೇ ಇಲ್ಲ. ಏಕೆಂದರೆ, ಓದುವಂತಹ ವಯಸ್ಸಿನ ಮಕ್ಕಳುಗಳಿಗೆ ದುಡಿಮೆ ಎನ್ನುವುದು ಬಂದು ಬಿಟ್ಟರೆ ಆ ಮಕ್ಕಳು ಓದಿನ ಆಸಕ್ತಿಯನ್ನೇ ಕಳೆದುಕೊಂಡು ಬಿಡುತ್ತಾರೆ. ಆ ಸಿಂಧನೂರಿನಲ್ಲಿ ಹಿಂದೆ ಶ್ರೀಮತಿ ಇಂದಿರಾಗಾಂಧಿಯವರು ಇದ್ದಂತಹ ಸಮಯದಲ್ಲಿ ಬಾಂಗ್ಲಾ ದೇಶದವರಿಗೆ ಪುನರ್ ವಸತಿ ಕೇಂದ್ರಗಳನ್ನು ಕಟ್ಟಿಕೊಟ್ಟಿದ್ದಾರೆ. ಅಲ್ಲಿಂದ ಒಂದು 10 ಜನ ಹೆಣ್ಣುಮಕ್ಕಳು ಬಂದರು. ಆ ಹೆಣ್ಣು ಮಕ್ಕಳು ಹೇಳಿಕೊಂಡ ರೀತಿ ಹೇಗೆ ಇತ್ತು ಎಂದರೆ, ಅವರು ಹೇಳಿಕೊಳ್ಳುವಾಗ ಬಹಳ ದುಃಖವಾಗುತ್ತಿತ್ತು. ಅವರು ಹೇಳಿದರು, ನೋಡಿ, ಈ ಮಕ್ಕಳುಗಳು ತೊಗರಿ ಬಿಡಿಸಲಿಕ್ಕೆ ಹೋಗುತ್ತಾರೆ, ಕಾಟನ್ ಬಿಡಿಸಲಿಕ್ಕೆ ಹೋಗುತ್ತಾರೆ, 110 ರೂಪಾಯಿಗಳ ಸಂಬಳವನ್ನು ತೆಗೆದುಕೊಳ್ಳುತ್ತಾರೆ, ಮನೆಗೆ ಬರುವಾಗ ಕುಡಿದುಕೊಂಡು ಬರುತ್ತಾರೆ ಎಂದು ಹೇಳಿದರು. ಎಲ್ಲಿ ಅವರು ಕುಡಿದುಕೊಂಡು ಬರುತ್ತಾರೆಂದರೆ, 3ನೇ ಮನೆ ಬಿಟ್ಟರೆ 4ನೇ ಮನೆಯಲ್ಲಿ ಕಳ್ಳಭಟ್ಟಿ ಸಾರಾಯಿಗಳನ್ನು ಮಾಡುತ್ತಿರುತ್ತಾರೆ. ಇದನ್ನು ಸರ್ಕಾರದವರು ಮಾಡುತ್ತಿರುವುದಿಲ್ಲ. ಇದನ್ನು ಅವರವರೆ ವ್ಯವಸ್ಥೆಗಳನ್ನು ಮಾಡಿಕೊಂಡು ಮಾಡುತ್ತಿದ್ದಾರೆ. ಆದರೆ, ನಾಶವಾಗುತ್ತಿರುವುದು ಯಾರು? ಇದು ಸಿಂಧನೂರಿನಲ್ಲಿ ನಡೆಯುತ್ತಿರುವಂತಹ ಘಟನೆ. ನಾವು ಆ ಮಕ್ಕಳುಗಳನ್ನು ಮಾತನಾಡಿಸಿದಾಗ ಕಂಠಪೂರ್ತಿ ಕುಡಿದುಕೊಂಡು ಬಂದಿದ್ದರು. ಅವರುಗಳು 10–11 ವರ್ಷದ ಮಕ್ಕಳು. ಬಹಳ ದುಃಖದ ಸಂಗತಿ ಎಂದರೆ ಕುಟುಂಬದಲ್ಲಿ ತಾಯಿ–ತಂದೆಗಳಿಂದ ಬೇರ್ಪಟ್ಟ ಮಕ್ಕಳಾಗಿರಬಹುದು, ಅಥವಾ ಮಾನಸಿಕವಾಗಿ ಹಿಂಸೆಯನ್ನು ಅನುಭವಿಸಿದಂತಹ

ಮಕ್ಕಳು ಇರಬಹುದು, ಇಂತಹ ಹಲವಾರು ಮಕ್ಕಳುಗಳಿಗೆ ಈ ರೀತಿಯ ಒಂದು ಸ್ಥಿತಿ ಬಂದಾಗ ಈ ಮಕ್ಕಳುಗಳು ಅಲ್ಲಿಗೆ ಹೋಗುವಂತಹದ್ದನ್ನು ನಾವು ಕಾಣುತ್ತೇವೆ. ಈ ಮಾತನ್ನು ನಾನು ಏತಕ್ಕೆ ಹೇಳುತ್ತೇನೆಂದರೆ ನಮ್ಮಲ್ಲಿ ಬಾಲ ಕಾರ್ಮಿಕ ಪದ್ಧತಿ ಇಲ್ಲವೆಂದು ಹೇಳುತ್ತೇವೆ. ಸರ್ಕಾರವು ಇದನ್ನು ತಡೆಯುವಲ್ಲಿ ನಿಜಕ್ಕೂ ತುಂಬಾ ಒಳ್ಳೆಯ ಕೆಲಸವನ್ನು ಮಾಡುತ್ತಿದೆ. ಆ ತಾಯಿಂದಿರನ್ನು ನಾನು ಕರೆದು ಮಾತನಾಡಿಸಿದಾಗ, ಕೆಲವು ತಾಯಂದಿರು "ನೀವು ಯಾರು ನಮ್ಮನ್ನು ಕೇಳಲಿಕ್ಕೆ" ಎಂದು ಹೇಳಿದರು. "ನೀವು ನಮಗೆ ಹಣವನ್ನು ಕೊಡುತ್ತೀರಾ, ನಮಗೆ ಕಷ್ಟ ಇದೆ, ನಮ್ಮ ಮಕ್ಕಳು ಅವರು, ನಾನು ಹೆತ್ತ ಮಕ್ಕಳು, ನಾನು ಕೆಲಸಕ್ಕೆ ಕಳುಹಿಸುತ್ತೇನೆ, 150 ರೂಪಾಯಿಗಳ ಸಂಬಳ ಬರುತ್ತದೆ, ನನ್ನ ಗಂಡ ಬಿಟ್ಟು ಹೋಗಿದ್ದಾನೆ, ನನಗೆ ಯಾರು ಹಣ ಕೊಡುತ್ತಾರೆ, ಈ ಮಾತನ್ನು ಕೇಳಿದಾಗ. ತಾಯಿ, ನಿನಗೆ ದೇವರು ಬುದ್ದಿ ಕೊಡಲಿ ಎಂದು ನಮಗೆ ಅನಿಸಿತು. ಅಂದರೆ, ಇದು ಸತ್ಯ. ಇಂತಹ ಹೆಣ್ಣು ಮಕ್ಕಳನ್ನು, ಆ ನೋವುಗಳನ್ನು, ಆ ಮಕ್ಕಳು ತೋಡಿಕೊಂಡಿರುವಂತಹದ್ದನ್ನು ನಾವು ಕಂಡಿದ್ದೇವೆ.

ಮಾನ್ಯ ಸಭಾಪತಿಯವರೆ, ಕ್ಯಾಪ್ಟನ್ ಗಣೇಶ್ ಕಾರ್ಣಿಕ್‌ರವರು ಬಹಳ ಒಳ್ಳೆಯ ವಿಷಯಗಳನ್ನು ಪ್ರಸ್ತಾಪ ಮಾಡಿದರು. ಡ್ರಗ್ಸ್ ಬಗ್ಗೆ ಪ್ರಸ್ತಾಪ ಮಾಡಿದರು. ಮೊನ್ನೆ ಮಾತನಾಡುವಾಗಲು ಕೂಡ ಮಾನ್ಯ ಗೃಹ ಸಚಿವರು ಅದರ ಬಗ್ಗೆ ಕ್ರಮವನ್ನು ವಹಿಸುತ್ತೇನೆ ಎನ್ನುವ ಮಾತನ್ನು ಕೂಡ ಹೇಳಿದರು. ಇವತ್ತು ಡ್ರಗ್ಸ್ ಎನ್ನುವುದು ಹೇಗೆ ಆಗಿದೆ ಎಂದರೆ, ಮಾದಕ ದ್ರವ್ಯಗಳ ಮಾರಾಟಗಳು ಹೇಗೆ ಆಗಿದೆ ಎಂದರೆ ಅದು ಒಂದು ರೀತಿಯಲ್ಲಿ ಫ್ಯಾಷನ್ ಆಗಿದೆ. ಇವತ್ತು ಮಕ್ಕಳಲ್ಲಿ ಗೂಡು ಅಂಗಡಿಯಲ್ಲಿ ಡ್ರಗ್ಸ್ ಮಾರಾಟವಾಗುತ್ತಿದೆ. ಶಾಲೆಗಳ ಪಕ್ಕದಲ್ಲಿರುವಂತಹ ಗೂಡು ಅಂಗಡಿಗಳಲ್ಲಿ ಇವತ್ತು ಡ್ರಗ್ಸ್ ಮಾರಾಟ ಮಾಡಲಾಗುತ್ತಿದೆ. ಮಕ್ಕಳು ಈ ಮಾದಕ ದ್ರವ್ಯಕ್ಕೆ ಒಳಗಾಗಿ, ಈ ಮಕ್ಕಳು ಪಾಠಗಳಲ್ಲಿ ಆಸಕ್ತಿಯನ್ನು ಕಳೆದುಕೊಂಡು, ತಾನು ಯಾವುದಕ್ಕೋಸ್ಕರ ಇದ್ದೇನೆ ಎನ್ನುವುದನ್ನು ಅ ಮಕ್ಕಳಿಗೆ ಮರೆತು ಹೋಗುತ್ತಿದೆ. ಆ ತಾಯಿ-ತಂದೆಗಳ ಗೋಳು ಕೇಳಲಿಕ್ಕೆ ಆಗುವುದಿಲ್ಲ. ಹಗಲು-ರಾತ್ರಿ ಕಷ್ಟಪಟ್ಟು, ಗಂಡ ಒಂದು ಕಡೆ, ಹೆಂಡತಿ ಒಂದು ಕಡೆ, ಕೆಲಸಕ್ಕೆ ಹೋಗಿ ಮನೆಯನ್ನು ಸಾಕುವುದರ ಜೊತೆಗೆ ಈ ಮಕ್ಕಳನ್ನು ಸಾಕಲಿಕ್ಕೆ ಹೋದಾಗ, ಈ ಮಕ್ಕಳುಗಳಿಗೆ ಹೊಟ್ಟೆಬಟ್ಟೆ ಕಟ್ಟಿ, ಆ ಮಕ್ಕಳಿಗಾಗಿ ಆ ತಾಯಿ-ತಂದೆ ಕಷ್ಟ ಪಡುವಂತಹ ಸಂದರ್ಭದಲ್ಲಿ ಈ ಮಕ್ಕಳು ಮಾದಕ ದ್ರವ್ಯಕ್ಕೆ ಒಳಗಾದರು ಎಂದಾಗ ಆ ತಾಯಿ-ತಂದೆಯ ಸ್ಥಿತಿ ಹೇಗೆ ಆಗಬಹುದು. ಇಂತಹ ಸ್ಥಿತಿಯಲ್ಲಿ ತಾಯಿ-ತಂದೆ ಪರೆದಾಡುವಂತಹದ್ದಾಗಿದೆ. ಈ ಮೂಲಕ ನಾನು ಒಂದು ಮಾತನ್ನು ಕೇಳಲಿಕ್ಕೆ ಬಯಸುತ್ತೇನೆ. Narcotic Cellನ್ನು ಮಾಡಿದರೆ, ಖಂಡಿತವಾಗಿಯೂ ಸಹ ಇದಕ್ಕೆ ಒಂದು ಪರಿಹಾರ ಸಿಕ್ಕುತ್ತದೆ ಎನ್ನುವುದು ನನ್ನ ಅನಿಸಿಕೆ. ಅದರ ಬಗ್ಗೆ ಸರ್ಕಾರ ಗಮನಹರಿಸಬೇಕೆಂದು ವಿನಂತಿ ಮಾಡುತ್ತೇನೆ.

(ಮುಂದು)

**(774) 15.06.2017 6–30 ಎಸ್‌ಪಿಆರ್–ಜಿಆರ್**

ಡಾ॥ ಜಯಮಾಲ ರಾಮಚಂದ್ರ(ಮುಂದು)

ಪಾಲಕತ್ವ ಹಾಗೂ ಪೋಷಕತ್ವ ಎಂಬ ವಿಚಾರಗಳ ಬಗ್ಗೆ ತಾವು ಒಂದು ಬಹಳ ಒಳ್ಳೆಯ ಮಾತನ್ನು ಹೇಳಿದ್ದೀರಿ. ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು ಈಗಷ್ಟೇ ಸದನದಿಂದ ಹೊರಗಡೆ ಹೋಗಿದ್ದಾರೆ. ಆದರೂ ಪರವಾಗಿಲ್ಲ ನಾನೊಂದು ಮಾತನ್ನು ಹೇಳಬಯಸುತ್ತೇನೆ. ಸರ್ಕಾರದ ಸಾಕಷ್ಟು ಯೋಜನೆಗಳನ್ನು ನಾವು ನೋಡುತ್ತೇವೆ. ಮಾನ್ಯ ಸಚಿವರು ಇಲಾಖೆಯ ಪ್ರಭಾರವನ್ನು ವಹಿಸಿಕೊಂಡ ಮೇಲೆ ಅತ್ಯಂತ ಒಳ್ಳೆಯ ಕೆಲಸಗಳನ್ನು ಮಾಡಿದ್ದಾರೆ. ಪಾಲಕತ್ವ ಮತ್ತು ಪೋಷಕತ್ವ ವಿಚಾರದಲ್ಲಿ ಅದರಲ್ಲೂ ಪ್ರಮುಖವಾಗಿ ಹೆಚ್.ಐ.ವಿ. ಸೋಂಕಿತ ಮಕ್ಕಳಿಗಾಗಿ ಮಾನ್ಯ ಸಚಿವರು ಮಾಡಿರುವ ಕೆಲಸಗಳನ್ನು ನಾವು ಮರೆಯುವುದಕ್ಕೆ ಸಾಧ್ಯವಿಲ್ಲ. ಇವತ್ತಿನ ದಿವಸ ನಾವು ಬೇಡಿಕೆಯೊಂದನ್ನು ಮಾನ್ಯ ಸಚಿವರ ಮುಂದೆ ಇಟ್ಟಿದ್ದೆವು. ಅದರಂತೆ, ಹೆಚ್.ಐ.ವಿ. ಸೋಂಕಿತ ಮಕ್ಕಳ ಶಿಕ್ಷಣಕ್ಕಾಗಿ ತಲಾ ಒಬ್ಬರಿಗೆ ಹೆಚ್ಚುವರಿಯಾಗಿ 1,500 ರೂಪಾಯಿಗಳ ಅನುದಾನವನ್ನು ನೀಡಿದ್ದಾರೆ. ಈ ಕೆಲಸವು ನಿಜಕ್ಕೂ ಬಹಳ ದೊಡ್ಡದು. ಹೆಚ್.ಐ.ವಿ. ಸೋಂಕಿತ ಮಕ್ಕಳಿಗೆ ಮಾನ್ಯ ಸಚಿವರು ನೀಡಿದಷ್ಟು ಅನುದಾನ; ದಮನಿತರ ಕುರಿತಾಗಿ ಸಚಿವರು ಮಾಡಿದಷ್ಟು ಯೋಜನೆಗಳನ್ನು, ಹೆಣ್ಣುಮಕ್ಕಳ ಪೌಷ್ಠಿಕತೆಗೆ ಬೇಕಾದಷ್ಟು ಒತ್ತನ್ನು ನೀಡುವಂತಹ ಒಳ್ಳೆಯ ಕೆಲಸಗಳನ್ನು ಮಾಡಿದ್ದಾರೆ. ಮಾನ್ಯ ಸಚಿವರು ಮಾಡಿದ ಕೆಲಸಗಳನ್ನು ನಾವು ಮರೆಯುವುದಕ್ಕೆ ಸಾಧ್ಯವಿಲ್ಲ. ಅವರು ಮಾಡಿದ ಕೆಲಸಗಳನ್ನು ನಾವು ಖುದ್ದು ಭೇಟಿ ನೀಡಿ ನೋಡಿದಾಗಲೇ ನಮಗೆ ಗೊತ್ತಾಗುತ್ತದೆ. ಅಂಗನವಾಡಿಗಳಲ್ಲಿ ಎಷ್ಟು ಮಕ್ಕಳಿದ್ದಾರೆ ಅದಕ್ಕಿಂತಲೂ ಹೆಚ್ಚಾಗಿ ಅಂಗನವಾಡಿಯ ಹೊರಗೆ ಇದ್ದಾರೆನ್ನುವ ಅಂಶದಲ್ಲಿ ಸತ್ಯಾಂಶವಿದೆ. ಅಂಗನವಾಡಿಯ ಹೊರಗಿರುವ ಮಕ್ಕಳನ್ನು ಅಂಗನವಾಡಿಗೆ ಕರೆತರುವಂತಹ ಕೆಲಸಗಳಾಗಬೇಕು. ಹೀಗಾದಾಗ ಮಾತ್ರ ಇಂತಹ ಸಮಸ್ಯೆಗಳಿಗೆ ಸೂಕ್ತವಾದ ಪರಿಹಾರ ಸಿಕ್ಕಿದಂತಾಗುತ್ತದೆ ಹಾಗೂ ಸಮಾಜದ ಎಲ್ಲಾ ಮಕ್ಕಳಿಗೂ ನ್ಯಾಯ ಸಿಗುವಂತಹ ಕೆಲಸಗಳಾಗುತ್ತವೆ ಎನ್ನುವ ನಂಬಿಕೆ ನನ್ನಲ್ಲಿದೆ.

ನಮ್ಮಲ್ಲಿರುವ ಮಕ್ಕಳ ಹೆಚ್ಚಿನ ಸಮಸ್ಯೆಗಿಂತ ಮಕ್ಕಳ ಮಾರಾಟ ಸಮಸ್ಯೆ ದೊಡ್ಡದು. ಇಡೀ ಪ್ರಪಂಚದಲ್ಲಿ ಮಕ್ಕಳ ಕಳ್ಳಸಾಗಣೆ ಹೇಗಿದೆ ಎಂದರೆ ಗಿರಾಕಿಗಳಿಗಾಗಿಯೇ ಒಂದು ಕೇಂದ್ರವಿದೆ. ಅಂತಹವುಗಳಿಂದಲೇ ಇವತ್ತಿನ ದಿವಸ ಮನೆಗಳಲ್ಲಿ ಸ್ವಂತ ಹೆತ್ತ ತಂದೆ–ತಾಯಿ, ನೆರೆಹೊರೆಯವರು, ಪ್ರಿಯಕರ ಮದುವೆ ಮಾಡಿಕೊಳ್ಳುತ್ತೇನೆಂದು

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹೇಳಿ ಹೆಣ್ಣುಮಗಳನ್ನು ಕರೆದುಕೊಂಡು ಹೋಗಿ ಮಾರಾಟ ಮಾಡುವುದು, ಹಣದ ಆಸೆಗಾಗಿ ನೆಂಟರಿಷ್ಟರುಗಳೇ ಮಕ್ಕಳನ್ನು ಕಳ್ಳಸಾಗಣೆ ಮಾಡುವುದು. ಇವುಗಳೆಲ್ಲವೂ ಕೂಡ ಕುಟುಂಬದ ಒಳಗಿನಿಂದಲೇ ಪ್ರಾರಂಭವಾಗಿದೆ. ವಿಯೆಟ್ನಾಂ ಯುದ್ಧದ ಘನಘೋರವನ್ನು ಹೇಗೆ ಮರೆಯುವುದಕ್ಕೆ ಆಗುವುದಿಲ್ಲವೋ ಅದೇ ರೀತಿಯಾಗಿ ಮಾರಾಟದ ಫಲದಿಂದಾಗಿ ಮಕ್ಕಳ ಮನಸ್ಸಿನ ಮೇಲೆ ಇವತ್ತಿಗೂ ಕೂಡ ಮಾರಾಟ, ಚಿತ್ರಹಿಂಸೆಯ ಭಾವನೆಗಳೂ ಹಾಗೆಯೇ ನಿಂತು ಹೋಗಿದೆ. ಯಾವುದೇ ರೀತಿಯ ಬದಲಾವಣೆಯನ್ನು ತಂದರೂ ಕೂಡ ಮಕ್ಕಳು ಬದುಕಿದ್ದು ಸಾಯುವವರೆಗೂ ಖಿನ್ನತೆಯಿಂದ, ಮಾನಸಿಕ ತುಮುಲದಿಂದ ಹಾಗೂ ತಮಗಾದ ಆಘಾತದಿಂದ ಅವರುಗಳನ್ನು ಹೊರ ತರುವುದಕ್ಕೆ ಸಾಧ್ಯವೇ ಇಲ್ಲ.

ಎಷ್ಟೋ ಯೋಜನೆಗಳೇ ನಮ್ಮನ್ನು ಅಂದರೆ ಅಭಿವೃದ್ಧಿ ಎಂದು ಯಾವುದಕ್ಕೆ ನಾವು ಹೇಳುತ್ತೇವೆ... ನಗರೀಕರಣ-ಹಳ್ಳಿಯಿಂದ ನಗರಕ್ಕೆ ಬಂದಾಗ ಹಳ್ಳಿ ಜನರು ಪಡುವ ಯಾತನೆ, ವಲಸೆ.... ಇವತ್ತಿನ ದಿವಸ ಅಭಿವೃದ್ಧಿ ಯೋಜನೆ ಎಂದರೆ ಸ್ವಾತಂತ್ರ್ಯ ನಂತರದ 35 ದೊಡ್ಡ ದೊಡ್ಡ ಯೋಜನೆಗಳು ನಮ್ಮಲ್ಲಾಗಿವೆ. ಅವುಗಳ ಪೈಕಿ ಆಣೆಕಟ್ಟುಗಳ ನಿರ್ಮಾಣದ ಸಮಯದಲ್ಲಿ ಎಷ್ಟೋ ಜನಗಳು ಚೆಲ್ಲಾಪಿಲ್ಲಿಯಾಗಿ ಹರಿದು ಹಂಚಿ ಹೋದರು. ಆ ಜನಗಳ ಬದುಕು ಹೇಗಿತ್ತು, ಹೇಗೇ ನಾಶವಾಯಿತು ಎಂಬ ಅಂಶಗಳ ಬಗ್ಗೆ ನಾವು ಯಾರೂ ತಲೆಕೆಡಿಸಿಕೊಳ್ಳುತ್ತಿಲ್ಲ. ಆದರೆ ಅದರ ಮೊದಲ ಪರಿಣಾಮ ಮಕ್ಕಳ ಮೇಲೆ ಉಂಟಾಗುತ್ತದೆ. ಅದರ ಪರಿಣಾಮಗಳಿಂದ, ಆಘಾತದಿಂದ ಹೊರಗೆ ಬರಲಿಕ್ಕಾಗದೇ ಇಡೀ ಸಂತತಿ ಹಾಗೂ ಮಕ್ಕಳು ನರಳುವುದನ್ನು ನಾವು ನೋಡಿದ್ದೇವೆ.

21 ನೇ ಶತಮಾನದಲ್ಲಿ ಮಾನವ ಕಳ್ಳಸಾಗಣೆಯು ಶೋಷಣೆಯಾಗಿದೆ ಎಂದು ವಿಶ್ವಸಂಸ್ಥೆ ಹೇಳುತ್ತಿದೆ ಹಾಗೂ ಇಂತಹ ಮಾತುಗಳನ್ನು ನಾವು ಸಹ ಕೇಳುತ್ತಿದ್ದೇವೆ. ಒಂದು ಅಧ್ಯಯನದ ಪ್ರಕಾರ ಇವತ್ತಿನ ದಿವಸ ಬಲವಂತದ ದುಡಿಮೆಗಾಗಿ ಭಾರತ ದೇಶದಿಂದ ಮಕ್ಕಳ ಕಳ್ಳಸಾಗಣೆಯಾಗುತ್ತಿದ್ದು ಇದರ ಸಂಖ್ಯೆ 20 ರಿಂದ 65 ಮಿಲಿಯನ್‌ಗಳಾಗಿರುತ್ತದೆ. ಶೇಕಡ 90 ರಷ್ಟು ಮಕ್ಕಳ ಕಳ್ಳಸಾಗಣೆಯು ಅಂತರ್ ದೇಶೀಯ ಮಟ್ಟದಲ್ಲಾಗುತ್ತಿದೆ. ಶೇಕಡ 10 ರಷ್ಟು ಮಕ್ಕಳ ಕಳ್ಳಸಾಗಣೆಯು ಅಂತರಾಷ್ಟ್ರೀಯ ಗಡಿಗಳಲ್ಲಾಗುತ್ತಿದೆ. ಇಷ್ಟೆಲ್ಲಾ ಪ್ರಮಾಣದಲ್ಲಿ ಮಕ್ಕಳನ್ನು ಕರೆದುಕೊಂಡು ಹೋಗಿ ಮಾರಾಟ ಮಾಡುತ್ತಾರೆ. ಒಂದು ಬಾರಿ ಮಾರಾಟ ಮಾಡಿರುವಂತಹ ಮಗು ವಾಪಸ್ಸು ಮನೆಗೆ ಬಂದಾಗ ಬಹಳಷ್ಟು ಜನ ತಂದೆ-ತಾಯಿಗಳು ಅವರುಗಳನ್ನು ಮನೆಯೊಳಗೆ ಕರೆದುಕೊಳ್ಳುವುದಿಲ್ಲ. ಇದಕ್ಕಿರುವ ಕಾರಣಗಳೆಂದರೆ ಮೊದಲನೆಯದು ಆ ಹುಡುಗಿಯಿಂದ ಕುಟುಂಬಕ್ಕೆ ಹಾಗೂ ಕುಲಕ್ಕೆ ಕೆಟ್ಟ ಹೆಸರು ಬರುತ್ತದೆ. ಆ ಹುಡುಗಿಯ ಮಾನ ಹೊರಟು ಹೋಯಿತು. ಆಕೆಯನ್ನು ಬೇರೆಯವರು

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮದುವೆಯಾಗುವುದಿಲ್ಲ ಎನ್ನುವಂತಹ ಕೆಲವು ಮೌಢ್ಯಗಳನ್ನು ತುಂಬಿಸಿಕೊಂಡು ತಂದೆ–ತಾಯಿಗಳು ಆ ಮಗುವನ್ನು ಮನೆಗೆ ಸೇರಿಸುವುದಿಲ್ಲ. ಅಂತಹ ಮಕ್ಕಳು ಬಯಲು ದಾರಿಯಲ್ಲಿ ಬಂದು ನಿಂತುಕೊಂಡು ದಮನಿತ ದಂಧೆಗೆ ತಳ್ಳುವಂತಹ ಸ್ಥಿತಿಗಳು ನಿರ್ಮಾಣವಾಗುತ್ತಿದೆ ಹಾಗೂ ಅಂತಹ ಸಣ್ಣ ಮಕ್ಕಳನ್ನು ಈ ಸಮಾಜವೇ ನಿರ್ಮಾಣ ಮಾಡಿ ಕೂಡಿಸುತ್ತಿದೆ. ಇಂತಹ ಸ್ಥಿತಿಯಲ್ಲಿ ನಮ್ಮ ಮಕ್ಕಳು ಬದುಕುವುದನ್ನು ನಾವು ನಮ್ಮ ಕಣ್ಣಾರೆ ನೋಡುತ್ತಿದ್ದೇವೆ. ರೂಪಾಯಿ ಎರಡು ಲಕ್ಷಗಳಿಂದ ರೂಪಾಯಿ ಐದು ಲಕ್ಷ ದವರೆಗೆ ಒಂದು ಮಗುವಿನ ಮಾರಾಟದ ಮೊತ್ತವಾಗಿರುತ್ತದೆ. ಒಂದು ಸಾವಿರ ರೂಪಾಯಿಯಿಂದ ಐದು ಸಾವಿರ ರೂಪಾಯಿಗಳವರೆಗೆ ತಿಳುವಳಿಕೆಯುಳ್ಳ, ಸುಂದರ, ದಷ್ಟ–ಪುಷ್ಟವಾಗಿರುವಂತಹ ಮಗುವಾಗಿದ್ದ ಪಕ್ಷದಲ್ಲಿ ರೂಪಾಯಿ ಎರಡು ಲಕ್ಷಗಳಿಂದ ರೂಪಾಯಿ ಐದು ಲಕ್ಷದವರೆಗೆ ಹಣವನ್ನು ಪಡೆದುಕೊಂಡು ಇವತ್ತಿನ ದಿವಸ ಮಕ್ಕಳನ್ನು ಮಾರಾಟ ಮಾಡುತ್ತಿದ್ದಾರೆ. ಮಾರಾಟವಾದ ನಂತರ ಮಕ್ಕಳು ಪಡುವ ಯಾತನೆಯನ್ನು ಯಾವ ಮನುಷ್ಯನೂ ಊಹಿಸಿಕೊಳ್ಳಲಿಕ್ಕೆ ಸಾಧ್ಯವಿಲ್ಲ ಹಾಗೂ ನಾನು ಅದನ್ನು ಇವತ್ತಿನ ದಿವಸ ಈ ಸದನದಲ್ಲಿ ಹೇಳಲಿಕ್ಕೂ ಸಾಧ್ಯವಿಲ್ಲ. ಅಂತಹ ಯಾತನೆಗಳನ್ನು ಮಕ್ಕಳು ಅನುಭವಿಸಿ ಬಂದ ನಂತರ ಕೊನೆಯದಾಗಿ ಅಂತಹ ಮಕ್ಕಳ ಬದುಕನ್ನು ಕೊನೆಗೊಳಿಸುವುದು ಹೆಚ್.ಐ.ವಿ. ಸೋಂಕು. ಅವರುಗಳು ಸೋಂಕಿತ ಮಕ್ಕಳಾಗಿ ಹುಟ್ಟುವ ಮಕ್ಕಳಿಗೂ ಕೂಡ ಅದನ್ನು ಹರಡಿಸುವಂತಹದ್ದು. ತನ್ನ ಬದುಕು ನಾಶವಾಗಿ ಅದಕ್ಕೆ ಯಾರನ್ನೂ ಕೂಡ ದೂಷಣೆ ಮಾಡದೇ ಆ ಮಗು ಒಂದು ಹಣೆಪಟ್ಟಿಯನ್ನು ಕಟ್ಟಿಕೊಂಡು ರಸ್ತೆಯಲ್ಲಿ ನಿಲ್ಲುಂತಹ ಸ್ಥಿತಿ ಇವತ್ತಿನ ದಿವಸ ನಿರ್ಮಾಣವಾಗಿದೆ. ಇಂತಹ ಸ್ಥಿತಿಗೆ ನಮ್ಮ ಸಮಾಜವೇ ಕಾರಣವಾಗಿದೆಯೇ ವಿನಃ ಮತ್ತಾರೂ ಅಲ್ಲ.

ನಾನು ನಿಜವಾಗಿ ಹೇಳುವುದೇನೆಂದರೆ ನಮ್ಮಲ್ಲಿ ಹಲವಾರು ಯೋಜನೆಗಳಿವೆ. ಇಂತಹ ಸಾವಿರಾರು ಯೋಜನೆಗಳನ್ನು ಜಾರಿಗೆ ತಂದಿರುವ ನಮ್ಮ ಮಾನ್ಯ ಮುಖ್ಯಮಂತ್ರಿಗಳನ್ನು ಹಾಗೂ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವೆಯವರಾದಂತಹ ಶ್ರೀಮತಿ ಉಮಾಶ್ರೀ ಅವರನ್ನು ನಾನು ಅತ್ಯಂತ ಗೌರವದಿಂದ ನೆನೆಯುತ್ತೇನೆ. ಈ ಸದನದಲ್ಲಿರುವ 33 ಸಚಿವರುಗಳು ಮಹಿಳೆಯರ ಕುರಿತಂತೆ ಹಲವಾರು ಯೋಜನೆಗಳನ್ನು ಮಾಡಿದ್ದಾರೆ. ಆದರೆ ಅಂತಹ ಯೋಜನೆಗಳನ್ನು ಅನುಷ್ಠಾನಕ್ಕೆ ತರುವಲ್ಲಿ ಪೊಲೀಸಿನವರಿಗೆ ಹೆಚ್ಚಿನ ಶಿಕ್ಷಣವನ್ನು ನಾವು ನೀಡಬೇಕಾಗುತ್ತದೆ ಎಂಬುದಾಗಿ ನಾನು ಹೇಳುತ್ತೇನೆ. ಅವರಿಗೆ ಹೆಚ್ಚಿನ ಶಿಕ್ಷಣವನ್ನು ನೀಡುವುದರ ಜೊತೆಗೆ ಯೋಜನೆಗಳನ್ನು ಅನುಷ್ಠಾನಕ್ಕೆ ತರುವಂತಹ ಕೆಲಸಗಳನ್ನು ಮಾಡುವಲ್ಲಿ ನಾವು ಹೆಚ್ಚು ಕಾರ್ಯಪ್ರವೃತ್ತರಾಗಬೇಕಾಗುತ್ತದೆ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇವತ್ತಿನ ದಿವಸ ಎಷ್ಟು ಪ್ರಮಾಣದಲ್ಲಿ ಮಕ್ಕಳು ಇದರಲ್ಲಿ ಸಿಕ್ಕಿಹಾಕಿಕೊಂಡಿದ್ದಾರೆ ಎನ್ನುವ ಅಂಶವನ್ನು ನಾವು ನೋಡಿದಾಗ ಬಾಲ್ಯ ವಿವಾಹವನ್ನು ತಡೆಯಲು ಸರ್ಕಾರವು ಶತಾಯ ಗತಾಯವಾಗಿ ಪ್ರಯತ್ನಿಸುತ್ತಿದೆ. ಈ ಸಂಬಂಧ ನಮ್ಮ ಶ್ರೀಮತಿ ಕೃಪಾ ಆಳ್ವರವರು ಮೊನ್ನೆಯ ದಿನ ಕುಲಬುರಗಿ ಜಿಲ್ಲೆಯಲ್ಲಿ 103 ಹೆಣ್ಣುಮಕ್ಕಳು ಬಾಲ್ಯವಿವಾಹವಾಗುವುದನ್ನು ತಡೆಯುವ ನಿಟ್ಟಿನಲ್ಲಿ ಸರ್ಕಾರದೊಂದಿಗೆ ಕೈಜೋಡಿಸಿದಾಗ, ಸರ್ಕಾರವು ಬಹಳ ದೊಡ್ಡ ಮಟ್ಟದಲ್ಲಿ ಅಂದರೆ ಪಹರೆ ಹಾಕಿದ ಹಾಗೆ ಬಾಲ್ಯ ವಿವಾಹವನ್ನು ತಡೆಯುವಲ್ಲಿ ಬಹಳ ದೊಡ್ಡ ಕೆಲಸವನ್ನು ಮಾಡುತ್ತಿದೆ. ನನಗೆ ತಿಳಿದ ಹಾಗೆ ಬೀದರ್ ಜಿಲ್ಲೆಯಲ್ಲಿ 93 ಹೆಣ್ಣುಮಕ್ಕಳು ಬಾಲ್ಯವಿವಾಹವಾಗುವುದನ್ನು ತಡೆಯುವಂತಹ ಕೆಲಸಗಳನ್ನು ಮಾಡಿದ್ದಾರೆ.

ಸಮಾಜದಲ್ಲಿ ಇಷ್ಟೆಲ್ಲಾ ಸಂಗತಿಗಳಾಗುತ್ತಿದ್ದರೂ ಕೂಡ ಮಕ್ಕಳನ್ನು ದೇವದಾಸಿ ಮಾಡಬಾರದು ಎಂದು ಹೇಳುತ್ತಾರೆ. ಇದನ್ನು ತಡೆಗಟ್ಟುವ ನಿಟ್ಟಿನಲ್ಲಿ ಸಂಬಂಧಪಟ್ಟ ತಹಸೀಲ್ದಾರ್‌ರವರುಗಳು ದೇವಸ್ಥಾನಗಳಲ್ಲಿ ಕಾಯುತ್ತಾ ಕುಳಿತಿರುತ್ತಾರೆ, ಅಂತಹ ದೇವಸ್ಥಾನಗಳಿಗೆ ಹೆಣ್ಣುಮಕ್ಕಳನ್ನು ಕರೆದುಕೊಂಡು ಹೋಗಿ ದೇವಸ್ಥಾನದ ಅರ್ಚಕರು ರಾತ್ರಿಯ ವೇಳೆಯಲ್ಲಿ ಮಗುವಿನ ಮನೆಗೆ ಹೋಗಿ ನಡುರಾತ್ರಿಯಲ್ಲಿ ಮಗುವಿಗೆ ಮುತ್ತನ್ನು ಕಟ್ಟಿಸುವಂತಹ ಕೆಲಸಗಳು ನಡೆಯುತ್ತಿವೆ. ಈ ಕೆಲಸವನ್ನು ಅತ್ಯಂತ ಗೌಪ್ಯವಾಗಿ ಯಾರಿಗೂ ಗೊತ್ತಾಗದ ರೀತಿಯಲ್ಲಿ ಮಾಡುತ್ತಾರೆ. ಇಂತಹ ಕೆಲಸವನ್ನು ಸಮಾಜವು ಪೊಲೀಸರ ಹಾಗೂ ಕಾನೂನಿನ ಕಣ್ಣುಗಳನ್ನು ತಪ್ಪಿಸಿ ಮಾಡುತ್ತಿದೆ. ನಮ್ಮಲ್ಲಿ ಶೇಕಡ 71 ರಷ್ಟು ಬಾಲ್ಯವಿವಾಹಗಳು ನಡೆಯುತ್ತಿವೆ. ಇವುಗಳನ್ನು ತಡೆಹಿಡಿಯಬೇಕಾಗಿದೆ. ನಮಲ್ಲಿನ ಹೆಣ್ಣುಮಕ್ಕಳನ್ನು ಅಂದರೆ ದಮನಿತ ಮಕ್ಕಳನ್ನು ತಾವು ಹೇಗೆ ಈ ವ್ಯವಸ್ಥೆಗೆ ಬಂದಿರಿ ಎಂಬುದಾಗಿ ವಿಚಾರಿಸಿದಾಗ, ಶೇಕಡ 71 ರಷ್ಟು ಹೆಣ್ಣು ಮಕ್ಕಳು ತಾವು 12 ರಿಂದ 18 ವರ್ಷ ವಯಸ್ಸಿನೊಳಗೆ ಇರುವಾಗ ಇಂತಹ ವೃತ್ತಿಗೆ ಬರುವಂತಹ ಅಸಹಾಯಕ ಸ್ಥಿತಿಯನ್ನು ಅವರುಗಳು ಅನುಭವಿಸಿದ್ದಾರೆಂಬುದಾಗಿ ತಿಳಿಸಿರುತ್ತಾರೆ.

(ಮುಂದು)

***775/15-6-2017/6-40/mss (bkp)- md***

**ಡಾ॥ಜಯಮಾಲ ರಾಮಚಂದ್ರ(ಮುಂದು)**

ಅಂದರೆ, ಬಾಲ್ಯದಲ್ಲಿಯೇ 18 ವರ್ಷದೊಳಗೆ ತನ್ನ ಬದುಕನ್ನು ಕೊನೆಗೊಳಿಸುವಂತಹ ಪರಿಸ್ಥಿತಿ ನಮ್ಮ ಹೆಣ್ಣು ಮಕ್ಕಳಿಗೆ ಬಂದಿದೆ. ಹೆಣ್ಣು ಮಕ್ಕಳ ಹಕ್ಕುಗಳನ್ನು ರಕ್ಷಣೆ ಮಾಡುವಲ್ಲಿ ಬೇಕಾದಷ್ಟು ಕಾನೂನುಗಳಿವೆ. ನಮ್ಮ ಕಾನೂನುಗಳಿಗೆ ಏನೂ ತೊಂದರೆಯಿಲ್ಲ. *Fast Track Courts* ಇದೆ, ನಮ್ಮ ಸರ್ಕಾರ ಬೇಕಾದಷ್ಟು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡಿದೆ. ಮತ್ತೆ, ಅದರ ಹಿಂದೆ ಬಿದ್ದಿದ್ದಾರೆ. ಹಿಂದೆ ಬಿದ್ದು, ಶತಾಯ-ಗತಾಯ ಇವುಗಳನ್ನು ನಿಯಂತ್ರಣಕ್ಕೆ ತರಬೇಕು, ಇವರುಗಳಿಗೆ ಒಳ್ಳೆಯದನ್ನು ಮಾಡಬೇಕು ಎನ್ನುವುದು ನಮ್ಮ ಸರ್ಕಾರಕ್ಕೆ ಇದೆ.

ಮಾನ್ಯ ಸಭಾಪತಿಯವರೆ, ತಮಾಷೆಯನ್ನು ಕೇಳಿ. ಒಂದೇ ಒಂದು ರೇಪ್ ಆದರೂ ಕೂಡ ಅವರಾಗಿಯೇ ಅವರು ಬಂದು ಈ ರೀತಿ ಆಗಿದೆ ಎಂದು ಕೇಸ್ ದಾಖಲು ಮಾಡುವುದಿಲ್ಲ. ಕೇಸ್ ದಾಖಲು ಮಾಡದೇ ಇರತಕ್ಕದ್ದು 80%. ತನಗೆ ಏನಾಗಿದೆ ಎಂದು ಹೇಳುವುದನ್ನು ಹೇಳದೇ ಹೋಗಿಬಿಟ್ಟರೆ ಇನ್ನು, ಹೇಗೆ ಅತ್ಯಾಚಾರವಾಗಿದೆ, ಹೇಗೆ ಲೈಂಗಿಕ ದೌರ್ಜನ್ಯ ಆಗಿದೆ, ಶೋಷಣೆ ಆಗಿದೆ ಎನ್ನುವುದನ್ನು ಕಂಡು ಹಿಡಿಯುವುದಾದರೂ ಹೇಗೆ? ಇನ್ನು ಮಕ್ಕಳಿಗೆ ಈ ವಿಷಯವನ್ನು ಹೇಗೆ ಹೇಳಬೇಕೆನ್ನುವುದು ಸಹ ಗೊತ್ತಾಗುವುದಿಲ್ಲ. ಆ ಮಕ್ಕಳು ಯಾರ ಹತ್ತಿರ ಹೇಳಿಕೊಳ್ಳುತ್ತಾರೆ, ತಾಯಿ-ತಂದೆ ಹತ್ತಿರ ಬಂದು ಹೇಳಿಕೊಳ್ಳುತ್ತಾರೆ. ತಾಯಿ-ತಂದೆಯರು ಮರ್ಯಾದೆ ಎನ್ನುವ ಹಣೆಪಟ್ಟಿಯನ್ನಿಟ್ಟುಕೊಂಡು ಯಾವುದನ್ನೂ ಕೂಡ ಹೇಳದೆ, ಮೌನವಾಗಿ ಕುಳಿತುಕೊಳ್ಳುತ್ತಾರೆ. ಇದರ ಬಗ್ಗೆ ನಾವು ಸರ್ಕಾರವನ್ನು ದೂಷಣೆ ಮಾಡುವುದಕ್ಕಾಗುತ್ತದೆಯೇ? ಸರ್ಕಾರಕ್ಕೆ ಕನಸು ಬೀಳುತ್ತದೆಯೇ? ಸರ್ಕಾರಕ್ಕೆ ನಾವು ಈಗ ವಿನಂತಿ ಮಾಡಬೇಕಾಗಿರುವಂತಹದ್ದು ಏನೆಂದರೆ, ಸರ್ಕಾರ ಇದಕ್ಕಾಗಿಯೇ ವಿಶೇಷವಾಗಿ ಒಂದು ಕೋಶವನ್ನು ಮಾಡಬೇಕು. ದಮನಿತರಿಗಾಗಿ ವಿಶೇಷ ಕೋಶದ ವರದಿಯನ್ನು ಮಾನ್ಯ ಸಚಿವರಿಗೆ ನೀಡಿದ್ದೇವೆ. ಆ ವರದಿಯನ್ನು ಅನುಷ್ಠಾನ ಮಾಡಿದರೆ ಖಂಡಿತವಾಗಿ ಒಂದು ಐದು ವರ್ಷದಲ್ಲಿ ಇಂತಹ ಎಲ್ಲಾ ಸ್ಥಿತಿಗಳು ಖಂಡಿತವಾಗಿಯೂ ಕೂಡ ನಿಯಂತ್ರಣಕ್ಕೆ ಬರುತ್ತದೆ. ಆ ಕೋಶವನ್ನು ಮಾನ್ಯ ಸಚಿವರು ತರಬೇಕು. ಆ ಕೋಶವನ್ನು ಅವರು ಅನುಷ್ಠಾನಕ್ಕೆ ತಂದರೆ ಖಂಡಿತವಾಗಿಯೂ ಈ ಮಕ್ಕಳು ಮತ್ತು ಮಹಿಳೆಯರಿಗೆ ಸೂಕ್ತವಾದ ಪರಿಹಾರದ ಜೊತೆಯಲ್ಲಿ ಸಮಾಜದ ಬದಲಾವಣೆಯನ್ನು ತರುವಂತಹ ಕೆಲಸಗಳಾಗುತ್ತದೆ ಎನ್ನುವುದನ್ನು ಹೇಳಲಿಕ್ಕೆ ಬಯಸುತ್ತೇನೆ.

ಮಾನ್ಯ ಸಭಾಪತಿಯವರೆ, ಕೋಶದ ವರದಿಯನ್ನು ಸರ್ಕಾರದ ಮುಂದೆ ಮಂಡಿಸಿಲ್ಲ. ಅದಕ್ಕೋಸ್ಕರ ನಾನು ಇವತ್ತು ಹೇಳುತ್ತಿದ್ದೇನೆ. ಖಂಡಿತವಾಗಿಯೂ ಸಹ ನನಗೆ ನಂಬಿಕೆ ಇದೆ. ಅವರು ತುಂಬಾ ಒಳ್ಳೆಯ ಕೆಲಸವನ್ನು ಮಾಡಿದ್ದಾರೆ. ಬಹುಶ: 2011 ರಲ್ಲಿ ನಮ್ಮ ಸುಪ್ರೀಂ ಕೋರ್ಟ್ ಮಹಿಳೆಯರ ಕುರಿತಂತೆ ಬದಲಾಗಿರುವ ಕಾನೂನಿನ ಪ್ರತಿಗಳನ್ನು ಪ್ರತಿ ರಾಜ್ಯಗಳಿಗೂ ಕಳುಹಿಸಿ, ಅಳವಡಿಸಿಕೊಳ್ಳಬೇಕೆಂದು ಹೇಳಿದೆ. ಬಹುಶಃ ನಾವೆಲ್ಲರೂ ಹೆಮ್ಮೆ ಪಡಬೇಕು. ಶ್ರೀಮತಿ ಉಮಾಶ್ರೀ ಅವರೊಬ್ಬರೆ ಅದನ್ನು ಜಾರಿಗೆ ತಂದು ಬಹಳಷ್ಟು ಯೋಜನೆಗಳನ್ನು ತಂದಿದ್ದಾರೆ. ಅವರು ಅದನ್ನು ಹೇಳದೆ ಮಾಡಿದ್ದಾರೆ. ಅದನ್ನು ತಂದರೂ ಕೂಡ ಇವತ್ತು ನಮಗೆ ಅವುಗಳ ಬಗ್ಗೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಒಂದು ವರದಿ ಸಲ್ಲಿಸಲಿಕ್ಕೆ ಒಂದು ಸಮಿತಿ ಮಾಡುವ ಮುಂಚೆಯೇ ಅವರು ಚೇತನ ಯೋಜನೆಯನ್ನು ಮಾಡಿದರು. ಆ ಚೇತನ ಯೋಜನೆ ಅತ್ಯಂತ ಯಶಸ್ವಿಯಾದಂತಹ ಯೋಜನೆ. ಪ್ರತಿಯೊಬ್ಬರು ಕೂಡ ಅದನ್ನು ಬಳಸಿಕೊಂಡಿದ್ದಾರೆ. ಅದರ ಮುಖಾಂತರ ಹಲವಾರು ಹೆಣ್ಣು ಮಕ್ಕಳ ಬದುಕು ಹಸನಾಗಿದೆ. ಆದ್ದರಿಂದ, ನಾವು ಕೊಟ್ಟಿರುವಂತಹ ವರದಿಯನ್ನು ಮೇಡಂ ಅನುಷ್ಠಾನಕ್ಕೆ ತಂದರೆ, ಬಹುಶಃ ಮಹಿಳೆ ಮತ್ತು ಮಕ್ಕಳು ಎರಡು ಒಂದೇ. ಅವರು ಮಕ್ಕಳಾಗಿಯೇ ಮಹಿಳೆಯಾಗುವುದರಿಂದ ಆ ಎರಡು ಸಮಸ್ಯೆಗಳಿಗೂ ಸೂಕ್ತ ಪರಿಹಾರ ಸಿಕ್ಕುತ್ತದೆ. ಆದ್ದರಿಂದ, ಈ ಒಂದು ಕೆಲಸವನ್ನು ಮೇಡಂ ರವರು ಮಾಡಬೇಕೆಂದು ಹೇಳಿ, ಈ ಮಕ್ಕಳ ಕುರಿತಂತೆ ಮಾತನಾಡಲಿಕ್ಕೆ ಅವಕಾಶ ಕೊಟ್ಟಂತಹ ಮಾನ್ಯ ಸಭಾಪತಿಯವರಿಗೆ ನಾನು ಧನ್ಯವಾದಗಳನ್ನು ಹೇಳುತ್ತಾ, ಆ ವರದಿಯನ್ನು ಅನುಷ್ಠಾನಕ್ಕೆ ತರಬೇಕೆಂದು ಕೇಳಿಕೊಳ್ಳುತ್ತೇನೆ.

**ಸಭಾಪತಿಯವರು:-** ಈಗ ಈ ಬಗ್ಗೆ ಮಾತನಾಡುತ್ತೇವೆಂದು ಹೇಳಿ ನನಗೆ ಕೊಟ್ಟಿರುವ ಪಟ್ಟಿಯಲ್ಲಿ ಒಬ್ಬರು ಮಾತ್ರ ಮಾತನಾಡುವುದು ಬಾಕಿ ಇದೆ. ಸಭೆ ಒಪ್ಪಿದರೆ ಅವರಿಗೂ ಅವಕಾಶವನ್ನು ಕೊಡುತ್ತೇನೆ. ಇಲ್ಲದಿದ್ದರೆ, ಸಭೆಯನ್ನು ನಾಳೆ ಮುಂದೂಡುತ್ತೇನೆ.

**ಶ್ರೀ ಐವನ್ ಡಿ'ಸೋಜಾ(ಸರ್ಕಾರಿ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೆ, ನಾಳೆಗೆ ಚರ್ಚೆ ಮಾಡೋಣ. ಸದಸ್ಯರ ಸಂಖ್ಯೆಯೂ ಕೂಡ ಈಗ ಕಡಿಮೆ ಇದೆ.

**ಸಭಾಪತಿಯವರು:-** ಕಡಿಮೆ ಇದೆ. ಹಾಗಾದರೆ, ನಾಳೆ ಪ್ರಯತ್ನ ಮಾಡಿ ಹೇಗೆ ಹೊಂದಾಣಿಕೆ ಮಾಡಬಹುದು ಎಂದು ಹೇಳಿ ಮುಂದುವರಿಸೋಣ. ಇಲ್ಲದಿದ್ದರೆ, ಅವರು 5-10 ನಿಮಿಷ ಮಾತನಾಡುವುದಿದ್ದರೆ, ಮಾತನಾಡಿ ಮುಗಿಸಲಿ.

**ಶ್ರೀ ಕೆ.ಎಸ್.ಈಶ್ವರಪ್ಪ:-** ನಾಳೆ ಚರ್ಚೆ ಮಾಡಬಹುದು.

**ಸಭಾಪತಿಯವರು:** ಸದನವನ್ನು ನಾಳೆ ಬೆಳಿಗ್ಗೆ 11-00 ಗಂಟೆಯವರೆಗೆ ಮುಂದೂಡಿದ್ದೇನೆ.

**(ಸದನವು ಸಂಜೆ 6 ಗಂಟೆ 45 ನಿಮಿಷಕ್ಕೆ ಮುಕ್ತಾಯಗೊಂಡು ಪುನಃ ನಾಳೆ ಅಂದರೆ, ದಿನಾಂಕ: 16ನೇ ಜೂನ್ ಮಾಹೆ 2017 ರಂದು ಶುಕ್ರವಾರ ಬೆಳಿಗ್ಗೆ 11-00 ಗಂಟೆಗೆ ಸೇರಲು ನಿಶ್ಚಯಿಸಿತು)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

“ ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”